ಜನಪ್ರಿಯ
ಪುಸ್ತಕ ಮಾಲೆ

ವೈದ್ಯನ ವಿದೇಶ ಪ್ರವಾಸ

ಡಾ. ಜೆ. ಗೋಪಾಲ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ವೈದ್ಯನ ವಿದೇಶ ಪ್ರವಾಸ

ಡಾ|| ಬಿ. ಗೋಪಾಲ್ ಅವರು (ಜನನ ೧೯೩೧) ಎಂ. ಬಿ. ಬಿ. ಎಸ್., ಎಂ ಎಸ್. ಮತ್ತು ಸಿ.ವಿ.ಎಸ್. (ಇಂಗ್ಲೆಂಡ್) ಪದವಿಗಳನ್ನು ಪಡೆದಿದ್ದಾರೆ; ಮಕ್ಕಳ ಶಸ್ತ್ರಚಿಕಿತ್ಸೆಯ ತಜ್ಞರು. ಮೈಸೂರು ಮತ್ತು ಬೆಂಗಳೂರಿನ ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಪ್ರಮುಖ ಆಸ್ಪತ್ರೆಗಳಲ್ಲಿ ಉನ್ನತ ಸ್ಥಾನಗಳಲ್ಲಿ ಕೆಲಸ ಮಾಡಿದ್ದಾರೆ. ಮೆಕ್ಸಿಕೋನಲ್ಲಿ ನಡೆದ ಪ್ರಪಂಚದ ಮಕ್ಕಳ ಶಸ್ತ್ರಚಿಕಿತ್ಸಾ ಸಮ್ಮೇಳನದಲ್ಲಿ ಮತ್ತು ಬಾರ್ಸಿಲೋನ, ಥೈಲೆಂಡ್ ಮತ್ತು ಮೆಲ್‌ಬೋರ್ನ್‌ಗಳಲ್ಲಿ ಅಂತರಾಷ್ಟ್ರೀಯ ಸಮ್ಮೇಳನಗಳಲ್ಲೂ ಭಾಗವಹಿಸಿದ್ದಾರೆ. ಈವರೆಗೆ ಇವರು ಏಳು ಪುಸ್ತಕಗಳನ್ನು ಬರೆದಿದ್ದಾರೆ. ೧೯೯೨ರಲ್ಲಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಲಾಯಿತು.

ಜನಪ್ರಿಯ ಪುಸ್ತಕ ಮಾಲೆ

ವೈದ್ಯನ ವಿದೇಶ ಪ್ರವಾಸ

ಡಾ|| ಜಿ. ಗೋಪಾಲ್

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦ ೦೧೮

VAIDYANA VIDESHA PRAVASA : a travellogue (an account of the author's visit to Europe) by Dr. G. Gopal ; published by Kannada Pustaka Pradhikara (Kannada Book Authority). Pampa Mahakavi Road, Chamarajpet, Bangalore-560 018.

Pages : 124+viii 1994

ಬೆಲೆ : ರೂ. 11-00

ಮುದ್ರಣ : ಎಂ ಎಂ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು-೪

ಮುನ್ನುಡಿ

ಮೊದಲನೆಯ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಒಂದು ಅತ್ಯಂತ ಉಪಯುಕ್ತವಾದ ಹೆಜ್ಜೆಯನ್ನಿಟ್ಟಿತು. ಒಂದು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಸುಲಭ ಬೆಲೆಗೆ ದೊರೆಯುವಂತೆ ಪ್ರಕಟಿಸಿತು.

ಈ ಘನವಾದ ಕಾರ್ಯವನ್ನು ಕರ್ನಾಟಕ ಸರ್ಕಾರವು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಮುಂದುವರೆಸಿತು. "ಕನ್ನಡ ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಮೂಡಿಸುವ ಹಾಗೂ ಕನ್ನಡ ಪುಸ್ತಕ ಗಳನ್ನು ಎಲ್ಲರಿಗೂ ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ದೃಷ್ಟಿ ಯಿಂದ" ೧೯೬೯-೭೦ರ ಸಾಲಿನಿಂದ 'ಜನಪ್ರಿಯ ಪುಸ್ತಕ ಮಾಲೆ'ಯ ಯೋಜನೆಯನ್ನು ಕಾರ್ಯಗತ ಮಾಡಿತ್ತು. ೧೯೭೩-೭೪ರ ವರ್ಷದ ಹೊತ್ತಿಗೆ ಈ ಮಾಲೆಯಲ್ಲಿ ೨೬ ಪುಸ್ತಕಗಳು ಪ್ರಕಟವಾದವು.

ಕನ್ನಡ ಪುಸ್ತಕ ಪ್ರಾಧಿಕಾರವು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲ ಉದ್ದೇಶವನ್ನು ಕಣ್ಣ ಮುಂದಿರಿಸಿಕೊಂಡು ಮುಂದುವರೆಯುತ್ತಿದೆ. ಜನಪ್ರಿಯತೆಯನ್ನು ಗಳಿಸಿದ ಮೌಲಿಕವಾದ ಕೃತಿಗಳು ಹಲವು ಇಂದು ಓದಬಯಸುವವರಿಗೆ ಲಭ್ಯವಿಲ್ಲ. ಇಂತಹ ಕೃತಿಗಳನ್ನು ಆರಿಸಿ, ಒಂದು ಆವೃತ್ತಿಯ ಪ್ರಕಟಣೆಯ ಹಕ್ಕನ್ನು ಪಡೆಯಲು ಸಾಧ್ಯವಾದ ಸಂದರ್ಭದಲ್ಲಿ ಅವನ್ನು ಆದಷ್ಟು ಸುಲಭ ಬೆಲೆಗೆ ಓದುಗರಿಗೆ ಲಭ್ಯಮಾಡಿಕೊಡಲು ಕನ್ನಡ ಪುಸ್ತಕ ಪ್ರಾಧಿಕಾರವು ಉದ್ದೇಶಿಸಿದೆ.

ಈ ಮಾಲೆಯಲ್ಲಿ ಪುಸ್ತಕಗಳು ಅರಳಲು ನೆರವಾದವರು ನಾವು ಆರಿಸಿದ ಪುಸ್ತಕಗಳ ಕೃತಿಸ್ವಾಮ್ಯವನ್ನು ಪಡೆದಿದ್ದು ಅದನ್ನು ಈ ಮಾಲೆಯಲ್ಲಿ ಸೇರಿಸಲು

ಅನುಮತಿ ನೀಡಿದ ಮಿತ್ರರು. ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಒಪ್ಪಿಗೆಯನ್ನು ನೀಡಿದ ಡಾ|| ಜಿ. ಗೋಪಾಲ್ ಅವರಿಗೆ ನಾವು ಕೃತಜ್ಞರು. ಪುಸ್ತಕವನ್ನು ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ ಎಂ. ಎಂ. ಪ್ರಿಂಟಿಂಗ್ ವರ್ಕ್ಸ್‌ ಅವರಿಗೂ ನಮ್ಮ ವಂದನೆಗಳು. ಈ ಮಾಲೆಯ ನಿರ್ವಹಣೆಯಲ್ಲಿ ನೆರವಾದ ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಿಗೂ, ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೂ ನಾನು ಕೃತಜ್ಞ.

ಸಹೃದಯ ಕನ್ನಡಿಗರು ಈ ಪುಸ್ತಕವನ್ನು ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ.

ಎಲ್. ಎಸ್. ಶೇಷಗಿರಿ ರಾವ್
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು
೧೯-೯-೧೯೯೪

ಲೇಖಕನ ಮಾತು

ಹೆಮ್ಮನಹಳ್ಳಿಯ ಶ್ರೀ ಜಿ. ವೆಂಕಟಯ್ಯನವರು ಸಾಹಿತ್ಯ ಕ್ಷೇತ್ರದಲ್ಲಿ ಒಳ್ಳೆಯ ಬೇಸಾಯ ಮಾಡಿದವರು. ಸಾಹಿತ್ಯ ಅಕಾಡೆಮಿ ಸದಸ್ಯರಾಗಿದ್ದವರು. ಅವರ ನಾಲ್ಕನೆಯ ತಮ್ಮ ನಾನು. ಇದೇ ನನ್ನ ಸಾಹಿತ್ಯಾಸಕ್ತಿಗೆ ಕಾರಣ. ಅವರು ನಮ್ಮನ್ನು ಅಗಲಿದ ನಂತರ ಅವರ ನೆನಪಿಗಾಗಿ ಏನಾದರೊಂದು ಉಪಯುಕ್ತ ಕಾಣಿಕೆ ಸಲ್ಲಿಸಬೇಕೆಂಬ ಆಸೆಯಿತ್ತು. ನನ್ನ ಕೆಲ ಹಿರಿಯ-ಕಿರಿಯ ಮಿತ್ರರು ನನ್ನ ಪ್ರವಾಸದ ಬಗ್ಗೆ ಬರೆಯಿರಿ ಎಂದು ಆಗಾಗ ಒತ್ತಾಯಿಸ ತೊಡಗಿದರು. ಇವುಗಳ ಫಲ ಈ ಪುಸ್ತಕ.

ನಾನು ೧೯೭೭ರಲ್ಲಿ ಯೂರೋಪಿಗೆ ಹೋಗಿದ್ದ ಸಂದರ್ಭ, ಹಳೆಯ ಡೈರಿ ಹಾಗೂ ಲಂಡನ್ನಿನಲ್ಲಿ ಗುರುತು ಹಾಕಿಕೊಂಡಿದ್ದ ಕೆಲವು ಅಂಕಿ-ಅಂಶಗಳ ಆಧಾರದ ಮೇಲೆ ಈ ಪುಸ್ತಕ ಬರೆದಿದ್ದೇನೆ. ಈ ಮೊದಲು ೧೯೬೮ರಲ್ಲಿ ಮೊದಲ ಬಾರಿಗೆ ಎಡಿನ್‌ಬರೋ ಮತ್ತು ಲಂಡನ್ನಿನಲ್ಲಿ ಮಕ್ಕಳ ಶಸ್ತ್ರಚಿಕಿತ್ಸೆ ಕಲಿಯಲು ಒಂದು ವರ್ಷದ ಮಟ್ಟಿಗಿದ್ದೆ. ಇದನ್ನೂ ತಂದಿದ್ದೇನೆ. ಇಲ್ಲಿ 'ರವಿ ಕಾಣದ್ದನ್ನು ಕವಿ ಕಂಡ' ಎನ್ನುವುದೇನೂ ಇಲ್ಲ. ಎಲ್ಲವೂ ಇದ್ದದ್ದೇ. ಬರೆದದ್ದನ್ನೆಲ್ಲಾ ಶ್ರೀ ಪಿ. ಆರ್. ತಿಪ್ಪೇಸ್ವಾಮಿ, ಹಿಂದಿ ವಿಭಾಗದ ಮುಖ್ಯಸ್ಥರು, ಗಂಗೋತ್ರಿ ; ಚೆಲುವಾಂಬ ಆಸ್ಪತ್ರೆಯ ಆರ್.ಎಂ.ಒ. ಡಾ|| ಕೃಷ್ಣಪ್ಪ ಹಾಗೂ ಡಾ|| ರಾಮಲಿಂಗಯ್ಯ ಉಪ್ಪಿನಕೆರೆ ಅವರಿಗೆ ಆಗಾಗ ಓದಿ ಹೇಳುತ್ತಿದ್ದೆ. ಚೆನ್ನಾಗಿದೆ ಎಂದಾಗ ಪ್ರಕಟಿಸುವ ಪ್ರಯತ್ನ ಆರಂಭವಾಯ್ತು.

ಮುದ್ರಣ ಮಾಡಿಸಲು ಹೊರಟು ಆರಂಭದಲ್ಲಿ ತಿರುಗಿ ಬೇಸತ್ತಾಗ ಮುದ್ರಣಕಾರರನ್ನು ಸಾಮಾನ್ಯವಾಗಿ ಹೊಗಳಿರುವ ಬರಹಗಾರರು ಎಷ್ಟೊಂದು ಸತ್ಯವನ್ನು ಮುಚ್ಚಿಟ್ಟಿದ್ದಾರೆ ಅನ್ನುವುದು ನನ್ನ ಅನುಭವಕ್ಕೆ ಬಂತು. ಎರಡು ಕಡೆ ನರಳಿದ ನಂತರ ಮುದ್ರಣಕಾರ್ಯದ ಪೂರ್ಣ ಹೊಣೆ ಹೊತ್ತವರು ಡಾ|| ರಾಮಲಿಂಗಯ್ಯ ಉಪ್ಪಿನಕೆರೆ ಅವರು.

ಕೃತಜ್ಞತೆಗಳು

೧. ಪ್ರವಾಸ ಕಾಲದಲ್ಲಿ ಸಹಕರಿಸಿದ ಗೆಳೆಯರು. ವಾತಾವರಣ.

೨. ಬರೆಯಲು ಪ್ರಚೋದಿಸಿದ ಹಿರಿಯ-ಕಿರಿಯ ಮಿತ್ರರು.

೩. ಬರೆಯುತ್ತಿದ್ದಂತೆಲ್ಲಾ ಆಗಾಗ ಓದಿಸಿ ಕೇಳಿ, ಮೆಚ್ಚಿ, ನಂತರ ಎಲ್ಲ ರೀತಿಯ ಆಸಕ್ತಿ ವಹಿಸಿದ ಶ್ರೀ ತಿಪ್ಪೇಸ್ವಾಮಿ ಹಾಗೂ ಇದೇ ರೀತಿ ಸಹಕರಿಸಿದ್ದರ ಜತೆಗೆ ಮುದ್ರಣ, ಕರಡು ತಿದ್ದುವಿಕೆ ಮುಂತಾಗಿ ಎಲ್ಲಾ ಜವಾಬ್ದಾರಿ ಹೊತ್ತ 'ಆರೋಗ್ಯನಿಧಿ' ಮಾಸಪತ್ರಿಕೆಯ ಸಂಪಾದಕರಾದ ಡಾ|| ರಾಮಲಿಂಗಯ್ಯ ಉಪ್ಪಿನಕೆರೆ; ಎರಡನೆ ಮುದ್ರಣಕ್ಕೆ ಅವಕಾಶ ಕಲ್ಪಿಸಿಕೊಟ್ಟ ಸಹೃದಯ ಓದುಗರಿಗೆ.

ಹಾಗೂ ಶ್ರೀ ಸತ್ಯಸಾಯಿ ಮಹಿಮಾ ಮುದ್ರಣಾಲಯ, ಗೀತಾ ವಿವೇಕಾನಂದ ರಸ್ತೆ, ಯಾದವಗಿರಿ, ಮೈಸೂರು-೨೦, ಇವರಿಗೆ ಅಂದದ ಮುದ್ರಣಕ್ಕಾಗಿ ಅನಂತ ವಂದನೆಗಳು

—ಇವರೆಲ್ಲರಿಗೆ—

ಇಂತಿ,

ಡಾ|| ಜಿ. ಗೋಪಾಲ್

ಚೆಲುವಾಂಬ ಆಸ್ಪತ್ರೆ, ಮೈಸೂರು

೭-೧೦-೧೯೮೨

೧

ತಾರೀಖು ೬-೪-೬೮ ನೇ ಶನಿವಾರ ಸಾಯಂಕಾಲ ೪-೩೫ಕ್ಕೆ ನಾನು ಎಡಿನ್‌ಬರೋ ವಿಮಾನ ನಿಲ್ದಾಣದಲ್ಲಿಳಿದೆ. ಸಣ್ಣ ತುಂತುರು ಮಳೆ. ಕಪ್ಪು ಮೋಡಗಳು ತೇಲುತ್ತಿದ್ದವು. ಮನಸ್ಸಿಗೆ ಸ್ವಲ್ಪ ಬೇಸರವಾಯಿತು. ಡಾ|| ವಿ. ಸಿ. ಅಬ್ರಹಾಂ ಅವರ ಪರಿಚಯ ಮತ್ತು ಅಗಲಿಕೆ ನೋವುಂಟು ಮಾಡಿತ್ತು. ಕಾರಣ ಲಂಡನ್ನಿನ ವೈ. ಎಂ. ಸಿ. ಎ. ಹಾಸ್ಟಲ್‌ನಲ್ಲಿ ಅವರ ಪರಿಚಯ ಕೇವಲ ೪೮ ಗಂಟೆಗಳದ್ದು. ಅವರು ಕೇರಳದವರು. ಅಲ್ಲಿಂದ ಕುವೈಟ್‌ಗೆ ಕೆಲಸ ಮತ್ತು ಹಣ ಸಂಪಾದನೆಗಾಗಿ ಬಂದಿದ್ದರು. ಕುವೈಟ್ ಆಸ್ಪತ್ರೆಯ ಅಧಿಕಾರಿಗಳು ಡಾ|| ಅಬ್ರಹಾಂ ಅವರನ್ನು ಆರು ತಿಂಗಳ ಟ್ರೈನಿಂಗ್‌ಗಾಗಿ ಲಂಡನ್ ನಗರಕ್ಕೆ ಕಳುಹಿಸಿದ್ದರು. ಅಂದು ೪-೪-೬೮ ನೇ ಗುರುವಾರ ಸಾಯಂಕಾಲ ಛಳಿಯಲ್ಲಿ ನಡುಗುತ್ತಿದ್ದ ನನ್ನನ್ನು ಕಂಡು ಒಬ್ಬರು "ಹಲೋ" ಎಂದರು. ನಾನೂ "ಹಲೋ" ಎಂದೆ. ಪರಿಚಯವಾಯಿತು. ಇಬ್ಬರ ವೃತ್ತಿಯೂ ಒಂದೇ ಆದ್ದರಿಂದ ಆತ್ಮೀಯತೆ ಗಾಢವಾಗತೊಡಗಿತು. "ನೀವು ಕೊನೆಪಕ್ಷ ಎರಡು ಸ್ವೆಟರ್ ತೆಗೆದುಕೊಳ್ಳಲೇಬೇಕು. ನಡೆಯಿರಿ ಹೋಗೋಣ" ಎಂದರು. ಹೊರಟೆವು. ಪಕ್ಕದಲ್ಲಿದ್ದ ಬಸ್‌ಸ್ಟಾಪ್‌ನಲ್ಲಿನ ಕ್ಯೂ ಸೇರಿದೆವು. ನನ್ನ ಮುಂದೆ ಇದ್ದ ಮುದುಕರು ನನ್ನನ್ನು ನೋಡಿ "ಹಾಯ್, ಛಳಿಯಲ್ಲವೆ" ಎಂದು ಮಿಂಚಿನ ಪರಿಚಯ ಮಾಡಿಕೊಂಡರು. ನಾನು ಪ್ರತ್ಯುತ್ತರವಾಗಿ "ಹೌದು" ಎಂದು ನಕ್ಕೆ. ಬಸ್ ಹತ್ತಿದೆವು. ಡಾಕ್ಟರ್ ಅವರೇ ಟಿಕೆಟ್‌ಗೆ ಹಣ ಕೊಟ್ಟರು. ಕಂಡಕ್ಟರ್ ಸಪ್ಪೆಮೋರೆಯ ಮಧ್ಯವಯಸ್ಸಿನವ. "ಟಿಕೆಟ್ ಸಾರ್" ಎಂದ. ಡಾಕ್ಟರ್ "ಎಸ್ ಪ್ಲೀಸ್" ಎಂದು ಹಣ ಕೊಟ್ಟು "ಟೂ ಟಿಕೆಟ್ಸ್ ಪ್ಲೀಸ್" ಎಂದರು. ಕಂಡಕ್ಟರ್ "ಥ್ಯಾಂಕ್ಯು" ಎಂದು ಹಣ ತೆಗೆದುಕೊಂಡು "ಎಸ್ ಪ್ಲೀಸ್" ಎಂದು ಟಿಕೆಟ್ ಕೊಟ್ಟ. ಡಾಕ್ಟರ್ ಅವರು "ಥ್ಯಾಂಕ್ಯು" ಎಂದು ತೆಗೆದುಕೊಂಡರು. ಮರುಕ್ಷಣ ಚಿಲ್ಲರೆ ಕೊಡುತ್ತ ಕಂಡಕ್ಟರ್ "ಎಸ್ ಪ್ಲೀಸ್" ಎಂದ, ಸರಿ, ಡಾಕ್ಟರ್ ಅಬ್ರಹಾಂ "ಥ್ಯಾಂಕ್ಯು" ಎಂದು ತೆಗೆದು

ಕೊಂಡರು. ಈ "ಪ್ಲೀಸ್" ಮತ್ತು ಥ್ಯಾಂಕ್ಯು" ಗಳು ಪ್ರತಿಯೊಬ್ಬ ಪ್ರಯಾಣಿಕರ ಹತ್ತಿರವೂ ಸಂಸ್ಕೃತಿಯ ಕುರುಹಿನ ಮಂತ್ರಗಳಂತೆ ಪಠಿಸಲ್ಪಟ್ಟವು.

ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲಿ ಎರಡು ಸ್ವೆಟರ್‌ಗಳನ್ನು ಕೊಂಡದ್ದಾಯಿತು. ಅವರಲ್ಲಿ ಒಂದು ಸ್ತ್ರೀಯರು ಧರಿಸುವುದಂತೆ. ನನಗೆ ಇಷ್ಟವಾದ ಗ್ರೇ ಕಲರ್ ಅಲ್ಲದೆ ಕತ್ತಿನ ತನಕ ಗುಂಡಿಗಳಿದ್ದವು. ಅದನ್ನು ಅಂಗಡಿಯಲ್ಲೇ ಅಳತೆ ನೋಡಿ ಹಾಕಿಕೊಂಡೆ. ಡಾ|| ಅಬ್ರಹಾಂರವರೂ ಚಕಾರವೆತ್ತಲಿಲ್ಲ. ಚೆನ್ನಾಗಿದೆ ಎಂದರು. ಅಂಗಡಿಯಲ್ಲಿದ್ದ ಯುವಕ ಯುವತಿಯರ ಗುಂಪು ನನ್ನನ್ನು ನೋಡಿ ನಕ್ಕಿತು. ನಾನು ಚಕಿತನಾದರೂ ನನ್ನನ್ನಲ್ಲ ಎಂದು ಸಮಾಧಾನಪಟ್ಟೆ. ವೈ. ಎಂ. ಸಿ. ಎ. ಗೆ ಮರಳಿ ಊಟಕ್ಕೆ ಕುಳಿತಾಗ ಇತರರ ಪರಿಚಯವಾಯಿತು. ಅವರಲ್ಲನೇಕರು ಇದು ಸ್ತ್ರೀಯರು ಧರಿಸುವ ಸ್ವೆಟರ್ ಎಂದರು. ಆಗ ನನಗೆ ನಿಜಸ್ಥಿತಿ ಅರಿವಾಯಿತು. ಸರಿ, ಅವರ ಸಲಹೆಯಂತೆ ಅದನ್ನು ಶರಟಿನ ಒಳಗೂ ಮತ್ತೊಂದನ್ನು ಹೊರಗೂ ಹಾಕಿಕೊಂಡೆ. ದೇಹ ಬೆಚ್ಚಗಾಗಿ ಸರಿ ಎನ್ನಿಸಿತು.

ಬೆಳಿಗ್ಗೆ ೯-೩೦ ಕ್ಕೆ ಉಪಹಾರ ಮುಗಿಸಿ ನಾವಿಬ್ಬರೂ ಲಂಡನ್ ನಗರ ನೋಡಲು ಅಣಿಯಾದೆವು. ಡಾಕ್ಟರ್‌ರವರೇ ಎಲ್ಲದಕ್ಕೂ ಹಣ ತೆತ್ತರು. "ನೀವು ಸುಮ್ಮನೆ ಬನ್ನಿ. ನನ್ನಲ್ಲಿ ಹಣವಿದೆ. ನಾಳೆ ನೀವು ಎಡಿನ್‌ಬರೋಗೆ ಹೋಗುವವರು" ಎಂದು ಸದಾ ನನ್ನನ್ನು ಹಣ ಕೊಡದಂತೆ ತಡೆಯುತ್ತಿದ್ದರು. ಓಬರ್ನ್‌ನಲ್ಲಿ ಟ್ಯೂಬ್‌ಟ್ರೈನ್ ಹತ್ತಿದೆವು. ಈ ಟ್ಯೂಬ್ ಭೂಮಿ ಕೆಳಗಿನ ಅದ್ಭುತ ರೈಲು ದಾರಿ. ಪ್ರತಿ ೩ ನಿಮಿಷಕ್ಕೊಂದು ಟ್ರೈನ್ ಲಂಡನ್ ನಗರದ ಎಲ್ಲಾ ಕಡೆಗೂ ಸುರಂಗ ಮಾರ್ಗದಲ್ಲಿ ಸಾಗುತ್ತದೆ. ರೈಲ್ವೆನಿಲ್ದಾಣಗಳು ಆಕರ್ಷಕ ಮತ್ತು ಸ್ವಚ್ಛ. ಎಸ್ಕಲೇಟರ್ಸ್‌ಗಳಲ್ಲಿ ಮೇಲಿಂದ ಸುರಂಗ ಮಾರ್ಗಕ್ಕೆ ಇಳಿಯುತ್ತಾರೆ. ಇಲ್ಲ, ಕೆಳಗಡೆಯಿಂದ ಭೂಮಿಯ ಮೇಲ್ಭಾಗಕ್ಕೆ ಬರುತ್ತಾರೆ. ಜನ ಗಿಜಿ ಗಿಜಿ ಎಂದು ನಗರದ ನಾನಾಕಡೆ ಮಿಂಚಿನ ವೇಗದಲ್ಲಿ ಬಂದು ಹೋಗುವ ರೈಲುಗಳಲ್ಲಿ ಇಳಿಯುತ್ತಾರೆ; ಹತ್ತುತ್ತಾರೆ. ಜನ ಸಮುದ್ರ ಎಲ್ಲೆಲ್ಲೂ! ಬೀದಿಗಳ ಇಕ್ಕೆಲದಲ್ಲಿ ರಭಸದ ವೇಗದಲ್ಲಿ ವಾಹನಗಳು, ಆಗಾಗ್ಗೆ ಬೀದಿಗಳನ್ನು ದಾಟುವವರು, ಸುರಂಗ ದಾರಿಯಲ್ಲಿ ನೂಕು ನುಗ್ಗಲು, ಅಂಗಡಿ ಮುಂಗಟ್ಟುಗಳಲ್ಲಿ ವೇಗದ

ವ್ಯಾಪಾರ, ಪ್ರಪಂಚದ ವಿವಿಧ ಭಾಗಗಳ ಜನ ಸಮೂಹ, ಉಡುಪಿನ ವೈವಿಧ್ಯ, ನಾನಾ ವರ್ಣದ ಜನಸಮುದಾಯ! ನನ್ನಲ್ಲಿ ವಿದ್ಯುತ್ ಹರಿದಂತಾಯಿತು. ಸಿಗರೇಟಿನ ಜ್ಞಾನೋದಯವಾಯಿತು. ಬೆನ್‌ಸನ್ ಅಂಡ್ ಹೆಡ್ಜಸ್ ಸಿಗರೇಟು ಕೊಂಡೆ. ಡಾಕ್ಟರಿಗೆ ಕೊಡಲು ಹೋದೆ. "ನೋ, ಥ್ಯಾಂಕ್ಸ್" ಎಂದರು. ನಾನು ಹೊಗೆ ಬಿಡುತ್ತಿದ್ದೆ; ಅವರೊಡನೆ ವೇಗ ವಾಗಿ ಚಲಿಸುತ್ತಿದ್ದೆ.

ಮಾರನೇ ದಿನ ಟ್ಯಾಕ್ಸಿಯಲ್ಲಿ ಕುಳಿತು ಹೀತ್‌ರೊ ವಿಮಾನ ನಿಲ್ದಾಣಕ್ಕೆ ಬಂದೆವು. ನಾನು ಹೊರಡುವ ವಿಮಾನ ಮಧ್ಯಾಹ್ನ ೩-೦೫ ಕ್ಕೆ. ಡಾ|| ಅಬ್ರಹಾಂ ಕೈ ಕುಲುಕಿದರು. "ನನಗೆ ಬರೆಯಿರಿ, ಮರೆಯಬೇಡಿ" ಎಂದರು. ನನಗೆ ಉಸಿರು ಕಟ್ಟಿದಂತಾಗಿ ಕಣ್ಣುಗಳು ನೀರಿನಿಂದ ತುಂಬಿ ಬಂದುವು.

ಎಡಿನ್‌ಬರೋನಲ್ಲಿ ಅಬ್ರಹಾಂ ಇಲ್ಲದೆ ವಿಮಾನ ನಿಲ್ದಾಣ ಬಿಕೋ ಎನ್ನುತ್ತಿತ್ತು. ಅಷ್ಟೊಂದು ಜನಜಾತ್ರೆಯಲ್ಲೂ ನಾನು ಒಂಟಿಯಾಗಿದ್ದೆ. ಕ್ಯೂನಲ್ಲಿ ನಿಂತು ಟ್ಯಾಕ್ಸಿ ಹತ್ತಿದೆ. ಇಂಡಿಯನ್ ಹೈ ಕಮೀಷನ್‌ನಿಂದ ಮೊದಲೇ ನಿಶ್ಚಿತವಾಗಿದ್ದ "ಬ್ರಾಕೆಟ್‌ಹೌಸ್" ಹುಡುಕುತ್ತಾ ಹೊರಟೆ. ಟ್ಯಾಕ್ಸಿ ಡ್ರೈವರ್ ಆಗಾಗ್ಗೆ ವೈರ್‌ಲೆಸ್ ಯಂತ್ರದ ಸಹಾಯದಿಂದ ತನ್ನ ಹೆಡ್ ಆಫೀಸಿಗೆ ಮಾತನಾಡಿ "ಬ್ರಾಕೆಟ್‌ಹೌಸ್" ದಾರಿ ತಿಳಿದು ಕೊಳ್ಳುತ್ತಿದ್ದ. ಸಾಯಂಕಾಲ ೫-೨೦ಕ್ಕೆ ಟ್ಯಾಕ್ಸಿಯಿಂದ ಇಳಿದೆ. ಆಗಲೇ ಕತ್ತಲು ಆವರಿಸಿತ್ತು. ತುಂತುರು ಹನಿ ಬೇರೆ. ಬ್ರಾಕೆಟ್‌ಹೌಸ್‌ನ ಕರೆಗಂಟೆ ಬಾರಿಸಿದೆ, ಬಾಗಿಲು ಚಿಲಕ ಅಲ್ಲಾಡಿಸಿದೆ, ಉತ್ತರವಿಲ್ಲ. ಎದುರು ಮನೆ ಯಲ್ಲಿದ್ದ ಒಬ್ಬ ಹುಡುಗನನ್ನು ವಿಚಾರಿಸಿದೆ. ಆಗ ತಿಳಿಯಿತು—ನನ್ನ ಅಡ್ರೆಸ್ಸಿನ ಬ್ರಾಕೆಟ್ ಹೌಸ್ ಮುಂದಿನ ಬೀದಿಯಲ್ಲಿದೆ, ಅಲ್ಲದೆ ಈ ಮನೆಯ ವರು ಬೀಗ ಹಾಕಿ ಹೊರಗಡೆ ಹೋಗಿದ್ದಾರೆಂದು. ನಾನು ಹುಡುಗನ ತಾಯಿಯನ್ನು "ದಯಮಾಡಿ ಮನೆ ತೋರಿಸಿ. ಇದೇ ತಾನೇ ಇಂಡಿಯಾ ದಿಂದ ಬಂದಿದ್ದೇನೆ" ಎಂದು ಪ್ರಾರ್ಥಿಸಿದೆ. "ಮಗು ಹೋಗು. ಶ್ರೀಮತಿ ಗ್ರೀನ್‌ಫೀಲ್ಡ್ ಮನೆ ತೋರಿಸು" ಎಂದು ಒಂದು ಛತ್ರಿ ಕೊಟ್ಟರು. ಹುಡುಗ ದೂರದಿಂದಲೇ ಸುಮಾರು ೨೫೦ ಗಜ ದೂರದಲ್ಲಿದ್ದ ಬ್ರಾಕೆಟ್ ಹೌಸ್ ತೋರಿಸಿ ಪರಾರಿಯಾದ. ನಾನು "ಥ್ಯಾಂಕ್ಯು" ಎಂದೆ. ಅವನಿಗೇನೂ ಬೇಡವಾಗಿ

ಓಟ ಕಿತ್ತಿದ್ದ.

ಬ್ರಾಕೆಟ್ ಹೌಸ್ ಅತಿ ದೊಡ್ಡ ಗೃಹವಲ್ಲದಿದ್ದರೂ ಸಣ್ಣದೇನಲ್ಲ. ಎರಡು ಅಂತಸ್ತಿನ ಮನೆ. ಸುತ್ತಲೂ ವಿಶಾಲವಾದ ಹಸಿರು ಲಾನ್ ಇದ್ದು ತನ್ನದೇ ಆದ ಒಡೆತನ ಹೊಂದಿದ್ದಂತೆ ಕಾಣುತ್ತಿತ್ತು. ಗಂಟೆ ಬಾರಿಸಿದೆ. ಮರು ಕ್ಷಣ ಬಾಗಿಲು ತೆರೆಯಿತು. ಹುಡುಗಿಯೊಬ್ಬಳು ಕಾಣಿಸಿಕೊಂಡಳು. "ನಾನು ಡಾ|| ಗೋಪಾಲ್, ಇಂಡಿಯಾದಿಂದ ಬಂದಿದ್ದೇನೆ" ಎಂದು ಹೇಳಿ ಮುಗಿಸುತ್ತಿದ್ದಂತೆ "ಹೌದೌದು ನಿಮ್ಮನ್ನೇ ಎದುರು ನೋಡುತ್ತಿದ್ದೆವು. ದಯವಿಟ್ಟು ಒಳಗೆ ಬನ್ನಿ" ಎಂದು ಕರೆದೊಯ್ದಳು. "ಅಮ್ಮಾ, ಇವರು ಡಾ|| ಗೋಪಾಲ್" ಎಂದಾಗ, ತಾಯಿ "ನಮಸ್ಕಾರ ಡಾಕ್ಟರ್, ದಯವಿಟ್ಟು ಬನ್ನಿ. ಲಗೇಜ್ ಇಲ್ಲಿ ಕೊಡಿ, ಇದು ನಿಮ್ಮ ಕೊಠಡಿ. ಇದೇ ಸ್ನಾನದ ಮನೆ ಮತ್ತು ಶೌಚದ ಮನೆ. ಇನ್ನು ಹತ್ತು ನಿಮಿಷದಲ್ಲಿ ಟೀ ಕೊಡುತ್ತೇನೆ. ವಿಶ್ರಮಿಸಿಕೊಳ್ಳಿ" ಎಂದು ನನ್ನ ಲಗೇಜ್ ಕೊಠಡಿಯಲ್ಲಿಟ್ಟು ಮರೆಯಾದರು. ನನಗೆ ಆಶ್ರಯ ನೆಮ್ಮದಿ ಒಟ್ಟಿಗಾದವು.

ಹಸಿವು ನನಗೆ ಬಹಳವಾಗಿತ್ತು. ಶ್ರೀಮತಿ ಗ್ರೀನ್‌ಫೀಲ್ಡ್ ಟೀ ಕೊಡುತ್ತ ಶನಿವಾರ ರಾತ್ರಿ ಊಟವಿಲ್ಲ ಎಂದಾಗ ಸಮಾಧಾನ ಕಲಕಿದಂತಾಗಿ ಹೋಟೆಲ್ ಹುಡುಕುತ್ತಾ ಹೊರಬಿದ್ದೆ. ಎಲ್ಲಾ ಹೋಟೆಲ್‌ಗಳೂ, ಅಂಗಡಿಗಳೂ ಮುಚ್ಚಿದ್ದವು. ಮುಂದೆ ಸಣ್ಣ ಚೈನೀಸ್ ಕೆಫೆಟೇರಿಯಾದಲ್ಲಿ ಬೆಳಕಿತ್ತು. ಬೇಗ ಬೇಗ ನಡೆದೆ. ಬಿಸಿ ಬಿಸಿ ಅನ್ನ ಮತ್ತು ನ್ಯೂಡಲ್ಸ್ ತಿಂದೆ. ಬಂದು ಮನೆ ಸೇರಿದೆ.

ಬೆಳಿಗ್ಗೆ ೬ ಘಂಟೆಗೆ ಎಚ್ಚರವಾಯಿತು. ಸೂರ್ಯನ ಕಿರಣಗಳು ಕಾಣಲಿಲ್ಲ. ಬದಲಾಗಿ ದಟ್ಟ ಮಂಜು ಮುಸುಕಿತ್ತು. ಹಾಸಿಗೆ ಸರಿಪಡಿಸಿ ಸ್ನಾನ ಮಾಡಿಬಂದೆ. ಶ್ರೀಮತಿ ಗ್ರೀನ್‌ಫೀಲ್ಡ್ "ಗುಡ್ ಮಾರ್ನಿಂಗ್ ಡಾಕ್ಟರ್. ಓ ! ನೀವೇ ಬೆಡ್‌ಮಾಡಿಬಿಟ್ಟಿರ! ಗುಡ್, ಟೀ ತೆಗೆದುಕೊಳ್ಳಿ. ನಾನು ನಿಮ್ಮ ಬಟ್ಟೆ ಒಗೆದು ರೆಡಿಮಾಡುತ್ತೇನೆ. ಉಪಹಾರಕ್ಕೆ ಗಂಟೆ ಬಾರಿಸಲಾಗುತ್ತದೆ. ಊಟದ ಮನೆಗೆ ಬನ್ನಿ" ಎಂದು ನನ್ನ ಪ್ಯೈಲಿಗೆ ಬಟ್ಟೆ ಮಡಿಸಿ ತೆಗೆದುಕೊಂಡು ಹೋದರು. ನಾನು ಚಕಿತಗೊಂಡೆ. ಮಾತೃಸಮಾನ ಮೂರ್ತಿ ! ಸುಸಂಸ್ಕೃತ ವಿಶಾಲ ಮನೋಭಾವ. ಮಾನವೀಯತೆಯ ಪರಾಕಾಷ್ಠೆ. ತಲೆಬಾಗಿದೆ.

ಉಪಹಾರಕ್ಕೆ ಮಾಡಿದ ಗಂಟೆಯು ಸ್ಮೃತಿ ಕೊಠಡಿಯಲ್ಲಿ ಅಲೆ ಅಲೆಯಾಗಿ ಸಣ್ಣ ಜಾಗಟೆಯ ಮೃದು ನಾದದಂತೆ ತೂರಿಬಂತು. ನಾನು ಊಟದ ಮನೆಗೆ ಬಂದಾಗ ಅಲ್ಲಿ ಆಗಲೇ ೫ ಜನರಿದ್ದರು. ಅವರೆಲ್ಲ ಬ್ರಾಕೆಟ್‌ಹೌಸ್‌ನಲ್ಲಿ 'ಪೇಯಿಂಗ್ ಗೆಸ್ಟ್ಸ್' ನನ್ನ ಹಾಗೆ. "ಗುಡ್ ಮಾರ್ನಿಂಗ್" ಎಂದು ಕುಳಿತೆ. ಉಪಹಾರಕ್ಕೆ ಬೇಕನ್ ಮತ್ತು ಮೊಟ್ಟೆ, ಬ್ರೆಡ್ ಮತ್ತು ಬೆಣ್ಣೆ, ಮೇಲೆ ಹಾಲು. ನಾನು ಹುಟ್ಟಿನಿಂದ ಮಾಂಸಾಹಾರಿ. ನಾಲ್ಕಾರು ಬ್ರೆಡ್‌ಸ್ಲೈಸ್‌ಗೆ ೧೫೦ ಗ್ರಾಂನಷ್ಟು ಬೆಣ್ಣೆ ಬಳಿದು ತಿಂದೆ. ಮೊಟ್ಟೆಯಾಯಿತು; ಕಡೆಗೆ ಒಳ್ಳೆ ಹಾಲು. ನೆನ್ನೆಯ ಅರ್ಧಊಟದ ಸುಸ್ತು ಕಡಿಮೆಯಾಯಿತು. ಇದ್ದ ೫ ಜನರಲ್ಲಿ ಒಬ್ಬರು ಸುಮಾರು ೬೦ ವರ್ಷದ ಸ್ಕಾಟ್‌ಲೆಂಡಿನ ನಿವೃತ್ತ ಅಧಿಕಾರಿ. ಒಂಟಿಜೀವನ. ತನ್ನವರು ಯಾರೂ ಇಲ್ಲ. ಆದ್ದರಿಂದ ಅಲ್ಲಿ ಪೇಯಿಂಗ್ ಗೆಸ್ಟ್ ಆಗಿದ್ದರು. ಇಬ್ಬರು ಆರ್ಟ್ಸ್ ವಿದ್ಯಾರ್ಥಿಗಳು, ಇಬ್ಬರು ವೈದ್ಯರಲ್ಲಿ ಒಬ್ಬರು ಪಾಕಿಸ್ತಾನದ ಲೇಡಿ ಡಾಕ್ಟರ್. ಮತ್ತೊಬ್ಬರು ಇಂಡಿಯಾದವರು. ಇಂಡಿಯಾದ ವೈದ್ಯರು ನನ್ನನ್ನು "ನೀವು ಇಂಡಿಯಾದ ಯಾವ ಭಾಗಕ್ಕೆ ಸೇರಿದವರು" ಎಂದು ಕೇಳಿದರು. ನಾನು "ದಕ್ಷಿಣ ಇಂಡಿಯಾ, ಮೈಸೂರು" ಎಂದೆ. ಕ್ಷಣಮಾತ್ರದಲ್ಲಿ "ಕನ್ನಡ ಬರುತ್ತದೆಯೇ ನಿಮಗೆ" ಎಂಬ ಕನ್ನಡ ನುಡಿ! ಕನ್ನಡ ಶಬ್ದ ಕೇಳಿ ೬ ದಿನಗಳಾಗಿದ್ದ ನನಗೆ ಆ ಶಬ್ದ ಎಲ್ಲೋ ಕನಸಿನಲ್ಲಿ ಕೇಳಿದಹಾಗೆ, ಅರೆನಿದ್ರೆಯಲ್ಲಿ ಕಿವಿಗಳಿಗೆ ಸೋಂಕಿ ತೂರಿದಂತೆ! ಕೇಳಿಸಿದರೂ ನಂಬದಾದೆ. ನಿಜವಾಗಿಯೂ ಐದು ಜನರಲ್ಲಿ ಯಾರ ಬಾಯಿಂದ ಬಂತೆಂದು ತಿಳಿಯಲು ಅಶಕ್ತನಾದೆ, ಮೂಕನಾದೆ. ಪುನಃ ಅದೇ! "ಕನ್ನಡ ಬರುತ್ತದೆಯೇ?" ಓಹ್! ಕ್ಷಣಮಾತ್ರದಲ್ಲಿ ಮೈಸೂರಿನಲ್ಲಿದ್ದೆ! ಉಪಹಾರ, ಉಳಿದ ಪರಿಚಯಸ್ಥರು, ಶ್ರೀಮತಿ ಗ್ರೀನ್‌ಫೀಲ್ಡ್, ಇದ್ದ ಬ್ರಾಕೆಟ್ ಹೌಸ್ ಎಲ್ಲವೂ ಅಸ್ಥಿರ. ನಾವಿಬ್ಬರೇ! "ನಿಮ್ಮ ಹೆಸರು" ಎಂದೆ. "ವಾಡವಾಡಗಿ" ಎಂದರು. ಅಪರಿಚಿತ ಹೆಸರು. ಆದರೇನು, ಚಿರಪರಿಚಿತ ಕನ್ನಡ, ಮಾತೃಭಾಷೆ, ಭ್ರಾತೃ ಪ್ರೇಮ ಎಲ್ಲವೂ ಒಟ್ಟಿಗಾದ ಅನುಭವ! 'ಕ್ಷಮಿಸಿ' ಎಂದು ಎದ್ದೆವು. ಮನಸ್ಸಿಗಾದ ಆನಂದ ಅಪಾರ; ಡಾ|| ಅಬ್ರಹಾಂ ಸಿಕ್ಕಿದಷ್ಟು ಆನಂದ!

ಡಾ|| ವಾಡವಾಡಗಿಯವರು ಬಿಜಾಪುರದ ಕಡೆಯ ಕನ್ನಡಿಗರು. ಪೂನಾದಲ್ಲಿ ಎಂ.ಬಿ.ಬಿ.ಎಸ್. ಮುಗಿಸಿ, ಹೆಚ್ಚಿನ ವ್ಯಾಸಂಗಕ್ಕಾಗಿ ಎಡಿನ್‌ಬರೋ

ಸೇರಿದ್ದರು. ಹುಟ್ಟಿನಿಂದ ಶ್ರೀಮಂತರು. ಉನ್ನತ ಧ್ಯೇಯವುಳ್ಳವರು. "ನಾನು ಎಂ.ಆರ್.ಸಿ.ಪಿ. ಮಾಡಿಕೊಂಡು ಊರಿಗೆ ಹಿಂತಿರುಗಿ ಬಡಜನರ ಸೇವೆಗಾಗಿ ಫ್ರೀ ಕ್ಲಿನೀಕ್ ನಡೆಸಬೇಕೆಂದಿದ್ದೇನೆ. ದೇವರಾಣೆ ಇನ್ಯಾವ ಧ್ಯೇಯವೂ ಇಲ್ಲ" ಎಂದರು. ನನಗಂತೂ ಒಂದಾದ ಮೇಲೊಂದರಂತೆ ನಂಬಲಾಗದ ಆಶ್ಚರ್ಯಾನುಭವಗಳು ! ಆಗಲೇ ಅವರು ಬಂದು ಒಂದು ವರ್ಷವಾಗಿತ್ತು. ಸೀನಿಯರ್ ಹೌಸ್‌ಮನ್ ಆಗಿ ರಾಯಲ್ ಇನ್‌ಫರ್‌ಮರಿ ಎಂಬ ಆಸ್ಪತ್ರೆಯಲ್ಲಿ ಕೆಲಸಕ್ಕಿದ್ದರು. ಅಲ್ಲಿ ಕೆಲಸ ಸಿಗುವುದೇ ಒಂದು ಅದೃಷ್ಟವಂತೆ. ಹೆಸರುವಾಸಿಯಾದ ತಜ್ಞರು, ನುರಿತವರು ಸೇವೆ ಸಲ್ಲಿಸುವುದು ಆ ಆಸ್ಪತ್ರೆಯಲ್ಲಿ.

"ನಾನು ಮೈಸೂರಿನಲ್ಲಿ ಎಂ.ಬಿ.ಬಿ.ಎಸ್. ಮುಗಿಸಿ ಎಂ. ಎಸ್. ಮಾಡಿದ್ದೇನೆ. ಸಧ್ಯಕ್ಕೆ ಮೆಡಿಕಲ್ ಕಾಲೇಜಿನಲ್ಲಿ ಸಹಪ್ರಾಧ್ಯಾಪಕನಾಗಿದ್ದೇನೆ. ಭಾರತ ಸರ್ಕಾರ ಕೊಟ್ಟ ವಿದ್ಯಾರ್ಥಿವೇತನದ ಮೇರೆಗೆ ಮಕ್ಕಳ ಶಸ್ತ್ರಚಿಕಿತ್ಸೆ ಕಲಿಯಲು ಬಂದಿದ್ದೇನೆ" ಎಂದೆ. 'ಯಾವ ಆಸ್ಪತ್ರೆಯಲ್ಲಿ' ಎಂದು ಕೇಳಿದ್ದಕ್ಕೆ "ದಿ ರಾಯಲ್ ಹಾಸ್ಪಿಟಲ್ ಫಾರ್ ಸಿಕ್ ಚಿಲ್ಡ್ರನ್, ಸಿನ್ಢೀಸ್ ರೋಡ್" ಎಂದೆ. "ಏ ಅದು ಇಲ್ಲೇ ಹತ್ರ ಬಿಡ್ರಿ, ಗಡಿಬಿಡಿಯೇನ್ ಬ್ಯಾಡ್ರಿ. ಖರೇ ನಡ್ದೇ ಹೋಗಕ್ಬರ್ತದೆ" ಎಂದು ಬಿಜಾಪುರದ ಕಡೆಯ ಕನ್ನಡದಲ್ಲಿ ಶುರು ಮಾಡಿದರು. "ಬುದ್ಧಿವಂತರದ್ದಾರ್ರಿ ನೀವು. ಸ್ಕಾಲರ್ ಶಿಪ್ ಹೊಡೆದಿದ್ದೀರಿ, ಮೇಲೆ ಸಹಪ್ರಾಧ್ಯಾಪಕರದೀರಿ. ಖರೆ ಆಯ್ತು ಹೇಳ್ರಿ" ಎಂದರು.

ಭಾನುವಾರ ಮಧ್ಯಾಹ್ನದ ಊಟ ಕೊಡಲಾಗುತ್ತೆ. ರಾತ್ರಿ ಊಟವಿಲ್ಲ. ಉಳಿದ ದಿನಗಳಂದು ಮಧ್ಯಾಹ್ನದ ಊಟವಿಲ್ಲ. ಅದನ್ನೇ 'ಬ್ರೆಡ್ ಅಂಡ್ ಬ್ರೇಕ್‌ಫಾಸ್ಟ್" ಅನ್ನುವುದು. ಅಂದರೆ ಸೋಮವಾರದಿಂದ ಶುಕ್ರವಾರದ ತನಕ ಬೆಳಿಗ್ಗೆ ಉಪಹಾರ, ರಾತ್ರಿ ಊಟ. ಶನಿವಾರ ಮತ್ತು ಭಾನುವಾರ ಉಪಹಾರ ಮತ್ತು ಮಧ್ಯಾಹ್ನದ ಊಟ. ಅದಕ್ಕೆ ವಾರಕ್ಕೆ ೧೯೬೭ರಲ್ಲಿ ೫-೬ ಪೌಂಡ್‌ಗಳಷ್ಟು ಕೊಡಬೇಕಿತ್ತು. ನಾನು ಒಂದು ವಾರದ ಹಣಕೊಟ್ಟೆ. ವಾಡಗಿಯವರು ೨೦ ಪೌಂಡ್ ಒಟ್ಟಿಗೇ ಒಂದು ತಿಂಗಳಿಗೆಂದು ಕೊಟ್ಟರು.

ಮಧ್ಯಾಹ್ನ ಊಟಕ್ಕೆ ಕುಳಿತೆವು. ಊಟಕ್ಕೆ ಕೋಳಿಮಾಂಸ, ತರಕಾರಿ,

ಹಸಿರು ಬಟಾಣಿ. ಶ್ರೀಮತಿ ಗ್ರೀನ್‌ಫೀಲ್ಡ್‌ರೇ ಬಡಿಸಿದರು. ಬ್ರೆಡ್ ಮತ್ತು ಬೆಣ್ಣೆ ಸಾಮಾನ್ಯವಾಗಿ ಊಟದ ಟೇಬಲ್ ಮೇಲೆ ಇದ್ದೇ ಇರುತ್ತದೆ. ಊಟ ವಾದ ಮೇಲೆ ಕಾಫಿ ಡಿಕಾಕ್ಷನ್ ಕೊಡುತ್ತಾರೆ. ಇಷ್ಟವಿಲ್ಲದಿದ್ದರೆ ಹಾಲು ಸಿಗುತ್ತೆ. ನಾನು ನಂತರ ಸಿಗರೇಟ್ ಹಚ್ಚಿದೆ. "ಏ ಅದೇನ್ ಕುಡಿತೀರ ಒಳ್ಳೆಯದಲ್ಲ ಬಿಡ್ರಿ" ಎಂದರು ವಾಡಗಿಯವರು. ನಾನು "ಸಿಗರೇಟ್ ಒಳ್ಳೆಯದಲ್ಲ ಅಂತಾನೇ ಅದನ್ನು ಸುಟ್ಟು ಹಾಕುತ್ತಿರುವುದು" ಎಂದಾಗ ಇಬ್ಬರೂ ನಕ್ಕೆವು. ನಂತರ ಇಬ್ಬರೂ ನನ್ನ ಕೊಠಡಿಯಲ್ಲಿ ಸೇರಿದೆವು. ಡಾ|| ವಾಡಗಿಯವರು "ಯಾವಾಗ ಊರು ಬಿಟ್ಟೆರಿ, ಪ್ರಯಾಣ ಹೇಗಿತ್ತು, ಲಂಡನ್ನಲ್ಲಿ ಎಷ್ಟು ದಿವಸ ಇದ್ದಿರಿ, ಎಲ್ಲಾ ಹೇಳ್ರಲ ಮತ್ತೆ" ಎಂದು ಕೇಳಿದರು.

೨

ನಾನು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಾಗ ಗಂಟೆ ೧೧-೩೦ ಅಂದು ಬುಧವಾರ. ಮಧ್ಯಾಹ್ನ ೧೨ ಘಂಟೆಗೆ ವಿಮಾನ ಹತ್ತಿದೆ. ನನ್ನ ಮನೆಯವರೆಲ್ಲಾ ಬೀಳ್ಕೊಡಲು ಬಂದಿದ್ದರು. ನನ್ನ ಪುಟ್ಟ ಮಗಳು ಚಂಪಳಿಗೆ ಆಗ ಎರಡು ವರ್ಷ. ನನ್ನ ಹೆಂಡತಿ ಶ್ರೀಮತಿ ಸುಲೋಚನಾ ಮತ್ತು ಉಳಿದ ಮಕ್ಕಳು ಖಿನ್ನರಾಗಿದ್ದರು. ಚಂಪಕ ವಿಮಾನ ನಿಲ್ದಾಣದ ಅಂದ-ಚಂದ, ಜನಜಂಗುಳಿಯನ್ನು ನೋಡಿ ಕುಣಿದು ಕುಪ್ಪಳಿಸುತ್ತಿದ್ದಳು. ವಿಮಾನ ಹತ್ತಲು ಹೊರಟಾಗ ಕಣ್ಣು ತುಂಬಿ ಬಂತು. ನನ್ನ ದಾಯಾದಿ ತಿರುಮಲಯ್ಯ "ಅಳಬೇಡಪ್ಪ, ಮಕ್ಕಳನ್ನು ಬಿಟ್ಟು ಹೋಗುತ್ತಿದ್ದೇನೆಂದು ಅಳುತ್ತೀಯಾ ? ಬೇಡ" ಎಂದು ಸಂತೈಸುತ್ತಿದ್ದ.

ವಿಮಾನದಲ್ಲಿ ಗಗನ ಸಖಿ ಚಾಕಲೇಟ್ ತಟ್ಟೆ ಹಿಡಿದಾಗ ಪಕ್ಕದಲ್ಲಿದ್ದ ಶೆಟ್ಟರ ೨೦-೨೫ ವರ್ಷದ ಹುಡುಗ ಒಂದು ಹಿಡಿ ತುಂಬ ಗೋರಿಕೊಂಡು ಕೋಟಿನ ಜೇಬಿಗೆ ತುರುಕಿದ. ಗಗನ ಸಖಿ ದೂರದಲ್ಲಿ ನಿಂತು ತಟ್ಟೆ ಚಾಚಿ ಬೇರೆ ಪ್ರಯಾಣಿಕರಲ್ಲಿ ಗಮನವಿಟ್ಟಿದ್ದಳು. ಆದ್ದರಿಂದ ಅವಳಿಗಿದು ತಿಳಿಯದು. ತಿಳಿದಿದ್ದರೆ ! ನಕ್ಕುಬಿಡುತ್ತಿದ್ದಳೆಂದು ಕಾಣುತ್ತೆ. ನಂತರ ಅವನು ತನ್ನ ಹುಳುಕನ್ನು ಮುಚ್ಚಲು "ನೀವು ಎಲ್ಲಿಗೆ ಹೋಗುವವರು ಸಾರ್"

ಎಂದ. ನಾನು ಉದಾಸೀನದಿಂದ "ಸ್ಕಾಟ್‌ಲೆಂಡ್‌ಗೆ" ಎಂದೆ. ಆತ ಯಾವುದೋ ವ್ಯಾಪಾರಕ್ಕಾಗಿ ಹೈದರಾಬಾದ್‌ನಲ್ಲಿಳಿದ ; ನಾನು ಬೊಂಬಾಯಿಗೆ ಬಂದೆ. ಅಲ್ಲಿನ ಸಾಂತಕ್ರೂಸ್ ವಿಮಾನ ನಿಲ್ದಾಣದಲ್ಲಿದ್ದ ಮೈಸೂರು ಮೆಡಿಕಲ್ ಕಾಲೇಜಿನ ನನ್ನ ವಿದ್ಯಾರ್ಥಿಯೊಬ್ಬರು ಎಂ.ಬಿ.ಬಿ.ಎಸ್. ಮುಗಿಸಿ ಇಂಗ್ಲೆಂಡಿಗೆ ಹೊರಟಿದ್ದು ಆಕಸ್ಮಿಕ ಆದೇ ವಿಮಾನದಲ್ಲಿ. "ಸಾರ್ ಎಲ್ಲಿಗೆ ?" ಎಂದಾಗ ನಾನು "ಹಲೋ ಡಾಕ್ಟರ್, ಎಡಿನ್‌ಬರೊವಿಗೆ" ಎಂದೆ. ಸರಿ ಜೊತೆಯಾಯಿತು. ನಮ್ಮ ಮುಂದಿನ ಪ್ರಯಾಣ 'ಏರ್ ಇಂಡಿಯಾ' ವಿಮಾನದಲ್ಲಿ. ಹೊರಡುವ ವೇಳೆ ಬೆಳಿಗ್ಗೆ ೧-೩೦ಕ್ಕೆ. ನಾವಿಬ್ಬರೂ 'ಏರ್ ಇಂಡಿಯಾ'ದವರ ಅತಿಥಿಗಳಾಗಿ ಬೊಂಬಾಯಿಯಲ್ಲಿನ 'ಸನ್ ಅಂಡ್ ಸ್ಯಾಂಡ್' ಹೋಟೆಲ್‌ಗೆ ಹೋದೆವು. ಅದು 'ತ್ರೀ ಸ್ಟಾರ್ ಹೋಟೆಲ್' ಎಂದು ಕಾಣುತ್ತದೆ. ಊಟಕ್ಕೆ ಕುಳಿತಾಗ ವೆಸ್ಟರ್ನ್ ಡಾನ್ಸ್ ನಡೆಯುತ್ತಿತ್ತು. ಹೊರದೇಶದವರೂ ನಮ್ಮ ಬೊಂಬಾಯಿಯ ಶ್ರೀಮಂತರೂ ನೃತ್ಯದಲ್ಲಿ ಭಾಗವಹಿಸಿದ್ದರು. ನಂತರ ಮಲಗಲು ಪ್ರಯತ್ನಿಸಿದೆವು. ನಿದ್ರೆ ಹತ್ತಲಿಲ್ಲ. ಮಧ್ಯ ರಾತ್ರಿಯ ನಂತರ ೧೨-೩೦ಕ್ಕೆ ಟ್ಯಾಕ್ಸಿ ಬಂತು. ನಮಗೆ ಕರೆಬಂದಿತು. ಸರಿ, ಮೊದಲೇ ಗೊತ್ತಾಗಿದ್ದಂತೆ ಅದೇ ಟ್ಯಾಕ್ಸಿಯಲ್ಲಿ ವಿಮಾನ ನಿಲ್ದಾಣಕ್ಕೆ ಹೊರಟೆವು.

ಏರ್-ಇಂಡಿಯಾ ವಿಮಾನ 'ಎಂಪರರ್ ಅಶೋಕ್' ಬೆಳಗಿನ ಜಾವ ೧-೩೦ಕ್ಕೆ ಸಾಂತಕ್ರೂಸ್ ವಿಮಾನ ನಿಲ್ದಾಣದಿಂದ ಬೀಳ್ಕೊಂಡಿತು. ವಿದ್ಯುದ್ದೀಪದಲ್ಲಿ ಬೆಳಗುತ್ತಿದ್ದ ನಿಶ್ಶಬ್ದ ಬೊಂಬಾಯಿ ಹೊಳೆದು ಮಿರುಗಿ ಮಾಯವಾಯಿತು. ಗಂಟೆ ಸುಮಾರು ೩-೧೦ ಇರಬಹುದು. ಎಂಪರರ್ ಅಶೋಕ್ ಬೈರೂಟ್ ತಲುಪಿತು. ಅಲ್ಲಿನ ಕಸ್ಟಂಸ್‌ಫ್ರೀ ಶಾಪ್‌ನಲ್ಲಿ ಅಡ್ಡಾಡಿದೆವು. ಬೈರೂಟ್ ಒಳ್ಳೆ ಬ್ರೀಫ್‌ಕೇಸ್‌ಗಳಿಗೆ ಪ್ರಸಿದ್ಧವಂತೆ. ಕೆಲವು ಪ್ರಯಾಣಿಕರು ಬ್ರೀಫ್‌ಕೇಸ್ ಕೊಂಡರು. ಅಲ್ಲಿಂದ ರೋಂ, ಫ್ರಾಂಕ್‌ಫರ್ಟ್ ಮುಖಾಂತರ ೧೧-೩೦ಕ್ಕೆ ಲಂಡನ್ ತಲುಪಿದೆವು. ಹೀತ್‌ರೋ ವಿಮಾನ ನಿಲ್ದಾಣದಲ್ಲಿನ ಕಸ್ಟಂಸ್ ಕ್ಲಿಯರೆನ್ಸ್ ವಿಭಾಗದಲ್ಲಿನ ಅಧಿಕಾರಿಯೊಬ್ಬ ನನ್ನ ಪಾಸ್‌ಪೋರ್ಟ್ ತೆಗೆದುಕೊಂಡು "ದಯವಿಟ್ಟು ಕುಳಿತುಕೊಳ್ಳಿ" ಎಂದು ಒಳಗೆ ಹೋದವನು ೧೫ ನಿಮಿಷ ಕಾಣೆಯಾದ. ನಂತರ ಕಾಣಿಸಿಕೊಂಡು "ಕ್ಷಮಿಸಿ, ನೀವು ಹೋಗಬಹುದು ಸಾರ್" ಎಂದ. ನನ್ನ ಹತ್ತು ಪೌಂಡ್ ಲಗ್ಗೇಜ್

ನನ್ನ ಕೈಯ್ಯಲ್ಲಿತ್ತು, ಅದನ್ನು ಕಂಡು ಕಸ್ಟಂಸ್ ಅಧಿಕಾರಿ "ಸಾರ್, ತಮ್ಮ ಲಗ್ಗೇಜ್ ಎಲ್ಲಿ" ಎಂದು ಕೇಳಿದ್ದಕ್ಕೆ "ಇದೇ ನನ್ನ ಲಗ್ಗೇಜ್" ಎಂದೆ. ಅವನ ಮುಖನೋಡಿದೆ. ಅವನ ಕೈ ಆಶ್ಚರ್ಯದಿಂದ ತುಟಿಯ ಮೇಲಿತ್ತು, "ಆಶ್ಚರ್ಯ!" ಎಂದು ಮುಗುಳ್ನಕ್ಕ. "ಮತ್ತೊಂದು ಪ್ರಶ್ನೆ" ಎಂದು "ನಿಮ್ಮಲ್ಲಿ ಎಷ್ಟು ಸಿಗರೇಟ್ಸ್ ಇದೆ" ಎಂದಾಗ ನನ್ನಲ್ಲಿ ಉಳಿದಿದ್ದ ಎರಡು ಸಿಗರೇಟ್‌ಗಳನ್ನು ತೋರಿಸಿದೆ. ಘೊಳ್ಳೆಂದು ನಕ್ಕ ಅಧಿಕಾರಿ. ಆಗ ಪಾಚಿಕಟ್ಟಿ ತಂತಿ ಬಿಗಿದಿದ್ದ ದಂತಪಂಕ್ತಿ ಕಂಡಿತು. "ಥ್ಯಾಂಕ್ಯು" ಎಂದು ಮುಂದೆ ನಡೆದಾಗ "ವೆಲ್‌ಕಂ ಸರ್" ಎಂದು ಸೆಲ್ಯೂಟ್ ಮಾಡಿದ.

ಹೀತ್‌ರೊ ವಿಮಾನ ನಿಲ್ದಾಣದಿಂದ ಹೊರಗೆ ಬಂದಾಗ ಅಪ್ಪಳಿಸಿದ ಛಳಿಗಾಳಿಗೆ ನಾನು ತೂರಾಡಿದೆ. ಕೈ, ಕಿವಿ, ಮೂಗು, ಮುಖ ಕೊರೆಯುತ್ತಿದ್ದವು, ಕೆಳಗಿನ ದವಡೆ ನನ್ನ ಹತೋಟಿ ತಪ್ಪಿ ನಡುಗಿ ಮೇಲ್ದವಡೆಗೆ ಅಪ್ಪಳಿಸುತ್ತಿತ್ತು. ಹಲ್ಲುಗಳು ಕಟಕಟ ಎಂದವು. ಆಗ ತಿಳಿಯಿತು, ಹೀತ್‌ರೊ ವಿಮಾನ ನಿಲ್ದಾಣದಲ್ಲಿನ 'ಹೀಟರ್ಸ್'ಗಳು ಅಲ್ಲಿನ ಹವಾಮಾನವನ್ನು ಬೆಚ್ಚಗಿಟ್ಟಿದ್ದವೆಂದು. ನನ್ನ ಜೊತೆ ಪ್ರಯಾಣ ಮಾಡಿದ ಡಾಕ್ಟರನ್ನು ಬರಮಾಡಿಕೊಳ್ಳಲು ಇಬ್ಬರು ಡಾಕ್ಟರ್ ಸ್ನೇಹಿತರು ವಿಮಾನ ನಿಲ್ದಾಣದ ಹೊರಗೆ ಕಾದಿದ್ದರು. "ಏ ಗೌಡ!" ಎಂದು ಕೂಗಿ ಕೈಕುಲುಕಿದರು. ಹಿಂದೆ ನಿಂತಿದ್ದ ನನ್ನನ್ನು ಕಂಡು ಆಶ್ಚರ್ಯ ಸಂತಸಗಳಿಂದ "ಸಾರ್, ವೆಲ್‌ಕಂ" ಎಂದರು. ಆಗ ತಿಳಿಯಿತು, ಅವರಿಬ್ಬರೂ ಮೆಡಿಕಲ್ ಕಾಲೇಜಿನ ನನಗೆ ಪ್ರಿಯರಾದ ವಿದ್ಯಾರ್ಥಿಗಳೆಂದು. ಸರಿ ಡಾ|| ಗೌಡರನ್ನು ಕ್ಷಣದಲ್ಲಿ ಮರೆತರು. ಡಾ|| ಶ್ರೀಯಾಂಶು ಎನ್ನುವವರು ಮಂಡ್ಯದವರು. ನಡುಗುತ್ತಿದ್ದ ನನ್ನನ್ನು ಕಂಡು ಅವರ ಓವರ್‌ಕೋಟ್ ಕೊಟ್ಟರು. "ನಿಮಗೆ?" ಎಂದೆ. "ನಮಗೆ ಏಪ್ರಿಲ್ ಸ್ವಲ್ಪ ಬೇಸಿಗೆ ಇದ್ದಂತೆ ಸಾರ್" ಎಂದಾಗ ನನಗೆ ಏನು ಹೇಳಬೇಕೊ ತಿಳಿಯಲಿಲ್ಲ. ನನ್ನ ಲಗ್ಗೇಜ್ ಹುಡುಕಿದರು. ಸಿಕ್ಕಿದ್ದು ನನ್ನ ಕೈಯಲ್ಲಿದ್ದಷ್ಟೆ. 'ಏರ್‌ಪೋರ್ಟ್'ನವರ ಬಸ್‌ಹತ್ತಿ ಲಂಡನ್ ನಗರದತ್ತ ಹೊರಟೆವು. ಎಡಗಡೆ ಇದ್ದ ಕಾರ್‌ಪಾರ್ಕ್ ೭-೮ ಅಂತಸ್ತಿನದು. ಬಲಗಡೆ ವಿಶಾಲ ಮೈದಾನ. ವಿಮಾನ ನಿಲ್ದಾಣದಲ್ಲಿ ೨ ನಿಮಿಷಕ್ಕೊಂದು ವಿಮಾನ ಇಳಿಯುತ್ತದೆ; ಇಲ್ಲ, ಏರುತ್ತದೆ. ಜೋಡಿ ರಸ್ತೆಗಳೇ ಹೆಚ್ಚು. ಅಲ್ಲಲ್ಲಿದ್ದ ಸಣ್ಣ ಸೇತುವೆಗಳನ್ನು, ಏರಿಳಿತಗಳಿಂದ ನುಗ್ಗಿ ಬಸ್ಸು ಚಲಿಸುತ್ತಿತ್ತು. ಅಕ್ಕ ಪಕ್ಕ

ವಲ್ಲಿ ಮಾಸಲು ಹೆಂಚಿನ ಮನೆಗಳು, ಮನೆಯ ಮುಂದೆ ಇದ್ದ ಹಸಿದು ಲಾನ್‌ಗಳು, ಬಣ್ಣ ಬಣ್ಣದ ಸಣ್ಣ ಗುಲಾಬಿ ಗಿಡಗಳು, ಸ್ವಚ್ಛತೆಗೆ ಹೆಚ್ಚಿನ ಮೆಚ್ಚಿಗೆ ಗಳಿಸಿದ್ದವು.

ಲಂಡನ್ ಮಹಾನಗರದಲ್ಲಿನ ಭಾರಿ ಭಾರಿ ಮಜಬೂತಾದ ಕಟ್ಟಡಗಳ ಅಂತರದಲ್ಲಿ ಹರಿದ ವಿಶಾಲ ರಸ್ತೆಗಳಲ್ಲಿ "ಕಿಂಗ್ಸ್‌ವೇ" ಒಂದು. ಅರ್ಧ ಮೈಲಿ ಪೂರ್ವಕ್ಕೆ ಫ್ರೆಂಡ್‌ಶಿಪ್ ಹೌಸ್. ಬಲಕ್ಕೆ ತಿರುಗಿದರೆ ಆಲ್ಡ್‌ವಿಚ್‌ನಲ್ಲಿರುವ ಹೈಕಮಿಷರ್ ಆಫ್ ಇಂಡಿಯಾ ಸೌಧ. ಅಲ್ಲಿ ಇಳಿದು ಶ್ರೀ ಎಂ. ಎಲ್. ಓಬರಾಯ್, ಡೆಪ್ಯುಟಿ ಸೆಕ್ರೆಟರಿ ಅವರನ್ನು ನೋಡಿದೆ. "ಡಾ|| ಗೋಪಾಲ್, ನಿಮ್ಮನ್ನು ಎದುರು ನೋಡುತ್ತಿದ್ದೆವು. ಬನ್ನಿ ಕುಳಿತು ಕೊಳ್ಳಿ" ಎಂದರು. ತಕ್ಷಣ ಟೆಲಿಫೋನ್ ನಂಬರ್ ತಿರುಗಿಸಿ ಮಾತು ಮುಗಿಸಿದರು. ಡಾ|| ಸಿ. ವಿಕ್‌ಹ್ಯಾಮ್, ಬ್ರಿಟಿಷ್ ಪೋಸ್ಟ್‌ಗ್ರಾಜುಯೇಟ್ ಮೆಡಿಕಲ್ ಫೆಡರೇಷನ್, ೧೮, ಗಿಲ್‌ಫೋರ್ಡ್ ಸ್ಟ್ರೀಟ್‌ನಲ್ಲಿದ್ದಾರೆ, ಅವರ ದೂರವಾಣಿಯ ನಂ. ೪೦೫, ೨೮೧೬. ಅವರನ್ನೊಮ್ಮೆ ಭೇಟಿಮಾಡಿ, ಹಾಗೂ ೫೫, ಜೆರ್ಮೆನ್ ಸ್ಟ್ರೀಟ್‌ನಲ್ಲಿ ನಮ್ಮ ಅಕೌಂಟ್ಸ್ ಆಫೀಸರ್ ಶ್ರೀ ಸರ್‌ಕಾರ್ ಇದ್ದಾರೆ. ನಿಮಗೆ ಸ್ಕಾಲರ್‌ಶಿಪ್ ಹಣ ಕೊಡುತ್ತಾರೆ" ಎಂದರು. "ಎಷ್ಟುದೂರ ಆಗುತ್ತೆ ಜೆರ್‌ಮೆನ್ ಸ್ಟ್ರೀಟ್‌ನ ನಂಬರ್ ೫೫ನೇ ಸೌಧ" ಎಂದು ಕೇಳಿದ್ದಕ್ಕೆ "ಒಂದರ್ಧ ಮೈಲಿಯಾಗಬಹುದು. ನೀವು ನಡೆದು ಹೋಗುವುದೇ ಲೇಸು, ಬಸ್ ಹಿಡಿದರೆ ಸುತ್ತಿ ಬಳಸಬೇಕಾಗುತ್ತೆ" ಎಂದು ಹೇಳಿದರು. "ಥ್ಯಾಂಕ್ಯು ವೆರಿಮಚ್ ಸಾರ್" ಎಂದು ಬೀಳ್ಕೊಂಡೆ.

ಇಂಡಿಯಾ ಹೈಕಮಿಷನ್ ಆಫೀಸಿನ ಕಟ್ಟಡ ಸೊಗಸಿನದು. ಅತಿ ಮುಖ್ಯ ಸ್ಥಳ ಒಂದರಲ್ಲಿದೆ. ಕಟ್ಟಡದ ಕೆಳಭಾಗದಲ್ಲಿ 'ಸೆಲ್ಲಾರ್' ಇದೆ. ಅಲ್ಲಿಂದ ಬರುವವರು, ಅಲ್ಲಿಗೆ ಹೋಗುವವರಲ್ಲಿ ಇಂಡಿಯಾ ದೇಶದವರೇ ಹೆಚ್ಚು. ಆಶ್ಚರ್ಯವಾಯಿತು. ಕುತೂಹಲ ಕೆರಳಿ ನಾನು ಗುಂಪು ಸೇರಿ ಒಳ ನಡೆದೆ. ಒಳಗೆ ತಲೆಹಾಕಿದೆನೊ ಇಲ್ಲವೊ, ತಕ್ಷಣ "ವಾಂಗೊ, ವಾಂಗೊ, ಎನ್ನಾ ? ದೋಸೆಯಾ ? ಇಟ್ಟಲಿ ಸಾಂಬಾರಮಾ ?" ಎಂದಿತು ಧ್ವನಿಯೊಂದು. ಥಟ್ಟನೆ ತಿರುಗಿದೆ. ಕಪ್ಪನೆಯ ದಪ್ಪ ಮಧ್ಯ ವಯಸ್ಸಿನ ಮದರಾಸಿ !

ಶ್ರೀ ಸರ್ಕಾರ್ ಇರುವುದೊಂದು ಮೂಮೂಲು ಕಟ್ಟಡ. ಒಂದೆರಡು

ಗುಮಾಸ್ತರು ಗಿರಾಕಿಗಳಿಗೆ ಕಾದು ಕುಳಿತಂತೆ ಕುಳಿತಿದ್ದರು. ನಾನು ಬಂದದ್ದು ಕಂಡು ಚುರುಕು ಕಾಣಿಸಿತು ಅವರಲ್ಲಿ. "ಹೌದು ಡಾಕ್ಟರ್, ಕುಳಿತು ಕೊಳ್ಳಿ, ನಿಮ್ಮ ಕೈಗೆ ಸ್ವಲ್ಪ ಹಣ ಕೊಡುತ್ತೇನೆ. ಉಳಿದದ್ದು ಚೆಕ್ ಮುಖಾಂತರ" ಎಂದು ೧೫-೨೦ ನಿಮಿಷಗಳಲ್ಲಿ ಎರಡನ್ನೂ ಕೊಟ್ಟರು. ನಾನು ಎದ್ದು ಹೊರಡಲನುವಾದೆ. "ತಮ್ಮಿಂದ ಬೀಳ್ಕೊಳ್ಳಲೇ ಸರ್" ಎಂದಾಗ ನನ್ನನ್ನು ಕೆಳಗಿನಿಂದ ಮೇಲಿನವರೆಗೆ ನೋಡಿ "ಆಗಲಿ, ನೀವು ಮಾತ್ರ ಒಂದು ಸ್ವೆಟರ್ ಮತ್ತು ಒಂದು ಓವರ್‌ಕೋಟ್ ಈಗಲೇ ತೆಗೆದುಕೊಳ್ಳಿ, ಗುಡ್‌ಬಯ್" ಎಂದರು.

ಮೊದಲೇ ಶ್ರೀ ಓಬರಾಯ್ ಅವರು ಗೊತ್ತುಮಾಡಿದಂತೆ ಒಂದೆರಡು ದಿನ ತಂಗಲು ಇಂಡಿಯನ್ ವೈ. ಎಂ. ಸಿ. ಎ. ಹುಡುಕಿಕೊಂಡು ಹೊರಟೆ ಟ್ಯಾಕ್ಸಿಯೊಂದರಲ್ಲಿ. ನಾನು ಕುಳಿತಿದ್ದ ಟ್ಯಾಕ್ಸಿ ಆಕಸ್ಮಿಕವಾಗಿ ಇಟಾಲಿಯನ್ ವೈ.ಎಂ.ಸಿ.ಎ. ಬಳಿ ನಿಂತಿತು. ಆಗ ತಿಳಿಯಿತು, ಟ್ಯಾಕ್ಸಿಯವನು ಇಂಡಿಯನ್ ವೈ.ಎಂ.ಸಿ.ಎ. ವಿಳಾಸ ತಿಳಿಯಲು ಅಲ್ಲಿ ನಿಲ್ಲಿಸಿದ ಎಂದು. ಅದರ ವಿಳಾಸ ೪೧, ಫಿಡ್ಜರಾಯ್ ಸ್ಕ್ವೇರ್, ಅದರ ದೂರವಾಣಿ ನಂಬರ್ ಈ. ವಿ. ಎಸ್. ೪೦೦೪ ಶ್ರೀ ಓಬರಾಯ್ ಕೊಟ್ಟಿದ್ದರು. ವೈ.ಎಂ.ಸಿ.ಎ. ಹಾಸ್ಟೆಲ್ ಸೇರಿದಾಗ ಸಾಯಂಕಾಲ ೫ ಗಂಟೆ. ವಾರ್ಡನ್ ಮದರಾಸಿ. "ನಿಮಗೆ ಕೊಠಡಿ ಸಿಗುವುದು ಸ್ವಲ್ಪ ಕಷ್ಟ" ಎಂದಾಗ ನನಗೆ ಬಹಳಷ್ಟು ನಿರಾಸೆಯಾಯಿತು. "ಡೆಪ್ಯುಟಿ ಸೆಕ್ರೆಟರಿ ಟೆಲಿಫೋನ್ ಮಾಡಿದ್ದರು" ಎಂದಾಗ, "ಹೌದೌದು, ಅವರು ಆಗಾಗ್ಗೆ ಫೋನ್ ಮಾಡುತ್ತಾರೆ. ಆದರೆ ನಮ್ಮಲ್ಲಿ ಕೊಠಡಿಗಳು ಖಾಲಿ ಇರಬೇಕಲ್ಲ, ಸ್ವಲ್ಪ ನಿಧಾನಿಸಿ, ನೋಡುತ್ತೇನೆ" ಎಂದರು. ಸ್ವಲ್ಪ ಬೇಜವಾಬ್ದಾರಿ ಅವರಲ್ಲಿ ಕಂಡಿತು. ನನಗೆ ಸುಸ್ತು' ಸಂಕಟ. ಕೊಠಡಿಯೊಂದರಲ್ಲಿ ಸ್ವಲ್ಪ ಕಾಲು ಚಾಚಿದರೆ ಸಾಕಾಗಿತ್ತು, ಊಟವೂ ಬೇಕಿರಲಿಲ್ಲ. ಒಬ್ಬ ಸಹಪ್ರಾಧ್ಯಾಪಕ ಇಂಡಿಯಾದಿಂದ ವಿದ್ಯಾರ್ಥಿ ವೇತನ ಪಡೆದು ಬಂದರೆ ಇಷ್ಟೇ ಆತಿಥ್ಯವೇ ಎನ್ನಿಸಿತು. ಅಲ್ಲಿ ಊಟ ೬-೩೦ಕ್ಕೆ. ಕೆಲವು ಇಂಗ್ಲೀಷ್ ಹುಡುಗ ಹುಡುಗಿಯರು ಊಟಕ್ಕೆ ತಟ್ಟೆ ಹಿಡಿದು ಕ್ಯೂನಲ್ಲಿ ನಿಂತಿದ್ದರು. ಕ್ಯೂನಲ್ಲಿದ್ದವರೊಬ್ಬರು "ಹಲೊ" ಎಂದರು. ನಾನೂ ಉತ್ತರಿಸಿದೆ. ಅಷ್ಟರಲ್ಲಿ ವಾರ್ಡನ್ ನನ್ನಲ್ಲಿಗೆ ಬಂದರು. "ನಿಮ್ಮ ಕೊಠಡಿ ೭೮" ಎಂದು ಹೇಳಿ ಹೋದರು. ಊಟದ ಕ್ಯೂ ತ್ಯಜಿಸಿ,

ಕೊಠಡಿ ಸೇರಿ, ಶೂಸ್ ತೆಗೆದು ಹಾಸಿಗೆ ಮೇಲೆ ಉರುಳಿದೆ. ಹಾಯಾಗಿ ಕಂಡಿತು. ಹತ್ತು ನಿಮಿಷ ಕಳೆದಿದ್ದಿರಬೇಕು. ಬಾಗಿಲು ತಟ್ಟಿದ ಶಬ್ದ ! ಆ ಶನಿ ವಾರ್ಡನ್ನೇ ಇರಬೇಕೆಂದು ಬಾಗಿಲು ತೆರೆದೆ. "ಹಲೋ, ಯಾವ ದೇಶ, ಯಾವ ಊರಿನವರು ?" ಎಂದರು ಅಪರಿಚಿತರೊಬ್ಬರು. ನಾನು "ಇಂಡಿಯಾ, ಮೈಸೂರಿನಿಂದ ಬಂದಿದ್ದೇನೆ" ಎಂದೆ. "ನನ್ನದು ಕೇರಳ, ಡಾ॥ ಅಬ್ರಹಾಂ ಎಂದು" ಎಂದರು. "ದಯವಿಟ್ಟು ಒಳಗೆ ಬನ್ನಿ. ನಾನು ಡಾ॥ ಗೋಪಾಲ್" ಎಂದೆ. ಊಟವಾಗಿಲ್ಲ ಎಂದು ತಿಳಿದು "ಮೈತೊಳೆದುಕೊಳ್ಳಿ, ಊಟಕ್ಕೆ ಹೋಗೋಣ. ೭-ಇಂಕ್ಕೆಲ್ಲಾ ಮುಗಿದು ಹೋಗುತ್ತದೆ" ಎಂದು ಬಲವಂತ ಮಾಡಿದರು. ಸರಿ ಅಲ್ಲಿಂದ ಮುಂದಿನ ೪೮ ಗಂಟೆಗಳ ಕಾಲ ಅವರು ನನಗೆ ನೆರಳಾಗಿದ್ದರು.

೨

ಏಪ್ರಿಲ್ ತಿಂಗಳ ದಿನಾಂಕ ೮ ನೇ ಸೋಮವಾರ ಬೆಳಿಗ್ಗೆ 'ದಿ ರಾಯಲ್ ಹಾಸ್ಪಿಟಲ್ ಫಾರ್ ಸಿಕ್ ಚಿಲ್ಡ್ರನ್'ಲ್ಲಿ ಕ್ಲಿನಿಕಲ್ ಅಸಿಸ್ಟೆಂಟಾಗಿ ರಿಪೋರ್ಟ್ ಮಾಡಿಕೊಂಡೆ. ನನ್ನ ಗೈಡ್ ರಜದಲ್ಲಿದ್ದರು. ಹೋಗುವುದಕ್ಕೆ ಮೊದಲು ಸಾಧ್ಯವಾದಷ್ಟು ಏರ್ಪಾಡು ಮಾಡಿಹೋಗಿದ್ದರು. ಭಾರತ ಸರ್ಕಾರ ಕಳುಹಿಸಿದ್ದ ಕೇಬಲ್ ಅಲ್ಲಿ ಅಂಟಿಹಾಕಿತ್ತು. ಕನ್‌ಸಲ್‌ಟೆಂಟ್ಸ್, ರಿಜಿಸ್ಟ್ರಾರ್ಸ್ ಮತ್ತು ಸೀನಿಯರ್ ಹೌಸ್ ಆಫೀಸರ್ಸ್ ಪರಿಚಯವಾಯಿತು. ಪಾಕಿಸ್ತಾನದ ಡಾ॥ ರಫೀಕ್ ನನ್ನಲ್ಲಿ ಹೆಚ್ಚು ಆಸಕ್ತಿ ತೋರಿಸಿದಂತಿತ್ತು ಸನ್ನಿವೇಶ. ಮಿ॥ ಬಿಸ್ಸೆಟ್ಸ್, ಮಿಸ್ ಆರ್. ಎಂ. ಮಕಾಯ್ ಈ ಇಬ್ಬರು ಕನ್‌ಸಲ್‌ಟೆಂಟ್ಸ್, ಮಿ॥ ಹೇ ಮತ್ತು ಮಿಸ್ ಮೆಯಿಲ್ ಇಬ್ಬರೂ ರಿಜಿಸ್ಟ್ರಾರ್‌ಗಳು. ಉಳಿದವರು ಸೀನಿಯರ್ ಹೌಸ್ ಆಫೀಸರ್ಸ್. ನನ್ನ ಗೈಡ್ ಹೆಸರು ಮಿ॥ ಎಫ್. ಎಚ್. ರೊಬಾರ್ಟ್ಸ್ ಎಂದು. ರೊಬಾರ್ಟ್ಸ್ ಒಳ್ಳೆಯವರೆಂದು ಕೇಳಿದ್ದೇನೆಂದು ಡಾ॥ ವಾಡಗಿ ಮೊದಲೇ ನನಗೆ ತಿಳಿಸಿದ್ದರು.

ಸಿಕ್ ಚಿಲ್ಡ್ರನ್ ಆಸ್ಪತ್ರೆ ಇರುವುದು ಆಗ ಜನಿಸಿದ ಶಿಶುಗಳಿಂದ ೧೪ ವರ್ಷದ ಮಕ್ಕಳಿಗಾಗಿ. ಅಲ್ಲಿ ವೈದ್ಯಕೀಯ ಮತ್ತು ಶಸ್ತ್ರ ಚಿಕಿತ್ಸಾ ವಿಭಾಗಗಳು ಪ್ರತ್ಯೇಕ. ಆಸ್ಪತ್ರೆ ೧೮೬೦ ರಲ್ಲಿ ಸ್ಥಾಪಿಸಿದ್ದು. ಮಕ್ಕಳ ಶಸ್ತ್ರ ಚಿಕಿತ್ಸಾ

ವಿಭಾಗ ೧೮೮೭ ರಲ್ಲಿ ಮೊದಲ ಬಾರಿಗೆ ಸ್ಥಾಪನೆಯಾಯಿತು. ಕರ್ನಾಟಕದಲ್ಲಿ ೧೯೭೦ ರಲ್ಲಿ ಅದರ ಸ್ಥಾಪನೆ. ಅಂದರೆ ಸುಮಾರು ೮೦ ವರ್ಷಗಳಾದ ನಂತರ ನಮ್ಮಲ್ಲಿ ಮಕ್ಕಳ ಶಸ್ತ್ರ ಚಿಕಿತ್ಸೆಯ ಬಗ್ಗೆ ಜ್ಞಾನೋದಯವಾಯಿತು. ಅಂತೂ ಶ್ಲಾಘನೀಯ ! ತಮಿಳುನಾಡು, ಕೇರಳ ಮತ್ತು ಆಂಧ್ರ ಪ್ರದೇಶಗಳ ಮದ್ರಾಸ್ ಮಧುರೈ, ಟ್ರಿವ್ಯಾನ್‌ಡ್ರಂ ಮತ್ತು ಹೈದರಾಬಾದ್‌ಗಳಲ್ಲಿ ಈ ವಿಭಾಗ ಸ್ಥಾಪನೆಯಾಗಿ ಅಲ್ಲಿಗೆ ಹತ್ತು ವರ್ಷಗಳಾಗಿದ್ದವು. ಇದಕ್ಕೆ ಕಾರಣ ಗೊತ್ತಿದೆಯಲ್ಲ. ಸ್ವಾರ್ಥಿಗಳು ಈ ವಿಭಾಗದಲ್ಲಿ ಆಳಿದ್ದು ಅಥವಾ ದೂರದೃಷ್ಟಿ ಇಲ್ಲದವರು ಮೆರೆದ ವಿಭಾಗ ಇದು.

ಇಲ್ಲಿ ಮಕ್ಕಳ ರೋಗಕ್ಕೆ ಸಂಬಂಧಿಸಿದ ಪೆಥಾಲಜಿ, ಬಯೋಕೆಮಿಸ್ಟ್ರಿ ಅನೆಸ್ತೇಸಿಯ ಮುಂತಾದ ವಿಭಾಗಗಳು ಪ್ರತ್ಯೇಕವಾಗಿವೆ. ಶಸ್ತ್ರಚಿಕಿತ್ಸೆಯಲ್ಲೂ ಸಹ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಾ ವಿಭಾಗ, ಸುಟ್ಟಗಾಯಗಳ ವಿಭಾಗ, ಮಿದುಳಿನ ಶಸ್ತ್ರ ಚಿಕಿತ್ಸೆ ಇವೂ ಪ್ರತ್ಯೇಕವಾಗಿ ಬೆಳೆಯುತ್ತಿವೆ. ಮಕ್ಕಳ ಅಭ್ಯುದಯಕ್ಕಾಗಿ, ಆರೋಗ್ಯಕ್ಕಾಗಿ ತಜ್ಞರಿದ್ದಾರೆ, ನವಜಾತ ಶಿಶುಗಳಿಗೆ ಪ್ರತ್ಯೇಕತೆ ಏರ್ಪಟ್ಟಿದೆ ! ಮಕ್ಕಳಿಗಾಗಿ ಫಿಜಿಯೋಥೆರಪಿ, ಮನೋರೋಗಶಾಸ್ತ್ರ ವಿಭಾಗ, ಕಿವಿ, ಮೂಗು, ಗಂಟಲ ವಿಭಾಗ ಮತ್ತು ಶ್ರವಣ ಚಿಕಿತ್ಸಾ ವಿಭಾಗಗಳೂ ಉಂಟು. ಮಕ್ಕಳ ವೈದ್ಯಶಾಸ್ತ್ರದಲ್ಲಿ ಎಂ.ಆರ್.ಸಿ.ಪಿ. ಎಂಬ ಡಿಪ್ಲೋಮಾ ಕೊಡುತ್ತಾರೆ. ಈ ಆಸ್ಪತ್ರೆ ಅದಕ್ಕೆ ಮನ್ನಣೆ ಪಡೆದಿದೆ.

ಮಕ್ಕಳು ಆಸ್ಪತ್ರೆ ಸೇರಿದಾಗ ಸ್ನಾನಮಾಡಿಸಿ ಆಸ್ಪತ್ರೆಯ ಉಡುಪು ಹಾಕುತ್ತಾರೆ. ಮನೆಯ ಉಡುಪನ್ನು ವಾಪಸ್ಸು ಕೊಡಲಾಗುತ್ತದೆ. ಮಗುವಿನ ಶುಶ್ರೂಷೆ ಪೂರ್ತಿ ದಾದಿಯರ ಕೆಲಸ. ತಂದೆತಾಯಿಗಳನ್ನು ವಾರ್ಡ್‌ಗಳಿಗೆ ಸೇರಿಸುವುದಿಲ್ಲ. ನೋಡ ಬಯಸುವವರು ಗೊತ್ತಾದ ಕಾಲದಲ್ಲಿ ಬಂದು ನೋಡಿ ಹೋಗುತ್ತಾರೆ. ಊಟ, ಸ್ನಾನ, ಶೌಚವೆಲ್ಲಾ ದಾದಿಯರ ಕಣ್ಣೆದುರು ನಡೆಯುತ್ತದೆ. ಇಲ್ಲಿನಂತೆ ಜನರಲ್ ನರ್ಸಿಂಗ್ ಪಾಸಾದ ದಾದಿಯರು ಮಕ್ಕಳ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಿಲ್ಲ. ಮಕ್ಕಳ ಶುಶ್ರೂಷೆಯಲ್ಲೇ ೩ ವರ್ಷ ತರಬೇತಿ ಪಡೆದು, ನಂತರ ಮಕ್ಕಳ ನರ್ಸಿಂಗ್‌ನಲ್ಲಿ ತೇರ್ಗಡೆಯಾದ ಮೇಲೆ ಮಕ್ಕಳ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ. ಅಂದರೆ ಅವರು ತಜ್ಞರು. ನಂತರ ೨ ವರ್ಷ ಜನರಲ್ ಆಸ್ಪತ್ರೆಯಲ್ಲಿ ಟ್ರೈನಿಂಗ್ ಪಡೆಯುತ್ತಾರೆ. ಹೆಳವರಾದ ಮಕ್ಕಳಿಗೆಂದೇ ಪ್ರತ್ಯೇಕ 'ರಿಹೆಬಿಲಿಟೇಷನ್'

ಸಂಸ್ಥೆಗಳಿವೆ.

ನನಗಾಗಿ ಒಂದು ಕೊಠಡಿ ಮೀಸಲಾಗಿತ್ತು. ಅದರ ಬೀಗದೆಸಳು ನನ್ನಕೈ ಸೇರಿತು. ಅಲ್ಲಿನ ಆಸ್ಪತ್ರೆಗಳಲ್ಲಿ ಜನರಲ್ ಮೆಡಿಕಲ್ ಕೌನ್ಸಿಲ್‌ನಿಂದ ಮೊದಲು ದಾಖಲೆಯಾದ ಮೇಲೆ ರೋಗಿಯನ್ನು ಪರೀಕ್ಷಿಸಲು ಸಾಧ್ಯ. ದಾಖಲಾತಿ ನನಗೆ ೩ ದಿವಸ ತಡವಾಗಿ ಬಂತು. ಆ ೩ ದಿನ ವಾರ್ಡ್ ರೌಂಡ್ಸ್‌ನಲ್ಲಿ ಸುಮ್ಮನೆ ಭಾಗಿಯಾದೆ. ಮಿಸ್ ಮೆಯಿಲ್, ವಾರ್ಡ್ ರೌಂಡ್ಸ್‌ನಲ್ಲಿ "ನೀವು ಮೊದಲು ದಾಖಲಾತಿ ಮುಗಿಸಿ. ನಾನು ನೀವಾಗಿದ್ದರೆ ಆ ಕೆಲಸ ಮೊದಲು ಮಾಡುತ್ತಿದ್ದೆ" ಎಂದರು. ಮಿ|| ಬಿಸೆಟ್ ತಲೆ ಕುಣಿಸಿದರು. ಮಧ್ಯಾಹ್ನದ ಊಟಕ್ಕೆ ಗಂಟೆಯಾಯಿತು. ನಾನೂ, ಡಾ|| ರಫೀಕ್ ಕ್ಯೂ ಸೇರಿದೆವು. ನಾನು ೨ ಕ್ರೌನ್ (ಒಂದು ಕ್ರೌನ್‌ಗೆ ಸುಮಾರು ರೂ ೨-೫೦) ಹೊರತೆಗೆದು ೨ ಟಿಕೆಟ್ ಪಡೆಯಲುಹೋದೆ. ರಫೀಕ್ "ಇದು ಇಂಡಿಯಾ ಅಲ್ಲ. ನನ್ನ ಹಣ ನಾನು ಕೊಡುತ್ತೇನೆ" ಎಂದು ಕೊಟ್ಟರು. ಊಟ ರುಚಿಸಲಿಲ್ಲ. ಬೀಫ್ (ಗೋಮಾಂಸ) ಕೋಸು, ಬೇಯಿಸಿದ ಹಸಿ ಬಟಾಣಿ ಇತ್ತು. ನಾನು ಹುಟ್ಟಿನಿಂದ ಮಾಂಸಾಹಾರಿ. ಆದರೆ ಗೋಮಾಂಸ ಅಭ್ಯಾಸವಿರಲಿಲ್ಲ. ರಫೀಕ್ ಮತ್ತು ಅಲ್ಲಿದ್ದವರು ಆಶ್ಚರ್ಯದಿಂದ ನೋಡಿ ಮುಖ ತಿರುಗಿಸಿದರು. ಊಟ ಬಡಿಸುತ್ತಿದ್ದವರು "ಇದನ್ನು ತಿನ್ನದಿದ್ದರೆ ನಿಮಗೆ ಇಲ್ಲಿ ಕಷ್ಟವಾಗಬಹುದು. ಮತ್ತೇನು ತಿನ್ನುವಿರಿ" ಎಂದು ಕೆಲವು ಪಾತ್ರೆ ತೋರಿಸಿದರು. "ಬೇಯಿಸಿದ ಮೊಟ್ಟೆ ಕೊಡಿ" ಎಂದು ತಿಂದೆ. ಊಟ ಅರೆಹೊಟ್ಟೆಯಾಯಿತು. ಬ್ರಾಕೆಟ್‌ಹೌಸ್‌ನಲ್ಲೂ ಊಟ ನನಗೆ ಹಿಡಿಸಿರಲಿಲ್ಲ.

ಮನೆಗೆ ಬಂದಾಗ ಡಾ|| ವಾಡಗಿ ಕಾದಿದ್ದರು. "ಬರ್ರಿ ಮತ್ತೆ ಊಟಕ್ಕೆ" ಎಂದಾಗ "ಆಯಿತು, ಎಲ್ಲಾ ಕಡೆ ಒಂದೆ, ನನಗೆ ಹಿಡಿಸದು" ಎಂದೆ. "ನಾಳೆ ಇಂಡಿಯನ್ ಅಥವ ಪಾಕಿಸ್ತಾನಿ ಹೋಟೆಲ್‌ಗೆ ಹೋಗೋಣ. ನಿಮಗೆ ಕೋಳಿ, ಚಪಾತಿ ಬಡಿಸ್ತಾರೆ" ಎಂದು ಸಮಾಧಾನ ಮಾಡಿದರು. ಆಸ್ಪತ್ರೆಯಿಂದ ಬಂದ ಮೇಲೆ ನನಗೆ ಚಿಂತೆ ಹಿಡಿಯಿತು. ನಾನು ಮೈಸೂರಿನಲ್ಲಿ ದೊಡ್ಡವರ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ಈಗ ಒಮ್ಮೆಲೇ ಮಕ್ಕಳ ಆಸ್ಪತ್ರೆ ಸೇರಿದ್ದೆ. ಆಗತಾನೆ ಜನಿಸಿದ ಮುದ್ದೆ ಮುದ್ದೆಯಾದ ಶಸ್ತ್ರಚಿಕಿತ್ಸೆಗೆ ಕಾಯುತ್ತಿದ್ದ ಶಿಶುಗಳು, ಮುತ್ತಿಟ್ಟು ಆಡಿಸುವಂಥ ಹಸುಳೆಗಳು, ಕೀಟಲೆ ಮಾಡಿ

ಆನಂದಿಸುವ ಏನೂ ಅರಿಯದ ಮುದ್ದು ಮಕ್ಕಳು, ಬಿಟ್ಟುಹೋದ ತಾಯಿತಂದೆ ಯರಿಗಾಗಿ ಕೆಲವು ಚೀರುತ್ತವೆ. ಕೆಲವು ಬೊಂಬೆ ಜೊತೆ ಆಟವಾಡುತ್ತವೆ. ಇನ್ನೊಂದು ಕಡೆ ಟೆಲಿವಿಷನ್ ನೋಡುವ ಗುಂಪು. ಯಾರ ಹಂಗೂ ಇಲ್ಲದೆ ಊಟದ ಸಮಯದಲ್ಲಿ ಮೂಗು ತುಟಿಗಳಿಗೆ ತರುವ ಚಂಚ-ಕೊನೆಗೆ ಬಾಯಿ ಸೇರುವಿಕೆ. ನ್ಯಾಪ್‌ಕಿನ್ ಮೇಲೆ ಸುರಿದ ಹಾಲು, ಸಾಲಡ್ ಇದೆಲ್ಲಾ ನೋಡಿದ್ದೆ, ನನ್ನ ಪುಟಾಣಿಗಳ ನೆನಪು ಬಹುವಾಗಿ ಕಾಡಿತು. "ಅಯ್ಯೋ ಮುದ್ದು ಹಸುಳೆಗಳನ್ನು ಬಿಟ್ಟು ಬಂದೆನಲ್ಲಾ" ಎಂದು ಮರುಗಿದೆ. ಡಾ|| ವಾಡಗಿ ಯವರಿಗೆ ತಿಳಿಸಿದೆ. "ಎಲ್ಲಾ ಸರಿಹೋಗುತ್ತೆ, ನಾಲ್ಕಾರು ದಿನ ನೆನಪು ಕಾಡುತ್ತೆ, ನಾನೆಲ್ಲೋ ನಿಮಗೆ ಮದುವೆಯಾಗಿಲ್ಲ ಎಂದುಕೊಂಡಿದ್ದೆ" ಎಂದರು. ಕೊನೆಯ ವಾಕ್ಯ ಪುನಃ ಮಕ್ಕಳು ಮನೆ ಎರಡನ್ನೂ ಜ್ಞಾಪಕಕ್ಕೆ ತಂದು ಮನಸ್ಸನ್ನು ಮತ್ತಷ್ಟು ಕಲಕಿತು.

ಬೆಳಿಗ್ಗೆ ಉಪಹಾರಕ್ಕೆ ಕಾರ್ನ್‌ಫ್ಲೇಕ್ಸ್, ಹಾಲು ಮತ್ತು ಪೊಟ್ಟಿ ರುಚಿ ಯಾಗಿತ್ತು. ಆಸ್ಪತ್ರೆಗೆ ಬಂದೆ. ಮಿ|| ಬಿಸ್ಸೆಟ್ ೬ ವರ್ಷದ ಹುಡುಗನ ಬಲಗಡೆಯ ಮೂತ್ರಪಿಂಡದ ಸ್ವಲ್ಪ ಭಾಗ ತೆಗೆದು ಹಾಕಿದರು. ನಾನು ಆ ಆಪ ರೇಶನ್ ನೋಡಿರಲಿಲ್ಲ. ಆದರೆ ಓದಿದ್ದೆ. ಆಪರೇಶನ್ ನೋಡಿದೆ, ಖುಷಿ ಯಾಯಿತು. ಆಪರೇಶನ್ ಥಿಯೇಟರ್‌ನಿಂದ ಹೊರ ಬರುವಾಗ "ಥ್ಯಾಂಕ್ಯು ಸರ್" ಎಂದೆ. "ಓ, ಪ್ಲೆಶರ್ ಡಾಕ್ಟರ್" ಎಂದರು. ವಾತಾವರಣ ಸ್ವಲ್ಪ ಒಗ್ಗಿದಂತಿತ್ತು.

ಸಾಯಂಕಾಲ ಬ್ರಾಕೆಟ್ ಹೌಸ್ ತಲುಪಿದೆ. ಮೂರನೆ ದಿನದಿಂದ ಆಸ್ಪತ್ರೆ ಯಲ್ಲಿನ ಕೊಠಡಿಯಲ್ಲೇ ನೆಲಸಬೇಕು. ಕಾರಣ, ದಾಖಲಾತಿ ಮಾಡಿಸಿ ಆಗಿತ್ತು. ಬುಧವಾರದಿಂದ ಕೆಲಸ ಶುರು. ಬೆಳಗ್ಗೆ ೯ ಗಂಟೆಗೆ ಶುರು ಆದರೆ ಸಾಯಂಕಾಲ ೫ ಗಂಟೆ ತನಕ. ನನಗೆ ಹೊರರೋಗಿಗಳನ್ನು ನೋಡಿ ಕೊಳ್ಳುವ ಕೆಲಸ. ಡಾ|| ವಾಡಗಿಯವರಿಗೆ ತಿಳಿಸಿದೆ. ಇಷ್ಟವಿಲ್ಲದೆ ಒಪ್ಪಿದರು. ಶ್ರೀ ಮತ್ತು ಶ್ರೀಮತಿ ಗ್ರೀನ್‌ಫೀಲ್ಡ್‌ರವರಿಗೆ ತಿಳಿಸಿದೆ. ಇಬ್ಬರೂ ಮೌನ ವಾಗಿದ್ದರು. ಆ ರಾತ್ರಿ ಕೊಠಡಿಗೆ ಟೀ ತಂದರು ಮನೆಯ ಯಜಮಾನ, ಅಂದರೆ ಶ್ರೀಮಾನ್ ಗ್ರೀನ್‌ಫೀಲ್ಡ್. ವಯಸ್ಸು ೫೦ ಇದ್ದಿರಬಹುದು. ನನ್ನ ಹಾಸಿಗೆಯ ಮೇಲೆ ಕುಳಿತರು. ನಾನು ಟೀ ಕುಡಿದಾದ ಮೇಲೆ ನನ್ನ ಬೆನ್ನು ತಟ್ಟಿ "ನೀವು ನಾಳೆ ಹೊರಡುವವರು. ಒಳ್ಳೆಯದಾಗಲಿ" ಎಂದು ಹಾರೈಸಿ

ಹೊರಟರು. ಹೊರಡುವಾಗ ಅಲ್ಲಲ್ಲಿ ಪೆಟ್ಟಿಗೆಗಳ ಮೇಲಿದ್ದ ಸಣ್ಣ ಕಸದ ಚೂರನ್ನು ಆಯ್ದುಕೊಂಡು ಪಕ್ಕದಲ್ಲಿದ್ದ ಕಸದ ಬುಟ್ಟಿಗೆ ಹಾಕಿದರು. ಒಂದು ದಿನ ಶ್ರೀ ಗ್ರೀನ್‌ಫೀಲ್ಡ್ ಬ್ರಾಕೆಟ್‌ಹೌಸ್‌ನ ಕಸ ತೆಗೆಯುವರು. ಮತ್ತೊಂದು ದಿನ ಊಟಕ್ಕೆ ಟೇಬಲ್ ತಯಾರು ಮಾಡುವರು. ಉಳಿದ ದಿನ, ಶ್ರೀಮತಿ ಗ್ರೀನ್‌ಫೀಲ್ಡ್ ಕೊಠಡಿಗಳ ಕಸ ತೆಗೆಯುವರು ಮತ್ತು ಊಟದ ಟೇಬಲ್ ತಯಾರಿಸುವರು. ಊಟವಾದ ನಂತರ ಪಾತ್ರೆ, ತಟ್ಟೆ ತೊಳೆಯುವಾಗಲೂ ಒಬ್ಬೊಬ್ಬರು ಒಂದೊಂದು ದಿನ. ಇದೆಲ್ಲ ಸರದಿಯ ಪ್ರಕಾರ, ತಾರತಮ್ಯವಿಲ್ಲ. ಹೆಣ್ಣು ಗಂಡು ಗೃಹಕೃತ್ಯದಲ್ಲಿ ಸಹ ಭಾಗಿಗಳು. ಆಗಾಗ್ಗೆ ಮಕ್ಕಳು ಸಣ್ಣ ಪುಟ್ಟ ಸಹಾಯಕ್ಕಾಗುವರು, ಮನೆಗಳಲ್ಲಿ ಗದ್ದಲವಿಲ್ಲ, ಸಹಕಾರ, ಸಂಯಮ, ಶಾಂತಿ ಅಲ್ಲಿನ ವಿಶಿಷ್ಟತೆ.

ಬುಧವಾರ ಬೆಳಿಗ್ಗೆ ಉಪಹಾರ ಆಸ್ಪತ್ರೆಯ ಕ್ಯಾಂಟೀನ್‌ನಲ್ಲಿ. ತಟ್ಟೆಯಲ್ಲಿ ಕಾರ್ನ್‌ಫ್ಲೇಕ್ಸ್, ೨ ರೊಟ್ಟಿ, ಹಾಲು ತಂದು ಟೇಬಲ್ ಹತ್ತಿರ ಕುಳಿತು ತಲೆ ಎತ್ತಿದೆ. "ಹಾಯ್" ಎಂದರು ಎದುರುಗಡೆ ಟೇಬಲ್‌ನಲ್ಲಿ ಉಪಹಾರಕ್ಕೆ ಅಣಿಯಾಗುತ್ತಿದ್ದ ಡಾ|| ಶೇಷಿಯ. "ಹಾಯ್" ಎಂದು ಅವರ ಎದುರು ಟೇಬಲ್‌ನಲ್ಲಿ ಹೋಗಿ ಕುಳಿತೆ. ಡಾ|| ಶೇಷಿಯ ಬೊಂಬಾಯಿನವರು. ಅಲ್ಲಿ ಎಂ.ಡಿ. ಮಾಡಿ ಎಡಿನ್‌ಬರೋನಲ್ಲಿ ಎಂ. ಆರ್. ಸಿ. ಪಿ. ಮಾಡಿದ್ದರು. ಗ್ಲಾಸ್ಗೊ ಆಸ್ಪತ್ರೆಯೊಂದರಲ್ಲಿ ಒಂದು ವರ್ಷ ಕೆಲಸ ಮಾಡಿ, ನಮ್ಮ ಆಸ್ಪತ್ರೆಗೆ ಕಳೆದವಾರ ಕೆಲಸಕ್ಕೆ ಸೇರಿದ್ದರು. ಇನ್ನೂ ೩೫ ರ ವಯಸ್ಸು. ಉಪಹಾರವಾಯಿತು. ಪೈಪ್ ಹಚ್ಚಿದರು, "ನೀವು ಬರೀ ಕೆಲಸ ಕಲಿಯಲಿಕ್ಕೆ ಬಂದವರು ತಾನೆ ?' ಎಂದರು. 'ಹೌದು. ಸಾಧ್ಯವಾದರೆ ಎಫ್.ಆರ್.ಸಿ.ಎಸ್. ಮಾಡೋಣವೆಂದಿದ್ದೇನೆ. ಆದರೆ ವಿದ್ಯಾರ್ಥಿ ವೇತನದ ಕಟ್ಟಳೆ ಪ್ರಕಾರ ನಾನು ಯಾವ ಪರೀಕ್ಷೆಗೂ ಕೂಡುವಂತಿಲ್ಲ. ಟ್ರೈನಿಂಗ್ ಪಡೆದು ದೇಶಕ್ಕೆ ಮರಳುವುದು" ಎಂದೆ. "ಒಪ್ಪಿದೆ. ಇಂಡಿಯಾದಲ್ಲಿನ ಎಂ.ಎಸ್. ಸಾಕು. ಇಲ್ಲೆಲ್ಲಾ ಬಹಳ ನಡೆಯುತ್ತೆ. ಅಲ್ಲದೆ ಥಿಯರಿ ಗೊತ್ತಿದ್ದರೆ ಪಾಸ್ ಆಗಬಹುದು. ಶಸ್ತ್ರಚಿಕಿತ್ಸೆಗೆ ಅವಕಾಶ ಕಡಿಮೆ. ಸುಮ್ಮನೆ ನಮ್ಮ ಜನರಿಗೆ ಒಂದು ಗ್ಲ್ಯಾಮರ್. ನಾನು ಬಂದದ್ದಾಯಿತು. ಒಂದು ವರ್ಷ ಕೆಲಸ ಕಲಿತು ಮರಳುತ್ತೇನೆ. ಊಟ ಹೇಗೆ ? ಹಿಡಿಸಿತೆ ?" ಎಂದರು. "ಇಲ್ಲ, ಅದೊಂದೆ ಸಧ್ಯಕ್ಕೆ ನನಗೆ" ಎಂದೆ.

"ಏಕೆ ನೀವು ಊರಿನಲ್ಲಿ ಸಸ್ಯಾಹಾರಿಗಳೇ ?" ಎಂದಾಗ "ಇಲ್ಲ, ಇಲ್ಲ. ನಾನು ಹುಟ್ಟಿನಿಂದ ಮಾಂಸಾಹಾರಿ" ಎಂದು ನಕ್ಕೆ. "ಅಸಮಂಜಸವಾಗಿದೆ ! ನಾನು ನೋಡಿ ಊರಲ್ಲಿ ಸಸ್ಯಾಹಾರಿಯಾಗಿದ್ದೆ. ಇಲ್ಲಿಗೆ ಬಂದಮೇಲೆ ಗೋಮಾಂಸ, ಕುರಿಯ ಮಾಂಸ, ಮೀನು ಎಲ್ಲಾ ತಿನ್ನುತ್ತೇನೆ. ಕೋಳಿ ಮಾಂಸ ನನಗೆ ಬಹು ಇಷ್ಟ. ಅವೆಲ್ಲಾ ತಿನ್ನದಿದ್ದರೆ ಈ ದೇಶದಲ್ಲಿ ನೀವು ಕೆಲಸ ಮಾಡಲು ಅರ್ಹರಲ್ಲ" ಎಂದರು. ಅವರು ಹುಟ್ಟಿನಲ್ಲಿ ಬ್ರಾಹ್ಮಣರು. ಮುತ್ತಾತಂದಿರು ವೆಲ್ಲೂರಿನವರಂತೆ. ಬೊಂಬಾಯಿಗೆ ಬಂದು ಸುಮಾರು ೬೦ ವರ್ಷಗಳಾಗಿ ಅಲ್ಲೇ ನೆಲೆಸಿದರು. ಇಂಡಿಯಾದಲ್ಲಿದ್ದಾಗ ಮಾಂಸ ವನ್ನೇ ತಿಂದಿರಲಿಲ್ಲವಂತೆ. ಆಗ ನನಗೆ ಹೊಳೆಯಿತು, "ನಿಮಗೆ ಇಲ್ಲಿಯ ಮಾಂಸಾಹಾರದ ಅಡಿಗೆ ಏಕೆ ರುಚಿಸುತ್ತೆ ಗೊತ್ತೆ ? ನಮ್ಮ ದೇಶದಲ್ಲಿ ತಯಾರು ಮಾಡುವ ಅದರ ಸೊಗಸಿನ ರುಚಿ ಅಡಿಗೆ ನಿಮಗೆ ಗೊತ್ತಿಲ್ಲ ಆದ್ದರಿಂದ ಇದೇ ಮಾಂಸದ ಅಡಿಗೆ ರುಚಿ ಇರಬಹುದೆಂದು ನೀವು ಒಗ್ಗಿಸಿ ಕೊಂಡಿದ್ದೀರಿ. ಊರಿನ ಅಡಿಗೆ ರುಚಿ ಗೊತ್ತಿದ್ದರೆ ನೀವೂ ನನ್ನ ಹಾಗೆ ಈ ದೇಶದಲ್ಲಿ ಸಸ್ಯಾಹಾರಿಯಾಗಿ ಮಾರ್ಪಾಡಾಗುತ್ತಿದ್ದಿರಿ" ಎಂದಾಗ, ನಕ್ಕು "ಚೆನ್ನಾಗಿ ಹೇಳಿದಿರಿ. ನಿಜ ಹೇಳಿದ್ದಿರಬೇಕು" ಎಂದರು. ಇಬ್ಬರೂ ಹೊರಡಲಣಿಯಾದೆವು.

ನಮ್ಮ ದೇಶದಲ್ಲಿ ಗೋವಧೆ ಪಾಪದ ಕೆಲಸ, ಗೋಮಾಂಸ ನಿಷಿದ್ಧಕ್ಕೆ ಆಗಾಗ್ಗೆ ಆಂದೋಲನ, ಜನಜಾಗೃತಿ, ಉಪವಾಸ, ಪ್ರಚಾರ ಭಾಷಣ, ವೇದಿಕೆ, ಬುದ್ಧಿಜೀವಿಗಳೆಂದು ಕರೆಸಿಕೊಂಡವರ ನಾಯಕತ್ವ ಕಂಡಿದ್ದೇವೆ, ಓದಿ ದ್ದೇವೆ. ಹಿಂದುಳಿದ ದೇಶ, ಆಹಾರದ ಕೊರತೆ ಇರುವ ದೇಶ. ಈಗ ಮುಂದುವರಿಯುತ್ತಿದೆ. ಇದು ಸರಿ. ಆದರೆ ಮನುಷ್ಯವಧೆ, ಇವರ ಪುಣ್ಯದ ಕೆಲಸ. ಆದ್ದರಿಂದಾಗಿ ಇದನ್ನು ತಡೆಗಟ್ಟಲು ತಪಸ್ಸು ಬೇಕಿಲ್ಲ. ವೇದಿಕೆ ಬೇಡ. ಬುದ್ಧಿಜೀವಿಗಳೆನಿಸಿಕೊಂಡವರ ನಾಯಕತ್ವವಿಲ್ಲ. ಆಂದೋಲನ ಗಳಂತೂ ಮರೆತುಹೋಗಿವೆ. ಮತ್ತೆ ಈ ದೇಶದ ಸಂಸ್ಕೃತಿ ನಾಗರೀಕತೆಯ ತೊಟ್ಟಿಲು ! ನರವಧೆ ತಪ್ಪಿಸಲು ಯಾರಾದರೂ ಆಮರಣಾಂತ ಉಪ ವಾಸಕ್ಕೆ ಸಿದ್ಧರೆ ? ಗೋಮಾಂಸ ಬುಂಜಿಸುವ, ಅಮೇರಿಕ, ಯೂರೋಪ್ ಮತ್ತು ರಷ್ಯ ದೇಶಗಳು ಇಂದು ಜಗತ್ತಿನ ಮುಂದುವರಿದ ಬಲಿಷ್ಠ ರಾಷ್ಟ್ರ ಗಳು. ಆ ದೇಶದಲ್ಲಿ ಬಡತನವಿಲ್ಲ, ಮೇಲುಕೀಳೆಂಬ ಚತುರ್ವರ್ಣಗಳಿಲ್ಲ,

ಆಹಾರಕ್ಕೆ ಕೊರತೆ ಇಲ್ಲ. ಆರೋಗ್ಯವಂತ ದೃಢಕಾಯರಿರುವ ದೇಶಗಳು. ನಮ್ಮಲ್ಲಿ ಎಲ್ಲವೂ ಉಂಟು. ಬಡತನವುಂಟು, ಮೇಲು ಕೀಳೆಂಬ ಜಾತಿಗಳುಂಟು, ಆಹಾರ ಕೊರತೆ, ಅನಾರೋಗ್ಯ ಸರ್ವೇಸಾಮಾನ್ಯ. ಇದಕ್ಕೆ ಪರಿಹಾರ ಯಾವಾಗ ?

ವಾರ್ಡ್‌ಗಳಲ್ಲಿ ಕೆಲಸ ಶುರು. ಮಿ॥ ಹೇ ಅಲ್ಲಿ ರಿಜಿಸ್ಟ್ರಾರ್. ಅವರಿಗೆ ಅಸೂಯೆ ಉಂಟಾಗಿತ್ತು. ಕಾರಣ ನನ್ನ ಗೈಡ್ ಮಿ॥ ರೊಬಾರ್ಟ್ಸ್ ನನ್ನನ್ನು ರಿಜಿಸ್ಟ್ರಾರ್ ಮಾಡುತ್ತೇನೆಂದು ಹೇಳಿದ್ದರಂತೆ. ಮಿ॥ ಹೇ, ಹೌಸ್ ಆಫೀಸರ್ಸ್ ಜೊತೆ ಮತ್ತೆ ಕೆಲವು ಲೇಡಿ ಸೇಕ್ರೆಟರಿಗಳ ಜೊತೆ ನಾನು ಬಂದಾಗ ಹೋದಾಗ ಗುಸು ಗುಸು ಶುರುಮಾಡಿದರು. ನಾನು ವಾರ್ಡ್ ಒಂದರಿಂದ ಬರುತ್ತಿದ್ದಾಗ "ರೋಬಾರ್ಟ್ಸ್ ಹೇಗೆ ಮಾಡಲು ಸಾಧ್ಯ ನಾನು ನೋಡುತ್ತೇನೆ" ಎಂದದ್ದು ನನಗೆ ಕೇಳಿಸಿತು. ಮಧ್ಯೆ ಸ್ವಲ್ಪ ವಿರಾಮ. ಸುಮಾರು ಹನ್ನೊಂದು ಗಂಟೆಗೆ ಕಾಫಿ ಟೀ, ಬಿಸ್ಕಟ್ಸ್ ಉಂಟು. ವೈದರ ಕೊಠಡಿಯೊಂದರಲ್ಲಿ ಟೀ ಆದ ಮೇಲೆ ಸಿಗರೇಟ್ ಹೊತ್ತಿಸಿದೆವು. ಬಿಳಿಕೋಟು, ಹೆಸರಿರುವ ಬ್ಯಾಡ್ಜ್ ಮತ್ತು ಬ್ಲಿಬ್ ಎಂಬ ಎಲೆಕ್ಟ್ರಾನಿಕ್ ಕ್ಲಿಪ್ ಒಂದನ್ನು ಬೀಳಿಕೋಟಿಗೆ ಲಗತ್ತಿಸಿದ್ದಾಯಿತು. ದಿನವೂ ಆಸ್ಪತ್ರೆಯ ಕೋಟುಗಳು ಲಾಂಡ್ರಿಯಿಂದ ಬರುತ್ತವೆ. ಹೊರರೋಗಿಗಳ ವಿಭಾಗದಲ್ಲಿ ಸಾಲು ಕುರ್ಚಿಗಳಿವೆ. ರೋಗಿ ಬಂದಾಗ ದಾಖಲಾತಿ, ನಂತರ ಔಟ್ ಪೇಷೆಂಟ್ ಚೀಟಿ ಜೊತೆ ಸಾಲಾಗಿ ಕೂರುತ್ತಾರೆ, ಒಬ್ಬರಾದ ಮೇಲೆ ಮತ್ತೊಬ್ಬರಂತೆ. ಸರದಿ ಪ್ರಕಾರ ಪರೀಕ್ಷೆ. ಇದಕ್ಕೆ ಸಹಾಯಕರಾಗಿ ಇಬ್ಬರು ದಾದಿಯರು, ಒಬ್ಬ ನುರಿತ ದಾದಿ, ಇವರ ಮೇಲ್ವಿಚಾರಣೆಗೆ ಒಬ್ಬ ಸಿಸ್ಟರ್ ಉಂಟು. ಸಿಸ್ಟರ್ಸ್ ಎದುರು ದಾದಿಯರು ಕೂರುವುದಿಲ್ಲ. ಕಾಫಿ, ಟೀ, ಕುಡಿಯುವುದಿಲ್ಲ. ಸಿಸ್ಟರ್ ವಾರ್ಡಿಗೆ ದಾಖಲಾದ ರೋಗಿಗಳನ್ನು ಫೋನಿನ ಮುಖಾಂತರ ತಿಳಿಸಿ ನಂತರ ರವಾನಿಸುತ್ತಾಳೆ. ಸಣ್ಣ ಪುಟ್ಟ ಶಸ್ತ್ರ ಚಿಕಿತ್ಸೆ ಔಟ್‌ಪೇಷಂಟಿನಲ್ಲೇ ನಡೆಯುತ್ತೆ. ಅದಕ್ಕೆ ಬೇಕಾಗುವ ಸಾಮಗ್ರಿಗಳು "ಸೆಂಟ್ರಲ್ ಸ್ಟೆರಿಲೈಜೇಶನ್" ನಿಂದ ಕ್ರಿಮಿನಾಶ ಹೊಂದಿ ಕೌರ್‌ಗಳಲ್ಲಿ ಮೊಹರಾಗಿ ಬರುತ್ತವೆ. ಅವುಗಳಲ್ಲಿ ಕೆಲವು ಒಂದು ಸಾರಿ ಉಪಯೋಗಿಸಿ ಬಿಸಾಕುವಂತಹವು. ಅನಂತರ ರೋಗಿಗಳನ್ನು ಜನರಲ್ ಪ್ರಾಕ್ಟೀಶನರ್‌ಗಳ ಮೇಲ್ವಿಚಾರಣೆಗೆ ಬಿಡುತ್ತೇವೆ. ಹೊಲಿಗೆ ತೆಗೆಯುವುದು, ಗಾಯದ ಡ್ರೆಸ್

ಮಾಡುವುದೆಲ್ಲಾ ಅವರ ಕೆಲಸ.

ಒಂದು ಗಂಟೆಗೆ ಲಂಚ್. ಲಂಚ್ ತಿನ್ನುವಾಗ ರೋಗಿ ಬಂದರೆ ಬ್ಲಿಬ್ ಶಬ್ದ ಮಾಡುತ್ತದೆ. ತಕ್ಷಣ ಪಕ್ಕದ ಟೆಲಿಫೋನಿಂದ ಔಟ್ ಪೇಷಂಟ್‌ಗೆ ಮಾತಾಡಬೇಕು. ಸೀರಿಯಸ್ ಇದ್ದರೆ ಲಂಚ್ ಬಿಟ್ಟು ಶುಶ್ರೂಷೆಗೆ ಧಾವಿಸಬೇಕು. ಸೀರಿಯಸ್ ಇಲ್ಲದಿದ್ದರೆ ಮುಗಿಸಿ ಹೋಗಬೇಕು. ಇದೇ ದಿನಚರಿ ಸಂಜೆ ೫ ಗಂಟೆ ತನಕ. ನನಗೆ ಈ ಕೆಲಸ ಬೇಸರ. ಕಾರಣ ನಾನು ಇದಕ್ಕಿಂತ ಹೆಚ್ಚಿನ ಕೆಲಸಕ್ಕೆ ತಯಾರಿದ್ದೆ. ಅದೇ ಎಂ.ಬಿ.ಬಿ.ಎಸ್. ಮಾಡಿ ಅಲ್ಲಿ ಕೆಲಸಕ್ಕೆ ಸೇರಿದರೆ ಅವರಿಗೆ ಅದು ಇಷ್ಟ. ಎಂ.ಎಸ್. ಮಾಡಿ ಕೆಲವು ವರ್ಷ ಕೆಲಸ ಮಾಡಿ ಇಂಗ್ಲೆಂಡ್‌ಗೆ ಹೋದವರಿಗೆ ಆ ಕೆಲಸ ಸಣ್ಣದು ; ಶ್ರದ್ಧೆ ಇಲ್ಲದ್ದು. ಡಾ|| ಎಸ್. ಪಿ. ಶ್ರೀವಾತ್ಸವ ಕಣ್ಣು ರೋಗದ ಪ್ರಾಧ್ಯಾಪಕರು. ರೇವಾದ (ಮಧ್ಯಪ್ರದೇಶ) ಎಸ್.ಎಸ್. ಮೆಡಿಕಲ್ ಕಾಲೇಜಿನಲ್ಲಿ ಕೆಲಸ. ಡಬ್ಲ್ಯೂ. ಎಚ್. ಓ. ವಿದ್ಯಾರ್ಥಿ ವೇತನ ಪಡೆದು ಎಡಿನ್‌ಬರೋವಿಗೆ ಬಂದಿದ್ದರು. ಅಲ್ಲಿನ ಸಣ್ಣ ಪುಟ್ಟ ಕೆಲಸ ಕಂಡು ಹೈಕಮಿಷನ್‌ಗೆ ತಾವು ವಾಪಸ್ ಹೋಗಲಿಚ್ಛಿಸುವುದಾಗಿ ಬರೆದಿದ್ದರು.

ದೊಡ್ಡ ಶಸ್ತ್ರಚಿಕಿತ್ಸೆಗೆ ಸಾಮಾನ್ಯ ಖಾಯಿಲೆಗಳು ಬರುತ್ತಿದ್ದುವು. ಅಪರೂಪಕ್ಕೆಲ್ಲೋ ಒಂದು ಸ್ವಾರಸ್ಯಕರ ರೋಗಿ ಬರುತ್ತಿದ್ದ. ಹೀಗಾಗಿ ಅಲ್ಲಿ ಹೆಚ್ಚಿನ ಆಸಕ್ತಿ ತೋರಿಸಲಾಗಲಿಲ್ಲ.

ಆ ವಾರ ಮಿಸ್ ಮಕಾಯ್ ರಜದಲ್ಲಿದ್ದರು. ಅವರ ಹೊರರೋಗಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಸುಮಾರು ೩೫ರ ತಾಯಿ ಮಗಳನ್ನು ಕರೆತಂದರು, "ನೋಡಿ ಡಾಕ್ಟರ್ ಮಿಸ್ ಮಕಾಯ್ ಇದಕ್ಕೆ ಔಷಧ ಕೊಡುತ್ತಿದ್ದಾರೆ. ಎರಡು ತಿಂಗಳಾಯಿತು, ಗುಣ ಕಂಡಿಲ್ಲ. ಮಗು ಕಾಲು ಊರಲು ಆಗುವುದಿಲ್ಲ" ಎಂದಳು. ಸ್ವಲ್ಪ ಹೆಚ್ಚಿನ ಆಸಕ್ತಿಯಿಂದ ಪರೀಕ್ಷಿಸಿದೆ. ಕಾಲಿನ ನ್ಯಾವಿಕ್ಯುಲಾರ್ ಎಂಬ ಮೂಳೆ ಊದಿತ್ತು. ನೋಯುತ್ತಿತ್ತು. ಸರಿ ಎಕ್ಸ್‌ರೇ ಮಾಡಿದೆ. ಸಾಯಂಕಾಲ ೪ ಗಂಟೆಗೆ ಎಕ್ಸ್‌ರೇ ಬಂತು. ಅದರ ಪ್ರಕಾರವೂ ಅದೇ ಮೂಳೆ ತೊಂದರೆಯಾಗಿದೆ ಎಂದು ತಿಳಿಯಿತು. ಮಗುವಿನ ತಾಯಿಗೆ ವಿವರಿಸಿದೆ. ಕಾಲಿಗೆ ಪ್ಲಾಸ್ಟರ್ ಹಾಕಿದೆ. ಆಕೆ ಬಹಳ ವಿನಯದಿಂದ ಧನ್ಯವಾದ ಹೇಳಿ ಹೋದಳು. ನಂತರ ಅವರ

ಸುಳಿವಿಲ್ಲ. ಕಾರಣ ಮಿಸ್ ಮಕಾಯ್ ರಜದಿಂದ ಬಂದಿದ್ದರು. ಅವರು ಆ ಕೆಲಸ ನೋಡಿಕೊಳ್ಳುತ್ತಿದ್ದರು. ಎರಡು ತಿಂಗಳಾದ ಮೇಲೆ ಒಂದು ಬೆಳಿಗ್ಗೆ ಬಾಗಿಲು ತೆರೆದೆ. ಬಾಗಿಲು ಬಳಿ ಒಂದು ಪ್ಯಾಕೆಟ್ ಇತ್ತು. ಅದರ ಮೇಲೆ ನಿಮಗೆ ಶುಭಾಶಯಗಳು.. ಎಂದಿತ್ತು. ಒಡೆದಾಗ ಹನ್ನೆರಡು ಪ್ಯಾಕೆಟ್ 'ಬೆನ್‌ಸನ್ ಅಂಡ್ ಹೆಡ್ಜಸ್' ಸಿಗರೇಟುಗಳು ! ಅದೇ ತಾಯಿ ಮಗುವಿನ ಸಹಿ ಇತ್ತು. ಮಿಸ್ ಮಕಾಯ್ ಮಾತ್ರ ಒಂದೂ ಒಳ್ಳೆ ಮಾತನ್ನಾಡಲಿಲ್ಲ.

ಆ ದಿನ ಭಾನುವಾರ, ಡಾ|| ವಾಡಗಿಯವರೂ ಮತ್ತು ನಾನೂ ಹೊರ ಬಿದ್ದೆವು. ಎಡಿನ್‌ಬರೊನಲ್ಲಿ ಪ್ರಿನ್ಸೆಸ್ ಸ್ಟ್ರೀಟ್ ಪ್ರಸಿದ್ಧ. ಅದರ ಒಂದು ಕಡೆ ದೊಡ್ಡ ಭೀಮಾಕಾರದ ಅಂಗಡಿ ಮುಂಗಟ್ಟುಗಳು, ಆಕರ್ಷಕ ಡಿಪಾರ್ಟ್ ಮೆಂಟಲ್ ಸ್ಟೋರ್ಸ್, ಮಾರ್ಕ್ ಅಂಡ್ ಸ್ಪೆನ್ಸರ್, ಕೋಲಿನ್ಸ್, ಬರ್ಟನ್ ಟೈಲರ್ ಮುಂತಾದ ಪ್ರಸಿದ್ದ ವ್ಯಾಪಾರಸ್ಥರಲ್ಲಿದ್ದಾರೆ. ಮತ್ತೊಂದು ಕಡೆ ಕಣಿವೆಯೊಂದಿದೆ. ಕಣಿವೆಯಲ್ಲಿ ನಾನಾ ಕಡೆ ಹೊರಡುವ ರೈಲು ಮಾರ್ಗ ಗಳಿವೆ. ರೈಲುಮಾರ್ಗಗಳ ಮೇಲೆ ಪಾರ್ಕ್ ಒಂದಿದೆ. ಅಂದರೆ ರೈಲುಮಾರ್ಗ ಗಳು ಸುರಂಗ ಮಾರ್ಗಗಳಾಗಿ ಮಾರ್ಪಟ್ಟಿವೆ. ಕಣಿವೆಯ ಆ ಕಡೆ ಎಡಿನ್‌ಬರೊ ಕ್ಯಾಸಲ್ ಎದ್ದು ಎತ್ತರದಲ್ಲಿ ಕಾಣುತ್ತದೆ. ಅದರ ಎತ್ತರ ೪೪೩ ಅಡಿಗಳು. ೨೭೦ ಅಡಿ ಕೆಳಗೆ ಹಸಿರು ತುಂಬಿದ ಕಣಿವೆಯಲ್ಲಿ ಪಾರ್ಕ್ ಇದೆ. ಕ್ಯಾಸಲ್‌ನ ಮುಂಭಾಗದಲ್ಲಿ ಬೆಟ್ಟದ ವಿಶಾಲ ತಪ್ಪಲಿದೆ. ಅಕ್ಕಪಕ್ಕ ದಲ್ಲಿ ಗ್ಯಾಲರಿಗಳಿವೆ. ಆ ಸಮತಲ ಜಾಗದಲ್ಲಿ ಎಡಿನ್‌ಬರೊ ಮಿಲಿಟರಿ ಟ್ಯಾಟೂ ಎಂಬ ಸರ್ಚ್‌ಲೈಟ್ ಪರೇಡ್ ನಡೆಯುತ್ತದೆ. ಸ್ಕಾಟ್‌ಲೆಂಡಿನ ಪೈಪ್‌ಬ್ಯಾಂಡ್, ಬೆಟಾಲಿಯನ್‌ಗಳ ಪ್ರದರ್ಶನವೂ ಉಂಟು. ಮತಾಪು ಸುಡುತ್ತಾರೆ. ಗ್ಯಾಲರಿಯಲ್ಲಿ ಜನ ಕುಳಿತು ವೀಕ್ಷಿಸುತ್ತಾರೆ. ಅದಕ್ಕೆ ಶುಲ್ಕ ಉಂಟು.

ನಾವಿಬ್ಬರೂ ಪ್ರಿನ್‌ಸೆಸ್ ಸ್ಟ್ರೀಟ್ ಮುಖಾಂತರ ಬಳಸಿ ಬಂದು ಕ್ಯಾಸಲ್ ನೋಡಲು ಬೆಟ್ಟ ಹತ್ತಿದೆವು. ಆಗಲೇ ನೂರಾರು ಜನರಿಂದ ತುಂಬಿತ್ತು ಬೆಟ್ಟ. ತುದಿಯಲ್ಲಿ ೭ನೇ ಶತಮಾನದ ದೊಡ್ಡ ಕಲ್ಲು ಬಂಡೆ ಇದೆ. ಅಲ್ಲೇ ಸೇಯಿಂಟ್ ಮಾರ್ಗರೇಟ್ ಚಾಪೆಲ್ ಒಂದಿದೆ. ಕ್ಯಾಸಲ್ ಮುಂದಿನ ಮೈದಾನದಲ್ಲೊಂದು ಬೃಹದಾಕಾರದ ಪಿರಂಗಿ ಇದೆ. ಈಗಲೂ

ಅದು ಮಧ್ಯಾಹ್ನ ೧ ಗಂಟೆಗೆ ದಿನವೂ ಗುಂಡು ಹಾರಿಸುತ್ತದೆ. ಪಕ್ಕದಲ್ಲಿನ ವಸ್ತುಸಂಗ್ರಹಾಲಯದಲ್ಲಿ ಗತಿಸಿದ ಯುದ್ಧಗಳ, ಅದರಲ್ಲೂ ಮೊದಲನೇ ಮಹಾ ಯುದ್ಧದ ಜ್ಞಾಪಕಾರ್ಥ ಯುದ್ಧ ಸಾಮಗ್ರಿಗಳೂ ತೈಲ ಚಿತ್ರಗಳೂ ಇವೆ. ಮೈಸೂರು ರೆಜಿಮೆಂಟ್, ಶ್ರೀರಂಗಪಟ್ಟಣದಲ್ಲಿ ಮಡಿದ ವೀರ ಸಿಪಾಯಿಗಳ ಹೆಸರುಗಳ ಫಲಕಗಳಿವೆ. ರತ್ನಖಚಿತ ಕಿರೀಟಗಳು, ಎಡ್‌ವರ್ಡ್ ರಾಜನ ಆಯುಧಗಳು ಚಕಿತಗೊಳಿಸುತ್ತವೆ. ಆತನ ಶವ ಪೆಟ್ಟಿಗೆಯೂ ಅಲ್ಲಿದೆ.

ಅಲ್ಲಿಂದ ಪ್ರಿನ್‌ಸೆಸ್ ಸ್ಟ್ರೀಟ್ 'ಗಾರ್ಡನ್ಸ್'ಗೆ ಬಂದು ವಿಶ್ರಮಿಸಿಕೊಂಡೆವು. 'ಗಾರ್ಡನ್' ಮೊದಲೇ ಹೇಳಿದಂತೆ ಸುರಂಗ ಮಾರ್ಗಗಳ ಮೇಲಿದೆ. ಅದರ ವಿಸ್ತೀರ್ಣ ೩೭ ಎಕರೆ. ಅಲ್ಲಿನ 'ಹೂಗಡಿಯಾರ' ಬಹಳ ಆಕರ್ಷಕ, ೧೯೦೩ ರಲ್ಲಿ ಸ್ಥಾಪನೆಯಾಯಿತಂತೆ. ೩೬ ಅಡಿ ಸುತ್ತಳತೆ (ರೇಡಿಯಸ್) ಉಳ್ಳ ಆ ಹೂವಿನ ಗಡಿಯಾರ ಸುಮಾರು ೨೪,೦೦೦ ಹೂಗಳಿಂದ ರಚಿಸಲ್ಪಟ್ಟಿದೆ. ಕಾಲುಗಂಟೆಗೊಮ್ಮೆ ಹೂಗಳಿಂದ ಮಾಡಿದ 'ಕೋಗಿಲೆ' ಯೊಂದು ಜಿಗಿದು ವೇಳೆ ತೋರಿಸುತ್ತದೆ.

೪

ನನ್ನ ಗೈಡ್ ಮಿ|| ರೊಬಾರ್ಟ್ಸ್ ಬಂದಿದ್ದರು. ವೈದ್ಯರ ಕೋಣೆಯೊಂದರಲ್ಲಿ ನನ್ನನ್ನು ಗುರುತಿಸಿದ ಹೊಸ ಮುಖ "ಗುಡ್ ಮಾರ್ನಿಂಗ್, ಸುಖಾಗಮನ, ನಾನು ರೊಬಾರ್ಟ್ಸ್" ಎಂದು ನಕ್ಕು ಕೈ ಕುಲುಕಿದರು. ಆನಂದವಾಯಿತು ಮನಸ್ಸಿಗೆ. ಅಲ್ಲೇ ಇದ್ದ ಹಿರಿಯ ಸ್ತ್ರೀಯೊಬ್ಬರ ಕಡೆ ತಿರುಗಿ "ಇವರು ಮಿಸ್ ಇಂಗ್ಲಿಷ್, ಸೆಕ್ರೆಟರಿ. ಮಿಸ್ ಇಂಗ್ಲಿಷ್ ಡಾಕ್ಟರ್‌ರವರ, ಕಾಗದ ಪತ್ರ ನೋಡಿಕೊಳ್ಳಿ. ಸ್ಟಾಂಪ್, ಟೈಪಿಂಗ್ ಎಲ್ಲಾ ನಿಮ್ಮದೆ" ಎಂದಾಗ ಆಕೆ ಸಂತಸ ಮತ್ತು ಹೆಮ್ಮೆಯಿಂದ "ಓ ಅಗತ್ಯವಾಗಿ, ಏನಿದ್ದರೂ ದಯವಿಟ್ಟು ನನ್ನಲ್ಲಿ ವ್ಯವಹರಿಸಿ" ಎಂದು ಸಿನ್ಹೇಸ್ ರೋಡಿನ ಆಕಡೆ ಇದ್ದ ಮನೆಯೊಂದನ್ನು ತೋರಿಸಿ "ಅದೇ ಆಫೀಸ್" ಎಂದರು.

"ಬನ್ನಿ, ವಾರ್ಡ್ ರೌಂಡ್ಸ್ ಹೋಗೋಣ" ಎಂದು ಕರೆದೊಯ್ದರು

ಮಿ॥ ರೊಬಾರ್ಟ್ಸ್. ನವಚೇತನ ಮೂಡಿತು, ಹಿಂಬಾಲಿಸಿದೆ. ಎಲ್ಲರ ಪರಿಚಯವಾಯಿತು. ಕೆಲವರು ಮೊದಲೇ ಪರಿಚಯವಾಗಿದ್ದುದ್ದನ್ನು ಕಂಡ ರೊಬಾರ್ಟ್ಸ್ "ನೀವಾಗಲೇ ಬಹಳ ಪರಿಚಯ ಮಾಡಿಕೊಂಡಿದ್ದೀರಿ" ಎಂದು ನೆಮ್ಮದಿ ವ್ಯಕ್ತಪಡಿಸಿದರು. ಪಕ್ಕದ ವಾರ್ಡಿಗೆ ಹೋದಾಗ "ಹಿಂದಿನ ದಿನ ಗಳನ್ನು ಹೇಗೆ ಕಳೆದಿರಿ" ಎಂದು ಕೇಳಿದಾಗ ನಾನು "ಸ್ನೇಹಿತರೊಬ್ಬರಿದ್ದಾರೆ" ಎಂದು ಮುಗಿಸುವ ಮುನ್ನ "ಒಳ್ಳೆಯದಾಯಿತು, ಸ್ನೇಹಿತರು ಇಲ್ಲೂ ಸಿಕ್ಕಿದ ರಲ್ಲ" ಎಂದರು. ಅಲ್ಲಿಂದ ಮಕ್ಕಳ ತಲೆ ಮತ್ತು ಮೆದುಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸಾ ವಾರ್ಡಿಗೆ ಬಂದೆವು. ಅಲ್ಲಿ ೬ ವರ್ಷದ ಹುಡುಗನ ತಲೆ ಸುಮಾರು ನಮ್ಮ ತಲೆಯ ಮೂರರಷ್ಟಿತ್ತು. ಗುರುತರ ತಲೆ ಹೊತ್ತು ತಡವರಿಸಿ ಹೆಜ್ಜೆ ಹಾಕುತ್ತಿದ್ದ. ಅವನ ಕೈ ಕುಲುಕಿದರು ಮಿ॥ ರೊಬಾರ್ಟ್ಸ್. "ಡಾಕ್ಟರಿಗೆ ಗುಡ್‌ಮಾರ್ನಿಂಗ್ ಹೇಳು" ಎಂದು ಮುಂದೆ ನಡೆದರು. ಮೆದುಳಿಗೆ ಸಂಬಂಧಿಸಿದ ಮೆಡಿಕಲ್ ವಾರ್ಡ್ ಹಾಯ್ದು ಹೋದಾಗ ಅಲ್ಲೇ ಇದ್ದ ಡಾ॥ ಶೇಷಿಯ "ಲಂಚ್‌ನಲ್ಲಿ ಸಿಗೋಣ" ಎಂದರು, ತಲೆಯಾಡಿಸಿದೆ.

ಮಿ॥ ರೊಬಾರ್ಟ್ಸ್ ಕೈಯಲ್ಲಿ ಸೈಲಾಸ್ಟಿಕ್‌ನಿಂದ ಮಾಡಿದ ಕೊಳವೆ ಇತ್ತು. "ಇದು ಸ್ಪಿಟ್ಸ್ ಹೋಲ್ಟರ್ ಕವಾಟದ ಕೊಳವೆ. ಇದರ ಒಂದು ತುದಿ ಮಿದುಳಿನ ವೆಂಟ್ರಿಕಲ್‌ಗೂ ಮತ್ತೊಂದು ಹೊಟ್ಟೆಯಲ್ಲಿನ ಪೆರಿಟೋನಿಯಲ್ ಕ್ಯಾವಿಟಿಗೂ ಹೋಗುತ್ತೆ" ಎಂದು ಅದರ ವಿಷಯವಾಗಿ ಸುಮಾರು ೩೦ ನಿಮಿಷ ಹೇಳಿದರು. ಹೈಡ್ರೊಕಿಫಾಲಸ್ ಎಂಬ ದಪ್ಪ ತಲೆಗೆ ಮಾಡುವ ಶಸ್ತ್ರ ಚಿಕಿತ್ಸೆ ವಿವರಿಸಿದರು. ಅದರ ಬೆಲೆ ಆಗ ೩೦ ಪೌಂಡ್‌ಗಳು, ಅಂದರೆ ಸುಮಾರು ೫೪೦ ರೂಪಾಯಿಗಳಷ್ಟು. ಅದು ನಮ್ಮ ದೇಶದ ಮಕ್ಕಳಿಗೆ ದುಬಾರಿ. ಅಲ್ಲದೆ ದುರ್ಲಭ ಎಂದಿತು ಮನಸ್ಸು. ಆ ಮಕ್ಕಳಿಗೆ ಕೈಕಾಲು ಸ್ವಾಧೀನವಿಲ್ಲ. ಮಲ, ಮೂತ್ರ ಸ್ವಾಧೀನವಿಲ್ಲ. ಅವರಿಗಾಗಿ ಅಲ್ಲಿ 'ರಿಹೆಬಿಲಿಟೇಶನ್ ಸೆಂಟರ್ಸ್'ಗಳಿವೆ.

ರೆಸಿಡೆಂಟ್ಸ್ ಕ್ವಾರ್ಟರ್ಸ್‌ನಲ್ಲಿ ಆ ದಿನ ವಿರಾಮವಾದ್ದರಿಂದ ಟೆಲಿವಿಷನ್ ಮುಂದೆ ಕುಳಿತಿದ್ದೆವು. ಗಂಟೆ ೧೦-೩೦ ; ಟೀ ಸಮಯ. ಲೇಡಿ ರೆಸಿಡೆಂಟ್ ಡಾ॥ ಹ್ಯೂಸ್ ಟೀ ಮಾಡಿ ತಂದರು. ಅಲ್ಲೇ ಇದ್ದ ಅಮೆರಿಕ ಸಂಜಾತ ಲೇಡಿ ರೆಸಿಡೆಂಟ್ ನಾವು ಕುಳಿತಿದ್ದ ಕೊಠಡಿಯಿಂದ ಕೋಣೆಗೆ ಓಡಾಡುತ್ತಿದ್ದರು.

ಆಮೇಲೆ ತಿಳಿಯಿತು. ಅವರಿಬ್ಬರೂ ಹಸಿರು ಬಟಾಣಿ ಬೇಯಿಸಿ, ಈರುಳ್ಳಿ, ಬೆಣ್ಣೆ ಹಾಕಿ ವಗ್ಗರಣೆ ಕೊಡುತ್ತಿದ್ದರೆಂದು. ಸ್ವಲ್ಪ ಹೊತ್ತಿನಲ್ಲೇ ಬಿಸಿ ಬಿಸಿ ಗುಗ್ಗರಿ ತುಂಬಿದ ಬೋಸಿ. ಸಾಸರ್ಸ್, ಚಂಚಗಳ ಆಗಮನ ! ಅಲ್ಲೇ ಇದ್ದ ರಫೀಕ್, ಶೇಷಿಯ, ನಾನು ಅತಿಥಿಗಳಾಗಿ ಪರಿವರ್ತಿಸಿದೆವು. ಗುಗ್ಗರಿ ಚೆನ್ನಾಗಿತ್ತು.

ಲಂಚ್ ಮುಗಿಯಿತು, ಸ್ವಲ್ಪ ವಿಶ್ರಾಂತಿ. ಮತ್ತೆ ಬೇಜಾರು. ಡಾ|| ಶೇಷಿಯ "ಬನ್ನಿ ಸಿಟಿ ಕಡೆ ಹೋಗೋಣ" ಎಂದು ಅವರ ಹಳೆಯ ವೋಕ್ಸ್ ವ್ಯಾಗನ್ ಹೊರಡಿಸಿದರು. ಅಲ್ಲಿ ಸಾಮಾನ್ಯವಾಗಿ ಪ್ರತಿ ಬೀದಿಯಲ್ಲೂ, ಎರಡೂ ಕಡೆಯೂ ಕಾರುಗಳು ನಿಂತಿರುತ್ತವೆ. ಅವುಗಳಿಗಾಗಿ ಪ್ರತ್ಯೇಕ ಶೆಡ್ ಗಳಿಲ್ಲ, ಬಹುಶಃ ಸ್ಥಳಾಭಾವ ಕಾರಣವಿರಬಹುದು. ಅಲ್ಲದೆ ಕಾರು ಕಳ್ಳತನ ಕೇಳರಿಯರು. ಎಡಿನ್‌ಬರೋ ನಗರ ಎರಡು ಭಾಗಗಳಾಗಿ ಕಾಣುತ್ತದೆ. ಒಂದು ಹಳೇ ನಗರ. ಬೆಟ್ಟಗುಡ್ಡಗಳ ಇಳಿಜಾರಿನಲ್ಲಿ ಒಂದೇ ನೋಟ ಬೀರುವ ೩-೪ ಅಂತಸ್ಥಿನ ಮನೆಗಳು ಸಾಲು ಸಾಲಾಗಿವೆ. ಹೊಸ ನಗರ ಆಧುನಿಕ ಕಟ್ಟಡಗಳಿಂದ ಸೊಗಸು. ಆದರೂ ಅಲ್ಲಲ್ಲಿ ಹಳ್ಳಿಗಳು ನಗರದ ತೆಕ್ಕೆಯಲ್ಲಿವೆ. ಕ್ಯಾಸಲ್‌ಗಳ, ಸರೋವರಗಳ ನಗರ ಎಡಿನ್‌ಬರೊ. ಬೆಟ್ಟಗಳ ಮೇಲೆ ಕೋಟೆ, ಕೋಟೆಯೊಳಗೆ ಕ್ಯಾಸೆಲ್, ಕ್ಯಾಸೆಲ್‌ಗಳ ವೈಚಿತ್ರವೆಂದರೆ ಕತ್ತಲು. ಸುತ್ತುವರಿದ ಡೊಂಕುಡೊಂಕಾಗಿ ಹಾಯ್ದ ಮೆಟ್ಟಿಲುಗಳು. ಅಲ್ಲಿನ ವಾತಾವರಣ ಒಂಟಿತನ, ಭಯ ಮತ್ತು ರಕ್ಷಣೆಗಳ ಮಿಶ್ರಣ. ಸುತ್ತಲೂ ಅಚ್ಚ ಹಸಿರುಹುಲ್ಲು, ಹೆಮ್ಮರಗಳು, ಅಲ್ಲಲ್ಲಿ ಮುರಿದ ಕೋಟೆಗಳ ಪಾಳುಬಿದ್ದ ಪುರಾತನ ಜಾಗಗಳು ಅಲ್ಲಿನ ಚಿತ್ರ ವಿಚಿತ್ರ. "ಆರ್ತರ್‌ಸೀಟ್" ಮಧ್ಯ ಲೋತಿಯನ್‌ನಲ್ಲಿದೆ. ಎತ್ತರ ೮೦೦ ಅಡಿಗಳು. ಹಸಿರು ಹುಲ್ಲಿನ ಕಿಂಗ್ಸ್‌ಪಾರ್ಕ್‌ನಲ್ಲಿರುವ ಈ ಬೆಟ್ಟ ಗತಿಸಿದ ಹಳೆ ಅಗ್ನಿಪರ್ವತ ! ಕಾರಿನಲ್ಲಿ ಸುಮಾರು ದೂರ ಹೋಗಬಹುದು. ಬೆಟ್ಟದಿಂದ ಎಡಿನ್‌ಬರೋ ನಗರ ಕಣ್ಣಿಗೆ ತೃಪ್ತಿ ತರುತ್ತದೆ. ಉತ್ತರದಲ್ಲಿ ಲಂಗರು ಹಾಕಿದ ಹಡಗು ಗಳು, ಶಾಂತ ಕಡಲು, ಅಲ್ಲಲ್ಲಿ ತೇಲುತ್ತಿದ್ದ ನೂರಾರು ದೋಣಿಗಳು ಮಸು ಕಾಗಿ ಉತ್ತರ ಸಮುದ್ರದಲ್ಲಿ ಗೋಚರಿಸಿದವು. ಮಂಜು ಮುಸುಕಿದ ನಗರ ಸಂಜೆಯ ಕತ್ತಲಲ್ಲಿ ಲಕ್ಷೋಪಲಕ್ಷ ದೀಪಗಳಿಡಿದಿತ್ತು ! ಕ್ವಾರ್ಟರ್ಸ್ ತಲುಪಿದಾಗ ೭ ಗಂಟೆ.

ಆ ದಿನ ಹೊರರೋಗಿ ವಿಭಾಗದಲ್ಲಿ ರೋಗಿಗಳಾರೂ ಇರಲಿಲ್ಲ. ಸ್ವಲ್ಪ ವಿಶ್ರಾಂತಿ ವಿರಾಮ. ಥಟ್ಟನೆ ಹೊಳೆಯಿತು, ಊರಿಗೆ ಕಾಗದ ಬರೆದಿಲ್ಲವೆಂದು. ಪಕ್ಕದಲ್ಲೇ ಆರ್ಗಿಲ್ ಪ್ಲೇಸ್‌ನ ಪೋಸ್ಟ್ ಆಫೀಸ್. ಬಿಸಿಲು ಚೆನ್ನಾಗಿದ್ದರೂ ತಂಗಾಳಿ ಸೇರಿ ಹಿತವೆನಿಸಿತ್ತು. ಬಿಳಿ ಕೋಟನ್ನು ಆಸ್ಪತ್ರೆಯಲ್ಲಿಟ್ಟು ಶರಟು ಪ್ಯಾಂಟ್ ಮತ್ತು ಟೈನಲ್ಲಿ ಓಡಿದೆ. ಪೋಸ್ಟ್ ಆಫೀಸಿನಲ್ಲಿ ಜನರಷ್ಟಾಗಿ ಇರಲಿಲ್ಲ. "ಗುಡ್ ಮಾರ್ನಿಂಗ್. ನನಗೆ ನಾಲ್ಕು ಏರ್‌ಮೆಯಿಲ್ ಕಾಗದ ಕೊಡಿ" ಎಂದೆ. "ವೆರಿ ಗುಡ್ ಮಾರ್ನಿಂಗ್. ನೀವು ಎಲ್ಲಿದ್ದೀರಿ ? ಇಲ್ಲಿಗೆ ಹೊಸಬರಲ್ಲವೆ ?" ಎಂದು ದಪ್ಪಿನ ೫೦ರ ಯಜಮಾನಿ ಕೇಳಿದರು. ನಾನು ವೈದ್ಯ ಎಂದು ತಿಳಿಯುತ್ತಲೇ ಆಕೆ ಹೆಚ್ಚಿನ ಗೌರವ ತೋರಿದರು. ಆಕೆಯ ಗಂಡನಿಗೆ ಪರಿಚಯ ಮಾಡಿದರು. "ನಾನು ನಿಮ್ಮನ್ನು ನೋಡಿ ಅಸೂಯೆಪಡುತ್ತೇನೆ. ಇಂಡಿಯಾದವರಲ್ಲಿ ಬಹುಪಾಲು ನಿಮ್ಮಂತೆ ತೆಳ್ಳಗಿರುತ್ತಾರೆ. ನನ್ನ ಶರೀರ ನೋಡಿ" ಎಂದು ಶ್ರೀಮತಿ ನಕ್ಕರು. ನಾನು "ನಿಮ್ಮನ್ನು ಕಂಡು ಅಸೂಯೆ ಪಡುತ್ತೇನೆ. ನೋಡಿ ಎಷ್ಟು ತೆಳ್ಳಗಿದ್ದೇನೆ, ನಿಮ್ಮೂರಿನ ಛಳಿ ತಡೆಯಲಾರೆ" ಎಂದಾಗ ಮೂವರೂ ನಕ್ಕೆವು.

ಡಾ|| ವಾಡಗಿ ಸಾಯಂಕಾಲ ಬಂದರು. ನನಗೆ ಕೆಲಸದ ಆಯಾಸ. ಎಂದೂ ನನ್ನ ಜೀವಮಾನವಿಡೀ ಮಧ್ಯಾಹ್ನ ನಿದ್ರೆ ಕಾಣದ ನಾನು ಸಂಜೆ ೫ ಗಂಟೆಗೆ ಕೆಲಸ ಮುಗಿಸಿ ಬಂದು ಹಾಸಿಗೆಯ ಮೇಲೆ ಉರುಳಿದ್ದೇ ಜ್ಞಾಪಕ. ನಿದ್ರೆ ಹತ್ತಿತ್ತು. ಡಾ|| ವಾಡಗಿ ಬಂದಾಗಲೇ ನನಗೆ ಎಚ್ಚರ. "ಆಶ್ಚರ್ಯ ! ಏನ್ರೀ, ಈಗ ನಿದ್ರೆ ಮಾಡ್ಲಿಕ್ಹತ್ತಿದ್ದೀರಿ ?" ಎಂದರು. ನಾನು "ಕೆಲಸದ ಆಯಾಸ" ಎಂದೆ. "ಹೌದ್ರಿ, ಹಣನೂ ಕೊಡ್ತಾರೆ, ಅದಕ್ಕೆ ತಕ್ಕಂತೆ ಕೆಲಸಾನೂ ತೆಗೊತ್ತಾರೆ" ಎಂದರು. ಕೆಳಗಿಳಿದು ಟೀ ಮಾಡಿ ಬಿಸ್ಕತ್ ಜೊತೆ ಸೇವಿಸಿದೆವು.

ರೆಸಿಡೆಂಟ್ಸ್ ಕ್ವಾರ್ಟರ್ಸ್‌ನಲ್ಲಿ ಅಡಿಗೆ ಮನೆಯೊಂದಿದೆ. ಅದಕ್ಕೆ ಲಗತ್ತಿಸಿ ದಂತೆ ಅಲ್‌ಮೆರಾದಲ್ಲಿ ೮-೧೦ ಪೌಂಡ್‌ನಷ್ಟು ಬ್ರೆಡ್, ಬೆಣ್ಣೆ, ಹಾಲು, ನೆಸ್‌ಕೆಫೆ ಮತ್ತು ನಾನಾ ತರಹೆಯ ಬಿಸ್ಕಟ್ಸ್ ಇಟ್ಟಿರುತ್ತಾರೆ. ಅಲ್ಲಿನ ಡಾಕ್ಟರುಗಳು ಯಾವಾಗ ಬೇಕಾದರೂ ಅವನ್ನು ಉಪಯೋಗಿಸಬಹುದು. ದಿನಕ್ಕೆರಡು ಬಾರಿ ಅವನ್ನು ತಂದಿಡುತ್ತಾರೆ. ಹಾಲು ಮತ್ತು ಬೆಣ್ಣೆ

ಯನ್ನು ಫ್ರಿಜ್‌ನಲ್ಲಿ ಇಟ್ಟಿರುತ್ತಾರೆ. ನಾವಿಬ್ಬರೂ ಕೋಳಿಸಾರು ಅನ್ನ ಮಾಡುವುದೆಂದು ತೀರ್ಮಾನಿಸಿದೆವು. ಪಕ್ಕದಲ್ಲಿದ್ದ ಪಾಕಿಸ್ತಾನಿ ಅಂಗಡಿಯೊಂದರಿಂದ ಒಂದು ಕೆ.ಜಿ. ಬಾಸುಮತಿ ಅಕ್ಕಿಗೆ ೨ ರೂ. ನಂತೆ ಕೊಂಡು ತಂದೆವು. ನಾನು ಅನ್ನ ಬೇಯಿಸಿದೆ. ವಾಡಗಿಯವರು ಸೊಗಸಾದ ಕೋಳಿ ಮಾಂಸದ ಸಾರು ತಯಾರಿಸಿದರು. ಆಗಾಗ್ಗೆ ರುಚಿ ನೋಡಿದೆವು. ಊಟ ಮಾಡುತ್ತಿದ್ದಾಗ ಮೈಸೂರಲ್ಲಿದ್ದಂತೆ ಕಂಡಿತು.

ಡಾ|| ಶೇಷಿಯ "ಇಂಥಾ ಊಟ ನಾನು ಮಾಡಿರಲಿಲ್ಲ. ನೀವು ಮಾಂಸಾಹಾರಿಗಳಿರಬೇಕು. ಹುಟ್ಟಿನಲ್ಲಿ" ಎಂದರು. ಡಾ|| ವಾಡಗಿ "ಏನ್ ಬಿಡ್ರಿ. ಅದೇನ್ಮಹ ! ನಾವು ಲಿಂಗಾಯತರ್ರೀ, ಸಸ್ಯಾಹಾರಿಗಳು. ಹೀಗೇ, ಅಲ್ಲಿ ಇಲ್ಲಿ ಇಂಡಿಯಾದ ಸ್ನೇಹಿತರು ಮಾಡೋದನ್ನ ನೋಡಿ ಕಲಿತೆ" ಎಂದರು. ಅದೇ ಊಟ ಫ್ರಿಜ್‌ನಲ್ಲಿಟ್ಟು ೩ ದಿವಸ ಉಪಯೋಗಿಸಿದೆವು.

ಒಂದು ರಾತ್ರಿ ಡ್ಯೂಟಿಯಲ್ಲಿದ್ದೆ. ನನ್ನ ಕೊಠಡಿಯಲ್ಲಿ ಹಾಗೇ ದಿಂಬಿಗೆ ಒರಗಿ ತೂಕಡಿಸುತ್ತಿದ್ದೆ. ಗಂಟೆ ಸುಮಾರು ೧೨-೩೦. ನನ್ನಲ್ಲಿದ್ದ ಬ್ಲಿಬ್ ಕಿಟ್ಟನೆ ಕಿರುಚಿತು. ಬೇಜಾರಿನಿಂದ ಹೊರಬಿದ್ದೆ. ಕಾರಣ ಎಷ್ಟೋ ಸಾರಿ ಬಹಳ ಸಣ್ಣ ವಿಷಯಕ್ಕೆ ರೋಗಿಗಳು ರಾತ್ರಿ ಆಕಸ್ಮಿಕ ಶುಶ್ರೂಷೆಗಾಗಿ ಬರುತ್ತಾರೆ. ಶಸ್ತ್ರಚಿಕಿತ್ಸಾ ವಾರ್ಡ್‌ಗೆ ಬಂದಾಗ ಅಲ್ಲಿ ವೈದ್ಯರೊಬ್ಬರು, ಡ್ಯೂಟಿ ಸಿಸ್ಟರ್, ಒಂದು ೬ ತಿಂಗಳ ಹೆಣ್ಣು ಮಗು, ಅದರ ತಂದೆ ಇದ್ದರು. ಎಲ್ಲರೂ ನಿಶ್ಶಬ್ದ ! ರಾತ್ರಿಯ ನೀರವತೆಯಲ್ಲಿ ನನಗೆ ಗಾಬರಿಯಾಯಿತು. "ಏನು ವಿಷಯ" ಎಂದೆ. "ಗುಡ್‌ಮಾರ್ನಿಂಗ್. ನಾವು ಇದುವರೆಗೂ ಭೇಟಿಯಾಗಿಲ್ಲ. ನಾನು ಸೀನಿಯರ್ ಹೌಸ್ ಆಫೀಸರ್. ಈ ಮಗುವಿಗೆ ಸರ್ಜಿಕಲ್ ತೊಂದರೆಯೇನಾದರೂ ಇದೆಯೆ ನೋಡಿ ಹೇಳಿ. ಮೆಡಿಕಲ್ ತೊಂದರೆಯೇನೂ ಇಲ್ಲ ನನ್ನ ಪ್ರಕಾರ. ಆದರೆ ನನ್ನ ಕನ್ಸಲ್‌ಟೆಂಟ್ ಫೋನುಮಾಡಿ ಅದು ನಿಮೋನಿಯ ಇರಬೇಕೆಂದು ಆಸ್ಪತ್ರೆಗೆ ದಾಖಲುಮಾಡಿ ಎಂದಿದ್ದಾರೆ" ಎಂದು ಮಾತು ಮುಗಿಸಿದರು. ನೈಟ್ ಸಿಸ್ಟರ್ ಹೌದೆಂದು ತಲೆ ಕುಣಿಸಿದರು. ನಾನು ಪರೀಕ್ಷೆಮಾಡಿದೆ. ಮಗು ಆಗಾಗ್ಗೆ ಕಿರುಧ್ವನಿಯಲ್ಲಿ ನಿದ್ರೆಯಿಂದೆಚ್ಚರವಾಗಿ ಅಳುತ್ತಿತ್ತು, "ಸರ್ಜಿಕಲ್ ತೊಂದರೆ ಏನೂ ಕಾಣಲಿಲ್ಲ" ಎಂದೆ ಇನ್ನೇನು ತಂದೆ ಮಗು ಹೊರಡಬೇಕು, ಅಷ್ಟರಲ್ಲಿ ಮಗುವಿನ ತಂದೆ "ಕ್ಷಮಿಸಿ ಡಾಕ್ಟರ್, ನನಗೂ ನನ್ನ ಹೆಂಡತಿಗೂ ಜಗಳ.

ಕಾರಣ ಆಕೆ ಮಗುವಿಗೆ ಹಾಲು ಕೊಡಲಿಲ್ಲ" ಎಂದರು. ಅಲ್ಲೇ ಇದ್ದ ಬಾಟಲ್‌ಗೆ ಹಾಲು ಹಾಕಿ ತುಟಿಗಳಿಗೆ ಇಟ್ಟಾಗ ಮಗು ಗಟಗಟನೆ ಕುಡಿದು ಬಾಟಲ್ ಬಿಟ್ಟು ನಿದ್ರೆಹೋಯಿತು ! ನಾವಿಬ್ಬರೂ "ಡಯಾಗ್ನೋಸಿಸ್ ? ಫೀಡಿಂಗ್ ಪ್ರಾಬ್ಲಮ್" ಎಂದು ನಕ್ಕೆವು.

ಡಾಕ್ಟರ್ ನನ್ನನ್ನು ಬೇರೆ ಕಡೆಗೆ ಎಳೆದೊಯ್ದು ಹೇಳಿದರು. "ನಾನು ಡಾ|| ಪಾಶ, ಪಾಕಿಸ್ಥಾನದಿಂದ ಬಂದಿದ್ದೇನೆ, ನಾಲ್ಕು ವರ್ಷಗಳಾಯಿತು. ಇಂತಹ ಸಮಸ್ಯೆ ನನಗೆ ಗೊತ್ತು" ಎನ್ನುತ್ತಿದ್ದಾಗ ಫೋನ್ ಕರೆಬಂತು ಕನ್ಸಲ್‌ಟೆಂಟರಿಂದ ! ಫೋನಿನಲ್ಲಿ "ಮಗುವಿಗೆ ಎಕ್ಸ್-ರೇ ತೆಗೆಯಿರಿ. ಎಕ್ಸ್-ರೇ ಇಲ್ಲದೆ ನಿಮೋನಿಯಾ ಇದ್ದರೆ ಹೇಗೆ ಪತ್ತೆಹಚ್ಚುವಿರಿ, ಮಗುವಿಗೆ ಜ್ವರ ವಿದೆಯಂತೆ, ಉಸಿರಾಟ ಜೋರಾಗಿದೆಯಂತೆ" ಎಂದದ್ದಕ್ಕೆ ಡಾ|| ಪಾಶ "ನಿಮೋನಿಯ ಡೈಯಾಗ್ನೋಸ್ ಮಾಡಲು ಎಕ್ಸ್-ರೇ ಬೇಕಿಲ್ಲ ಸಾರ್. ಎಕ್ಸ್-ರೇ ಇಲ್ಲದೆ ಮಾಡಬಹುದು" ಎಂದು ಪ್ರತ್ಯುತ್ತರವಿತ್ತರು. ಅದಕ್ಕೆ ಸನ್ನಿವೇಶ ಅರಿತ ಕನ್ಸಲ್‌ಟೆಂಟ್ "ಆಗಲಿ ನಾಳೆ ತೆಗೆದು ನನಗೆ ತೋರಿಸಿ". ಎಂದಾಗ,

ಡಾ|| ಪಾಶ "ಆಗಲಿ ಸಾರ್. ಆದರೆ ಎಕ್ಸ್-ರೇ ಪ್ರಕಾರ ಅದು ನಿಮೋನಿಯಾ ಆಗಿದ್ದಲ್ಲಿ ಇಂದಿನಿಂದ ನನ್ನ ವೃತ್ತಿಯನ್ನೇ ಬಿಟ್ಟು ಬಿಡುತ್ತೇನೆ" ಎಂದರು.

ಪ್ರತಿಭಟನೆ ! ದ್ವಂದ್ವಯುದ್ಧಕ್ಕೆ ಆಹ್ವಾನ ! ನನ್ನಲ್ಲಿ ಗಾಬರಿ ಯಾಯಿತು. ಬೆಳಿಗ್ಗೆ ಎಕ್ಸ್-ರೇ ತೆಗೆದಾಗ ಅದು ನಿಮೋನಿಯ ಅಲ್ಲ ಎಂದು ತಿಳಿಯಿತು. ಕೊಠಡಿಯಲ್ಲಿದ್ದ ಡಾ|| ಪಾಶಾರನ್ನು ನಾನು ತಬ್ಬಿ ಕೊಂಡೆ. "ವಿಷಯವೇನು ಡಾಕ್ಟರ್ ? ಏಕೆ ಹಾಗೆ ಮಾಡಿದಿರಿ" ಎಂದೆ. "ಕುಳಿತುಕೊಳ್ಳಿ ಬ್ರದರ್. ನನ್ನ ತಂದೆ ವೃತ್ತಿಯಲ್ಲಿ ವೈದ್ಯರು. ಅವರ ಮಾತು ಅಲಕ್ಷಿಸಿ ಇಲ್ಲಿಗೆ ಬಂದೆ. ಆರನೇ ಸಾರಿ ಎಂ. ಆರ್. ಸಿ. ಪಿ. ಮೊದಲ ಭಾಗಕ್ಕೆ ಕುಳಿತಿದ್ದೇನೆ. ಇಂತಹವರೇ ನಮ್ಮನ್ನು ಅಳೆಯುವವರು" ಎಂದಾಗ ನನಗೆ ಅರ್ಥವಾಯಿತು ; ಡಾ|| ಪಾಶ ಬೇಸತ್ತಿದ್ದರು, ನೊಂದಿದ್ದರು.

ಮೇ, ಜೂನ್, ಜುಲೈ, ತಿಂಗಳಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ವಸಂತ ಋತು ಆಹ್ಲಾದ, ಆನಂದ ಸ್ವರ್ಗದ ವೈಭವ ಪ್ರದರ್ಶನ ! ಹೊಂಬಿಸಿಲು, ತಂಗಾಳಿಯಲ್ಲಿ ಹಾಸಿದ ಹಸಿರು. ಉತ್ಸಾಹ, ಉಲ್ಲಾಸ, ಸಡಗರ. ಎಲ್ಲೆಲ್ಲೂ ಜನ ಸಮುದಾಯ. ಸ್ವರ್ಗದ ಬಾಗಿಲು ತೆರೆದಂತೆ. ಉದ್ಯಾನವನ, ಅಂಗಡಿ ಮುಂಗಟ್ಟು, ಬಸ್ಸು, ರೈಲುಗಳಲ್ಲಿ ನೂಕುನುಗ್ಗಲು ; ಸಿನಿಮಾ ಮಂದಿರ, ನಾಟಕ ಶಾಲೆ, ಗಾಲ್ಫ್, ಟೆನಿಸ್, ಫುಟ್‌ಬಾಲ್ ಎಲ್ಲೆಲ್ಲೂ ತುಂಬಿ ತುಳುಕಿದ ಅಟ್ಟಹಾಸ. ಪ್ರಿನ್ಸೇಸ್ ರಸ್ತೆಯ ಪಶ್ಚಿಮಕ್ಕೆ 'ದಿ ಮಿಲ್ ವಿಲ್ಲೇ ಡ್ರೈವ್' ದಾಟಿದರೆ 'ಮೆಡೋಸ್' ಹುಲ್ಲುಗಾವಲು. ಅಲ್ಲಲ್ಲಿ ಅತಿ ಎತ್ತರದ ಸಾಲು ಮರಗಳ ದಟ್ಟನೆರಳಲ್ಲಿ ಚಿಮುಕಿಸಿದ ಸೂರ್ಯರಶ್ಮಿಯ ತುಂತುರು ಬೆಳಕು. ಸಾವಿರ ಸಾವಿರ ಭಕ್ತಾದಿಗಳ ಸೂರ್ಯಸ್ನಾನ, ವಿಶ್ರಾಂತಿ, ಸಂತೃಪ್ತಿ ಎಲ್ಲವೂ ಒಟ್ಟಿಗೆ! ಬೈಬಲ್ ಹಿಡಿದು ದಾರಿಹೋಕರನ್ನು ತಡೆಗಟ್ಟಿ 'ದೇವನ' ಪಠನೆ ಮಾಡುತ್ತಿದ್ದ ಪಾದ್ರಿ. ಕಣಿವೆಯೊಂದರ ಹಸಿರು ಹಾಸಿಗೆಯಲ್ಲಿ ರಷ್ಯದ ಬ್ಯಾಲೆ ನರ್ತಕಿ. ಪರ್ವತದ ತಪ್ಪಲಲ್ಲಿ ಲಕ್ಷೋಪಲಕ್ಷ ಕಣ್ಣು, ಮನ, ಕಿವಿಗಳ ಚಿತ್ತೈಕಾಗ್ರತೆ! ವಿಶಾಲ ನಿರ್ಮಲ ರಸ್ತೆಗಳಲ್ಲಿನ ಸಾಲು ವಾಹನಗಳ, ಮಾನವರ ಮೆರವಣಿಗೆ! ಎಡಿನ್‌ಬರೋ ನಗರ ಎಡಬಿಡದೆ ನರ್ತಿಸುತ್ತಿತ್ತು.

ಪ್ರವಾಸಿಗಳಿಗೆ ದೇವರಗುಡಿಯ ಪ್ರಾಕಾರಾಂಗಣವಿದ್ದಂತೆ ಆ ನಗರ. ನಾವೆಲ್ಲಾ ಪ್ರವಾಸ ಹೊರಟೆವು. ಫೋರ್ತ್ ನದಿ ಸುಮಾರು ನಗರದಿಂದ ೮-೧೦ ಮೈಲಿ ದೂರದಲ್ಲಿದೆ. ಸ್ಕಾಟ್‌ಲೆಂಡಿನ ಪಶ್ಚಿಮ ತೀರದಲ್ಲಿ ಜನಿಸಿ ಪೂರ್ವಕ್ಕೆ ಆಳವಾಗಿ ತುಂಬಿ ತುಳುಕದೆ 'ಕ್ವೀನ್ಸ್ ಪೆರ್ರಿ ನ್ಯಾರೋಸ್' ಎಂಬಲ್ಲಿ ಮೈಲಿ ಉದ್ದದ ಸ್ಪ್ರಿಂಗ್‌ಬ್ರಿಡ್ಜ್ ಎರಡನ್ನು ಹೊತ್ತಿದೆ. ಕಂಬಗಳೇ ಇಲ್ಲದ ಕಮಾನಿನ ಉದ್ದ ೩,೩೦೦ ಅಡಿ ! ಬೃಹದಾಕಾರವಾಗಿ ಜೋಲಿ ಬಿಟ್ಟಿದೆ. ಕೆಳಗಡೆ ಪ್ರವಾಸಿಗರ ದೋಣಿಗಳು, ಇಕ್ಕೆಲದಲ್ಲಿ ತೈಲ ಸಂಸ್ಕರಣದ ಬೃಹತ್ ಬಾವಿಗಳು, ಹಡಗುಗಳು, ದೂರದ ದೋಣಿಗಳು ಎಲ್ಲಾ ಭಯಂಕರತೆಯಲ್ಲೊಂದು ಭವ್ಯ ನೋಟದಂತೆ ಕಂಡವು. ೧೯೬೪ರಲ್ಲಿ ಕ್ವೀನ್ ಎಲಿಜಬೆತ್‌ರಿಂದ ಉದ್ಘಾಟನೆಯಾಯಿತು ಸ್ಪ್ರಿಂಗ್ ಬ್ರಿಡ್ಜ್. ಆಗ ಅದರ ಖರ್ಚು ೩೦ ಲಕ್ಷ ಪೌಂಡ್‌ಗಳು.

ಅಂದರೆ ೫.೫ ಕೋಟಿ ರೂಪಾಯಿಗಳಷ್ಟು. ರಾತ್ರಿ ಹೊತ್ತಿನ ದೀಪಾಲಂಕಾರ ದಲ್ಲಿ ಭೂಮಿಯಿಂದ ಆಕಾಶಕ್ಕೆ ಕಟ್ಟಿದ ತಳಿರು ತೋರಣದಂತೆ ಬೃಹತ್ ಬಿಲ್ಲಿನ ಸೇತುವೆ !

ತಾ|| ೧೪-೬-೬೮ ರಂದು ಪ್ರವಾಸಿ ಬಸ್ ಒಂದರಲ್ಲಿ ನಮ್ಮ ಪ್ರಯಾಣ. ಗ್ಲಾಸ್ಗೊ ನಗರದ ಜನಸಂದಣಿ ಅಗಾಧ, ನಗರವೇ ಬಿರುಕು ಬಿಡುವಂತಿತ್ತು. ಹತ್ತೊಂಬತ್ತನೆ ಶತಮಾನದ ಕೈಗಾರಿಕಾಭಿವೃದ್ಧಿಗೆ ಮುಂಚೆ ಅತ್ಯಂತ ಘೋರ ಸಂಕಟ, ಬಡತನಕ್ಕೊಳಗಾಗಿದ್ದ ಕೊಳಚೆಯ ನಗರ ಇಂದು ಪ್ರಖ್ಯಾತ ಶ್ರೀಮಂತ ನಗರ. ಗೋರ್ಡನ್ ರಸ್ತೆಯಲ್ಲಿನ ಕಮರ್ಷಿಯಲ್ ಬ್ಯಾಂಕ್ ಸೌಧ, ಯೂನಿಯನ್ ರಸ್ತೆಯಲ್ಲಿನ ಈಜಿಪ್ಷಿಯನ್ ಹಾಲ್, ಮೆಕನ್‌ಟಾಶರ ಸ್ಕೂಲ್ ಆಫ್ ಆರ್ಟ್ಸ್ ಮತ್ತು ಕ್ಯಾಥೆಡ್ರಲ್ ಚರ್ಚ್ ಆ ನಗರದ ಐಶ್ವರ್ಯ ವನ್ನು ಮನದಟ್ಟು ಮಾಡುತ್ತವೆ.

ಮುಂದೆ ಹೊರಟಾಗ ಐರ್‌ಷೈರ್‌ನಲ್ಲಿರುವ ಲೋವ್‌ಡನ್ ಅಲೆಗ್ಸಾಂಡರ್ ಫ್ಲೆಮಿಂಗ್‌ರ ಜನ್ಮಸ್ಥಳ. ಫ್ಲೆಮಿಂಗ್ ಮಾಯದ ಮದ್ದು ಪೆನಿಸಿಲಿನ್ ಕಂಡು ಹಿಡಿದದ್ದು ೧೯೨೯ ರಲ್ಲಿ. ನೊಬೆಲ್ ಬಹುಮಾನ ಬಂದದ್ದು ೧೯೫೪ ರಲ್ಲಿ. ಅವರ ಜನನ ೧೮೮೧ ರಲ್ಲಿ. ವೈದ್ಯರಾದ ನಾವು ಪ್ರಣಾಮ ಸಲ್ಲಿಸಿದೆವು ಮನ ದಲ್ಲೇ ! ಅಲ್ಲಿಂದ "ಬರ್ನ್ಸ್ ಕಾಟೇಜ್" ತಲುಪಿದಾಗ ಮಧ್ಯಾಹ್ನ ೧-೧೫. ಅದು ಅಲ್ಲೊವೆ ಡಿಸ್ಟ್ರಿಕ್ಟ್‌ನಲ್ಲಿದೆ. ಕವಿ ರಾಬರ್ಟ್‌ಬರ್ನ್ಸ್‌ರ ಜನ್ಮಸ್ಥಳ. ಈಗ "ಬರ್ನ್ಸ್ ಕಾಟೇಜ್" ಒಂದು ಪ್ರೇಕ್ಷಕ ಸ್ಥಳವಾಗಿ ಮಾರ್ಪಟ್ಟಿದೆ. ಮುಂದಿನ ದರ್ಶನ ಗಿರ್‌ವೆನ್ ಮತ್ತು ಗ್ಯಾಲ್ಲೊವೆಗಳಲ್ಲಿನ ಸಮುದ್ರದಂಡೆ. ಪ್ರಶಾಂತ ಸಮುದ್ರದಲ್ಲಿ ಲಂಗರು ಹಾಕಿ ನಿದ್ರಿಸುತ್ತಿದ್ದ ಹಡಗುಗಳು ಕೆಲವು, ಮತ್ತೆ ಕೆಲವು ದೂರದಲ್ಲಿ ಚಲಿಸಿ ಕಣ್ಮರೆಯಾದವು, ದಾರಿಯೇ ಇಲ್ಲದ ೨೫೦೦ ಅಡಿ ಎತ್ತರದ ಗ್ರಾನೈಟ್ ಬೆಟ್ಟಗಳ ಸಾಲು ಮತ್ತೊಂದು ಕಡೆ, ಅನೇಕಾನೇಕ ಸರೋವರಗಳು. ಅಲ್ಲಿಯ ತನಕ ನೋಡಿ ತಣಿಯಿತು ಮನಸ್ಸು.

ಮೂರನೆ ದಿನ ಕ್ರೈಗ್‌ಮಿಲ್ಲರ್ ಕ್ಯಾಸೆಲ್‌ಗೆ ಭೇಟಿ. ಕ್ಯಾಸೆಲ್ ಇರು ವುದು ಎಡಿನ್‌ಬರೋ ನಗರದಿಂದ ೩ ಮೈಲಿ ದೂರವಲ್ಲಿ. ಹಳೆ ಡಾಲ್‌ಕೀತ್ ರಸ್ತೆಯಲ್ಲಿ. ಅಷ್ಟು ಹತ್ತಿರವಿದ್ದರೂ ಅದರ ಚರಿತ್ರೆ ೪೦೦ ವರ್ಷಗಳಷ್ಟು ದೂರದ್ದು. ರೋಮಾಂಚಕ ಚರಿತ್ರೆ ! ಏಳನೆ ಹೆನ್ರಿಯ ಇಬ್ಬರು ಮೊಮ್ಮಕ್ಕ ಳಲ್ಲಿ ಮೇರಿ ಕ್ವೀನ್ ಆಫ್ ಸ್ಕಾಟ್ಸ್ ಒಬ್ಬಳು. ಅವಳ ಜೀವನ ಚರಿತ್ರೆಯೇ

ಕಂಡರಿಯದ ಜೀವನ. ಆಕೆ ೬ ದಿನಗಳ ಮಗುವಾಗಿದ್ದಾಗ ಸ್ಕಾಟ್‌ಲೆಂಡಿನ ರಾಣಿಯಾಗಿ ಕಿರೀಟಧಾರಣೆಯಾಯಿತು! ಹದಿನಾರನೇ ವಯಸ್ಸಿನಲ್ಲಿ ಡಾಫಿನ್ ಸಂಗಡ ಮದುವೆ! ಹದಿನೇಳರಲ್ಲಿ ಫ್ರಾನ್ಸ್ ದೇಶದ ರಾಣಿ! ಹದಿನೆಂಟನೇ ವಯಸ್ಸಿನಲ್ಲಿ ವಿಧವೆ! ನಂತರ ಸ್ಕಾಟ್‌ಲೆಂಡಿಗೆ ಮರಳಿ ೬ ವರ್ಷ ಕಾಲ ಕಾದಎಣ್ಣೆಯ ಕೊಪ್ಪರಿಗೆಯಲ್ಲಿನ ಜೀವನ. ಎರಡು ಬಾರಿ ಜೈಲುವಾಸದ ನಂತರ ಮತ್ತೆ ಮದುವೆಯಾಯಿತು. ಆದರೇನು! ೧೫೮೭ ರಲ್ಲಿ ಆಕೆಯ ಶಿರಚ್ಛೇದನವಾಯಿತು. ಇದು ಕೆಚ್ಚೆದೆಯ ವೀರ ರೋಮಾಂಚಕ ರಾಣಿಯ ವೈಪರೀತ್ಯ! ಕ್ರೈಗ್‌ಮಿಲ್ಲರ್ ಕ್ಯಾಸೆಲ್ ಪ್ರಾಂತ್ಯಕ್ಕೆ ಈಗಲೂ 'ಚಿಕ್ಕ ಫ್ರಾನ್ಸ್' ಎಂಬ ಅನ್ವಯ ನಾಮಾಂಕಿತ ಉಂಟು.

ರಾಯಲ್ ಸ್ಕಾಟಿಷ್ ಮ್ಯೂಸಿಯಂ ಲೋತಿಯನ್ ಜಾಗದಲ್ಲಿನ ಛೇಂಬರ್ಸ್ ರಸ್ತೆಯಲ್ಲಿದೆ. ಬ್ರಿಟನ್ನಿನ ಅತಿದೊಡ್ಡ ವಸ್ತು ಸಂಗ್ರಹಾಲಯ. ಯಂತ್ರವಿಜ್ಞಾನ, ಭೂಗರ್ಭಶಾಸ್ತ್ರ, ಪ್ರಕೃತಿಯ ಚರಿತ್ರೆ ಮತ್ತು ಚಿತ್ರಕಲೆ, ಪ್ರಾಚೀನ ಶೋಧನಶಾಸ್ತ್ರ ಎಂಬ ಮುಖ್ಯ ನಾಲ್ಕು ವಿಭಾಗಗಳುಂಟು. ನನ್ನನ್ನು ಚಕಿತಗೊಳಿಸಿದ್ದು ೮೦ ಅಡಿ ಉದ್ದದ ಗತಿಸಿದ ಸರೀಸೃಪದ ಅಸ್ಥಿಪಂಜರ!

ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಆಫ್ ಎಡಿನ್‌ಬರೋ ೧೫೦೫ ರಲ್ಲಿ ಶಾಸನಕ್ಕೊಳಪಟ್ಟಿತಂತೆ. ಇದು ಮಿಡ್‌ಲೋತಿಯನಲ್ಲಿದೆ. ಹಳೆ ಕಟ್ಟಡದ ಹಿಂಭಾಗದಲ್ಲಿ ನವೀನ ಮಾದರಿಯ ಸೌಧಗಳಿವೆ. ಸತ್ತ ದೇಹಗಳನ್ನು ಡಿಸೆಕ್ಷನ್ ಮಾಡಿ ಮಾನವ ದೇಹಶಾಸ್ತ್ರ ಕಲಿಯಲು ಸ್ಮಶಾನದಿಂದ ಕದ್ದು ತರುತ್ತಿದ್ದರಂತೆ. ಶವಗಳ ವ್ಯಾಪಾರವೂ ನಡೆದಿತ್ತಂತೆ. ಕೊನೆಗೆ ಸತ್ತ ದೇಹಗಳು ಸಿಗದೆ ಕೊಲೆ ಮಾಡಿ ದೇಹ ಸಂಪಾದಿಸುತ್ತಿದ್ದರಂತೆ! ಇದು ವಿಜ್ಞಾನ ಬೆಳೆದು ಬಂದ ವೈಶಿಷ್ಟ್ಯ.

೬

ಆ ದಿನ ಸಾಯಂಕಾಲ, ಮೆಡೋಸ್ ದಾಟುತ್ತಿದ್ದಾಗ ಡಾ|| ಶೇಷಿಯ ನನ್ನದೊಂದು ಫೋಟೋ ತೆಗೆದರು. ನಾನು ಅವರ ಫೋಟೋ ತೆಗೆದೆ. ಅಷ್ಟರಲ್ಲಿ "ಸಾರ್, ನಾನೊಬ್ಬ ಎಕ್ಸ್-ಸರ್ವೀಸ್‌ಮನ್, ಟೀ ಕುಡಿಯಲು ಸಹಾಯ ಮಾಡಿ" ಎಂದು ಮುಂದೆ ಸರಿದ ಸ್ಕಾಟಿಷ್ ಒಬ್ಬಾತ. ಕಾಲು ಷಿಲ್ಲಿಂಗ್

ಕೊಟ್ಟದ್ದಾಯಿತು. ಮುಂದೆ ಟೊವಿಂಬಿಟ್ ಪ್ಲೇಸ್. ಅಲ್ಲಿ ಡೊನಾಲ್ಡ್ ಫೆರಿಯರ್, ಲಿಮಿಟೆಡ್., ಮೆಡಿಕಲ್ ಬುಕ್ ಸೆಲ್ಲರ್ಸ್ ಮತ್ತು ಲೈಬ್ರೇರಿಯನ್ಸ್ ಅವರ ದೊಡ್ಡ ಅಂಗಡಿ. ಸುಮಾರು ೪.೫ ಅಡಿ ಎತ್ತರದ ೫೦ರ ಮಿಲ್ಲರ್ ಬರ ಮಾಡಿಕೊಂಡರು. ತಿಂಗಳಿಗೆ ೨ ಪೌಂಡ್ ಫೀ ಕೊಟ್ಟರೆ ಯಾವ ಮೆಡಿಕಲ್ ಪುಸ್ತಕವನ್ನಾದರೂ ತೆಗೆದುಕೊಂಡು ಸೆಲ್ಲಾರ್‌ನಂತಿರುವ ನೆಲಮಾಳಿಗೆಯಲ್ಲಿ ಓದ ಬಹುದು. ನಾನು ಮೆಂಬರ್ ಆದೆ. ಸೆಲ್ಲಾರ್ ಕೊಠಡಿಗಳಲ್ಲಿ ಸಾಮಾನ್ಯ ವಾಗಿ ಏಷ್ಯಾದ ವಿಧ್ಯಾರ್ಥಿಗಳೇ ಹೆಚ್ಚು ; ಸಿಲೋನ್, ಇಂಡಿಯಾ ಮತ್ತು ಪಾಕಿಸ್ತಾನದವರು.

ಅಲ್ಲಿಂದ ಮುಂದೆ ಬರ್ಟನ್ ಟೈಲರ್ಸ್ ಮ್ಯಾನೇಜರ್ "ಗುಡ್ ಮಾರ್ನಿಂಗ್, ಸುಖಾಗಮನ. ನೀವು ಇಂಡಿಯಾದವರೆ?" ಎಂದರು. "ಹೌದು, ಹೇಗೆ ಗೊತ್ತಾಯಿತು ?" ಎಂದೆ.

"ಗೊತ್ತಾಗದೆ ಏನು. ನಾನು ಹುಟ್ಟಿದ್ದು ಕಲ್ಕತ್ತಾದಲ್ಲಿ ಸಾರ್. ನೀವು ಏನೇ ಹೇಳಿ, ಕಲ್ಕತ್ತಾದವರಿಗೂ ಉಳಿದ ಇಂಡಿಯನ್‌ರಿಗೂ ಬಹಳ ವ್ಯತ್ಯಾಸವಿದೆ.

"ಹೇಗೆ ?"

"ಏನಿಲ್ಲ, ಬಂಗಾಳದವರು ಇಲ್ಲಿಗೆ ಬರುತ್ತಾರೆ. ನೀವು ಇಂಡಿಯಾದವರೆ ? ಎಂದು ಕೇಳಿದರೆ "ಇಲ್ಲ ಬಂಗಾಳದವರು" ಎನ್ನುತ್ತಾರೆ. ನೀವೇ ನೋಡಿ. ನನ್ನ ಮನಸ್ಸಿಗೆ ನೋವಾಗುತ್ತೆ."

"ನಿಮ್ಮ ಹೆಸರು" ?

"ಲಾಂಗ್ ಬೋನ್"

"ನಿಮ್ಮ ಮೈತುಂಬ ಮಾಂಸವೇ ಇದೆ" ಎಲ್ಲರೂ ನಕ್ಕೆವು. ಬರ್ಟನ್ ಟೈಲರ್ಸ್ ರಾಯಲ್ ಟೈಲರ್ಸ್ ಎಂಬ ಹೆಮ್ಮೆ ಇತ್ತು ಆತನಲ್ಲಿ. ಅಷ್ಟೇ ಆದರ, ಪ್ರೀತಿ. ನಮ್ಮ ವೃತ್ತಿ ಬಗ್ಗೆ, ಆಸ್ಪತ್ರೆಯ ಬಗ್ಗೆ ಕೇಳಿ ತಿಳಿದುಕೊಂಡರು.

"ನೋಡಿ ಡಾಕ್ಟರ್ಸ್, ೧೨ ಪೌಂಡಿಗೆ ಒಳ್ಳೆ ಸೂಟ್ ತಯಾರು ಮಾಡಿ ಕೊಡುತ್ತೇನೆ" ಎಂದು ನಾನಾ ತರಹೆಯ ಸೂಟಿಂಗ್ ತೋರಿಸಿದರು. ಸರಿ, ಅಳತೆ ಕೊಟ್ಟೆವು.

ಮಾರ್ಕ್ಸ್ ಅಂಡ್ ಸ್ಪೆನ್ಸರ್ಸ್ ಶರಟುಗಳಿಗೆ ಪ್ರಸಿದ್ಧ. ಅವರ ಡಿಪಾರ್ಟ್

ಮೆಂಟಲ್ ಸ್ಟೋರ್ಸ್ ಅತಿ ದೊಡ್ಡ ಸ್ಟೋರ್ಸ್‌ಗಳಲ್ಲಿ ಒಂದು. ನಾನಾ ಕಡೆ ಅದರ ಭಾಗಗಳಿವೆ. ಅಲ್ಲಿ ಶರ್ಟ್ಸ್ ಕೊಂಡೆವು. ಸ್ಟೋರ್ಸ್‌ನಲ್ಲಿ ಬಟ್ಟೆಬರೆ ಗಳಿಂದ ಹಿಡಿದು, ಮಾಂಸ, ರೊಟ್ಟಿ, ತರಕಾರಿ, ಹಣ್ಣುಹಂಪಲು, ೩ ನಿಮಿಷ ದಲ್ಲಿ ತಯಾರಾಗುವ ಇನ್‌ಸ್ಟ್ಯಾಂಟ್ ಫೋಟೋ ಕ್ಯಾಮರ, ಇತ್ಯಾದಿ ಇತ್ಯಾದಿ ಇವೆ. ಕದ್ದವರನ್ನು ಪತ್ತೆ ಹಚ್ಚಲು 'ಮ್ಯಾಜಿಕ್ ಐಸ್' ಉಂಟು. ಅದರಲ್ಲಿ ೪-೫ ಲೆನ್ಸ್‌ಗಳನ್ನು ಅಳವಡಿಸಲಾಗಿದೆ. ಸ್ಟೋರ್ಸ್‌ನ ನಾನಾ ಭಾಗಗಳಿಗೆ ಅವನ್ನು ತಿರುಗಿಸಿ ಗಿರಾಕಿಗಳನ್ನು ಸೂಕ್ಷ್ಮವಾಗಿ ವೀಕ್ಷಿಸುತ್ತಾರೆ. ಅದರಲ್ಲೂ ಅನುಮಾನ ಬಂದವರನ್ನು ! ಆಗ ಒಂದೂವರೆ ಅಥವಾ ಎರಡು ಪೌಂಡುಗಳಿಗೆ ಸೊಗಸಾದ ಶರಟುಗಳು ಸಿಗುತ್ತಿದ್ದವು.

೭

ನನ್ನ ಮಕ್ಕಳು ಯಮುನ ಮತ್ತು ಕೋಕಿಲ ನನಗೆ ಕಾಗದ ಬರೆದಿದ್ದರು, ಓದಿದೆ. 'ಅಪ್ಪಾ ನೀನು ಬೇಗ ಬಾ' ಎಂದಿತ್ತು. ಕಣ್ಣಲ್ಲಿ ನೀರು ಟಪಟಪ ಉದುರಿದವು. ವಾಡೆಗಿಯವರಿಗೆ ಗಾಬರಿ. "ಏನು ವಿಷಯ" ಎಂದು ತವಕಿಸಿ ಹತ್ತಿರ ಬಂದರು. "ಏನಿಲ್ಲ ನನ್ನ ಮುದ್ದು ಪುಟಾಣಿಗಳು ಬೇಗ ಬಾ ಎಂದು ಬರೆದಿದ್ದಾರೆ" ಎಂದೆ. "ಅಷ್ಟಕ್ಕೇ ಕಣ್ಣೀರು ! ಹಿಂಗಾದ್ರೆ ಹೇಗ್ರೀ ನೀವು ೮ ತಿಂಗಳು ಮುಗಿಸೋದು. ಹೇಗಿದ್ರೂ ಎರಡು ಉಲ್ಲನ್ ಸ್ವೆಟರ್ ತಂದಿದ್ದೀರ. ನಾಳೆ ಏರ್ ಲಿಫ್ಟ್ ಮಾಡರ್ಲ. ಒಂದು ವಾರದಲ್ಲಿ ತಲಪುತ್ತವೆ' ಎಂದು ಸಮಾಧಾನ ಮಾಡಿದರು. ಉಪಹಾರ ಬೇಗ ಬೇಗ ಮುಗಿಸಿ ಗಂಟೆ ೮ ಕ್ಕೇ ಔಟ್-ಪೇಷಂಟ್‌ಗೆ ಬಂದೆ. ಅಲ್ಲಿ ಸ್ವೆಟರ್ಸ್ ಪಾರ್ಸಲ್ ಅಣಿ ಮಾಡಿದೆ. ಪೋಸ್ಟಾಫೀಸಿಗೆ ಹೊರಟಾಗ ಎದುರಿಗೇ ಸಿಕ್ಕಿದ ಡಾ|| ಬ್ರೌನ್ "ಹಾ ! ಏನು, ನೀವು ಎಡಿನ್‌ಬರೋವನ್ನೇ ಪಾರ್ಸಲ್ ಮಾಡ್ತಿರೋ ಹಾಗಿದೆ" ಎಂದು ನಕ್ಕರು.

ಔಟ್-ಪೇಷಂಟ್‌ನಲ್ಲಿದ್ದೆ. ಮಧ್ಯ ವಯಸ್ಸಿನವರೊಬ್ಬರು ಮಗನನ್ನು ಕರೆತಂದರು. ಹುಡುಗ ಬಿದ್ದು ತೊಡೆ ಮೂಳೆ ಮುರಿದಿತ್ತು. ಎಕ್ಸ್-ರೇ ಆದ ಮೇಲೆ ಅದನ್ನು ಸರಿಮಾಡಿ ಪ್ಲಾಸ್ಟರ್ ಹಾಕಿದೆ. ಹುಡುಗನ ತಂದೆ ನಾನು ಮೈಸೂರಿನವನೆಂದು ತಿಳಿದು ನನ್ನ ಭುಜದ ಮೇಲೆ ತಟ್ಟಿ "ಡಾಕ್ಟರ್, ನನಗೆ ಶ್ರೀರಂಗಪಟ್ಟಣ ಈಗಲೂ ಬಹಳ ಇಷ್ಟ. ಅಲ್ಲಿ ೧೨ ವರ್ಷಗಳಿದ್ದೆ. ಎಂಥ

ಸುಂದರ ಊರು. ಅವಕಾಶ ಸಿಕ್ಕಿದರೆ ಅಲ್ಲೇ ನೆಲಸ ಬಯಸುತ್ತೇನೆ" ಎಂದರು. ಹೊರಡುವಾಗ "ಬೈಬೈ ಡಾಕ್ಟರ್, ನನ್ನ ಕಿರಾಣಿ ಅಂಗಡಿ ಇಲ್ಲೇ ಸಿನ್ಸೇಸ್ ರಸ್ತೆಯಲ್ಲಿ ಕೆಳಗಡೆ ಇದೆ. ದಯಮಾಡಿ ಒಮ್ಮೆ ಬನ್ನಿ" ಎಂದಾಗ ನನ್ನ ಮನಸ್ಸು ಹಾರುವ ಹಕ್ಕಿಯಂತೆ ಹಗುರವಾಯಿತು. ಶ್ರೀರಂಗಪಟ್ಟಣ, ದೇವ ಸ್ಥಾನ, ಕಾವೇರಿಯ ಎರಡು ಕವಲು, ಮಸೀದಿಯಲ್ಲಿನ ಅತಿ ಎತ್ತರದ ಗೋಪುರ, ಅಲ್ಲಿನ ಪಾರಿವಾಳ ಎಲ್ಲಾ ಸಿನ್ಸೇಸ್ ರೋಡಲ್ಲಿ ಇದ್ದಂತೆ !

ಅಂದು ರಾತ್ರಿ ನನಗೆ ಡ್ಯೂಟಿ ಇಲ್ಲ. ಆದರೂ ಬೆಳಗಿನ ಜಾವ ೨-೩ಂಕ್ಕೆ ಆಸ್ಪತ್ರೆಯಿಂದ ಕರೆ ಬಂತು. ಏನೆಂಬುದು ತಿಳಿಯಲಿಲ್ಲ. ತಿಳಿಯಲು ಹೊರಟೆ. ಕ್ವಾರ್ಟರ್ಸ್‌ನಿಂದ ಹೊರಬಿದ್ದೆ. ಪೂರ್ಣ ಚಂದ್ರನ ಬೆಳ್ಳಿಯ ಬೆಳಕು ! ಮೇಲೆ ತಲೆ ಎತ್ತಿದೆ. ಚಂದ್ರ ಅತಿ ದೊಡ್ಡದಾಗಿ ಕಂಡಿತು, ಅಲ್ಲದೆ ತಲೆಯ ಮೇಲೆ ಬಹಳ ಹತ್ತಿರದಲ್ಲಿದ್ದಂತೆ ಭಾಸ ! ಆಶ್ಚರ್ಯವಾಯಿತು. ಆಸ್ಪತ್ರೆಗೆ ಹೋಗುವ ದಾರಿಯ ಇಕ್ಕೆಲದಲ್ಲಿ ಗೋಡೆಗಳಿವೆ, ಗೋಡೆಯ ಮೇಲೆ ಕುಳಿತಿದ್ದ ದಪ್ಪ ಕರಿ ಬೆಕ್ಕು 'ಬುಸ್' ಎಂದು ಓಡಿದ ತಕ್ಷಣ ಸ್ವಲ್ಪ ಗಾಬರಿಯಾಯಿತು. ಆಪರೇಷನ್ ಥಿಯೇಟರ್ ಸೇರಿದೆ. ಮಿ॥ ಹೇ "ಓ ಗುಡ್ ಮಾರ್ನಿಂಗ್. ನೀವು ಇದಕ್ಕೆ ಸಹಾಯ ಮಾಡಿ. ಇಂಥದ್ದೆಲ್ಲಾ ಕಲಿತರೆ ನಿಮಗೆ ಒಳ್ಳೆಯದಲ್ಲವೇ ?" ಎಂದಾಗ ನಿಜಕ್ಕೂ ಸಂತೋಷವಾಯಿತು. ಅದೊಂದು ಅಪಘಾತದಿಂದ ಕೈ ಜಜ್ಜಿದ ಕೇಸ್. ನರ ಮತ್ತು ಮೆದುಳಿನ ಶಸ್ತ್ರಚಿಕಿತ್ಸಾ ತಜ್ಞರೊಬ್ಬರು ಹೊಲಿಗೆ ಹಾಕುತ್ತಿದ್ದರು. ಬೇಗ ಬೇಗ ಕೈ ತೊಳೆದು, ಗೌನ್, ಗ್ಲೋವ್ಸ್ ಧರಿಸಿ ಹಾಜರಾದೆ. "ಹಲೋ ಡಾ॥ ಗೋಪಾಲ್" ಎಂದರು ಸರ್ಜನ್. ಶಸ್ತ್ರ ಚಿಕಿತ್ಸೆ ಮುಗಿದಾಗ ಗಂಟೆ ೪ ಆಗಿತ್ತು.

ಪುನಃ ಬೆಳಿಗ್ಗೆ ೮ ಗಂಟೆಗೆ ಕೆಲಸಕ್ಕೆ ಹಾಜರಾದೆ. ಆಗ ತಿಳಿಯಿತು ವಿಷಯ. ಡಾ॥ ಮಿಸ್. ಮಿಲ್ಲರ್ ಆ ರಾತ್ರಿ ಡ್ಯೂಟಿಯಲ್ಲಿದ್ದರಂತೆ. ಕಾರಣಾಂತರದಿಂದ ಆಕೆ ಬರಲಾಗಲಿಲ್ಲ. ಆಕೆಗೆ ಬದಲಾಗಿ ನನ್ನನ್ನು ಕರೆದಿದ್ದರು. ಇಂತಹ ಸನ್ನಿವೇಶಗಳು ಆಗಾಗ್ಗೆ ಉದ್ಭವಿಸುತ್ತಿರುತ್ತವಂತೆ. ಮತ್ತೊಂದು ದಿನ ನನಗೆ ಮತ್ತು ಮಿ॥ ಹೇ ಇಬ್ಬರಿಗೂ ರಾತ್ರಿ ಡ್ಯೂಟಿ. ರಾತ್ರಿ ಗಂಟೆ ೧೧ ಆಗಿತ್ತು. ಆಪರೇಷನ್ ಮಾಡುವುದಿತ್ತು. ಮಿ॥ ಹೇಗೆ ಫೋನ್ ಮಾಡಿದೆ. ಆತ ೪೦ ಮೈಲಿ ದೂರದಲ್ಲಿ ಪಾರ್ಟಿಯೊಂದರಲ್ಲಿದ್ದರು. "ನೀವೇ ಏನುಬೇಕೋ ಮಾಡಿ, ನಾನು ೪೦ ಮೈಲಿ ದೂರದಲ್ಲಿದ್ದೇನೆ" ಎಂದಾಗ, ನನಗೆ ಹಿಡಿಸಲಿಲ್ಲ.

"ಡ್ಯೂಟಿ ಸಮಯದಲ್ಲಿ ನೀವು ೪೦ ಮೈಲಿ ದೂರದಲ್ಲಿದ್ದಿರೆಂದು ಕೇಸ್‌ಶೀಟ್‌ನಲ್ಲಿ ಬರೆಯುತ್ತೇನೆ" ಎಂದೆ. ಕ್ಷಣದಲ್ಲಿ ಆತ ಗಾಬರಿಯಾದಂತಿತ್ತು, "ಬೇಡ ಬೇಡ, ಆಪರೇಷನ್‌ಗೆ ಥಿಯೇಟರ್ ರೆಡಿಮಾಡಿ ಶುರುಮಾಡಿರಿ, ಬೇಗನೆ ಬರುತ್ತೇನೆ" ಎಂದರು.

ವಸಂತಋತುವಿನಲ್ಲಿ ಸೂರ್ಯ ರಾತ್ರಿ ೧೦-೩೦ರವರೆಗೂ ಮಂದವಾಗಿ ಪ್ರಕಾಶಿಸುತ್ತಾನೆ. ಅದೊಂದು ಅಪೂರ್ವ ನೋಟ, ಅನುಭವ. ಪಶ್ಚಿಮ ದಿಗಂತವು ಹತ್ತಿರವಿದ್ದಂತೆ, ಕೆಮ್ಮಣ್ಣು ಎರಚಿದಂತೆ ರಮ್ಯ !

ಸಂಜೆ ೬-೩೦ ಕ್ಕೆ ರಾತ್ರಿ ಊಟವುಗಿಸಿ ಟೆನಿಸ್ ಆಡುತ್ತಿದ್ದರು ಮಿ|| ಹೇ ಮತ್ತು ಡಾ|| ಬ್ರೌನ್. ನಾನು ಸುತ್ತಾಡುತ್ತಿದ್ದೆ. ಮಿ|| "ಹೇ ರವರು ಡಾ|| ಗೋಪಾಲ್, ಡಾ|| ಬ್ರೌನ್‌ಗೆ ಡ್ಯೂಟಿ ಇದೆ, ೧೦-೩೦ರ ತನಕ ಸ್ವಲ್ಪ ನೋಡಿಕೊಳ್ಳಿ" ಎಂದಾಗ ನಾನು ತಿರಸ್ಕರಿಸಿದೆ.

ಇದೆಲ್ಲದರ ಪರಿಣಾಮದಿಂದಾಗಿ ಒಂದು ದಿನ ಮಿ|| ಹೇ ಕೇಳಿದರು "ನೀವು ಸರ್ಜರಿ ಕಲಿಯಲಿಕ್ಕೆ ಬರಲಿಲ್ಲವೆ ?" ಎಂದು. ನಾನು "ಹೌದು, ಆದರೆ ನಿಮಗಿಂತ ಮತ್ತು ನನಗಿಂತ ಹೆಚ್ಚಿಗೆ ತಿಳಿದವರಿಂದ" ಎಂದುತ್ತರಿಸಿದಾಗ ನಿಶ್ಶಬ್ದ ಮೂಡಿತ್ತು. ಈ ವಿಷಯ ಮಿ|| ರೊಬಾರ್ಟ್ಸ್‌ಗೆ ತಿಳಿದಿತ್ತು. ಒಂದು ದಿನ ಇಬ್ಬರೂ ಮಾತನಾಡುತ್ತ ಅವರ ಕೊಠಡಿಗೆ ಹೋದೆವು. ಆಗ ಹೇಳಿದರು "ನಿಮಗಿಲ್ಲಿ ಹೆಚ್ಚಿನ ಕೆಲಸವಿಲ್ಲ ಎಂದು ತಿಳಿದಿದ್ದೇನೆ. ಗ್ಲಾಸ್ಗೋ ಅಥವಾ ಲಂಡನ್ನಿಗೆ ಕಳುಹಿಸಬೇಕೆಂದಿದ್ದೇನೆ. ಏನನ್ನುವಿರಿ ?" "ನನಗೂ ಹಾಗೇ ಅನ್ನಿಸುತ್ತೆ. ಎಲ್ಲಿಗಾದರೂ ಸರಿ, ಕಳುಹಿಸಿ" ಎಂದೆ. ಆಗ ಅವರು ತುಸು ಯೋಚಿಸಿ "ಗ್ಲಾಸ್ಗೋನಲ್ಲೂ ಹೆಚ್ಚು ಡಾಕ್ಟರ್‌ಗಳಿದ್ದಾರೆ. ಲಂಡನ್ನಿನ ಗ್ರೇಟ್ ಆರ್‌ಮಂಡ್ ಸ್ಟ್ರೀಟ್ ಆಸ್ಪತ್ರೆಗೆ ಪ್ರಯತ್ನಿಸುತ್ತೇನೆ. ಅಲ್ಲಿ ಪ್ರವೇಶ ಸಿಗುವುದು ಕಷ್ಟ. ಮತ್ತೆ ಸಿಗೋಣ" ಎಂದರು.

ಒಂದೆರಡು ವಾರಗಳಾಗಿದ್ದಿರಬಹುದು. ಮಿ|| ರೊಬಾರ್ಟ್ಸ್ ಕೊಟ್ಟಿದ್ದ ಪರಿಚಯಪತ್ರ ತೆಗೆದುಕೊಂಡು ಮಿಸ್ ಕ್ಲಾರ್ಕ್, ಲೈಬ್ರೇರಿಯನ್, ರಾಯಲ್ ಕಾಲೇಜ್ ಆಫ್ ಸರ್ಜನ್ಸ್, ಎಡಿನ್‌ಬರೊ, ಅಲ್ಲಿ ಕೊಟ್ಟೆ. "ಹೌದು, ಮಿ|| ರೊಬಾರ್ಟ್ಸ್ ನನಗೆ ಮೊದಲೇ ತಿಳಿಸಿದ್ದರು. ನಿಮಗೆ ಯಾವ ಪುಸ್ತಕ ಬೇಕಾದರೂ ತೆಗೆದುಕೊಂಡು ಓದಿ" ಎಂದರು. ಅಲ್ಲಿನ ಅನಾಟಮಿ ಮ್ಯೂಸಿಯಂನಲ್ಲಿ ದೇಹದ ನಾನಾ ಭಾಗಗಳನ್ನು ಡಿಸೆಕ್ಟ್ ಮಾಡಿ ಓದಲು

ಅನುಕೂಲವಾಗುವಂತೆ ಗಾಜಿನ ಜಾರ್‌ಗಳಲ್ಲಿಟ್ಟಿದ್ದಾರೆ. ಪ್ರತಿಯೊಬ್ಬರೂ ಡಿಸೆಕ್ಟ್ ಮಾಡಲು ದೇಹಗಳು ಇಲ್ಲಿನಂತೆ ಅಲ್ಲಿ ಸಿಗುವುದಿಲ್ಲ. ದೇಹಗಳನ್ನೂ ಮಾನವ ಶರೀರದ ಅಸ್ಥಿಪಂಜರಗಳನ್ನೂ ಇಂಡಿಯಾದಿಂದ ತರಿಸಿಕೊಳ್ಳುತ್ತಿದ್ದ ರಂತೆ. ಇದನ್ನಾದರೂ ನಾವು ರಫ್ತುಮಾಡುತ್ತಿದ್ದೇವೆಂದು ವೇದ್ಯವಾಗುತ್ತದೆ! ಈಗಲೂ ಮೂಳೆಗಳನ್ನು ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಿಗಾಗಿ ಇಂಡಿಯಾ ದಿಂದ ಪಡೆಯುತ್ತಾರೆ.

ಆಗಾಗ್ಗೆ ಅಲ್ಲಿ ಎಫ್. ಆರ್. ಸಿ. ಎಸ್. ಮತ್ತು ಎಮ್. ಆರ್. ಸಿ. ಪಿ. ಪರೀಕ್ಷೆ ತೆಗೆದುಕೊಳ್ಳುವವರಿಗೆ ಲೆಕ್ಚರ್ ಕೋರ್ಸ್ ಏರ್ಪಡಿಸಿರು ತ್ತಾರೆ. ಈ ಕೋರ್ಸ್‌ಗಳು ೨-೩ ತಿಂಗಳು ನಡೆಯುತ್ತವೆ. ಅದಕ್ಕೆ ಶುಲ್ಕ ಉಂಟು. ೧೯೬೮ ರಲ್ಲಿ ೬೦ ಪೌಂಡ್‌ಗಳಷ್ಟು. ಬೇಕಾದವರು ಭಾಗವಹಿಸ ಬಹುದು. ಕಡ್ಡಾಯವೇನಿಲ್ಲ. ಕೋರ್ಸ್‌ಗೆ ಹಾಜರಾಗದೆ ಪರೀಕ್ಷೆ ತೆಗೆದು ಕೊಳ್ಳಬಹುದು. ಸುಮಾರು ಶೇಕಡ ೮೦ ರಷ್ಟು ವೈದ್ಯರು ಏಷ್ಯಾದವರು. ಉಳಿದವರು ಸ್ಕಾಟ್‌ಲೆಂಡ್ ವೈದ್ಯರು ಆ ಕೋರ್ಸ್‌ಗಳಲ್ಲಿ ಭಾಗವಹಿಸು ತ್ತಾರೆ. ಆ ೨-೩ ತಿಂಗಳು ಅವರಿಗೆ ಸಂಬಳವಿಲ್ಲ. ಊಟ ವಸತಿ ಏರ್ಪಾಡೆಲ್ಲಾ ಅವರ ಸ್ವಂತ ಖರ್ಚಿನಲ್ಲೇ ಆಗಬೇಕು. ದೂರದ ಆಸ್ಪತ್ರೆಗಳಿಂದ, ಪಟ್ಟಣ ಗಳಿಂದ ಡಾಕ್ಟರ್‌ಗಳು ಬರುತ್ತಾರೆ. ಹೀಗೆ ೬ ತಿಂಗಳಿಗೊಮ್ಮೆ ಪರೀಕ್ಷೆಗೆ ಮೊದಲು 'ಕೋರ್ಸ್'ಗಳನ್ನು ನಡೆಸುತ್ತಾರೆ. ಡೆಸರ್ಟೇಷನ್ ಏನೂ ಬರೆಯಬೇಕಿಲ್ಲ.

ಪರೀಕ್ಷೆಗೆ ಮೊದಲು ರೋಗಿಗಳನ್ನು ಪರೀಕ್ಷಿಸಿ ರೋಗ ಪತ್ತೆ ಮಾಡುವು ದಕ್ಕೂ ಕೆಲವು ಕಡೆ ಅವಕಾಶವಿಲ್ಲದೆ ಒಬ್ಬೊಬ್ಬ ರೋಗಿಗೂ ಕಾಲು ಪೌಂಡ್ ನಂತೆ ಶುಲ್ಕ ವಸೂಲಿ ಮಾಡುತ್ತಾರೆ. ಈ ವ್ಯಾಪಾರದಲ್ಲಿ ರಿಜಿಸ್ಟ್ರಾರ್‌ಗಳ ಪಾತ್ರವೇ ಹೆಚ್ಚು. ಡಾ|| ಶೇಷಿಯರವರ ಇಂಗ್ಲಿಷ್ ಕನ್‌ಸಲ್‌ಟೆಂಟ್ ಒಬ್ಬರು ಹೇಳಿದ್ದರು. "ನಮ್ಮ ಹುಡುಗರು ೬೦% ಮಾಡಿದರೆ ಪಾಸ್. ಹೊರದೇಶ ದವರು ಶೇಕಡಾ ೮೦ ಮಾಡಬೇಕಾಗುತ್ತದೆ" ಎಂದು. ಈ ಸತ್ಯಾಂಶವನ್ನು ಬಹಳ ಸ್ನೇಹಿತರು ಅರಿತಿದ್ದರು.

ಅಂದು ತಾರೀಖು ೨೩-೭-೧೯೬೮. ನಾನು ಮತ್ತು ಡಾ|| ವಾಡಗಿ ಪ್ರವಾಸ ಹೊರಟೆವು. ಬೆಳಿಗ್ಗೆ ಎಡಿನ್‌ಬರೋ ಬಿಟ್ಟು ೪೦ ಮೈಲಿ ದೂರದ ಗ್ಲಾಸ್ಗೊ ತಲುಪಿದೆವು. ನಗರ ಹಾದು ೪-೬ ಮೈಲಿ ಪ್ರಯಾಣ

ಮಾಡಿದರೆ 'ಲಾಚ್‌ಲಮಾಂಡ್' ಎಂಬ ಸರೋವರ. ಅದು ಬ್ರಿಟನ್ನಿನಲ್ಲೇ ಅತಿ ದೊಡ್ಡ ತಿಳಿನೀರಿನ ಸರೋವರ. ಅಲ್ಲಿ ವಿಹಾರಾರ್ಥ ಬೋಟಿಂಗ್ ಉಂಟು. ನಮ್ಮಂತೆ ಅಮೆರಿಕಾ ದೇಶದ ಮತ್ತು ಯೂರೋಪ್ ದೇಶಗಳ ಪ್ರವಾಸಿಗರೂ ಅಲ್ಲಿದ್ದರು. ಬೋಟ್‌ನಲ್ಲಿ ನಾವಿಬ್ಬರೂ ಕಿಟಕಿಯ ಹತ್ತಿರ ಕುಳಿತು ಪ್ರಕೃತಿಯನ್ನು ಸವಿಯುತ್ತಿದ್ದೆವು. ತಿಳಿನೀರಿನ ದೊಡ್ಡ ಸರೋವರದ ಸುತ್ತಲೂ ದುರ್ಗಮ ಪರ್ವತಗಳ ಹಚ್ಚ ಹಸಿರು ದೂರದಲ್ಲಿತ್ತು. ಅಲ್ಲಲ್ಲಿ ಹಸಿರು ತುಂಬಿದ ಕಣಿವೆಗಳು, ದುರ್ಗಮ ಪರ್ವತಗಳ ತಪ್ಪಲಲ್ಲಿ ಅಲ್ಲೊಂದು ಇಲ್ಲೊಂದು ವಿಹಾರ ವಸತಿಗಳು, ಮೇಲೆ ಬೋಟಿನ ಹತ್ತಿರವೇ ಹಾರಾಡುತ್ತಿದ್ದ ಸಮುದ್ರ ಪಕ್ಷಿಗಳು ನಮ್ಮಿಬ್ಬರನ್ನೂ ಮರೆಸಿದ್ದವು. ಛಳಿ ಇದ್ದು ಆಗಲೇ ಮಂಜು ಮುಸುಕಿತ್ತು. ಸೂರ್ಯ ಕಿರಣಗಳು ಸುತ್ತ ಆವರಿಸಿದ್ದ ಪರ್ವತ ಗಳಿಂದ ಮರೆಯಾಗಿದ್ದವು. ಮುದುಕರೊಬ್ಬರು ನಮ್ಮಲ್ಲಿಗೆ ಬಂದರು. "ನಮಸ್ಕಾರ. ನೀವು ಯಾವ ದೇಶದವರು, ದಯಮಾಡಿ ತಿಳಿಸಿ." "ಇಂಡಿಯಾ ದೇಶ. ನೀವು ದಯವಿಟ್ಟು ಕುಳಿತುಕೊಳ್ಳಿ" ಎಂದಾಗ, "ಥ್ಯಾಂಕ್ಯೂ" ಎಂದು ಕುಳಿತರು.

"ದಯವಿಟ್ಟು ಅನ್ಯಥಾ ಭಾವಿಸಬೇಡಿ. ನಿಮ್ಮ ವೃತ್ತಿ ?"

"ಪರವಾಗಿಲ್ಲ, ಅದಕ್ಕೇನಂತೆ, ನಾವಿಬ್ಬರೂ ಡಾಕ್ಟರ್ಸ್" ಎಂದಾಕ್ಷಣ ಆ ವ್ಯಕ್ತಿ ಎದ್ದು ನಿಂತರು. ನೀವು ಸಮಾಜದಲ್ಲಿ ಉನ್ನತ ಸ್ಥಾನ ಸಂಪಾದಿಸಿದ ವರು. ನಾನು ನಿಮ್ಮೆದುರು ಸರಿಸಮ ಕುಳಿತುಕೊಳ್ಳಲಾರೆ". "ಹಾಗಲ್ಲ, ನಮ್ಮ ದೇಶದಲ್ಲಿ ದೊಡ್ಡವರಿಗೆ ಅಂದರೆ ವಯಸ್ಸಾದವರಿಗೆ ಗೌರವ ಕೊಡುತ್ತೇವೆ. ನೀವು ಹಿರಿಯರು. ಆದ್ದರಿಂದ ಗೌರವಕ್ಕೆ ಪಾತ್ರರು. ದಯಮಾಡಿ ಕುಳಿತು ಕೊಳ್ಳಿ". "ಹಾಗಿದ್ದರೆ ನನ್ನ ಆತಿಥ್ಯ ಸ್ವೀಕರಿಸಿ. ಎರಡು ಶೀಶೆ ಬೀರ್ ನನ್ನ ಹಣದಿಂದ ಸೇವಿಸಿ" ಎಂದು ಬಲವಂತ ಮಾಡಿದರು. ಕೊನೆಗೆ ಎರಡು ಪ್ಯಾಕ್ "ಬೆನ್‌ಸನ್ ಅಂಡ್ ಹೆಡ್ಜಸ್" ಸಿಗರೇಟು ತಂದುಕೊಟ್ಟರು.

"ಡಾಕ್ಟರ್ಸ್, ನೀವು ನನಗೆ ಆರ್ಡರ್ ಮಾಡಿ. ಈ ಛಳಿಯಲ್ಲಿ ಸರೋವರಕ್ಕೆ ಧುಮುಕಿ ಈಜಿಕೊಂಡು ಬರುತ್ತೇನೆ. ನಾನೊಬ್ಬ ನಿವೃತ್ತ ಜರ್ಮನ್ ಸಿಪಾಯಿ. ಈ ಇಂಗ್ಲಿಷ್‌ನವರನ್ನು ನೋಡಿ, ಕುಡಿದು ಕುಣಿಯು ತ್ತಿದ್ದಾರೆ....." ಎಂದು ವಂದಿಸಿ ಮರೆಯಾದರು.

ಮಾರನೆ ದಿನ ಮಿ॥ ರೊಬಾರ್ಟ್ಸ್ ನನಗೆ ಒಂದು ಫಾರಂ ಮತ್ತು ಚೀಟಿ

ಯೊಂದನ್ನು ಕೊಟ್ಟು "ಬ್ರಿಟಿಷ್ ಪೀಡಿಯಾಟ್ರಿಕ್ಸ್ ಸರ್ಜನ್ಸ್ ಕಾನ್ಫರೆನ್ಸ್, ಲಿವರ್‌ಪೂಲ್‌ನಲ್ಲಿ ನಡೆಯುತ್ತದೆ. ನೀವು ಬರುವಿರಾ ? ಹಾಗಿದ್ದಲ್ಲಿ ಇವೆಲ್ಲಾ, ಭರ್ತಿ ಮಾಡಿ ಕಳುಹಿಸಿ. ನಾನು ನಿಮ್ಮ ಹೈಕಮಿಷನ್‌ಗೆ ಬರೆಯುತ್ತೇನೆ, ಡೆಪ್ಯುಟೇಶನ್ ಕೊಡಿಸುತ್ತೇನೆ" ಎಂದರು. ಫಾರಂ ಭರ್ತಿಮಾಡಿ ರಿಜಿಸ್ಟ್ರೇಷನ್ ಮಾಡಿಸಿದ್ದಾಯಿತು. ಸಂಜೆ ಲಂಡನ್ ಹೈಕಮಿಷನ್‌ಗೆ ಫೋನ್ ಮಾಡಿದೆ. ಶ್ರೀ ಓಬರಾಯ್ "ಹೋಗಿ, ಡೆಪ್ಯುಟೇಶನ್ ಕೊಡುತ್ತೇವೆ" ಎಂದರು.

ಲಿವರ್‌ಪೂಲ್‌ಗೆ ಹೋಗುವ ಸಡಗರ ೧೫ ದಿನಗಳ ಮೊದಲೇ ಶುರು. ರಾತ್ರಿ ವಾಡಗಿಯವರಿಗೆ ತಿಳಿಸಿದೆ. ಆದರೆ ನನಗಿದ್ದ ಸಡಗರಕ್ಕೆ ಸ್ವಲ್ಪ ಧಕ್ಕೆ ಬಂತು. ಡಾ|| ವಾಡಗಿ ಎಡಿನ್‌ಬರೋ ಬಿಡುವವರಿದ್ದರು. ಅದೂ ನಾಳೆಯೇ ಹೊರಡುತ್ತೇನೆಂದಾಗ ಮೋಡ ಕವಿದಂತಾಯ್ತು. ಸೌತ್‌ವೇಲ್ಸ್‌ನಲ್ಲಿ ಅವರಿಗೆ ಕೆಲಸ. ಬ್ರಿಡ್ಜೆಂಡ್ ಎಂಬ ಊರಲ್ಲಿನ ಜನರಲ್ ಆಸ್ಪತ್ರೆಯಲ್ಲಿ. "ಅಲ್ಲಿನ ಕನ್‌ಸಲ್‌ಟೆಂಟ್ ವಾರಕ್ಕೆ ಎರಡು ಸಾರಿ ಬರುತ್ತಾರೆ. ಉಳಿದ ದಿನಗಳು ನಾನೇ ರೋಗಿಗಳನ್ನು ನೋಡಿಕೊಳ್ಳಬೇಕು. ಅವರು ಎಮ್.ಆರ್.ಸಿ.ಪಿ.ಗೆ ಎಗ್ಸಾಮಿನರ್ ಕೂಡ. ಒಳ್ಳೆಯ ಆಸ್ಪತ್ರೆ. ನಾಳೆ ಹೋಗಿ ರಿಪೋರ್ಟ್ ಮಾಡಿಕೊಳ್ಳದಿದ್ದರೆ ಆ ಕೆಲಸಕ್ಕೆ ಸೊನ್ನೆ" ಎಂದು ಮುಗಿಸಿದರು.

"ನೀವು ಏಕೆ ಮೊದಲೇ ಹೇಳಲಿಲ್ಲ ?"

"ಹೌದ್ರಿ, ನೀವು ಬೇಜಾರು ಮಾಡ್ಕೊಳ್ತೀರ ಅಂತ ಹೇಳ್ಳಿಲ್ಲ. ಅಲ್ಲದೆ ನಾವು ೬ ತಿಂಗಳಿಗೊಮ್ಮೆ ಕೆಲಸ ಹುಡುಕಬೇಕು, ನಿಮ್ಮ ಹಾಗಲ್ಲ. ಹೇಗಿದ್ರು ಲಿವರ್‌ಪೂಲ್‌ನಿಂದ ಬರುವಾಗ ನನ್ನಲ್ಲಿ ಒಂದೆರಡು ದಿನವಿರಿ. ಮತ್ತೆ ಲಿವರ್ ಪೂಲ್‌ನಲ್ಲಿ ಬಿರಾದರ್ ಇದ್ದಾನೆ. ಅವನು ಚಲೋ ಮನುಷ್ಯ, ಇಂಜನಿಯರ್. ನಿಮಗೆ ಎಲ್ಲಾ ಅನುಕೂಲ ಮಾಡಿಕೊಡುತ್ತಾನೆ" ಎಂದು ಸಮಾಧಾನ ಮಾಡಿದರು. ಆಗಿಂದಾಗಲೇ ಶ್ರೀ ಬಿರಾದರ್, ಎಲೆಕ್ಟ್ರಿಕಲ್ ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್, ಲಿವರ್‌ಪೂಲ್, ಅವರಿಗೆ ಪತ್ರ ಬರೆದು ಮುಗಿಸಿದರು. ಆಗ ವಾಡಗಿಯವರು ಬ್ರಾಕೆಟ್‌ಹೌಸ್ ಬಿಟ್ಟಿದ್ದರು. ಶ್ರೀಮತಿ ಗಾರ್ಡನರ್‌ಅವರ ೩೭, ಲ್ಯಾರಿಸ್ಟನ್ ರೋಡ್‌ನಲ್ಲಿ ಪೇಯಿಂಗ್ ಗೆಸ್ಟ್ ಆಗಿದ್ದರು. ನಮ್ಮ ಆಸ್ಪತ್ರೆ ಪಕ್ಕದ 'ಮೆಡೋಸ್' ದಾಟಿದರೆ ಲಾರಿಸ್ಟನ್ ರಸ್ತೆ ಸಿಗುತ್ತದೆ. ಶ್ರೀಮತಿ ಗಾರ್ಡನರ್ ಸಂಪ್ರದಾಯದ ವ್ಯಕ್ತಿ. ಅವರು ಇಂಡಿಯಾದ ವಿದ್ಯಾರ್ಥಿಗಳನ್ನಲ್ಲದೆ ಮತ್ಯಾರನ್ನೂ ಪೇಯಿಂಗ್ ಗೆಸ್ಟ್ ಆಗಿ

ತೆಗೆದುಕೊಳ್ಳುತ್ತಿರಲಿಲ್ಲ. ಕಾರಣ ತಿಳಿಯದು. ಆದರೆ ಇಂಡಿಯಾದವರನ್ನು ಅಷ್ಟೇ ಪ್ರೀತಿಸುತ್ತಿದ್ದರು. ಇಂಡಿಯಾದ ಡಾಕ್ಟರ್ಸ್‌ಗಂತೂ ಅತಿ ಪ್ರೀತಿ. ಇದಕ್ಕೆ ಹಿಂದೊಮ್ಮೆ ಕಾರಣ ಆಕೆ ಆಸ್ಪತ್ರೆಯಲ್ಲಿ ದಾದಿ !

ಮರುದಿನ ಡಾ|| ವಾಡಗಿಯವರನ್ನು ರೈಲ್ವೆ ನಿಲ್ದಾಣದಲ್ಲಿ ಬೀಳ್ಕೊಟ್ಟು ದುಃಖತಪ್ತನಾಗಿ ಹಿಂದಿರುಗಿದೆ.

ತಾ|| ೧೬-೭-೧೯೬೮ ನೇ ಮಂಗಳವಾರ ಲಿವರ್‌ಪೂಲ್ ಗಾಡಿ ಎಡಿನ್ ಬರೋ ಸೆಂಟ್ರಲ್‌ನಿಂದ ಬೆಳಿಗ್ಗೆ ೧೧-೨೫ ಹೊರಡುವುದಿತ್ತು. ಟ್ಯಾಕ್ಸಿ ಹಿಡಿದು ಸೆಂಟ್ರಲ್ ರೈಲ್ವೆ ನಿಲ್ದಾಣಕ್ಕೆ ಬಂದೆ. ಜನಸಂದಣಿ ಅಧಿಕವಾಗಿತ್ತು. ಮುಂಗಡ ಬುಕ್ಕಿಂಗ್ ಕ್ಯೂ ನೋಡಿ ಗಾಬರಿಗೊಂಡೆ. ಎರಡನೇ ತರಗತಿಗೆ ಆಗ ೫೯ ಷಿಲ್ಲಿಂಗ್ಸ್ ಮತ್ತು ೩ ಷಿಲ್ಲಿಂಗ್ಸ್, ಕಾದಿರಿಸುವುದಕ್ಕೆ. ನನ್ನಲ್ಲಿ ಸಣ್ಣದೊಂದು ಚರ್ಮದ ಸೂಟ್‌ಕೇಸ್ ಇತ್ತು. ಅದೇ ನನ್ನ ಲಗ್ಗೇಜ್. ಕಾಲಕ್ಕೆ ಸರಿ ಯಾಗಿ ಗಾಡಿ ಹೊರಟಿತ್ತು. ನಾನು ಕುಳಿತು ಆ ಕಡೆ ಈ ಕಡೆ ನೋಡಿದಾಗ ೧೦ ವರ್ಷದ ಹುಡುಗಿಯೊಂದು ಮುಗುಳ್ನಕ್ಕಿತು. ನಂತರ ತಂದೆಯ ಕಿವಿಯಲ್ಲಿ ಏನೋ ಹೇಳಿದಳು. ತಂದೆ ನನ್ನಲ್ಲಿ ಬಂದು "ಕ್ಷಮಿಸಿ" ಎಂದು ನನ್ನ ಪಕ್ಕ ಕುಳಿತರು. "ನೀವು ಸಿಕ್ ಚಿಲ್ಡ್ರನ್ ಆಸ್ಪತ್ರೆಯಲ್ಲಿನ ವೈದ್ಯರಲ್ಲವೇ ?" ಎಂದರು. ನಾನು ಹೌದೆಂದೆ. ನನ್ನ ಮಗಳಿಗೆ ನೀವು ಸಣ್ಣ ಆಪರೇಷನ್ ಒಂದನ್ನು ಮಾಡಿದ್ದಿರಂತೆ. ಆಕೆ ಗುರುತಿಸಿ ನನಗೆ ಕಿವಿಯಲ್ಲಿ ಪಿಸುಗುಟ್ಟಿದಳು" ಎಂದರು. "ಸಂತೋಷ, ಹೇಗಿದ್ದೀಯ ಮಗು" ಎಂದೆ. "ಓಕೆ" ಎಂದು ನಕ್ಕು ಕಾಲು ಕೈ ಕುಣಿಸಿತು. ಅದರ ತಾಯಿ ಮುಗುಳ್ನಕ್ಕರು. ಸರಿ ನನ್ನ ಸಹ ಪ್ರಯಾಣಿಕರು ಆಗಾಗ್ಗೆ ಸಿಗರೇಟ್ ಕೊಡುತ್ತಿದ್ದರು. ಆ ಮಾತು ಈ ಮಾತು ನಮಗರಿವಿಲ್ಲದೇ ಆಡಿಯಾಗಿತ್ತು. ಮಧ್ಯೆ ಟೀ ಕುಡಿದೆವು. ಸುಮಾರು ೧-೩೦ಕ್ಕೆ ಅವರು ಕ್ಷಮಾಪಣೆ ಕೇಳಿ ತಮ್ಮ ಹೆಂಡತಿ ಮಗಳನ್ನು ಸೇರಿದರು. ನನ್ನ ಇನ್ನೊಂದು ಪಕ್ಕದಲ್ಲಿ ಇದ್ದವರಿಗೆ ನಾನೇ ಸಿಗರೇಟು ಕೊಟ್ಟೆ. ಆತ ಒಂದನ್ನು ಆಗಲೇ ಸೇದುತ್ತಿದ್ದರು. ಸಿಗರೇಟನ್ನು ಬೇಡವೆನ್ನಲಿಲ್ಲ. ತೆಗೆದು ಕೊಂಡು ಸರಕ್ಕನೆ ಕಿವಿಗೆ ಸಿಕ್ಕಿಸಿದರು. "ಥ್ಯಾಂಕ್ಸ್" ಎಂದರು.

ಹೀಗೆ ಪ್ರಯಾಣ ಬೆಳೆದಿತ್ತು. ಪ್ರೆಸ್ಟನ್ ನಿಲ್ದಾಣಕ್ಕೆ ಗಾಡಿ ಬಂದಾಗ ಸಾಯಂಕಾಲ ೪-೩೦. ಮುಂದೆ ಲಿವರ್‌ಪೂಲ್. ಲಗ್ಗೇಜ್ ನೋಡಿಕೊಂಡೆ. ಸರಿಯಾಗಿತ್ತು. ಟಿಕೆಟ್—ಅದೂ ಸುರಕ್ಷಿತವಾಗಿತ್ತು. ಮನಸ್ಸಿಗೆ ನೆಮ್ಮದಿ

ಬದಲು ಗಾಬರಿಯಾಯಿತು. ಬಿರಾದರ್ ಬರದಿದ್ದರೆ! ಲಿವರ್‌ಪೂಲ್ ತಲುಪಿದಾಗ ಸಂಜೆಗತ್ತಲು. ಯೋಚಿಸುತ್ತಾ ಕಿಟಕಿಯಿಂದಾಚೆ ನೋಡುತ್ತಾ ತಲ್ಲೀನನಾದೆ. ಲಿವರ್‌ಪೂಲ್ ಸೆಂಟ್ರಲ್‌ನಲ್ಲಿ ರೈಲು ನಿಂತಿತು.

ಲಗ್ಗೇಜ್ ಹಿಡಿದು ಎಂದೂ ನೋಡದಿದ್ದ ಬಿರಾದರ್‌ಗಾಗಿ ಹುಡುಕುತ್ತಿದ್ದೆ. ಎರಡು ಸಾರಿ ಅತ್ತಿಂದಿತ್ತ ಓಡಾಡಿದೆ. ಅವರೂ ಓಡಾಡುತ್ತಿದ್ದಿರಬೇಕು. ಆದರೆ ಅವರು ಯಾರು? ಹಿಂದಿನಿಂದ "ಹಲೋ" ಕೇಳಿಸಿತು. ತಿರುಗಿದೆ, ಇಂಡಿಯಾದವರು. "ಬಿರಾದರ್ ಅಲ್ಲವೆ?"

"ಹೌದು ಬನ್ನಿ, ವಾಡಗಿ ಬರೆದ ಕಾಗದ ತಲುಪಿತು. ಪ್ರಯಾಣ ಚೆನ್ನಾಗಿತ್ತೆ?"

"ಹೌದು, ಚೆನ್ನಾಗಿತ್ತು."

"ನಿಮ್ಮ ಪ್ರೋಗ್ರಾಂ?"

"ತಾ|| ೧೭-೭-೬೮ ರಿಂದ ನಾಲ್ಕು ದಿನಗಳ ಮಟ್ಟಿಗೆ ಬ್ರಿಟಿಷ್ ಮಕ್ಕಳ ಶಸ್ತ್ರಚಿಕಿತ್ಸಾತಜ್ಞರ ಕಾನ್‌ಫರೆನ್ಸ್ ಇದೆ. ಡೇಲ್‌ಹೌಸ್‌ನಲ್ಲಿ ನನಗೆ ಸ್ಥಳ ಕಾದಿರಿಸಲಾಗಿದೆ."

"ಸರಿ ಬನ್ನಿ. ಈ ದಿನ ನಮ್ಮಲ್ಲಿದ್ದು ಬೆಳಿಗ್ಗೆ ಅಲ್ಲಿಗೆ ಹೋಗುವಿರಂತೆ. ಶ್ರೀರಂಗಣ್ಣ ಬಿ.ಇ. ಅವರು ೭೫, ಮೌಂಟ್‌ಪ್ಲೆಸೆಂಟ್, ಲಿವರ್‌ಪೂಲ್-೩ ರಲ್ಲಿದ್ದಾರೆ. ಅವರು ಬೆಂಗಳೂರಿನವರು. ಮೊದಲು ಅವರಲ್ಲಿಗೆ ಹೋಗೋಣ" ಎಂದರು.

ಟ್ಯಾಕ್ಸಿ ಮೌಂಟ್‌ಪ್ಲೆಸೆಂಟ್‌ಗೆ ಬಂದಾಗ ರಾತ್ರಿ ೭ ಗಂಟೆ. ಶ್ರೀ ರಂಗಣ್ಣನವರು ಕಾದಿದ್ದರು. ಪರಿಚಯವಾಯಿತು. ಒಟ್ಟಿಗೆ ನಾವು ಕನ್ನಡ ಬಲ್ಲವರು ೪ ಜನರಾದೆವು. ಮತ್ತೊಬ್ಬರು ನನಗೆ ಈಗ ಜ್ಞಾಪಕವಿಲ್ಲ. ಗ್ರಾಂಡ್‌ವೇ ಹೋಟೆಲ್‌ನಲ್ಲಿ ಡಿನ್ನರ್ ಮುಗಿಸಿ ಹಿಂತಿರುಗಿದೆವು. ಶ್ರೀ ರಂಗಣ್ಣ ಮತ್ತು ಶ್ರೀ ಬಿರಾದರ್ ನನ್ನನ್ನು ವಿ.ಐ.ಪಿ. ಯಂತೆ ನೋಡಿಕೊಂಡರು, ಸತ್ಕರಿಸಿದರು. ಬೆಳಿಗ್ಗೆ ಲಿವರ್‌ಪೂಲ್ ಯೂನಿವರ್ಸಿಟಿ ಕ್ಯಾಂಟೀನ್‌ನಲ್ಲಿ ಉಪಹಾರ. ನಂತರ ಟ್ಯಾಕ್ಸಿಯೊಂದರಲ್ಲಿ ಡೇಲ್‌ಹೌಸ್ ಕಡೆ ಪ್ರಯಾಣ. ಬಿರಾದರ್ "ಸಿಟಿ ಹೇಗಿದೆ" ಎಂದರು. ಎಡಿನ್‌ಬರೋನಷ್ಟು ಸ್ವಚ್ಛವಿಲ್ಲ ಎಂಬುದನ್ನು ಅವರೇ ಒಪ್ಪಿಕೊಂಡರು. ಕಾರಣ ಅದು ಕೈಗಾರಿಕಾ ನಗರ. ಜನಸಂದಣಿ ಅಧಿಕ. ಟ್ಯಾಕ್ಸಿ ಹಳೆ ಮತ್ತು ಹೊಸ ನಗರದ ಅಂಚಿನಲ್ಲಿದ್ದ 'ಮೆಟ್ರೋಪಾಲಿಟನ್

ಕ್ಯಾಥೆಡ್ರಲ್ ಆಫ್ ಕ್ರೈಸ್ತ್ ದ ಕಿಂಗ್'ನ ಪಕ್ಕದಲ್ಲಿ ಹಾದುಹೋಯಿತು. ಅದರ ಆಕಾರ, ನಕ್ಷೆ ವಿವಾದಾಸ್ಪದ. ಯೂರೋಪಿನ ಯಾವುದೇ ದೇಶದಲ್ಲಿ ಆ ತರಹದ ಶಿಲ್ಪ ಕಂಡುಬರುವುದಿಲ್ಲ ಎಂದು ತಿಳಿಯಿತು.

ಡೇಲ್‌ಹೌಸ್ ಸೇರಿ ದಾಖಲಾತಿ, ನಂತರ ಕಾದಿರಿಸಿದ್ದ ಸ್ಥಳಕ್ಕೆ ರವಾನೆ. ನಂತರ ಇಬ್ಬರೂ ವಿಶ್ರಮಿಸಿಕೊಂಡೆವು. ಟೀ ಆದನಂತರ ಲಂಚ್ ಮುಗಿಸಿದೆವು. ಬಿರಾದರ್ ಹೊರಟರು.

ಕಾನ್‌ಫರೆನ್ಸ್ ಹಾಲ್ ತುಂಬಿತ್ತು. ಮಿ|| ರೊಬಾರ್ಟ್ಸ್, ಮಿಸ್ ಮಕಾಯ್ ಹಾಜರಿದ್ದರು. ಇಂಡಿಯಾದಿಂದ ಅದರಲ್ಲೂ ಬೊಂಬಾಯಿಯಿಂದ ತಜ್ಞರು ಬಂದಿದ್ದರು. ಮಿ|| ರಿಕ್‌ಹ್ಯಾಂ ಮೇಳದ ಛೇರ್‌ಮನ್. ಮಿ|| ರಿಕ್ ಹ್ಯಾಂ ಮಕ್ಕಳ ಶಸ್ತ್ರಚಿಕಿತ್ಸೆಯಲ್ಲಿ ಹೆಸರು ಪಡೆದ ಮೇಧಾವಿಗಳಲ್ಲೊಬ್ಬರು. ಲಿವರ್‌ಪೂಲಿನ 'ಆಲ್‌ಡರ್‌ಹೇ' ಆಸ್ಪತ್ರೆ ಬ್ರಿಟನ್‌ನಲ್ಲಿ ಸುಪ್ರಸಿದ್ಧ. ಅದಕ್ಕೆ ಅವರೇ ಮುಖ್ಯಸ್ಥರು. ಡಾ|| ಆರ್. ಸಿಂಗ್ ಡೆಲ್ಲಿಯವರು. ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಲಂಡನ್ನಿನ ಪ್ರಸಿದ್ಧ ಗ್ರೇಟ್ ಆರ್‌ಮಂಡ್ ಸ್ಟ್ರೀಟ್ ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸೆ ಕಲಿಯಲು ಬಂದಿದ್ದರು. ನನ್ನ ಹಾಗೆ ಅಲ್ಲಿಗೆ ಡೆಲಿಗೇಟ್ ಆಗಿ ಬಂದಿದ್ದರು. ಡಿನ್ನರ್‌ಗೆ ಕುಳಿತಾಗ ನನ್ನ ಪಕ್ಕದಲ್ಲಿ ಪ್ರೊಫೆಸರ್ ಗ್ರಾಸ್ ! ಪ್ರೊ|| ಗ್ರಾಸ್ ಅಮೆರಿಕಾದಲ್ಲಿನ ಬಾಸ್ಟನ್ ಮಕ್ಕಳ ಆಸ್ಪತ್ರೆಯಲ್ಲಿ ಮುಖ್ಯಸ್ಥರು. ಮಕ್ಕಳ ಶಸ್ತ್ರಚಿಕಿತ್ಸೆ ಬಗ್ಗೆ ಪುಸ್ತಕ ಬರೆದಿದ್ದಾರೆ. ಅಲ್ಲದೆ ಕೆಲವು ಆಪರೇಷನ್‌ಗಳನ್ನೂ ಅವರು ಕಂಡುಹಿಡಿದಿದ್ದಾರೆ. ಪ್ರೊ|| ಗ್ರಾಸ್ ಮತ್ತು ಫ್ರಾನ್ಸ್ ದೇಶದ ತಜ್ಞ ಪ್ರೊ|| ಡುಅಮೆಲ್ ಅವರಿಗೂ ಪಾರಿತೋಷಕ ಕೊಡಲಾಯಿತು. ಪ್ರೊ|| ಗ್ರಾಸ್‌ರವರು ಉತ್ತರ ಕೊಡುತ್ತ "ನಿಮ್ಮ ಕಾನ್ಫರೆನ್ಸ್ ಹೆಸರನ್ನು ಬದಲಾಯಿಸಿ. ಅದನ್ನು ಬ್ರಿಟಿಷ್ ಮಕ್ಕಳ ಶಸ್ತ್ರಚಿಕಿತ್ಸಾತಜ್ಞರ .ಕಾನ್‌ಫರೆನ್ಸ್ ಎಂದು ಕರೆಯಬೇಡಿ. ಬ್ರಿಟಿಷ್ ಎಂಬ ಪದವನ್ನು ತೆಗೆದುಹಾಕಿ" ಎಂದು ಹೇಳೀಬಿಟ್ಟರು. ಕೆಲವರ ಚಪ್ಪಾಳೆ ಕೇಳಿಸಿತು. ಪ್ರೊ|| ಡುಅಮೆಲ್‌ರ ಉತ್ತರ ಇಂಗ್ಲಿಷ್‌ನಲ್ಲಿ. ಅವರ ಉಚ್ಚಾರಣೆ ನಮ್ಮಲ್ಲಿ ಕೆಲವರಿಗೆ ನಗು ತರುತ್ತಿತ್ತು.

ಡಿನ್ನರ್ ಮುಗಿಸಿ ಕೊಠಡಿಗೆ ಬಂದಾಗ ರಾತ್ರಿ ೧೦ ಗಂಟೆ. ಪಕ್ಕದ ಕೊಠಡಿಯಲ್ಲಿನ ಜೆಕೋಸ್ಲವೇಕಿಯಾದ ಪ್ರೊ|| ಪೌಲಾವ್‌ಸ್ಕಿ ಶರಟು ತೊಳೆದು ಒಣಗಲು ಹಾಕುತ್ತಿದ್ದರು. "ಏನ್ ಸಾರ್, ಇಷ್ಟು ಹೊತ್ತಿನಲ್ಲಿ" ಎಂದೆ.

"ಹೌದು ಡಾಕ್ಟರ್, ನಾನು ಯಾವುದೇ ಪ್ರಯಾಣ ಹೊರಟರೆ ನನ್ನ ಲಗ್ಗೇಜ್ ಎರಡು ಶರಟು, ಮತ್ತು ಒಂದು ಸೂಟ್. ಮಲಗುವ ಮುಂಚೆ ಒಂದು ಜೊತೆ ಕಾಲುಚೀಲವನ್ನು ತೊಳೆದುಹಾಕುತ್ತೇನೆ. ಬೆಳಿಗ್ಗೆ ಅವು ರೆಡಿ. ಇದರಿಂದ ನಾಳಿನ ಪ್ರಯಾಣ ಸುಖಕರ ಹಾಗೂ ನಿರಾಯಾಸ" ಎಂದರು. ಎಂಥ ದೊಡ್ಡ ವ್ಯಕ್ತಿ ! ಎಷ್ಟು ಸಾಮಾನ್ಯ ಜೀವನ ! ಅಂದಿನಿಂದ ನಾನೂ ಅವರನ್ನು ಅನುಸರಿಸುತ್ತಿದ್ದೇನೆ.

ಮರುದಿನ ರಾತ್ರಿ ಸ್ಟೀಮರ್ ಒಂದರಲ್ಲಿ ಡಿನ್ನರ್. ಸ್ಟೀಮರ್ ನಿಧಾನ ವಾಗಿ ಚಲಿಸುತ್ತಿತ್ತು. ಸುತ್ತ ಇದ್ದ ನೋಟ ಕಣ್ಣು ತಣಿಸಿತು. ಲಕ್ಷೋಪ ಲಕ್ಷ ದೀಪಗಳು ದಡದಾಚೆ; ಪ್ರತಿಬಿಂಬ ನೀರಿನೊಳಗೆ ತಾರೆಯಂತೆ ಬೆಳಗಿದವು. ಸಾಗರದ ಅಲೆಗಳಲ್ಲಿ ತೇಲಿ ಮುಳುಗಿ ಎದ್ದು ತೂಗುಯ್ಯಾಲೆಯಾಡಿದ ಕಿರಣ ಸಮೂಹ, ನಿಯಾನ್ ದೀಪಗಳ ನರ್ತನ. ಆಕಾಶಕ್ಕೇರಿ ಕಣ್ಮರೆಯಾದ ಬಣ್ಣ ಬಣ್ಣದ ಮತಾಪು, ಬೀಟಲ್ಸ್‌ಗಳ ವಾದ್ಯಗಾನ, ಕಂಠಮಾಧುರ್ಯತೆಗೆ ಎಲ್ಲರೂ ಮೈಮರೆತಿದ್ದರು.

ಮೊದಲೇ ಡಾ|| ವಾಡಗಿಯವರಿಗೆ ಪತ್ರ ಬರೆದಿದ್ದೆ, ೨೦ ನೇ ತಾರೀಖು ಶನಿವಾರ ಅವರಲ್ಲಿಗೆ ಬರುತ್ತೇನೆಂದು. ಲಿವರ್‌ಪೂಲ್‌ನಿಂದ ಬ್ರಿಡ್ಜ್‌ಎಂಡ್‌ಗೆ ವಾಡಗಿಯವರ ಯಾತ್ರಾರ್ಥಿಯಾಗಿ ನನ್ನ ಪ್ರಯಾಣ ! ಕಾರ್ಡಿಫ್ ನಗರ ದಾಟಿದ ಮೇಲೆ ಬ್ರಿಡ್ಜ್‌ಎಂಡ್. ರೈಲುಗಾಡಿಯಿಂದ ಇಳಿದೆ. ನಿರಾಶೆ ಯಾಯಿತು. ಸ್ನೇಹಿತ ಕಾಣಲಿಲ್ಲ. ಸಣ್ಣ ರೈಲ್ವೆನಿಲ್ದಾಣ. ಹುಡುಕುತ್ತಿದ್ದೆ. ಎಲ್ಲರೂ ಹೊರಟುಹೋಗಿದ್ದರು. ಆದರೂ ಕಣ್ಣು ಮನ ಅತ್ತಿತ್ತ ಚಲಿಸಿದುವು. ಇದೇ ಸ್ನೇಹದ ಮಹತ್ವವೆಂದು ಕಾಣುತ್ತದೆ ! ನನ್ನ ಲಗ್ಗೇಜ್ ಹಿಡಿದು ನಡೆದು ಕೊಂಡು ಹೊರಟೆ. ಕಾನ್‌ಸ್ಟೇಬಲ್‌ನನ್ನು ವಿಚಾರಿಸಿದೆ; ಜನರಲ್ ಆಸ್ಪತ್ರೆ ಯಾವ ಕಡೆ, ಎಷ್ಟು ದೂರ ಎಂದು. ಬಹಳ ಹತ್ತಿರ, ನಡೆದುಹೋಗಬಹುದೆಂದ. ಅಂತೂ ಸಿಕ್ಕಿತು ಜನರಲ್ ಆಸ್ಪತ್ರೆ.

ಬ್ರಿಡ್ಜ್‌ಎಂಡ್ ಸಣ್ಣ ಸುಂದರ ಊರು. ಪಕ್ಕದಲ್ಲಿ ನದಿಯೊಂದು ಹರಿಯುತ್ತದೆ. ಅದಕ್ಕೆ ಸಣ್ಣ ಸೇತುವೆಯೊಂದನ್ನು ಕಟ್ಟಿದ್ದಾರೆ. ಅದರಿಂದಲೇ ಆ ಊರಿಗೆ ಬ್ರಿಡ್ಜ್‌ಎಂಡ್ ಎಂದು ಹೆಸರಿದ್ದಿರಬೇಕು. ಲಂಡನ್, ಲಿವರ್‌ಪೂಲ್ ಎಡಿನ್‌ಬರೊನಂತೆ ಮಿಂಚಿನ ವಾಹನಗಳಿಲ್ಲ, ಆತುರದ ಜನರಿಲ್ಲ. ಗಿಜಿ ಗಿಜಿ, ಭೋರ್ಗರೆತ ಯಾವುದೂ ಇಲ್ಲ.

ಡಾ|| ವಾಡಗಿಯವರ ಕ್ವಾರ್ಟರ್ಸ್ ತಲುಪಿದೆ. ಅವರ ಕೊಠಡಿಗೆ ಬೀಗ ಹಾಕಿತ್ತು. ವಿಚಿತ್ರವಾಗಿ ಕಂಡಿತು. ಒಳ್ಳೇ ಕೆಲಸ ಮಾಡಿದೆನಲ್ಲ ಎಂದು ಮನಸ್ಸು ಪೆಚ್ಚಾಯಿತು ; ನಂಬಿ ಇಲ್ಲಿಯ ತನಕ ಬಂದೆನಲ್ಲ ಎಂದು ಮರುಗಿತು. ಪಕ್ಕದಲ್ಲಿದ್ದ ನಾಲ್ಕಾರು ವೈದ್ಯರಲ್ಲಿ ಒಬ್ಬರನ್ನು ವಿಚಾರಿಸಿದೆ. "ಕುಳಿತುಕೊಳ್ಳಿ, ವಾರ್ಡಿಗೆ ಹೋಗಿದ್ದಾರೆ. ಬರುತ್ತಾರೆ" ಎಂದಾಗ ಸಮಾಧಾನವಾಯಿತು. ಡಾ|| ವಾಡಗಿ ಬಂದರು. "ಏನ್ ನೀವು, ರೈಲ್ವೆ ಸ್ಟೇಷನ್ನಿಗೆ ಬರಬಹುದಿತ್ತಲ್ಲ" ಎಂದೆ, ಬೇಸರದ ದನಿಯಲ್ಲಿ.

"ಏ, ಎಂಥಾದ್ರಿ. ಮೂರು ಸಾರಿ ಸ್ಟೇಷನ್ನಿಗೆ ಬಂದು ಆ ಕಡೆಯಿಂದ ಬರೋ ರೈಲುಗಾಡಿ ಎಲ್ಲಾ ನೋಡಿದ್ದಾಯಿತು. ಹಾಗೇ ಬಸ್ ನಿಲ್ದಾಣಕ್ಕೂ ಅಲೆದೆ. ಮತ್ತೆ ನೀವು ಎಷ್ಟುಹೊತ್ತಿಗೆ ಬರುತ್ತೀರೆಂದು ಬರೆದಿಲ್ಲ. ನನಗೂ ಮನಸ್ಸಿಗೆ ಬೇಜಾರಾಗಿ ವಾರ್ಡ್ ಕಡೆ ಹೋದೆ. ನೀವ್ ಬರೋಲ್ಲ ಅಂತ್ಲೂ ಅಂದ್ಕೊಂಡೆ."

ನಿಜ, ಇದೇ ಸ್ನೇಹದ ಮಹತ್ವ! ಲಿವರ್‌ಪೂಲ್‌ನಲ್ಲಿ ಬಿರಾದರ್, ರಾಮಣ್ಣ ಅವರ ಆತಿಥ್ಯ, ಕಾನ್‌ಫರೆನ್ಸ್‌ನ ಮುಖ್ಯ ಕಲಾಪಗಳೆಲ್ಲಾ ಪಠಿಸಿದ್ದಾಯಿತು. ಊರಿನ ನದೀ ತೀರದಲ್ಲಿ ಅಡ್ಡಾಡಿದೆವು.

ಭಾನುವಾರ ಬ್ರಿಸ್ಟಲ್ ನಗರಕ್ಕೆ ಹೊರಟೆವು. ಅಲ್ಲಿಗೆ ಸುಮಾರು ೪೦ ಮೈಲಿ ದೂರ. ಸಿಟಿ ಸುಂದರ. ನನಗೆ ಬಹಳ ಹಿಡಿಸಿತು. ಸಮುದ್ರ ಕೊಲ್ಲಿಯ ನೀರಿನ ತಳಭಾಗದಲ್ಲಿ ಸುರಂಗ ಮಾರ್ಗವಿದೆ. ಅಲ್ಲಿನ ಮೃಗಾಲಯ ನೋಡತಕ್ಕದ್ದು. ಬಿಳಿ ಹುಲಿ, ಬಿಳಿಕೋತಿ, 'ಎರಡು ಕಡೆ ತಲೆ' ಇರುವ ಹಾವಿನಂತಹ ಪ್ರಾಣಿ—ಇವುಗಳು ಆಕರ್ಷಕ. ವಾಪಸ್ ಬರುವಾಗ ಕಾರ್ಡಿಫ್‌ನಲ್ಲಿ ಊಟ. ಅಲ್ಲಿ ಪ್ರಸಿದ್ಧವಾದ ಇಂಡಿಯಾದವರು ತಯಾರಿಸುತ್ತಿದ್ದ ಕಾರಾಸೇವೆ ತೆಗೆದುಕೊಂಡರು ವಾಡಗಿ. ಬರುವಾಗ ದೂರದಲ್ಲಿದ್ದ 'ಇಂಡಿಯಾ ರಬ್ಬರ್ ಫ್ಯಾಕ್ಟರಿ' ನನ್ನ ಗಮನ ಸೆಳೆಯಿತು.

ಮಾರನೆ ದಿನ ಆಸ್ಪತ್ರೆಯ ಕ್ಯಾಂಟೀನ್‌ನಲ್ಲಿ ಊಟ. ನನಗಾಗಿ ಸ್ಪೆಷಲ್. ಅಡಿಗೆಯಾಕೆ ನನಗೆ ಊಟ ರುಚಿಸಲು ಟೊಮ್ಯಾಟೊ ಹಾಕಿ ಸಾರಿನ ತರಹ ಏನೋ ತಯಾರಿಸಿದ್ದರು. ಹುರಿದಿಟ್ಟ ಕುರಿ ಮಾಂಸ ರುಚಿಸಿತು. ಬಡಿಸುತ್ತಾ "ನೀವೇಕೆ ಬೀಫ್ ತಿನ್ನುವುದಿಲ್ಲ. ಇದು ೨೦ನೇ ಶತಮಾನ."

"ನನಗೆ ಅಭ್ಯಾಸವಿಲ್ಲ, ಹಿಡಿಸದು. ಅಲ್ಲದೆ ನಾವದನ್ನು ತಿನ್ನುವುದಿಲ್ಲ."

"ಅಂತಹ ಆಹಾರ ಏಕೆ ಬೇಡ ? ನಿಮ್ಮ ದೇಶದ ಆಹಾರ ಅಭಾವ ಕೃತಕ, ಅಲ್ಲಿನ ಅನೇಕ ಮಕ್ಕಳ ರೋಗ ಸಸಾರಜನಕವಿಲ್ಲದೆ. ತಿನ್ನುವವರಿಗೆ ತಿನ್ನಲು ಬಿಡಲೊಲ್ಲಿರಿ, ಬೇಕಾದ ಪುಷ್ಟಿಕರ ಆಹಾರ ಒದಗಿಸಲೊಲ್ಲಿರಿ" ಎಂದು ನಕ್ಕರು.

"ನಿಮಗೆ ಇದೆಲ್ಲಾ ಹೇಗೆ ತಿಳಿಯಿತು"

"ನಾನೊಮ್ಮೆ ಇಂಡಿಯಾಕ್ಕೆ ಪ್ರವಾಸಿಯಾಗಿ ಹೋಗಿದ್ದೆ."

"ಊಟ ಹಿಡಿಸಿತೆ ನಿಮಗೆ ? ಡಾ|| ವಾಡಗಿ ೩ ದಿನಗಳಿಂದ ನನಗೆ ಹೇಳಿದ್ದರು ನಿಮ್ಮ ವಿಚಾರ."

"ಧನ್ಯವಾದಗಳು. ನನ್ನನ್ನು ಆದರದಿಂದ ನೋಡಿಕೊಂಡಿರಿ"

"ಮತ್ತೆ ಬನ್ನಿ, ನಮಸ್ಕಾರ."

೮

ಮಂಗಳವಾರ ಎಡಿನ್‌ಬರೋ ಸೇರಿದೆ. ದಾರಿ ಉದ್ದಕ್ಕೂ ಅಡಿಗೆಯವಳ ಆತಿಥ್ಯ, ಆದರದ ನೆನಪು ಆಗಾಗ್ಗೆ ಮರುಕಳಿಸುತ್ತಿತ್ತು. ಇಂಡಿಯಾದ ಬಗ್ಗೆ ಆಕೆ ಅಷ್ಟೊಂದು ವಿಷಯ ಗ್ರಹಿಸಿದ್ದಾಳೆ. ದೇಶದ ಹಿತದೃಷ್ಟಿ ಉಳ್ಳವರಿಗೆ ಮಾತ್ರ ಅದು ಸಾಧ್ಯ. ನಾಲ್ಕೇ ವಾಕ್ಯಗಳಲ್ಲಿ ಇಂಡಿಯಾದ ಧರ್ಮ ಕರ್ಮಗಳ ಬಗ್ಗೆ ಸಂಸ್ಕೃತಿಯ ಬಗ್ಗೆ ಆಕೆ ಹೇಳಿ ಮುಗಿಸಿದ್ದಳು. ಸತ್ಯ ಕಟುವಾಗಿತ್ತು. ಆಗಲೇ ಅದಕ್ಕೆ ತಕ್ಕ ತೂಕ, ಘನತೆ !

ದಿನಚರಿಯ ಅದೇ ದಿನಗಳು. ಶನಿವಾರ ವಾರದ ಕ್ಲಿನಿಕಲ್ ಮೀಟಿಂಗ್, ಅಂದರೆ ಎಲ್ಲಾ ತರಹದ ತಜ್ಞರು ಸೇರಿ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಾರೆ. ಸ್ಥಳಾಭಾವವಿದ್ದರೆ ಅನೇಕರು ನಿಂತೇ ಕೇಳುತ್ತಾರೆ. ಒಮ್ಮೆ ಪ್ರಖ್ಯಾತ ಪೆಥಾಲಜಿಸ್ಟ್ ಕ್ಯಾನ್ಸರ್ ಗಡ್ಡೆ ಪಿತ್ತಜನಕಾಂಗದ್ದು ಎಂದು ಹಿಂದಿನ ಶನಿವಾರ ಹೇಳಿದ್ದರಂತೆ. ಈ ಶನಿವಾರ ಕಾರ್ಯಕ್ರಮದ ಆದಿಯಲ್ಲೇ ಎದ್ದು ನಿಂತು "ಕ್ಷಮೆ ಯಾಚಿಸುತ್ತೇನೆ. ಹೋದ ವಾರದ ರಿಪೋರ್ಟ್ ಸರಿಯಲ್ಲ. ಕ್ಯಾನ್ಸರ್ ಗಡ್ಡೆ ಮೂತ್ರಪಿಂಡದಲ್ಲಿ ಹುಟ್ಟಿ ಪಿತ್ತಜನಕಾಂಗಕ್ಕೆ ಹರಡಿತ್ತು. ಪಿತ್ತಜನಕಾಂಗದಲ್ಲೇ ಮೂಡಿದ್ದಲ್ಲ" ಎಂದರು. ಎಂಥ ವ್ಯಕ್ತಿತ್ವ ! ಗೌರವಾನ್ವಿತ ದೊಡ್ಡ ವ್ಯಕ್ತಿಗಳ ನಮ್ರತೆಯಿಂದ ತಪ್ಪೊಪ್ಪಿಗೆ ! ಆ ದಿನ ಕಿರಿಯ ವೈದ್ಯರೊಬ್ಬರು

ಒಂದು ರೋಗದ ವಿಚಾರದಲ್ಲಿ ಮಾಡಿದ ತರ್ಕ ಪ್ರೊಫೆಸರ್‌ಗಳಿಂದ ಚಪ್ಪಾಳೆ ಹೊಡೆಸಿತ್ತು.

ವಿದ್ಯೆ ಯಾರ ಸ್ವತ್ತು ? ಜ್ಞಾನಕ್ಕೆ ವಯಸ್ಸಿಲ್ಲ. ಅಂತರವಿಲ್ಲ. ಮೇಲು ಕೀಳೆಂಬುದಿಲ್ಲ. ದೊಡ್ಡವರು ಅದನ್ನು ಮೆಚ್ಚಿದರೆ ಅದು ಅವರ ದೊಡ್ಡತನದಿಂದಾಗಿ.

ವಾಡಗಿಯವರು ತಮ್ಮ ಎಮ್.ಆರ್.ಸಿ.ಪಿ. ಮೊದಲನೇ ಪರೀಕ್ಷೆಗೆಂದು ಎಡಿನ್‌ಬರೋಗೆ ಬಂದಿದ್ದರು. ನನ್ನ ಕೊಠಡಿಯಲ್ಲೇ ವಾಸ. ಬೆಳಿಗ್ಗೆ ತಿಂಡಿ, ಓದು ; ೧೧ ಗಂಟೆಗೆ ಟೀ, ಓದು ; ಮಧ್ಯಾಹ್ನ ಲಂಚ್, ಓದು ; ರಾತ್ರಿ ಊಟ, ಮಧ್ಯಾರಾತ್ರಿವರೆಗೂ ಓದು ; ಹೀಗೆ ಸಾಗಿತ್ತು ಪರೀಕ್ಷೆಯ ತಯಾರಿ. ರಾತ್ರಿ ಊಟ ಆ ದೇಶದಲ್ಲಿ ೬-೩೦ಕ್ಕೆ. ಆದ್ದರಿಂದ ಆಗಾಗ್ಗೆ ಮಧ್ಯರಾತ್ರಿಯಲ್ಲಿ ನಾನು ಆಮ್ಲೆಟ್ ಮಾಡಿಕೊಡುತ್ತಿದ್ದೆ ಯುದ್ಧದ ಶಸ್ತ್ರಾಭ್ಯಾಸಿಗೆ ; ನಾನೂ ರುಚಿ ನೋಡುತ್ತಿದ್ದೆ.

ಅಂದು ಭಾನುವಾರ. ಪರೀಕ್ಷಾಭ್ಯರ್ಥಿಗೆ ವಿರಾಮ ; ಮಧ್ಯಂತರ. ದಿ ರಾಯಲ್ ಥಿಯೇಟರ್ಸ್‌ನಲ್ಲಿ ಪ್ರಸಿದ್ಧ 'ಹ್ಯಾಮ್ಲೆಟ್' ನಾಟಕ. ಇಬ್ಬರೂ ಹೊರಟೆವು. ಪ್ರೇಕ್ಷಕರ ಗ್ಯಾಲರಿ ತುಂಬಿತ್ತು. ಕೆಳಗೆ ಮಧ್ಯದಲ್ಲಿ ವೃತ್ತಾಕಾರದ ಸ್ಟೇಜ್. ಸ್ಟೇಜ್‌ನ ಅರ್ಧಭಾಗದಲ್ಲಿ ಮುಂದೆ ಒಂದು ಸೀನ್ ನಡೆಯುತ್ತಿದ್ದರೆ ಅದರ ಹಿಂದಿನ ಅರ್ಧಭಾಗದಲ್ಲಿ ಮುಂದಿನ ಸೀನ್‌ಗೆ ಸಿದ್ಧತೆಗಳು ನಡೆಯುತ್ತವೆ. ಸ್ಟೇಜ್ ತಿರುಗುತ್ತದೆ. ಆಗ ಹಿಂದೆ ಸಿದ್ಧಗೊಂಡಿದ್ದ ಸೀನ್ ಮುಂದೆ ಪ್ರದರ್ಶನಕ್ಕೆ ಸಜ್ಜಾಗಿರುತ್ತದೆ. ಹ್ಯಾಮ್‌ಲೆಟ್ ಪಾತ್ರಾಭಿನಯ ಪ್ರಶಂಸನೀಯ. ಒಫಿಲಿಯಾ ಶವಸಂಸ್ಕಾರ ಅನೇಕರ ಕಣ್ಣು ಒದ್ದೆ ಮಾಡಿತ್ತು. ದುರಂತ ನಾಟಕ ಮುಗಿದು ನಾವೂ ಶೋಕತಪ್ತರಾಗಿ ಹೊರಬಿದ್ದೆವು. ಆಗಲೇ ರಾತ್ರಿ ೧೦ ಗಂಟೆಯ ಸಮಯ. ಬಸ್ಸಿಗಾಗಿ ಕಾಯುತ್ತಿದ್ದು ಆತುರದಲ್ಲಿ ಮಿಡಿವೇಲ್ಲಿ ಡ್ರೈವ್ ಕಡೆ ಹೋಗುವ ಬಸ್ಸಲ್ಲಿ ಕುಳಿತೆವು. ಕಂಡಕ್ಟರ್‌ಗೆ "ಸಿನ್ಹೀಸ್ ರೋಡ್ ಪ್ಲೀಸ್" ಎಂದು ಹಣ ಕೊಡಲು ಹೋದಾಗ ತಿಳಿಯಿತು ಅದು ನಾವು ಹತ್ತಬೇಕಾದ ಬಸ್ಸಲ್ಲ ಎಂದು. ಮಧ್ಯೆ ಇಳಿದದ್ದಾಯಿತು. ಆಗ ಗಂಟೆ ೧೧ರ ಸಮಯ. ಛಳಿ ಹೆಚ್ಚಾದಂತೆ ಕಂಡಿತು. ದಪ್ಪ ಮಂಜಿನಿಂದಾಗಿ ಬರೀ ಬೀದಿದೀಪಗಳು, ಅಲ್ಲೊಂದಿಲ್ಲೊಂದು ಬಂಗಲೆ ದೀಪಗಳು ಮಂಕಾಗಿ ಬೆಳಕು ಚೆಲ್ಲಿದ್ದವು. ಕ್ಯೂನಲ್ಲಿದ್ದವರನ್ನು "ನಾವು ಸಿನ್ಹೀಸ್ ರೋಡ್‌ಗೆ ಹೋಗಬೇಕು,

ಬಸ್ ನಂಬರ್ ತಿಳಿಸಿ"ರೆಂದಾಗ ಇಬ್ಬರು ಹುಡುಗರು "ಹೋ ! ತಾಳಿ" ಎಂದು ಮೂಗಿನ ಮೇಲೆ ಬೆರಳಾಡಿಸಿ "ಹಾ, ನಂ. ೫೬, ನಿಮ್ಮಲ್ಲಿ ಹಣವಿದೆಯೇ, ಇಲ್ಲದಿದ್ದರೆ ಸಂಕೋಚ ಬೇಡ, ತೆಗೆದುಕೊಳ್ಳಿ" ಎಂದು ಪರ್ಸ್ ತೆಗೆದರು. "ಥ್ಯಾಂಕ್ಸ್, ನಾವು ಅಲ್ಲಿನ ಸಿಕ್ ಚಿಲ್ಡ್ರನ್ ಆಸ್ಪತ್ರೆಯಲ್ಲಿ ಡಾಕ್ಟರ್ಸ್" ಎಂದಾಗ "ಸಾರಿ ಡಾಕ್ಟರ್ಸ್, ಅದೋ ನಿಮ್ಮ ಬಸ್, ಗುಡ್‌ನೈಟ್" ಎಂದರು. ನಾವು ಬಸ್‌ಹತ್ತಿ ಮರೆಯಾದೆವು. ಕ್ವಾರ್ಟರ್ಸ್ ತಲುಪಿದಾಗ ಆಶ್ಚರ್ಯ ಸಂತಸ ಒಟ್ಟಿಗಾದವು. ಕರೆಗಂಟೆ ಶಬ್ದಕ್ಕೆ ಬಾಗಿಲು ತೆರೆದವರು ಡಾ|| ಎಸ್. ಎಸ್. ದೇಶಪಾಂಡೆ, ಗುಂಡಬಾವಿ, ಬಿಜಾಪುರದವರು ! ಸೌತ್‌ವೇಲ್ಸ್‌ನ ಗ್ಲಾಮರ್‌ಗಾನ್‌ನಲ್ಲಿರುವ ನೀತ್ ಜನರಲ್ ಆಸ್ಪತ್ರೆಯಲ್ಲಿ ಇ.ಎನ್.ಟಿ. ತಜ್ಞರಾಗಿ ಕೆಲಸ ಅವರಿಗೆ. ಎಫ್.ಆರ್.ಸಿ.ಎಸ್. ಪರೀಕ್ಷೆಗಾಗಿ ಬಂದಿದ್ದರು. ಆಗಲೇ ವಯಸ್ಸು ೫೦ ದಾಟಿತ್ತು. ನನಗೆ ವಾಡಗಿಯವರಿಂದ ಪರಿಚಯವಾಯಿತು. ಕುಶಲಪ್ರಶ್ನೆಯಾದ ಬಳಿಕ "ನಿಮಗೇಕೆ ಈ ವಯಸ್ಸಿನಲ್ಲಿ ಇಲ್ಲಿನ ಪರೀಕ್ಷೆಯ ಹುಚ್ಚು" ಎಂದೆ. "ನೋಡಿ ಡಾ|| ಗೋಪಾಲ್ ನಿಮಗೆ ಗೊತ್ತಿರೋ ವಿಷಯ. ನಾನು ಬಾಂಬೆಯಲ್ಲೇ ಡಿ.ಎಲ್.ಓ (ಡಿಪ್ಲೊಮ) ಮಾಡಿ ಪ್ರಾಕ್ಟೀಸ್ ಮಾಡುತ್ತಿದ್ದೆ, ಸಂಪಾದನೆ ಸುಮಾರು. ಅದೇ ಕೆಲಸವನ್ನು ಎಫ್.ಆರ್.ಸಿ.ಎಸ್. ಎಂದು ನಾಮ ಫಲಕ ಮಾಡಿದರೆ ಸಂಪಾದನೆ ೩-೪ ರಷ್ಟು ಅಧಿಕ. ಆದ್ದರಿಂದ ಈ ವಯಸ್ಸಿನಲ್ಲಿ ಹೆಂಡತಿ ಮತ್ತು ೩ ಮಕ್ಕಳನ್ನು ಬಿಟ್ಟು ಬಂದಿದ್ದೇನೆ. ಬಂದು ಈಗಾಗಲೇ ೩ ವರ್ಷವಾಯಿತು. ಪರೀಕ್ಷೆಗಳಲ್ಲಿ ನಪಾಸ್. ಕೆಲಸ ಮಾಡಿ ಓದುವುದು ಕಷ್ಟದ ಕೆಲಸ. ಕೆಲಸವಿಲ್ಲದಿದ್ದರೆ ಊಟ ವಸತಿ, ಪರೀಕ್ಷೆ ಶುಲ್ಕಕ್ಕೆ ಹಣವಿಲ್ಲ. ಹಿಂದಿರುಗೋಣವೆಂದರೆ—ಧರ್ಮಸಂಕಟ, ನನ್ನ ಗ್ರಹಚಾರ" ಎಂದು ನೊಂದರು.

ಅದೊಂದು ದಿನ ಮಿ|| ರೊಬಾರ್ಟ್ಸ್ ನನ್ನನ್ನು ತಮ್ಮ ಕೊಠಡಿಗೆ ಕರೆ ಕಳುಹಿಸಿದರು. ಸಾಯಂಕಾಲ ಗಂಟೆ ೪-೩೦ ಇದ್ದಿರಬಹುದು. "ಹೇಗಿದ್ದೀರಾ ಬನ್ನಿ ಬನ್ನಿ, ಕುಳಿತುಕೊಳ್ಳಿ. ಪ್ರೊ|| ಎ. ಡಬ್ಲ್ಯೂ. ವಿಲ್ಕಿನ್‌ಸನ್‌ರವರು ಲಂಡನ್ನಿನಿಂದ ಬಂದಿದ್ದರು. ನಿಮ್ಮ ಬಗ್ಗೆ ವಿಚಾರಿಸಿದೆ. ಅದಕ್ಕೆ ಅವರು ಅಕ್ಟೋಬರ್ ತಿಂಗಳಲ್ಲಿ ನಿಮ್ಮನ್ನು ಕಳುಹಿಸಿ ಎಂದಿದ್ದಾರೆ. ಅಂದರೆ ನೀವು ಅಲ್ಲಿ ೬ ತಿಂಗಳು ಅವರ ಕೈಕೆಳಗೆ ಕೆಲಸ ಕಲಿಯಬಹುದು. ಹಾಗೇ ನಮ್ಮಲ್ಲಿ ೬ ತಿಂಗಳು ಮಾಡಿದಂತಾಗುತ್ತದೆ. ನನಗೆ ಇದೇ ಸರಿ ಎಂದು ತೋರುತ್ತದೆ.

ನೀವೇನು ಹೇಳುತ್ತೀರಿ ?" ಎಂದಾಗ, ನನಗೆ ಸಂತೋಷವೇ ಆಯಿತು. ಎಡಿನ್‌ಬರೊ ಸಿಕ್ ಚಿಲ್ಡ್ರನ್ ಆಸ್ಪತ್ರೆಯಲ್ಲಿ ಅಷ್ಟಾಗಿ ಹೊಸ ನಮೂನೆಯ ಶಸ್ತ್ರಚಿಕಿತ್ಸೆಗಳಾಗುತ್ತಿರಲಿಲ್ಲ. ಯಾವಾಗಲೋ ಒಂದರಂತೆ ಅಪರೂಪದ ಶಸ್ತ್ರ ಚಿಕಿತ್ಸೆಗಳಾಗುತ್ತಿದ್ದವು. ಅದನ್ನು ನೋಡಲು ಅನೇಕರು ಕುತೂಹಲರಾಗಿ ಬರುತ್ತಿದ್ದರು. ಅಸಿಸ್ಟ್ ಮಾಡಲು ಒಬ್ಬರಿಗೆ ಅಥವಾ ಇಬ್ಬರಿಗೆ ಅವಕಾಶವಾಗುತ್ತಿತ್ತು. ಇದೆಲ್ಲದರಿಂದ ನನಗೆ ಅಲ್ಲಿನ ಕೆಲಸ ಬೇಜಾರಾಗಿತ್ತು. ಒಂದು ಸಾರಿ ಮಿ॥ ರೊಬಾರ್ಟ್ಸ್ ಕೂಡ "ನಿಮಗೆ ಇಲ್ಲಿ ಹೆಚ್ಚಿನ ಆಸಕ್ತಿ ಇದ್ದಂತಿಲ್ಲ" ಎಂದಿದ್ದರು.

"ಪ್ರೊ॥ ಎ. ಡಬ್ಲ್ಯೂ. ವಿಲ್ಕಿನ್‌ಸನ್ ಅವರು ಲಂಡನ್ನಿನ ಗ್ರೇಟ್ ಆರ್‌ಮಂಡ್ ಸ್ಟ್ರೀಟ್‌ನಲ್ಲಿನ ಸಿಕ್ ಚಿಲ್ಡ್ರನ್ ಆಸ್ಪತ್ರೆಯಲ್ಲಿ ಹೆಸರಾಂತ ಶಸ್ತ್ರ ಚಿಕಿತ್ಸಾ ತಜ್ಞರು. ಅವರಲ್ಲಿ ಕಲಿಯುವ ಅವಕಾಶ ಬಹಳ ಕಷ್ಟದ ಪ್ರಯತ್ನ. ಆದ್ದರಿಂದ ಗ್ರೇಟ್ ಆರ್‌ಮಂಡ್ ರಸ್ತೆಯಲ್ಲಿನ ಆಸ್ಪತ್ರೆಯಲ್ಲಿ ಕೆಲಸ ಮಾಡಲು ನನಗೆ ಇಷ್ಟ. ಈ ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ತಮಗೆ ಕೃತಜ್ಞ" ಎಂದೆ.

ಈ ವಿಷಯ ಕ್ಷಣ ಮಾತ್ರದಲ್ಲಿ ಆಸ್ಪತ್ರೆಯ ಹಲವಾರು ಕಡೆ ಹಬ್ಬಿತು. ಕೆಲವರಲ್ಲಿ ಆಶ್ಚರ್ಯ, ಕೆಲವರಲ್ಲಿ ಸಂತಸ ಕಂಡುಬಂತು. "ನೀವು ಲಂಡನ್‌ಗೆ ಹೋಗುವವರಲ್ಲವೆ ? ಯಾವಾಗ ಪ್ರಯಾಣ ?" ಮುಂತಾದ ಪ್ರಶ್ನೆಗಳಿಗೆ ಆಗಾಗ್ಗೆ ನಾನು ಉತ್ತರಿಸುತ್ತಿದ್ದೆ. ಆಗಿನ ಅಲ್ಲಿನ ಸನ್ನಿವೇಶ ಲಂಡನ್ ನಗರ ಅವರಿಗೆ ಎಟುಕದಂತೆ, ಅಥವಾ ಅವರಿಗೆ ಅಲ್ಲಿಗೆ ಹೋಗುವುದೇ ಇಷ್ಟವಿಲ್ಲ ಎನ್ನುವಂತಿತ್ತು. ಈಗ ನನ್ನ ದಿನಚರಿಯ ಕೆಲಸದಲ್ಲಿನ ಘಟನೆಯೊಂದರ ನೆನಪು. ಹೊರರೋಗಿಗಳನ್ನು ನೋಡಿಕೊಳ್ಳುವ ಕೆಲಸ. ಆಕಸ್ಮಿಕ ಪೆಟ್ಟು ಬಿದ್ದ ೩-೪ ಮಕ್ಕಳು ಚಿಕಿತ್ಸೆಗೆ ಬಂದರು. ಅವರ ಹಿಂದೆಯೇ ತಂದೆ ತಾಯಿಗಳ ಆಗಮನ. ನಾನು "ಏನಾಯಿತು, ಬನ್ನಿ. ದಯವಿಟ್ಟು ಕುಳಿತುಕೊಳ್ಳಿ" ಎಂದೆ. ಹೃದಯತುಂಬಿ "ಥ್ಯಾಂಕ್ಯು ವೆರಿಮಚ್, ಡಾಕ್ಟರ್. ನಾವು ಇಂಗ್ಲೆಂಡ್‌ನಿಂದ ಎಡಿನ್‌ಬರೊ ನೋಡಲು ಬಂದ ಪ್ರವಾಸಿಗರು. ಅಕಸ್ಮಾತ್ ಹುಡುಗರು ಬಿದ್ದು ಪೆಟ್ಟಾಗಿದೆ. ದಯಮಾಡಿ ನೋಡಿ" ಎಂದಾಗ ನನಗೇಕೊ ಒಂದು ವಿಭಿನ್ನತೆ ಕಂಡಿತು. ಕ್ಷಣದಲ್ಲಿ ಪುರಿತು ಚಿಕಿತ್ಸೆ ಮಾಡಿದೆ. ಸಣ್ಣ ಪುಟ್ಟ ಗಾಯಗಳಾದ್ದರಿಂದ ಚಿಕಿತ್ಸಾ ನಂತರ ಬೀಳ್ಕೊಟ್ಟೆ. ಅಲ್ಲೇ ಇದ್ದ ನುರಿತ

೪೦ರ ಪಾದಿಯೊಬ್ಬರು “ಅಷ್ಟೇಕೆ ಆದರ ತೋರಿದಿರಿ. ಅವರು ಇಂಗ್ಲಿಷ್ ಜನ” ಎಂದಾಗ ನನ್ನ ಮನಸ್ಸಿನಲ್ಲೇನೋ ನೋವಾದಂತೆ ಕಂಡಿತು.

ಒಟ್ಟಿನಲ್ಲಿ ಅಂದು ಲಂಡನ್ ನಗರಕ್ಕೆ ಪ್ರಯಾಣ ಮಾಡುವ ದಿನ. ನನಗೆ ಸಡಗರ. ಲಗ್ಗೇಜ್ ಎಲ್ಲಾ ರೆಡಿ. ಬರ್ಟನ್ ಟೈಲರ್ಸ್‌ರಲ್ಲಿಗೆ ಅವಸರವಸರವಾಗಿ ಹೊರಟೆ. ಮೆಡೋಸ್ ದಾಟುವಾಗ ಒಬ್ಬ ಸ್ಕಾಟಿಷ್ “ಕಾಫಿ ಕುಡಿಯಲು ಸಹಾಯ ಮಾಡಿ. ನಾನು ಸೇನೆಯಿಂದ ನಿವೃತ್ತನಾದವನು” ಎಂದು ಕೈಚಾಚಿದ. ಅಕ್ಕಪಕ್ಕದವರು ನೋಡಿದರು. ನಾನು ಕಾಲು ಷಿಲ್ಲಿಂಗ್ ಕೊಟ್ಟೆ, ಆತ ಥ್ಯಾಂಕ್ಸ್ ಹೇಳಿ ಮುಂದೆ ಹೋಗಿ ಮರೆಯಾದ. ಪಕ್ಕದಲ್ಲಿದ್ದವರು ಮುಗುಳ್ನಕ್ಕರು. ಸೂಟ್ ತಂದದ್ದಾಯಿತು. ಮೊದಲೇ ಮುಂಗಡ ಬುಕ್ಕಿಂಗ್ ಆಗಿತ್ತು. ಹಿಂದಿನ ಎರಡು ದಿನಗಳೆಲ್ಲಾ ಸ್ನೇಹಿತರ ಭೇಟಿಯಲ್ಲಿ. ಮಿ॥ ರೊಬಾರ್ಟ್ಸ್‌ರವರ ಕೈಕುಲುಕಿದೆ. ನನ್ನ ಕಣ್ಣಲ್ಲಿ ನೀರು ತುಂಬಿತ್ತು. ಮಿ॥ ರೊಬಾರ್ಟ್ಸ್ ಬೆನ್ನುತಟ್ಟಿ “ಈ ಪುಸ್ತಕ ತೆಗೆದುಕೊಳ್ಳಿ; ನನ್ನ ಜ್ಞಾಪಕಾರ್ಥ. ನಾನು ಕೆಲವು ಜರ್ನಲ್‌ಗಳಲ್ಲಿ ಬರೆದ ಲೇಖನಗಳ ಪ್ರತಿ ಅಚ್ಚುಗಳಿವೆ. ಒಂದನ್ನು ಬರ್ಲಿನ್‌ನಲ್ಲಿ ಕಾನ್‌ಫರೆನ್ಸ್ ಒಂದರಲ್ಲಿ ಓದಿದ್ದೆ” ಎಂದು ಕೊಟ್ಟು “ಬೈ ಬೈ, ನನಗೆ ಬರೆಯಿರಿ” ಎಂದರು. ಮಿ॥ ಬೆಸೆಟ್ “ಡಾ॥ ಗೋಪಾಲ್ ನೀವು ಇದಕ್ಕಿಂತ ಉತ್ತಮ ಆಸ್ಪತ್ರೆಗೆ ಹೋಗುತ್ತಿದ್ದೀರಿ. ಕೊರತೆ ಏನೂ ಇಲ್ಲ ಅಲ್ಲಿ. ಗುಡ್‌ಬೈ” ಎಂದು ಹಾರೈಸಿ ಕೈ ಕುಲುಕಿದರು. ಅಲ್ಲೇ ನಿಂತಿದ್ದ ಮಿಸ್. ಐಂಗ್ಲಿಷ್ ಸದಾ ಏನು ಕಾಗದಪತ್ರಗಳಿದ್ದರೂ ಕಿಂಚಿತ್ತು ಬೇಜಾರಿಲ್ಲದೆ ನನಗೆ ನೆರವಾಗಿದ್ದರು. ಟೈಪ್‌ರೈಟರ್ ಮೇಲೆ ಅರ್ಧ ಟೈಪ್ ಆದ ಕಾಗದವಿದ್ದರೂ ತೆಗೆದು ನನ್ನ ಪತ್ರಗಳಿಗೆ ಪ್ರಾಧಾನ್ಯ ಕೊಟ್ಟು ಟೈಪ್ ಮಾಡುತ್ತಿದ್ದರು. ನಾನು “ನಿಮ್ಮ ಸಹಕಾರಕ್ಕೆ ಕೃತಜ್ಞ” ಎಂದೆ. “ನನ್ನ ಕೆಲಸ ನಿರ್ವಹಿಸಿದ್ದೇನೆ, ನಿಮಗೆ ದೇವರು ಒಳ್ಳೆಯದು ಮಾಡಲಿ” ಎಂದು ಮೌನವಾಗಿ ಮರೆಯಾದರು.

ತಾ॥ ೨೯-೧೦-೧೯೬೪ರ ರಾತ್ರಿ ೧೦-೩೦ಕ್ಕೆ ಎಡಿನ್‌ಬರೋ ಸೆಂಟ್ರಲ್‌ನಿಂದ ‘ಸ್ಕಾಟ್ಸ್‌ಮನ್’ ಸರಿಯಿತು. ಬೀಳ್ಕೊಡುವವರ, ಬೀಳ್ಕೊಂಡವರ ಆತುರ, ದುಗುಡ, ನಗೆ, ಪ್ರೀತಿವಾತ್ಸಲ್ಯ, ಬೈ ಬೈ, ಸುಖಪ್ರಯಾಣ— ಇವುಗಳೆಲ್ಲದರ ಮಧ್ಯೆ ಪ್ರಖ್ಯಾತ ‘ಸ್ಕಾಟ್ಸ್‌ಮನ್’ ಗಾಳಿಯನ್ನು ಸೀಳಿ, ಓಡಲಾರಂಭಿಸಿತು. ಆರು ತಿಂಗಳು ನನಗೆ ಆಶ್ರಯವಿತ್ತಿದ್ದ, ಸ್ವೇಚ್ಛೆಯಾಗಿ

ಓಡಾಡಿದ್ದ ಮೆಚ್ಚಿಗೆಯ ನಗರ ಹಿಂದೆ ಸರಿದು ವೇಗವಾಗಿ ಕಾಣೆಯಾಯಿತು. ದಿನವಿಡೀ ಇದ್ದ ಮುಜುಗರ ನನ್ನಲ್ಲಿ ಮಾಯವಾಗಿತ್ತು. ನನಗೇಕೋ ಮಂಕು ಬಡಿದಂತೆ! ಪರಿಚಿತರ, ಆಪ್ತರ, ಗುರುಗಳ ಸಿಂಹಾವಲೋಕನದಲ್ಲಿ ಮಗ್ನನಾದೆ. ಎಲ್ಲವೂ ಮರುಕಳಿಸಿ ಖಿನ್ನನಾದೆ. ದುಗುಡ ಹೆಚ್ಚಿ ತಡೆಯಲಾರದೆ ಕಿಟಕಿಯಾಚೆ ತಲೆ ಹಾಕಿದೆ. ರಾತ್ರಿಯ ಕಡುಕತ್ತಲಿನ ಮಂಜು ಹೊದಿಕೆಯಲ್ಲಿ ಮಿಣುಕು ದೀಪ ರಾಶಿಯನ್ನೇ ಹೊತ್ತ ಕಣಿವೆ, ಬೆಟ್ಟ, ಸರೋವರ, ಗುಡ್ಡಗಳ ಏರಿಳಿತದ ಮೆರವಣಿಗೆ! ದೂರದಲ್ಲಿ ಲಂಗರು ಹಾಕಿದ್ದ ಸಣ್ಣ ದೋಣಿಗಳು, ಮಧ್ಯಮ ಸ್ಟೀಮರ್‌ಗಳು, ಸ್ಕಾಟ್ಸ್‌ಮನ್‌ನ ಮಿಂಚಿನ ವೇಗ, ತಿರುವು, ಏರಿಳಿತಗಳ ನಾದ, ತಾಳಕ್ಕೆ, ಅಲುಕಿ ಅಳ್ಳಾಡಿದಂತೆ ತೇಲು ನರ್ತನ! ನಿಶಾಚರ ಸರೀಸೃಪಗಳಂತೆ, ಕೊಳ್ಳಿ ದೆವ್ವಗಳಂತೆ ಚಲಿಸುತ್ತಿದ್ದ ವಾಹನ ಸಾಲು, ಒಮ್ಮೆ ಪ್ರಜ್ವಲ, ಒಮ್ಮೆ ಮಸಕು, ಮತ್ತೊಮ್ಮೆ ಮರೆಯಾಗುತ್ತಿದ್ದ ಬೆಳಕು! ಜೊತೆಯಲ್ಲಿ, ಮೇಲೆ ದಿಗಂತದಲ್ಲಿ, ಆಚೆ, ಈಚೆ, ಜೊತೆಯಲ್ಲಿ ತೇಲಿ ಬರುತ್ತಿದ್ದ ನಕ್ಷತ್ರ ರಾಶಿ! ಮನಕ್ಕೆ ಪ್ರಪುಲ್ಲ, ಕಣ್ಣಿಗೆ ಸವಿ! ಜೊಂಪು ನಿದ್ರೆ, ಸಂತುಷ್ಟನಾದೆ. ಮಿಕ್ಕೆಲ್ಲವೂ ಅಗೋಚರ.

ಗಾಢನಿದ್ರೆಯಿಂದೆಚ್ಚರವಾಯಿತು. ಸ್ಕಾಟ್ಸ್‌ಮನ್‌ನ ಭೋರ್ಗರೆತ ತಣ್ಣಗಾಗಿತ್ತು. ಲಂಡನ್ನಿನ ಕಿಂಗ್ಸ್‌ಕ್ರಾಸ್ ರೈಲ್ವೆ ನಿಲ್ದಾಣದಲ್ಲಿ ಜನರ ಗದ್ದಲ, ಪ್ರಯಾಣಿಕರು ಲಂಡನ್ ಸೇರಿದ ನೆಮ್ಮದಿ, ಸಂತೋಷ, ಇಳಿವ ಆತುರಗಳ ಮಧ್ಯೆ ಬೆಳಗಿನ ಜಾವ ೫-೪೫ ಕ್ಕೆ ಸ್ಟೇಷನ್ನಿನಿಂದ ಹೊರಬಂದೆ. ಲಂಡನ್ ನಗರ ಮಂಜು ಕವಿದು ಇನ್ನೂ ನಿದ್ರೆಯಲ್ಲಿತ್ತು. ಛಳಿಗೆ ಮೈ ಅಲುಗಾಡುತ್ತಿತ್ತು. ಕ್ಯೂನಲ್ಲಿ ಟ್ಯಾಕ್ಸಿಗಾಗಿ ಕಾದೆ. ಟ್ಯಾಕ್ಸಿಯೊಂದು ಬಂತು. ನನ್ನ ಹಿಂದಿದ್ದ ಇಂಗ್ಲಿಷ್ ಪ್ರಯಾಣಿಕರನ್ನು ನೋಡಿ, ಅವರಿಗಾಗಿ ಕಾರಿನ ಬಾಗಿಲು ತೆರೆದ ಡ್ರೈವರ್. ಅವರು "ಇಲ್ಲ, ಅವರನ್ನು ಕರೆದೊಯ್ಯಿರಿ" ಎಂದು ಹೇಳಿ, ನನ್ನನ್ನು "ನೀವು ಕುಳಿತುಕೊಳ್ಳಿ" ಎಂದರು. ನಾನು ಟ್ಯಾಕ್ಸಿಯಲ್ಲಿ ಕುಳಿತೆ, ಇದಕ್ಕೆ ಕಾರಣ ತಿಳಿಯಲಿಲ್ಲ. ಬಹುಶಃ ನನ್ನಲ್ಲಿದ್ದ ಒಂದೇ ಒಂದು ಸಣ್ಣ ಸೂಟ್‌ಕೇಸ್ ನೋಡಿ ಆ ದೊಡ್ಡ ಲಗ್ಸುರಿ ಟ್ಯಾಕ್ಸಿ ಯವನಿಗೆ ಪಿಚ್ ಎನ್ನಿಸಿರಬೇಕು. ಇಲ್ಲ ನನ್ನ ಹಿಂದಿದ್ದ ವಯಸ್ಸಾದ ಮಹಿಳೆಯರಿಬ್ಬರಿಗೆ ಆದ್ಯತೆ ತೋರಿದ್ದಿರಬೇಕು. ಟ್ಯಾಕ್ಸಿ ಓಡುತ್ತಿತ್ತು. "ಎಲ್ಲಿಗೆ ಸಾರ್" ಎಂದ ಡ್ರೈವರ್. ನಾನು "ಇಂಡಿಯನ್ ಸ್ಟೂಡೆಂಟ್ಸ್

ಹಾಸ್ಟೆಲ್, ೮೯, ಗಿಲ್‌ಫರ್ಡ್ ಸ್ಟ್ರೀಟ್, ಪ್ಲೀಸ್" ಎಂದೆ. ಒಂದು ೧೦-೧೫ ನಿಮಿಷದಲ್ಲಿ ಹಾಸ್ಟೆಲ್ ತಲುಪಿತ್ತು ಟ್ಯಾಕ್ಸಿ. ಮೀಟರ್‌ನಂತೆ ೩ ಷಿಲ್ಲಿಂಗ್ ಕೊಟ್ಟೆ. "ಥ್ಯಾಂಕ್ಯು, ಟಿಪ್ಸ್ ಪ್ಲೀಸ್" ಎಂದಾಗ ಮತ್ತೊಂದು ಷಿಲ್ಲಿಂಗ್ ಕೊಟ್ಟೆ. "ಥ್ಯಾಂಕ್ಯು ಸಾರ್" ಎಂದು ಮುಗುಳ್ನಕ್ಕ. ನಂತರ ಮರೆಯಾದ. ಟಿಪ್ಸ್ ಸಾಮಾನ್ಯವಾಗಿ ಲಂಡನ್ ನಗರದಲ್ಲಿ ಬಳಕೆಯಲ್ಲಿದೆ. ಎಡಿನ್‌ಬರೋನಲ್ಲಿ ಅಷ್ಟಾಗಿ ಅದರ ಬಳಕೆಯು ನನಗೆ ಕಾಣಲಿಲ್ಲ. ಹೇರ್‌ಕಟಿಂಗ್‌ಗೆ ಹೋದರೆ ಒಂದು ಷಿಲ್ಲಿಂಗ್ ಟಿಪ್ಸ್ ಉಂಟು. ಕೆಲವು ಕೆಫೆಟೇರಿಯಾ ಮತ್ತು ಹೋಟೆಲ್‌ಗಳಲ್ಲಂತೂ ಸರ್ವೇಸಾಮಾನ್ಯ. ಜೀವನದಲ್ಲಿ ಹಾಸು ಹೊಕ್ಕಾಗಿ ಬಂದಿದೆ, ಆದ್ದರಿಂದ ಅದರ ಅರಿವು ಹೊಸಬರಿಗೆ ಮಾತ್ರ.

ಛಳಿಯಲ್ಲಿ ಲಗ್ಗೇಜ್ ಕೆಳಗಿಟ್ಟು ಕರೆಗಂಟೆ ಬಾರಿಸಿದೆ. ಉತ್ತರವಿಲ್ಲ. ಪುನಃ ಬಾರಿಸಿದೆ. ಗಂಟೆಯನಾದ ಒಳಗಿನಿಂದ ಹೊರಗೆ ಬಂತು. ಬಾಗಿಲು ಮಾತ್ರ ತೆರೆಯಲಿಲ್ಲ. ಚಿಲಕ ಅಲ್ಲಾಡಿಸಿದೆ. ಅದೂ ನಿಷ್ಪ್ರಯೋಜನ ! ಅಂಚೆ ಕಾಗದಗಳನ್ನು ಹಾಕುವ ಸಣ್ಣ ಕಿಂಡಿಯಿಂದ ಇಣುಕಿ ನೋಡಿದೆ. ಯಾರೋ ಮೇಲಿಂದ ಎದುರಿಗಿದ್ದ ಮೆಟ್ಟಿಲಿನಲ್ಲಿ ಇಳಿಯುತ್ತಿದ್ದರು. ಸಧ್ಯ ಎಂದುಕೊಂಡೆ. ಆದರೆ ಹತ್ತಾರು ನಿಮಿಷವಾದರೂ ಸಹ ಬಾಗಿಲು ತೆರೆಯಲಿಲ್ಲ. ಆ ವ್ಯಕ್ತಿ ಮರೆಯಾಗಿದ್ದರು. ತಮಾಷೆಯಾಗಿ ಕಂಡಿತು.

ಗಂಟೆ ೬-೩೦ ಕ್ಕೆ ಬಾಗಿಲು ತೆರೆಯಿತು. ಸೂಟುಧಾರಿ. ೫೦ ಇದ್ದಿರಬಹುದು ವಯಸ್ಸು. ಹೊರಬಂದರು. ನಾನು ಒಳಗೆ ಹೋದೆ. ಅಲ್ಲಿದ್ದ ಹಾಲ್‌ನಲ್ಲಿ ಕುಳಿತೆ. ಎಲ್ಲವೂ ತಣ್ಣಗೆ ! ಸೋಫ, ಮೇಜು, ಇತರ ಕುರ್ಚಿಗಳೆಲ್ಲಾ ತಣ್ಣಗೆ. ಹಾಲ್‌ನಲ್ಲೊಂದು ಓವೆನ್ ಇತ್ತು. ಅದೂ ತಣ್ಣಗಿತ್ತು. ಹಾಸ್ಟಲ್ ಕಟ್ಟಡ ಛಾರ್ಲ್ಸ್‌ಡಿಕನ್ಸ್ ಕಾಲದ ಕಟ್ಟಡ ಒಂದರ ವರ್ಣನೆಯಂತಿತ್ತು. ಹಳೇ ಕಟ್ಟಡ, ಮೂರು ಅಂತಸ್ತಿನದು. ಮರದ ಮೆಟ್ಟಿಲುಗಳು ಬಿಗಿ ತಪ್ಪಿ ಅಲುಗಾಡುತ್ತಿದ್ದವು. ಮೇಲಿನ ಹೊದಿಕೆ ಎರಡು ಪದರದ ಹೆಂಚಿನದು. ಅಲ್ಲಿದ್ದವರೆಲ್ಲಾ ನಮ್ಮವರೆ. ಮನೆಕೆಲಸಕ್ಕೆ ಮಾತ್ರ ಇಟಲಿ ದೇಶದ ಕೆಲವರಿದ್ದರು. ಒಬ್ಬಿಬ್ಬರನ್ನು "ಹಲೊ" ಎಂದು ವಿಷಯ ತಿಳಿಸಿದೆ. "ಕುಳಿತುಕೊಳ್ಳಿ. ವಾರ್ಡನ್ ೭ ಗಂಟೆಗೆ ಬರುತ್ತಾರೆ" ಎಂದರು.

ಸುಮಾರು ಗಂಟೆ ೭ ಆಗಿದ್ದಿರಬೇಕು. ಬಾಗಿಲು ತೆರೆಯಿತು, ಹೊರಗೆ ಹೋದ ಸೂಟು ಧಾರಿ ಒಳಗೆ ಬಂದರು, ವಿಚಾರಿಸಿದೆ, ಅವರೇ ವಾರ್ಡನ್,

ಶ್ರೀಸೇನ್ ಎಂದು ತಿಳಿಯಿತು. ಬಂಗಾಳದವರು. ಸಾಮಾನ್ಯವಾಗಿ ಹಾಸ್ಟೆಲ್ ಬಾಗಿಲು ತೆರೆಯುವುದು ೭ ಗಂಟೆಗಂತೆ. ನನಗೆ ಒಂದು ಕೊಠಡಿ ತೋರಿಸಿದರು. ಮೂರನೇ ಅಂತಸ್ತಿನಲ್ಲಿತ್ತು. ಅಲ್ಲಿ ಎರಡು ಮಂಚ, ಒಂದು ವಾಶ್‌ಬೇಸಿನ್ ೪-೫ ಹ್ಯಾಂಗರ್‌ಗಳಿದ್ದವು. ಹಾಸಿಗೆಯ ಮೇಲೆ ಕುಳಿತೆ, ತಣ್ಣನೆ ಕೊರೆಯಿತು. ಆಗ ತಿಳಿಯಿತು, ಸೆಂಟ್ರಲ್ ಹೀಟಿಂಗ್ ನಿಜಕ್ಕೂ ಒಂದು ಭೋಗ ಪ್ರಾಧಾನ್ಯ ಉಪಯುಕ್ತವೆಂದು. ಅದು ಅಲ್ಲಿಗೆ ಎಟುಕದ್ದಾಗಿತ್ತು. ಕೆಲವು ಮಂಚಗಳು ಆಸ್ಪತ್ರೆಯ ಮಂಚಗಳು. ಅವನ್ನು ನೋಡಿ ನನಗೆ ನೆನಪಾಯಿತು. ಇಂಡಿಯಾ ದಲ್ಲಿದ್ದಾಗ ಒಮ್ಮೆ ಲಂಡನ್ನಿನ ಆಸ್ಪತ್ರೆಯ ಅಧಿಕಾರಿಗಳು ಈ ಹಾಸ್ಟೆಲ್‌ಗೆ ಕೆಲವು ಮಂಚಗಳನ್ನು ಉಚಿತವಾಗಿ ನೀಡಿದ್ದರೆಂದು ಓದಿದ್ದೆ. ಅಲ್ಲದೆ ಈ ಹಾಸ್ಟೆಲ್ಲನ್ನು ಬೇರೆ ಕಡೆಗೆ ವರ್ಗಾಯಿಸಲು ಪ್ರಯತ್ನ ನಡೆಯುತ್ತಿದೆ ಎಂದೂ ಓದಿದ್ದೆ. ಅಲ್ಲಿ ವಾರಕ್ಕೆರಡು ದಿನ ಬಿಸಿ ನೀರು ಉಳಿದ ದಿನ ತಣ್ಣೀರಿತ್ತು ಸ್ನಾನಕ್ಕೆ. ಇಂಡಿಯಾದಿಂದ ಬಂದವರಿಗೆ ೧-೨ ದಿನದ ಮಟ್ಟಿಗೆ ತಂಗುವುದಕ್ಕೆ ಒಂದು ಡಾರ್ಮಿಟರಿಯೂ ಇದೆ. ನೆಲಮಾಳಿಗೆಯಲ್ಲಿ ಅಡಿಗೆ ಮತ್ತು ಊಟದ ಮನೆಗಳಿವೆ. ಬೆಳಗಿನ ಉಪಹಾರ ೭ ರಿಂದ ೮-೩೦ರ ವರೆಗೆ. ಮತ್ತೆ ರಾತ್ರಿ ಊಟ ೬-೩೦ ರಿಂದ ೭-೩೦ ರವರೆಗೆ. ಭಾನುವಾರ ಮಧ್ಯಾಹ್ನ ಡಿನ್ನರ್, ರಾತ್ರಿ ಊಟವಿಲ್ಲ. ಉಳಿದ ದಿನ ಮಧ್ಯಾಹ್ನ ಊಟವಿಲ್ಲ. ಇದಕ್ಕೆ ಆಗ ವಾರಕ್ಕೆ ೫ ಪೌಂಡೆಂದು ನನಗೆ ಜ್ಞಾಪಕ. ರಾತ್ರಿ ಛಳಿ ತಡೆಯಲಾರದವರು ಕಾಲು ಷಿಲ್ಲಿಂಗ್, ಅಂದರೆ ಸ್ವತಂತ್ರ ಪೂರ್ವದಲ್ಲಿದ್ದ ನಾಲ್ಕಾಣೆ ಅಥವಾ ಬೆಳ್ಳಿಯ ಪಾವಲಿ ಹಾಕಿದರೆ ಕೆಲವು ಗಂಟೆ 'ಹೀಟಿಂಗ್ ಗ್ಯಾಸ್' ಹೊತ್ತಿಸ ಬಹುದು. ಅದು ಒಂದು ತೆಳ್ಳನೆಯ ಲೋಹ ; ಒಂದು ಡಬ್ಬದಲ್ಲಿ ಉರಿದು ಲೋಹ ಸುಟ್ಟು ಕೊಠಡಿಗಳನ್ನು ೧-೨ ಗಂಟೆ ಕಾಲ ಬೆಚ್ಚಗಿಡುತ್ತದೆ. ಪುನಃ ಬೇಕಾದರೆ ಮತ್ತೆ ಕಾಲು ಷಿಲ್ಲಿಂಗ್ ಹಾಕಬೇಕು. ಡೈನಿಂಗ್ ಹಾಲ್‌ನಲ್ಲಿ ಈ ವ್ಯವಸ್ಥೆ ಇಲ್ಲ. ಸೆಂಟ್ರಲ್ ಹಾಲ್‌ನಲ್ಲಿ ಟೆಲಿವಿಷನ್ ಸೆಟ್, ಮತ್ತು ಎಲೆಕ್ಟ್ರಿಕ್ ಹೀಟರ್ ಇವೆ. ಎಲೆಕ್ಟ್ರಿಕ್ ಹೀಟರ್ ಅನ್ನು ಹಾಸ್ಟೆಲ್ ಅಧಿಕಾರಿ ಗಳೇ ಸಂಜೆ ೭ ರಿಂದ ರಾತ್ರಿ ೧೦-೧೧ರ ತನಕ ಉರಿಸುತ್ತಾರೆ. ಟೆಲಿವಿಷನ್ ಕಾರ್ಯಕ್ರಮವೂ ಆಗ ಉಂಟು. ಟೆಲಿವಿಷನ್ ಒಂದು ಬಿಟ್ಟರೆ ಉಳಿದೆಲ್ಲಾ ಏರ್ಪಾಡುಗಳು ಇಂಡಿಯಾದೇಶದ ಅನೇಕಾನೇಕ ಹಾಸ್ಟೆಲ್‌ಗಳನ್ನು ನೆನಪಿಗೆ ತರುವಂತಿತ್ತು ಲಂಡನ್ನಿನ ಇಂಡಿಯನ್ ಸ್ಟೂಡೆಂಟ್ಸ್ ಹಾಸ್ಟೆಲ್.

ಎಡಿನ್‌ಬರೋನಲ್ಲಿನ ಅನುಕೂಲ ನನ್ನ ದೇಶದ ಆಗಿನ ಅನಾನುಕೂಲ ಗಳನ್ನು ಮರೆಸಿತ್ತು. ಈಗ ಮತ್ತೆ ಮರುಕಳಿಸಿತು. ನನಗೆ ನನ್ನ ದೇಶದ, ನನ್ನ ಊರಿನ ಭಾದೆ ತಲೆ ಎತ್ತಿತು. ಆದರೂ ಅದಕ್ಕೆ ಅವಕಾಶ ಕೊಡಲಿಲ್ಲ. ಕಾರಣ ಎದುರಿಗಿದ್ದ ದೊಡ್ಡ ವಿಶಾಲ ಕಟ್ಟಡವೇ ನಾನು ಕೆಲಸ ಮಾಡುವ ಆಸ್ಪತ್ರೆ. ಜಿಗುಪ್ಸೆಯಲ್ಲೊಂದು ಆಸೆ, ಅನಾನುಕೂಲಗಳೆಂದು ಅನುಕೂಲ ನನ್ನನ್ನು ಅಲ್ಲೇ ನೆಲಸುವಂತೆ ಮಾಡಿತು. ಒಂದೊಂದು ಸಾರಿ ಇಂಡಿಯನ್ ವೈ.ಎಮ್.ಸಿ.ಎ.ಗೆ ಹೋಗೋಣವೇ ಎನ್ನಿಸುತ್ತಿತ್ತು. ಅಲ್ಲಿ ಒಂದು ವಾರಕ್ಕೆ ೬ ಪೌಂಡ್ ಕೊಡಬೇಕು. ಮತ್ತೆ ಬಸ್ಸಿಗೆ ಅಥವಾ ಟ್ಯೂಬ್ ಟ್ರೈನ್‌ಗೆ ಬರ ಬೇಕು. ಆದ್ದರಿಂದ ಅಲ್ಲೇ ನೆಲೆಸಿದೆ.

ಶ್ರೀಸೆನ್ ಅವರಿಗೆ ನಾನು ಅಚ್ಚು ಮೆಚ್ಚು. ನಿಮಗೆ ಮುಂದಿನ ತಿಂಗಳು ಸಿಂಗಲ್ ರೂಮ್ ಕೊಡುತ್ತೇನೆ ಎಂದಾಗ ಧನ್ಯವಾದಗಳೆಂದಿದ್ದೆ.

ನಾನು ಉಪಹಾರಕ್ಕೆ ಇಳಿದು, ಕ್ಯೂನಲ್ಲಿ ಸೇರಿದ್ದೆ. ಉಪಾಹಾರವನ್ನು ತಟ್ಟೆಗೆ ಹಾಕುವವ ಹರಳೆಣ್ಣೆ ಮುಖದ ಬಂಗಾಳಿ. ನನ್ನ ೬ ತಿಂಗಳ ವಾಸದಲ್ಲಿ ಆತ ನಕ್ಕಿದ್ದನ್ನೇ ಕಾಣೆ. ಬೆಳಗಿನ ೮-೩೦ ಗಂಟೆ ಹೊಡೆಯುತ್ತಿದ್ದಂತೆ ಉಪಹಾರ ಕೊಡುವ ಕಿಟಕಿಯನ್ನು ದಢ್ ಎಂದು ಮುಚ್ಚಿಬಿಡುತ್ತಿದ್ದ. ಕಾರಣಾಂತರ ಕೆಲವರ ಉಪಹಾರಕ್ಕೇ ಸೊನ್ನೆ ! ಆತ ಯಾವುದೋ ಪಿ.ಎಚ್.ಡಿ.ಗೆ ಓದುತ್ತಿದ್ದರಂತೆ, ಊಟ ತಟ್ಟೆಗೆ ಹಾಕುವುದು ಪಾರ್ಟ್‌ಟೈಂ ಕೆಲಸವಾಗಿತ್ತು. ಹಾಸ್ಟೆಲ್‌ನಲ್ಲಿ ಬಹುಮಂದಿ ಬಂಗಾಳದ ವಿದ್ಯಾರ್ಥಿಗಳು. ಅಡಿಗೆ ಮಾಡು ತ್ತಿದ್ದವರೂ ಬಂಗಾಳದವರೆ. ಅಡಿಗೆಗೆ ಸಾಸಿವೆ ಎಣ್ಣೆ ಹಾಕುತ್ತಿದ್ದರು. ನನಗೆ ಊಟ ಅಷ್ಟಾಗಿ ಹಿಡಿಸಲಿಲ್ಲ.

೬

ಆ ದಿನ ನನಗೆ ವಿಶ್ರಾಂತಿ. ಕಾರಣ ಮಾರನೇ ದಿನ ಹೆಸರುವಾಸಿಯಾದ 'ದಿ ರಾಯಲ್ ಹಾಸ್ಪಿಟಲ್ ಫಾರ್ ಸಿಕ್ ಚಿಲ್ಡ್ರನ್', ಗ್ರೇಟ್‌ಆರ್‌ಮಂಡ್ ಸ್ಟ್ರೀಟ್‌ನಲ್ಲಿ ದಾಖಲಾಗಿ, ಕೆಲಸ ಶುರು. ಡಾ|| ಜೆ. ಎನ್. ಸಿಂಗ್, ಬಿಹಾರ್ ಪ್ರದೇಶದ ಡಾಲ್ಮಿಯಾ ನಗರದವರು. ರೊಹ್ತಾಸ್ ಇಂಡಸ್ಟ್ರೀಸ್‌ನಲ್ಲಿ ಮುಖ್ಯ ವೈದ್ಯರು. ಹಿಂದೆ ಎಡಿನ್‌ಬರೋನಲ್ಲಿ ಎಮ್.ಆರ್.ಸಿ.ಪಿ. ಮಾಡಿದ್ದರಂತೆ,

ಲಂಡನ್ನಿಗೆ ಬಂದಿದ್ದರು. ನಮ್ಮ ಹಾಸ್ಟೆಲ್‌ನಲ್ಲೇ ವಾಸ. ಪರಿಚಯವಾಯಿತು. ವಯಸ್ಸು ೫೫ ದಾಟಿದ್ದಿರಬೇಕು; ಅನುಭವಸ್ಥರು ಮತ್ತು ಹಿರಿಯರು. ಶ್ರೀ ಬರ್‌ಪುರ್‌ಸಿಂಗ್‌ಬ್ರಾರ್, ಲಾಹೋರ್, ಪಂಜಾಬ್; ಶ್ರೀ ಅರ್‌ಶದ್ ಮಸೂದ್, ಅಲಿಘರ್ ವಿಶ್ವವಿದ್ಯಾನಿಲಯ; ಮತ್ತು ಡಾ|| ಮೋಹಿಂದರ್ ಸಿಂಗ್, ೨, ರಸಲ್ ಸ್ಟ್ರೀಟ್, ಕಲ್ಕತ್ತ ಇವರಲ್ಲಿ ಆತ್ಮೀಯತೆ ಬೆಳೆಯಿತು. ಕೊನೆಗೆ ಸ್ನೇಹದ ಬೆಸುಗೆಯಾಯಿತು. ಬ್ರಾರ್ ಮತ್ತು ಮಸೂದ್ ಇಬ್ಬರೂ ಪಿ.ಎಚ್.ಡಿ.ಗೆ ಬಂದಿದ್ದರು. ಇಬ್ಬರೂ ನನ್ನ ವಯಸ್ಸಿನವರೇ, ಅಂದರೆ ಸುಮಾರು ೩೪ ವರ್ಷ. ಡಾ|| ಮೋಹಿಂದರ್‌ಸಿಂಗ್ ಅವರಿಗೆ ೫೦ ದಾಟಿತ್ತು. ಕಾಂಟ್ಯಾಕ್ಟ್‌ಲೆನ್ಸ್‌ನ ಬಗ್ಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಬಂದಿದ್ದರು. ಸಾಯಂಕಾಲ ಹಾಸ್ಟೆಲ್ಲಿಗೆ ಬಂದಾಗ ನಾವೈವರೂ ಒಟ್ಟಿಗೇ ಊಟ, ಟೆಲಿವಿಷನ್ ವೀಕ್ಷಣೆ, ಓದು, ಅಂಗಡಿ ಮುಂಗಟ್ಟು—ಇಲ್ಲಿ ನಾವುಗಳು ಜೊತೆ. ನಮ್ಮ ದೇಶದ ಕೆಲವು ನೆನಪು, ಅಭ್ಯುದಯ, ರಾಜಕೀಯದ ಆಗುಹೋಗುಗಳ ಬಗ್ಗೆ ಆಗಾಗ್ಗೆ ಚರ್ಚೆ. ಹೀಗೆ ದಿನಚರಿ, ಇದರಲ್ಲೇ ತೃಪ್ತಿ !

ಮಾರನೇ ದಿನ ತಾ|| ೧-೧೧-೧೯೬೮ ಮಂಗಳವಾರ, ಬೆಳಿಗ್ಗೆ ಪ್ರೊ|| ಎ. ಡಬ್ಲ್ಯೂ. ವಿಲ್ಕಿನ್‌ಸನ್‌ರನ್ನು ಹುಡುಕಿಕೊಂಡು ಹೊರಟೆ. ಅವರ ವಾರ್ಡ್‌ಗಳು ೪ ಎ. ಬಿ. ಎಂದು; ನಾಲ್ಕನೆ ಅಂತಸ್ತಿನಲ್ಲಿ. ಲಿಫ್ಟ್‌ನಲ್ಲಿ ವಾರ್ಡ್ ತಲುಪಿದೆ. ಮಿ|| ಹೊವೆಟ್ ವಿಲ್ಕಿನ್‌ಸನ್‌ರ ರಿಜಿಸ್ಟ್ರಾರ್, ವಾರ್ಡ್‌ನಲ್ಲಿದ್ದರು. ಪರಿಚಯವಾಯಿತು. ಮೃದುಮನಸ್ಸಿನ ಆಡಂಬರವಿಲ್ಲದವರು. "ಹೋ, ಸುಖಾಗಮನ. ಬನ್ನಿ ಪ್ರೊಫೆಸರಲ್ಲಿಗೆ ಹೋಗೋಣ" ಎಂದು ಕರೆದೊಯ್ದರು. ಆಸ್ಪತ್ರೆಗೆ ಲಗತ್ತಿಸಿದಂತೆ "ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್" ಗಿಲ್‌ಫರ್ಡ್ ರಸ್ತೆ ಕಡೆಗೇ ಅದರ ಮಹಾದ್ವಾರ—ನಮ್ಮ ಹಾಸ್ಟೆಲ್ ಪಕ್ಕದ ಎದುರಿಗೆ. ಪ್ರೊಫೆಸರ್ ಎದ್ದು ಕೈಕುಲುಕಿದರು. ಕುಶಲಪ್ರಶ್ನೆಯ ನಂತರ ವಾರ್ಡ್‌ಗೆ ಬಂದೆವು. ಆಗಲೇ ಡಾ|| ಸುಬ್ಬಯ್ಯ, ಮದ್ರಾಸಿನವರು ಅಲ್ಲಿದ್ದರು. ಕಾಮನ್‌ವೆಲ್ತ್ ಸ್ಕಾಲರ್‌ಶಿಪ್ ಮೇಲೆ ೬ ತಿಂಗಳು ಕೆಲಸ ಕಲಿಯಲು ಅಲ್ಲಿಗೆ ಬಂದಿದ್ದರು. ಅವರ ಪರಿಚಯ ಮಾಡಿಸಿದರು ಪ್ರೊ|| ವಿಲ್ಕಿನ್‌ಸನ್.

ಗ್ರೇಟ್ ಆರ್‌ಮಂಡ್ ಸ್ಟ್ರೀಟ್ ಆಸ್ಪತ್ರೆ ಪ್ರಪಂಚದಲ್ಲಿ ಹೆಸರಾಂತ ಮಕ್ಕಳ ಆಸ್ಪತ್ರೆಗಳಲ್ಲೊಂದು. ಅಲ್ಲಿದ್ದ ತಜ್ಞರು ನುರಿತ ಅನುಭವಿಗಳು.

ಅನೇಕ ಪುಸ್ತಕಗಳನ್ನವರು ಬರೆದಿದ್ದಾರೆ; ಇಲ್ಲವೇ ಅವುಗಳಿಗೆ ಸಂಪಾದಕ ರಾಗಿದ್ದಾರೆ. ಪ್ರತಿ ವೈದ್ಯರೂ, ಶಸ್ತ್ರಚಿಕಿತ್ಸಕರೂ ನಿಷ್ಠೆಯಿಂದ ದುಡಿಯು ತ್ತಾರೆ. ರೋಗಿಗಳನ್ನು ನೋಡುವುದರ ಜೊತೆಗೆ ಪಾಠಪ್ರವಚನ, ರಿಸರ್ಚ್. ದೇಶದ ಜರ್ನಲ್‌ಗಳಿಗೆ ಪ್ರಬಂಧ, ಲೇಖನ ಬರೆಯುವುದು ಅವರ ದಿನಚರಿ. ಎಡೆ ಬಿಡದ ಕಾರ್ಯಕ್ರಮಗಳು. ಸ್ವಲ್ಪ ಸಮಯ ಸಿಕ್ಕಿದರೆ ಗ್ರಂಥಾಲಯದಲ್ಲಿ ಓದುತ್ತಿರುತ್ತಾರೆ. ಅನೇಕ ಸಾರಿ ಮಧ್ಯಾಹ್ನ ಊಟದ ಸಮಯದಲ್ಲಿ ಕ್ಲಿನಿಕಲ್ ಮೀಟಿಂಗ್‌ಗಳಿರುತ್ತವೆ. ಅದರಲ್ಲಿ ಭಾಗವಹಿಸಲು ಅರ್ಧ ಊಟ ಮುಗಿಸಿ, ಅಥವಾ ಊಟವೇ ಇಲ್ಲದೆ ಬರುವವರಿದ್ದಾರೆ. ಮತ್ತೆ ಕೆಲವರು ಲಂಚ್ ಬಾಕ್ಸ್‌ನಲ್ಲಿನ ಸ್ಯಾಂಡ್‌ವಿಚ್‌ಗಳನ್ನು ಚರ್ಚೆಯ ಸಮಯದಲ್ಲಿ ತಿನ್ನುತ್ತ ಬರೆದುಕೊಳ್ಳುತ್ತಾರೆ. ಪ್ರತಿ ವೈದ್ಯರೂ ಸಂಶೋಧನೆ ಮಾಡಿ ಪ್ರಬಂಧಗಳನ್ನು ಲೇಖನಗಳನ್ನು ಬರೆದರೆ, ಓದಿದರೆ ಮಾತ್ರ ಅವರಿಗೆ ಬಡ್ತಿ. ಇಲ್ಲದಿದ್ದರೆ ಇಲ್ಲ. ಎಷ್ಟೋ ಮೇಧಾವಿಗಳು ಲೆಕ್ಚರರಾಗಿ ನಿವೃತ್ತರಾಗುತ್ತಾರೆ. ಪ್ರಾಧ್ಯಾಪಕರ ಹುದ್ದೆ ನುರಿತ ಮೇಧಾವಿಗಳಿಗೆ ಮಾತ್ರ. ಅದೊಂದು ಗೌರವಾನ್ವಿತ ಹುದ್ದೆ. ನಮ್ಮಲ್ಲಿನಂತೆ ಉದ್ಯೋಗದ ಹೆಸರು ಬದಲಾಯಿಸಿ ಪ್ರಾಧ್ಯಾಪಕಗಿರಿ ಕೊಡುವು ದಿಲ್ಲ. ಅರ್ಹತೆ, ಅನರ್ಹತೆಯನ್ನಳೆಯುವ ಮಾನದಂಡವಿದೆ. ಹುಟ್ಟಿನ ಮಟ್ಟ ದಿಂದ ಬಡ್ತಿ ಪಡೆಯುವುದಿಲ್ಲ. ಬಿಡುವಿನಲ್ಲಿ ರಾಜಕೀಯವಿಲ್ಲ, ಅಪಪ್ರಚಾರ ವಿಲ್ಲ. ತಪ್ಪೊಪ್ಪಿಗೆ ದೊಡ್ಡತನದ ಕುರುಹು. ಅರ್ಹರಿಗೆ ಗೌರವ, ಮನ್ನಣೆ ಉಂಟು. ಅನರ್ಹರಿಗೆ ಅಗೌರವವಿಲ್ಲ, ದೂಷಣೆ ಇಲ್ಲ. ಹಣಕ್ಕಾಗಿ ಚಿಕಿತ್ಸೆ ಅಲ್ಲ, ಯಶಸ್ಸಿಗಾಗಿ ಚಿಕಿತ್ಸೆ. ಹೆದರಿಕೆಯು ಗೌರವ ಪ್ರದರ್ಶನವಲ್ಲ; ಕರ್ತವ್ಯನಿಷ್ಠೆ ಗೌರವಾನ್ವಿತ.

ಮಧ್ಯಾಹ್ನ ೧-೨ ಗಂಟೆಗೆ ಊಟ. ಊಟಕ್ಕೆ ಸಹಾಯಧನ ಸರ್ಕಾರ ಕೊಡುತ್ತದೆ. ಆದ್ದರಿಂದ ೨ ಷಿಲ್ಲಿಂಗ್‌ಗೆ ಸೊಗಸಾದ ಊಟ ಸಿಗುತ್ತಿತ್ತು. ಪ್ರತಿ ಊಟದ ಟೇಬಲ್ ಮೇಲೆ ಹಣ್ಣಿನ ರಸದ ಸೀಸೆಗಳು, ಬೆಣ್ಣೆ, ಬ್ರೆಡ್, ಹಣ್ಣಿನ ಸಲಾಡ್ ಇರುತ್ತೆ, ಐಸ್‌ಕ್ರೀಮ್ ಕೂಡ ಇರುತ್ತೆ. ಶನಿವಾರ, ಭಾನುವಾರ ರಾತ್ರಿ ಕೋಳಿ ಮಾಂಸ; ಬೀರ್ ಕೂಡ ಉಂಟು. ಊಟ ತೆಗೆದುಕೊಳ್ಳು ತ್ತಿದ್ದೆ. ಇತರ ಕೆಲವು ಇಂಗ್ಲಿಷ್ ವೈದ್ಯರ ಪರಿಚಯದ ಜೊತೆಗೆ ಡಾ|| ಸುರೇಶ್ ಗಾರ್‌ಪುರೆ, ಡಾ|| ಎಸ್. ಆರ್. ಸಿಂಗ್ ಪರಿಚಯವಾಯಿತು. ಡಾ|| ಎಸ್. ಆರ್. ಸಿಂಗ್ ನನಗೆ ಲಿವರ್‌ಪೂಲಿನಲ್ಲಿ ಸಿಕ್ಕಿದ್ದರು. ಅವರು ಆದರದಿಂದ

ಬರಮಾಡಿಕೊಂಡರು. ಡಾ|| ಗಾರ್‌ಪುರೆ ಮಕ್ಕಳ ರೋಗಸಂಬಂಧ ಪೆಥಾಲಜಿ ಯಲ್ಲಿ ಡಿಪ್ಲೋಮ ಮಾಡಲು ಬಂದಿದ್ದರು. ಈಗ ಬಾಂಬೆಯಲ್ಲಿನ ಮಾತುಂಗ ದಲ್ಲಿ ತಮ್ಮದೇ ಆದ ಕ್ಲಿನಿಕ್ ನಡೆಸುತ್ತಿದ್ದಾರೆ. ಡಾ|| ಎಸ್. ಆರ್. ಸಿಂಗ್ ನನಗೆ ೧೯೭೬ ರಲ್ಲಿ ಡೆಲ್ಲಿಯ ಕಾನ್ಫರೆನ್ಸ್ ಒಂದರಲ್ಲಿ ಸಿಕ್ಕಿ ಅಪ್ಪಿಕೊಂಡಾಗ ಅಲ್ಲಿದ್ದವರಿಗೆ ಆಶ್ಚರ್ಯ ! ಡಾ|| ಎಸ್. ಆರ್. ಸಿಂಗ್ ಸೂಕ್ಷ್ಮ ಮಾತು ಗಾರರು. ವಿನೋದ, ಟೀಕೆಗಳಿಂದ ಕೂಡಿತ್ತು ಅವರ ಮಾತು. ಒಮ್ಮೆ ಎಡಿನ್‌ಬರೋಗೆ ಬಂದಿದ್ದರು. ಅಲ್ಲಿನ ಚಾಮರ್‌ಪ್ಲೇಸ್‌ನಲ್ಲಿ ತಂಗಿದ್ದಾಗ ಅವರ ನನ್ನ ಮೊದಲ ಭೇಟಿ. ಎಡಿನ್‌ಬರೋ ಕ್ಯಾಸೆಲ್‌ನಲ್ಲಿ ರಾಜ್ಯತ್ಯಾಗ ಮಾಡಿದ ೨ನೇ ಜೇಮ್ಸ್ ಮತ್ತು ಗತಿಸಿದ ಅವರ ಮಗನ ಉಡುಪು, ಗುರಾಣಿ ಮುಂತಾದ ಯುದ್ಧ ಸಾಮಗ್ರಿಯ ಜಾಕೋಬೈಟ್ ಸಂಗ್ರಹಾಲಯವಿದೆ. ಅದನ್ನೊಮ್ಮೆ ನಾವಿಬ್ಬರೂ ನೋಡಲು ಹೋದಾಗ ಡಾ|| ಎಸ್. ಆರ್. ಸಿಂಗ್ ತೆಗೆದ ನನ್ನ ಫೋಟೋ ನನ್ನಲ್ಲಿ ಈಗಲೂ ಉಂಟು. ಅವರ ಮಾತಿನ ಚತುರತೆಯಲ್ಲಿ ಇಂಗ್ಲಿಷ್‌ನ ಮಧ್ಯೆ ಹಿಂದಿ ನಿರರ್ಗಳವಾಗಿ ಪ್ರಯೋಗವಾಗುತ್ತಿತ್ತು. ನಾನು "ಈ ಸನ್ನಿವೇಶದಲ್ಲಿ ನೀವು ಕಾಮನ್‌ಲ್ಯಾಂಗ್‌ವೇಜ್‌ನಲ್ಲಿ ಮಾತನಾಡಬಾರದೆ ?" ಎಂದೆ. "ಹಿಂದಿ ನಮ್ಮ ಕಾಮನ್ ಲ್ಯಾಂಗ್‌ವೇಜ್, ಒಪ್ಪುತ್ತೀರೋ ? ನಾವು ೪-೬ ಜನರಿದ್ದೇವೆ. ಆದ್ದರಿಂದ ಹಿಂದಿ ಪ್ರಯೋಗ. ಅದೇ ರೀತಿ ೪-೬ ಜನ ಇಂಗ್ಲೀಷ್ ಅಥವಾ ಯೂರೋಪಿಯನ್ನರಿದ್ದಾಗ ನಾನು ಇಂಗ್ಲೀಷ್‌ನಲ್ಲೇ ಮಾತಾಡೋದು. "ಕ್ಯಾಭಾಯ್" ಎಂದಾಗ ನಾನು ನಿಶ್ಯಬ್ದ. ಅಂತೂ ಮಾತಿಗೆ ಸೋಲದ ಚತುರ !

ಡಾ|| ಗಾರ್‌ಪುರೆ ವಿಭಿನ್ನ. ಮೃದುಸ್ವಭಾವ. ನಾವು ಒಂಟಿಯಾಗಿದ್ದಾಗ ಮಾತ್ರ ಹಿಂದಿ ಉಪಯೋಗ. ಮಿಕ್ಕೆಲ್ಲಾ ಇಡೀ ದಿನ ಇಂಟರ್‌ನ್ಯಾಷನಲ್ ಲ್ಯಾಂಗ್‌ವೇಜ್—ಇಂಗ್ಲಿಷ್. ಸಮಾಜದ ಸಂಸ್ಕೃತಿಯಲ್ಲಿ ಅವಕ್ಕೆ ಮನ್ನಣೆ ಉಂಟು.

ಅದೇನೇ ಇರಲಿ. ನಾವೆಲ್ಲಾ ಒಂದು. ನಮ್ಮಲ್ಲಿ ವಿಭಿನ್ನವಿಲ್ಲ. ಈ ಒಂದುತನ, ದೇಶಭಾವನೆ ನಮಗೆ ಹೊರದೇಶದಲ್ಲಿ ಮಾತ್ರ ಲಭ್ಯ. ನಮ್ಮ ದೇಶ ದಲ್ಲೀ ಅಲಭ್ಯ. ಅಂತೂ ಹೊರದೇಶದಲ್ಲಾದರೂ ನಮ್ಮವರ ದೇಶಪ್ರೇಮ ಒಂದುತನ ಕಂಡುಬರುತ್ತದೆ. ನೆಮ್ಮದಿಯ ಸಂಗತಿ. ಇದನ್ನು ಕಾಣಲು ನಾವು ಹೊರ ದೇಶಕ್ಕೆ ಹೋಗಬೇಕು. ಅಲ್ಲಿ ಕಲಿತು ಹಿಂದಿರುಗಿದಾಗ ಮರೆಯಬೇಕು.

ಅದನ್ನು ಆ ದೇಶಕ್ಕೇ ಬಿಟ್ಟು ಬರಬೇಕು.

ಇದನ್ನು ಪ್ರಸ್ತಾಪಿಸುತ್ತ ನೆನಪೊಂದು ತಲೆ ಎತ್ತುತ್ತಿದೆ. ಡಾ|| ಮೇಜರ್ ರಹೆಮಾನ್, ೧೦, ಹ್ಯಾಂಕಲ್‌ಸನ್‌ರೋವ್. ಎಡಿನ್‌ಬರೋನಲ್ಲಿದ್ದರು, ಪರಿಚಯವಾಗಿತ್ತು. ಹೆಂಡತಿ ಮಕ್ಕಳೂ ಅಲ್ಲಿದ್ದರು. ಅವರ ಬಂಗಲೆ ಹುಡ, ಶಿಲ್ಲಿಯಾ ಬಜಾರ್, ಸಿಲ್ಹೆಟ್ ಡಿಸ್ಟ್ರಿಕ್ಟ್‌ನ ಆಗಿನ ಪೂರ್ವ ಪಾಕಿಸ್ಥಾನದವರು. ಉನ್ನತ ಶಸ್ತ್ರಚಿಕಿತ್ಸೆ ಕಲಿಯಲು ಎಡಿನ್‌ಬರೋನಲ್ಲಿದ್ದರು. ಅವರ ನನ್ನ ಸ್ನೇಹ ನಾನು ಲಂಡನ್‌ಗೆ ಹೊರಡುವ ಮುನ್ನ ನನ್ನ ಗೌರವಾರ್ಥ 'ಟೀ' ಏರ್ಪಡಿಸುವಷ್ಟು! "ಗೋಪಾಲ್‌ಭಾಯ್, ಇದೇ ನನ್ನ ನಿಮ್ಮ ಕೊನೇ ಭೇಟಿ. ಕಾರಣ ನೀವು ನನ್ನಲ್ಲಿಗೆ ಬರುವಂತಿಲ್ಲ. ನಾನಂತೂ ಪಾಕಿಸ್ಥಾನದ ರಕ್ಷಕ ಸೇನೆಯಲ್ಲಿರುವವನು. ಇಂಡಿಯಾಕ್ಕೆ ಬಂದು ನಿಮ್ಮನ್ನು ನೋಡುವುದು ಅಸಾಧ್ಯದ ಮಾತು" ಎಂದು ಕೈ ಕುಲುಕಿದರು.

ನಮ್ಮ ದೇಶದ ೪೦-೫೦ ಮೈಲಿ ಹತ್ತಿರದಲ್ಲಿ ನಾವು ಶತ್ರುಗಳು, ಅದೇ ೪೦೦೦-೫೦೦೦ ಮೈಲಿ ದೂರದಲ್ಲಿ ನಾವೇ ಮಿತ್ರರು, ಆಪ್ತರು. ಜ್ಞಾನೋದಯಕ್ಕೆ ತಪಸ್ಸೇ ಬೇಕೆ ? ಬೋಧೀವೃಕ್ಷ, ಕಮಂಡಲ, ತ್ರಿಶೂಲಗಳ ಅವಶ್ಯಕತೆಯಿದೆಯೇ ? ಅಂತೂ ಜ್ಞಾನೋದಯವಾಗಿತ್ತು !

೧೦

ಸೆಂಟ್ರಲ್ ಲಂಡನ್ನಿನಲ್ಲಿದೆ ನಾವಿದ್ದ ಹಾಸ್ಟೆಲ್. ಪಕ್ಕದಲ್ಲಿ ಅಂದರೆ ಸುಮಾರು ಒಂದು ಫರ್ಲಾಂಗ್‌ನಲ್ಲಿ ರಸ್ಸೆಲ್ ಸ್ಕ್ವೇರ್. ಸ್ವಲ್ಪ ಮುಂದೆ ಲಂಡನ್‌ಸ್ಕೂಲ್ ಆಫ್ ಎಕಾನಾಮಿಕ್ಸ್, ಬ್ರಿಟಿಷ್ ಮ್ಯೂಸಿಯಂಗಳಿವೆ. ಪಶ್ಚಿಮಕ್ಕೆ ತಿರುಗಿದರೆ ಟೊವಿಸ್ಟಾಕ್ ಸ್ಕ್ವೇರ್. ಮಹಾತ್ಮ ಗಾಂಧಿಯವರ ಸ್ಮಾರಕವಿದೆ ಅಲ್ಲಿ. ಇಂಡಿಯಾದ ಹಿತಚಿಂತನೆಯ ತಪಸ್ಸಿನೋಪಾದಿ ಆ ಸ್ಮಾರಕ ! ಪೂರ್ವಕ್ಕೆ ಓಬರ್ನ್, ಮುಂದೆ ವಿಶಾಲವಾದ ಕಿಂಗ್ಸ್‌ವೇ. ಹಾಗೇ ಎಡಕ್ಕೆ ತಿರುಗಿದರೆ ಗ್ರೇಸ್ ಇನ್. ಅಲ್ಲಿ 'ಕಾಲೇಜ್ ಆಫ್ ಸರ್ಜನ್ಸ್ ಆಫ್ ಇಂಗ್ಲೆಂಡ್' ಕಟ್ಟಡ. ಆ ದೊಡ್ಡ ಕಟ್ಟಡದಲ್ಲಿ ಅನಾಟಮಿ ಥಿಯೇಟರ್, ದೊಡ್ಡ ಗ್ರಂಥಾಲಯ, ಶವ ಕೊಯ್ಯುವ ಕೊಠಡಿಗಳಿವೆ. ಹಂಟೇರಿಯನ್ ಲೆಕ್ಚರ್ಸ್‌ಗಳು ಅಲ್ಲಿ ನಡೆಯುತ್ತವೆ. ಪ್ರಖ್ಯಾತ ಸರ್ಜನ್‌ಗಳ ನೂತನ

ಪ್ರಬಂಧಗಳ ವಿಷಯುವಾಗಿ ಈ ಲೆಕ್ಚರ್ಸ್. ಮುಂದೆ ಮೈದಾನ. ಪಕ್ಕದಲ್ಲಿ ೪-೬ ಟೆನ್ನಿಸ್ ಕೋರ್ಟ್ಸ್. ಅಲ್ಲಲ್ಲಿ ವಿಶ್ರಾಂತಿಗಾಗಿ ಆಸನ ವ್ಯವಸ್ಥೆ ಅಲ್ಲಿನ ವೈಶಿಷ್ಟ್ಯ.

ನಾನು ಅಲ್ಲಿ ಒಬ್ಬ ಸದಸ್ಯನಾಗಿ ಸೇರಿದೆ. ಗ್ರಂಥಾಲಯದಲ್ಲಿ ಓದಲು ಶುಲ್ಕವಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಏಷ್ಯಾದವರು. ಆದರಲ್ಲೂ ಇಂಡಿಯಾ, ಪಾಕೀಸ್ಥಾನ ಮತ್ತು ಸಿಲೋನ್‌ನವರೇ ಹೆಚ್ಚು. ಈಜಿಪ್ಟ್‌ನ ಸರ್ಜನ್ ಒಬ್ಬರ ಪ್ರಕಾರ ಅವರ ದೇಶದಲ್ಲಿ ಇಂಗ್ಲೆಂಡ್, ಎಡಿನ್‌ಬರೊ, ಗ್ಲಾಸ್ಗೊ ಮತ್ತು ಐರ್ಲೆಂಡಿನ ಡಿಪ್ಲೊಮಾಗಳಿಗೆ ಮಾನ್ಯತೆ ಇಲ್ಲವಂತೆ. ಸ್ಕಾಟಿಷ್ ಡಿಪ್ಲೊಮ ಮಾಡಿದವರಿಗೇ ಇಂಗ್ಲೆಂಡ್‌ನಲ್ಲಿ ಅಷ್ಟಾಗಿ ಪುರಸ್ಕಾರವಿರಲಿಲ್ಲ ; ಅವರು ಸ್ಕಾಟಿಷ್‌ನವರೇ ಆದರೂ ಅಷ್ಟೇ ! ಪ್ರೊ|| ವಿಲ್ಕಿನ್‌ಸನ್‌ರೇ ಯಾವುದೋ ವಿಷಯವಾಗಿ ಚರ್ಚಿಸುತ್ತ "ನೋಡಿ, ನಾನು ಎಡಿನ್‌ಬರೊ ಎಫ್.ಆರ್.ಸಿ. ಎಸ್. ಮಾಡಿ ಲಂಡನ್‌ನಲ್ಲಿ ಕೆಲಸಕ್ಕೆ ಸೇರಿದೆ. ಅನೇಕರು 'ಸ್ಕಾಟಿಷ್ ಫೆಲೋಷಿಪ್' ಎಂದು ಗುಸು ಗುಸು ಮಾತಾಡಿದರು. ಒಂದು ವರ್ಷದ ನಂತರ ಇಂಗ್ಲಿಷ್ ಫೆಲೋಷಿಪ್‌ಗೆ ಕುಳಿತೆ. ಇದೆಲ್ಲಾ ಏನು ? ಹೋಗಲಿ ಬೇರೆ ವಿಷಯಕ್ಕೆ ಬರೋಣ" ಎಂದಿದ್ದರು. ಅದು ನನಗೆ ಜ್ಞಾಪಕ ಬಂತು. ಇದರಿಂದಾಗಿ ಈಜಿಪ್ಟ್ ಸರ್ಜನ್ ಊರಿಗೆ ಮರಳುವವರಿದ್ದರು. ನಾನು ೧೯೭೭ರ ಜುಲೈನಲ್ಲಿ ಬಾರ್ಸಿಲೋನಾಕ್ಕೆ ಪ್ರಬಂಧ ಓದಲು ಹೋಗಿದ್ದೆ. ಆಗ ನನ್ನ ಅಣ್ಣನವರ ಮಗ ಡಾ|| ರಂಗಸ್ವಾಮಿ ಕೆಂಟ್‌ನಲ್ಲಿದ್ದರು. ಅವರ ಹೆಂಡತಿ, ಇಬ್ಬರು ಮಕ್ಕಳನ್ನು ಹಾಗೇ ನೋಡಿಕೊಂಡು ಬರಲು ೪ ದಿನಗಳ ಮಟ್ಟಿಗೆ ಲಂಡನ್‌ಗೆ ಹೋದೆ. ಆಗ ಪ್ರೊ|| ವಿಲ್ಕಿನ್‌ಸನ್ ಮತ್ತಿತರರು ಹೇಳಿದಂತೆ ಈಗ ಆ ತಾರತಮ್ಯ ಇಲ್ಲವಂತೆ. ಎಲ್ಲಿ ಪರೀಕ್ಷೆಗೆ ಕುಳಿತರೂ ಎಫ್. ಆರ್. ಸಿ. ಎಸ್. (ಯು.ಕೆ.) ಎಂದು ಸರ್ಟಿಫಿಕೇಟ್ ಕೊಡುತ್ತಾರಂತೆ.

ಪ್ರೊ|| ಆರ್. ಜೆ. ಲಾಸ್ಟ್ ಅಲ್ಲಿನ ಅನಾಟಮಿ ಪ್ರೊಫೆಸರ್. ಅವರು ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಅನಾಟಮಿ ಪುಸ್ತಕ ಒಂದನ್ನು ಬರೆದು ಮಹೋಪಕಾರ ಮಾಡಿದ್ದಾರೆ. ಗ್ರೇಸ್ ಅವರ ಅನಾಟಮಿ ಪುಸ್ತಕ ಮೆಡಿಕಲ್ ಪುಸ್ತಕಗಳಲ್ಲೇ ಅತಿ ಭಾರೀ ಗಾತ್ರದ ಪುಸ್ತಕ. ಅದು ೯" × ೧೧.೫" ನ ೧೪೭೦ ಪುಟಗಳ ಪುಸ್ತಕ. ಅದನ್ನು ೬" × ೯.೫" ನ ೪೯೦ ಪುಟಗಳಲ್ಲಿ ಅಳವಡಿಸಿ ತಮ್ಮದೇ ಆದ ಶೈಲಿಯಲ್ಲಿ ಲಾಸ್ಟ್ ಬರೆದಿದ್ದಾರೆ. ಅದನ್ನು ಪೇಶದ ಮತ್ತು

ಹೊರದೇಶದ ಪದವಿಯೋತ್ತರ ವಿದ್ಯಾರ್ಥಿಗಳು ಓದುತ್ತಾರೆ. ಪ್ರೊ|| ವಿಲ್ಕಿನ್ ಸನ್ ಅವರು ನಫೀಲ್ಡ್ ಪ್ರೊಫೆಸರ್. ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ಪ್ರೊಫೆಸರ್ ಲಂಡನ್ನಿನಲ್ಲಿ ಅವರೊಬ್ಬರೆ. ಉಳಿದ ಹೆಸರಾಂತ ಮಿ|| ಎಚ್. ಎಚ್. ನಿಕ್ಸನ್, ಪ್ಯಾಟರ್‌ಸ್ಟನ್, ವಿಲಿಯಂಸ್ ಅವರೆಲ್ಲಾ ಕನ್‌ಸಲ್ಟೆಂಟ್ಸ್ ಮತ್ತು ಸೀನಿಯರ್ ಲೆಕ್ಚರರ್ಸ್ ಅಥವಾ ರೀಡರ್ಸ್. ಪ್ರೊ|| ವಿಲ್ಕಿನ್‌ಸನ್‌ರ ಕೊಠಡಿಯೂ ಅಲ್ಲಿದೆ. ಫೆಲೋಷಿಪ್ ಪರೀಕ್ಷೆಗಳನ್ನೂ ಅಲ್ಲಿ ನಡೆಸುತ್ತಾರೆ.

ಅಲ್ಲಿಂದ ಮುಂದೆ ಹೋದರೆ ನಾನು ಮೊದಲೇ ಹೇಳಿದ ಫ್ರೆಂಡ್‌ಶಿಪ್ ಹೌಸ್. ಹಾಗೇ ಬಲಕ್ಕೆ ತಿರುಗಿದರೆ ಇಂಡಿಯಾ ಹೈಕಮಿಷನ್ ಕಟ್ಟಡ. ಆ ದಿನ ಸಾಯಂಕಾಲ ಮೌಂಟ್‌ಬೇಟನ್‌ರವರ ಭಾಷಣ, ಗಾಂಧೀಜಿಯವರ ಹುಟ್ಟಿದ ಹಬ್ಬದ ಪ್ರಯುಕ್ತ. "ನನಗೆ ಇಂಡಿಯಾ ದೇಶವನ್ನು ವಿಭಜಿಸಲು ಸುತರಾಂ ಇಷ್ಟವಿರಲಿಲ್ಲ. ಜಿನ್ನಾರವರ ಹಟ ಮತ್ತು ಛಲ ರಕ್ತಪಾತಕ್ಕೆ ಎಡೆ ಕೊಟ್ಟಿತು. ಗಾಂಧಿ ಅವರು ಉಪವಾಸಕ್ಕೆ ಕುಳಿತರು. ಆಗಲೂ ನಾನು ಇಬ್ಬರನ್ನೂ ಭೇಟಿಮಾಡಿ ವಿಭಜಿಸಿದರೂ 'ಯುನೈಟೆಡ್ ಇಂಡಿಯಾ' ಮಾಡೋಣವೆಂದೆ. ಅದೂ ತಿರಸ್ಕೃತವಾಯಿತು" ಎಂದದ್ದು ನನ್ನ ಮನಸ್ಸಿನಲ್ಲಿ ಈಗಲೂ ಆಳವಾಗಿ ನಾಟಿದೆ.

ಟ್ಯೂಬ್‌ಟ್ರೈನಿನಲ್ಲಿ ಮುಂದೆ ವಾಟರ್‌ಲೂ ಸ್ಟೇಷನ್ ತಲುಪಿ ಅಲ್ಲಿಂದ ಸೌತ್‌ಬ್ಯಾಂಕ್‌ನಲ್ಲಿರುವ ರಾಯಲ್ ಫೆಸ್ಟಿವಲ್ ಹಾಲ್‌ನಲ್ಲಿನ ಗಾನಗೋಷ್ಠಿಯ ಮಧುರ ಪ್ರಶಸ್ತ ನಾದಕ್ಕೆ ಮಾರುಹೋಗದವರಿಲ್ಲ. ಈ ಗಾನಗೋಷ್ಠಿ ಆಗಾಗ್ಗೆ ರಾಯಲ್ ಫೆಸ್ಟಿವಲ್‌ಹಾಲ್, ಅಲ್ಲೇ ಸೌತ್‌ಬ್ಯಾಂಕಿನಲ್ಲಿರುವ ಕ್ವೀನ್ ಎಲಿಜಬೆತ್‌ಹಾಲ್, ಪರ್‌ಸೆಲ್‌ರೂಂ ಮತ್ತು ಕೆನ್ಸಿಂಗ್‌ಟನ್‌ನಲ್ಲಿರುವ ರಾಯಲ್ ಆಲ್‌ಬರ್ಟ್‌ಹಾಲ್‌ಗಳಲ್ಲಿ ಪ್ರದರ್ಶಿಸಲ್ಪಡುತ್ತದೆ.

ಮಾರನೇ ದಿನ ಪೇಟೆಗೆ ಖರೀದಿಸಲು ಹೊರಟೆವು. ಇಂಗ್ಲೆಂಡ್‌ನಲ್ಲಿ ಅಂಗಡಿ ಮುಂಗಟ್ಟುಗಳು ಬೆಳಿಗ್ಗೆ ೯ ರಿಂದ ೯-೩೦ಕ್ಕೆ ತೆರೆದು ಸಾಯಂಕಾಲ ೫-೩೦ ಅಥವಾ ೬ ಗಂಟೆಗೆ ಮುಚ್ಚುತ್ತವೆ. ರಾತ್ರಿ ಹೊತ್ತು ನೈಟ್ಸ್‌ಬ್ರಿಡ್ಜ್ ಮತ್ತು ಸೋಲೇನ್ ಸ್ಕ್ವೇರ್‌ಗಳಲ್ಲಿ ೮ ಗಂಟೆತನಕ ವ್ಯಾಪಾರ ಉಂಟು. ಇದು ಬುಧವಾರ ಮಾತ್ರ. ಗುರುವಾರ ಸುಪ್ರಸಿದ್ಧ ಆಕ್ಸ್‌ಫರ್ಡ್ ಸ್ಟ್ರೀಟ್, ರೀಜೆಂಟ್ ಸ್ಟ್ರೀಟ್ ಮತ್ತು ಕೆನ್ಸಿಂಗ್‌ಟನ್ ಹೈಸ್ಟ್ರೀಟ್‌ಗಳಲ್ಲಿ ರಾತ್ರಿ ೮ ಗಂಟೆ ತನಕ ವ್ಯಾಪಾರ ಉಂಟು. ಉಳಿದೆಲ್ಲಾ ದಿನ ಉಳಿದೆಲ್ಲಾ ಕಡೆ ಸಂಜೆ ೬ ಗಂಟೆಗೆ

ವ್ಯಾಪಾರ ಕೊನೆಗೊಳ್ಳುತ್ತದೆ. ಬ್ಯಾಂಡ್‌ಸ್ಟ್ರೀಟ್‌ನಲ್ಲೂ ಹೆಸರುವಾಸಿಯಾದ ಮಳಿಗೆಗಳಿವೆ. ಆಕ್‌ಫರ್ಡ್ ಸ್ಟ್ರೀಟ್‌ನಲ್ಲಿನ ಕೊನೆಯಲ್ಲಿ ಮಾರ್ಬಲ್ ಆರ್ಚ್ ಇದೆ. ಮಾರ್ಬಲ್ ಆರ್ಚ್ ಹತ್ತಿರ ಅತಿ ದೊಡ್ಡ ಮಳಿಗೆ ಮಾರ್ಕ್ ಅಂಡ್ ಸ್ಪೆನ್ಸರ್ಸ್ ಅವರದು. ಅಲ್ಲಿ ಸೊಗಸಾದ ಬಟ್ಟೆಗಳು ಸುಲಭ ಬೆಲೆಗೆ ಲಭ್ಯ; ಲಕ್ಷಾಂತರ ಜನರು ವ್ಯಾಪಾರ ಮಾಡುತ್ತಾರೆ. ಉಳಿದ ಪ್ರಸಿದ್ಧ ಮಳಿಗೆಗಳೆಂದರೆ ಸಿ. ಅಂಡ್ ಎ, ಲಿಟಲ್‌ಉಡ್ಸ್, ಬ್ರಿಟಿಷ್ ಹೋಂ ಸ್ಟೋರ್ಸ್ ಮತ್ತು ವೂಲ್‌ವರ್ತ್ಸ್. ಅತ್ಯಂತ ಜನಸಂದಣಿ ಆಕ್ಸ್‌ಫರ್ಡ್ ಸ್ಟ್ರೀಟ್ ಮತ್ತು ಬ್ಯಾಂಡ್‌ಸ್ಟ್ರೀಟ್‌ಗಳಲ್ಲಿ ಕಾಣುತ್ತದೆ. ಆಕ್ಸ್‌ಫರ್ಡ್ ಸ್ಟ್ರೀಟ್ ಪ್ರಪಂಚದಲ್ಲಿನ ವ್ಯಾಪಾರಸ್ಥರ ಸ್ವರ್ಗ. ಉದ್ದ ಸುಮಾರು ೧.೫ ಕಿ.ಮೀ.ಗಳು. ಅಲ್ಲಿ ಜೂನ್ ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಸರಾಸರಿ ಒಂದು ಗಂಟೆ ಅವಧಿಯಲ್ಲಿ ಸುಮಾರು ೩೦,೦೦೦ ಜನರು ಚಲಿಸುತ್ತಾರೆ. ಅಲ್ಲಿನ ಸಾಮಗ್ರಿಗಳ ವೈವಿಧ್ಯತೆ, ಗುಣಮಟ್ಟ ಅಲ್ಲದೆ ಅದಕ್ಕೆ ತಕ್ಕಂತೆ ಬೆಲೆ ಪೃಥ್ವಿಯಲ್ಲೆಲ್ಲೂ ಸಾಟಿ ಇಲ್ಲ. ವಿಶಾಲ ರಸ್ತೆಯ ಇಕ್ಕೆಲದಲ್ಲೂ ೧೪ ಬೃಹತ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್, ೨೦ ರತ್ನಾಭರಣಗಳುಳ್ಳ ಅಂಗಡಿಗಳು ಮತ್ತು ೩೦೦ ಇತರ ಮಳಿಗೆಗಳು ಇವೆ. ಪ್ರಪಂಚದಲ್ಲೇ ಅತ್ಯಂತ ವೇಗದ ವ್ಯಾಪಾರ ಮಾರ್ಕ್ ಅಂಡ್ ಸ್ಪೆನ್ಸರ್ಸ್‌ನಲ್ಲಿ ನಡೆಯುತ್ತದೆ. ಒಂದು ಸಾರಿ ಅರೇಬಿಯಾ ದೇಶದ ಶ್ರೀಮಂತನೊಬ್ಬ ನೇತುಹಾಕಿದ್ದ ನೂರಾರು ರಾತ್ರಿ ಧರಿಸುವ ಗೌನುಗಳನ್ನು ಒಮ್ಮೆಗೇ ಕೊಂಡನಂತೆ. ಚಕಿತಗೊಂಡ ವ್ಯಾಪಾರದ ಹುಡುಗಿ "ಸರ್, ಅವು ಬೇರೆ ಬೇರೆ ಅಳತೆಗೆ ತಕ್ಕಂತೆ ಸಿದ್ಧಪಡಿಸಿದವು" ಎಂದಾಗ, ಆತ "ನನ್ನ ಹೆಂಡತಿಯರೂ ಬೇರೆ ಬೇರೆ ಅಳತೆಯುವರೇ" ಎಂದಿದ್ದನಂತೆ. ಸೆಲ್ಫ್‌ರಿಡ್ಜಸ್ ಎಂಬ ಮತ್ತೊಂದು ವಿಶಾಲ ಮಳಿಗೆ ಸುಗಂಧ ದ್ರವ್ಯಗಳಿಂದಲೇ ಕಟ್ಟಲ್ಪಟ್ಟಂತಿದೆ. ಒಮ್ಮೆ ವ್ಯಾಪಾರಿಯೊಬ್ಬ ಒಂದೂವರೆ ಲಕ್ಷ ರೂಪಾಯಿಯಷ್ಟು ಸುಗಂಧದ್ರವ್ಯಗಳನ್ನು ೭ ನಿಮಿಷಗಳಲ್ಲಿ ಕೊಂಡನಂತೆ ! ಸೆಲ್ಫ್‌ರಿಡ್ಜಸ್‌ಗೆ ಭೇಟಿ ಕೊಡುವವರ ಸಂಖ್ಯೆ ವರ್ಷಕ್ಕೆ ಎಷ್ಟು ಗೊತ್ತೇ ? ಸುಮಾರು ಮೂರು ಕೋಟಿ !

೧೯೭೮ರಲ್ಲಿ ಆಕ್ಸ್‌ಫರ್ಡ್ ಸ್ಟ್ರೀಟ್ ಒಂದರಲ್ಲಿನ ವ್ಯಾಪಾರ ೨೬೪೦ ಕೋಟಿ ರೂಪಾಯಿಗಳಷ್ಟು ! ಒಂದು ಸಾರಿಗೆ ೩೦೦೦ ದಿಂದ ೪೦೦೦ ಜನಸಮೂಹ ಒಂದೊಂದು ಮಳಿಗೆಯಲ್ಲಿರುತ್ತಾರೆ. ಜಾನ್‌ಲೆವಿಸ್ ಮಳಿಗೆಯೊಂದರಲ್ಲಿ ೨೦೦೦ ಜನ ಕೆಲಸ ಮಾಡುತ್ತಾರೆ; ಮತ್ತೆ ೮೦ ಭಾಷೆಗಳನ್ನಾಡು

ತ್ತಾರಂತೆ ! ಒಂದು ಸಾಮಾನ್ಯ ಸಣ್ಣ ಅಂಗಡಿಗೆ ೬.೫ ಲಕ್ಷ ರೂ. ವರ್ಷದ ಬಾಡಿಗೆ. ಲಿಲ್ಲೆ ಅಂಡ್ ಸ್ಕಿನ್ನರ್ ಎಂಬುದು ಪ್ರಪಂಚದಲ್ಲೇ ಅತಿ ದೊಡ್ಡ ಶೂಸ್ ಮಳಿಗೆ. ಅಲ್ಲಿ ೮ ಸಾವಿರ ಶೂಗಳು ಪ್ರದರ್ಶನಕ್ಕಿವೆ ! ಇಷ್ಟೊಂದು ವೈಭವೋಪೇತ ವ್ಯಾಪಾರಸ್ಥಳದಲ್ಲಿನ ಸರಾಸರಿ ವರ್ಷದಲ್ಲಿನ ಕಳ್ಳತನದ ಮೊತ್ತ ಆ೦ ಲಕ್ಷ ರೂಪಾಯಿನಷ್ಟು.

ರೀಜೆಂಟ್‌ಸ್ಟ್ರೀಟ್ ಆಕ್ಸ್‌ಫರ್ಡ್ ಸರ್ಕಸ್‌ನಿಂದ ಪಿಕ್ಕಡಿಲ್ಲಿ ಸರ್ಕಸ್‌ವರೆಗೆ ಚಾಚಿದೆ. ಅಲ್ಲಿನ ಲಿಬರ್ಟಿ ಮಳಿಗೆಯಲ್ಲಿ ಉತ್ಕೃಷ್ಟವಾದ ಮತ್ತು ಕಣ್ಣು ತಣಿಸುವ ವಸ್ತ್ರಗಳಿವೆ. ಮೂರು ಮತ್ತು ನಾಲ್ಕನೇ ಅಂತಸ್ಥಿನಲ್ಲಿ ಲಕ್ಷೋಪಲಕ್ಷ ಆಟದ ಸಾಮಾನುಗಳು, ಬೊಂಬೆಗಳು ವ್ಯಾಪಾರಕ್ಕೆ ಪ್ರದರ್ಶಿಸಲ್ಪಟ್ಟಿವೆ. 'ಬೂಟ್ಸ್' ನವರ ಮಳಿಗೆಯಲ್ಲಿ ಔಷಧ, ಕಾಂತಿವರ್ಧಕ ವಸ್ತುಗಳು, ಒಡವೆ ಗಳು ಸಹಿತ ವ್ಯಾಪಾರಕ್ಕಿರುತ್ತವೆ. ಶೇ. ೫ ರಿಯಾಯಿತಿಯನ್ನು ಡಾಕ್ಟರ್ಸ್ ಗಳಿಗೆ ಕೊಡುತ್ತಾರೆ. ಅದಕ್ಕಾಗಿ ಗುರುತಿನ ಕಾರ್ಡ್ ಒಂದನ್ನು ಕೊಡುತ್ತಾರೆ.

ಪಿಕ್ಕಡಿಲ್ಲಿ ಸರ್ಕಸ್‌ನಲ್ಲಿ ಜನಸಂದಣಿ ಅಸಾಧ್ಯ. ಪಿಕ್ಕಡಿಲ್ಲಿ ಟ್ಯೂಬ್ ಟ್ರೈನಿನಿಂದ ಅಸಂಖ್ಯಾತ ಜನ ಬರುತ್ತಾರೆ, ಹೋಗುತ್ತಾರೆ. ಕಣ್ಣು ತಣಿಸುವ ಅನೇಕ ಅಂಗಡಿ ಮುಂಗಟ್ಟುಗಳಿವೆ. ಅಲ್ಲೇ ನಿಯಾನ್‌ಲೈಟ್‌ನಿಂದ ಪ್ರಪಂಚದ ಮುಖ್ಯ ಆಗುಹೋಗುಗಳನ್ನು ಮತ್ತು ಮುಖ್ಯ ವಿಷಯಗಳನ್ನು ಪ್ರದರ್ಶಿಸ ಲಾಗುತ್ತೆ. ಅಲ್ಲಿರುವ 'ಪೋರ್ಟ್ನಂಡ್ ಅಂಡ್ ಮೋಸನ್'ರವರ ಮಳಿಗೆ ಪ್ರಪಂಚ ದಲ್ಲೇ ಬಟ್ಟೆಗಳಿಗೆ ಹೆಸರುವಾಸಿಯಾದ ಮಳಿಗೆಗಳಲ್ಲೊಂದಂತೆ ! ಅತಿ ದೊಡ್ಡ ಒಡವೆಗಳ ಅಂಗಡಿಗಳೂ ಅಲ್ಲಿವೆ. ನಾವು ಇಲ್ಲೆಲ್ಲಾ ಕೆಳಗಿಂದ ಮೇಲಕ್ಕೆ, ಮೇಲಿಂದ ಕೆಳಕ್ಕೆ, ರಸ್ತೆಗಳಲ್ಲಿ ಓಡಾಡಿ ಕೆಲವು ಕಡೆ ವ್ಯಾಪಾರ ಮಾಡಿದ್ದಾಯಿತು.

ಮುಂದಿನ ಶನಿವಾರ ಪಾರ್ಲಿಮೆಂಟ್‌ಹೌಸ್ ನೋಡಲು ಸೈಂಟ್ ಮಾರ್ಗರೇಟ್ ಸ್ಟ್ರೀಟ್‌ಗೆ ನಮ್ಮೆಲ್ಲರ ಪ್ರಯಾಣ. ಕೊನೆಯ ಸಾಕ್ಸನ್ ರಾಜ ಎಡ್ವರ್ಡ್ ದಿ ಕನ್ಫೆಸ್ಸ‌ರ್ ಕಟ್ಟಿಸಿದ್ದು. ಎರಡನೇ ವಿಲಿಯಂ ೧೦೭೭ರಲ್ಲಿ ವೆಸ್ಟ್‌ಮಿನ್‌ಸ್ಟರ್ ಹಾಲ್‌ಅನ್ನು ಅದಕ್ಕೆ ಸೇರಿಸಿದ. ಅದು ಇಂಗ್ಲೆಂಡ್‌ನಲ್ಲೇ ಅತಿ ದೊಡ್ಡ ಹಾಲಂತೆ ! ಮಧ್ಯಯುಗದ ರಾಜರು ಆಗಾಗ್ಗೆ ಪ್ರಜೆಗಳ ಜೊತೆ ವಿಚಾರ ವಿನಿಮಯ ಮಾಡುತ್ತಿದ್ದರು. ಇದನ್ನೇ ಮೂರನೆ ಹೆನ್ರಿ ಪಾರ್ಲಿಮೆಂಟ್ ಎಂದು ಕರೆದ. ಇದೊಂದು ಫ್ರೆಂಚ್ ಪದ. ಅರ್ಥ 'ಮಾತುಕತೆ' ಎಂದು. ಆಗ ಇದೇ

ರಾಜರ ಅರಮನೆಯೂ ಆಗಿತ್ತು. ಎಂಟನೇ ಹೆನ್ರಿ ಇದನ್ನು ಹೌಸ್ ಆಫ್ ಲಾರ್ಡ್ಸ್‌ಗೆ ಬಿಟ್ಟು ತಾನು ಬೇರೆ ಅರಮನೆಗೆ ವರ್ಗಾಯಿಸಿದ. ೧೮೩೪ನೇ ಅಕ್ಟೋಬರ್‌ನಲ್ಲಿ ಭಯಂಕರ ಬೆಂಕಿಯಿಂದ ಬಹು ಮಟ್ಟಿಗೆ ನಾಶವಾದ ಪಾರ್ಲಿಮೆಂಟ್ ಹೌಸ್‌ಗೆ ಸರ್ ಛಾರ್ಲ್ಸ್‌ಬೆರ್ರಿ ಇಂದಿನ ಪಾರ್ಲಿಮೆಂಟ್ ನಕ್ಷೆ ತಯಾರಿಸಿದ. ಮಧ್ಯ ಯುಗದ ಪಶ್ಚಿಮ ಯೂರೋಪಿನ 'ಗೋತಿಕ್' ಕಲಾ ಕೃತಿಯ ಮೆರಗು ಕೊಟ್ಟವನು ಅಗಸ್ಟಸ್‌ಪುಗಿನ್ ಎಂಬವನು. ಕ್ಲಾಕ್‌ಟವರ್ ಮತ್ತು ಬಿಗ್‌ಬೆನ್ ಗಡಿಯಾರದ ಅನುಷ್ಠಾನ ೧೮೫೮ರಲ್ಲಿ ಆಯಿತು. ೧೯೪೧ರಲ್ಲಿ ಜರ್ಮನ್‌ರ ಬಾಂಬಿನಿಂದ ನಾಶವಾದ ಈ ಮಹಾಸೌಧ ೧೯೫೦ರಲ್ಲಿ ಜೀರ್ಣೋದ್ಧಾರ ಕಂಡಿತು. ಅಳಿದ ಧೀರ ವೀರರ ಸಿಂಹಾವಲೋಕನವಾಯಿತು. ಇದು ತನ್ನದೇ ಆದ ಅದ್ಭುತ ಚರಿತ್ರೆಯನ್ನು ಹೊಂದಿದೆ. ಇಂಗ್ಲೆಂಡಿನ ಶರತ್ಕಾಲದಲ್ಲಿ ಮಹಾರಾಣಿಯವರ ಸವಾರಿ ಬಕ್ಕಿಂಗ್‌ಹ್ಯಾಂ ಅರಮನೆಯಿಂದ ಪಾರ್ಲಿಮೆಂಟ್‌ಹೌಸ್ ಒಳಗಡೆ ಇರುವ ವಿಕ್ಟೋರಿಯಾ ಟವರ್ ತನಕ. ಅಲ್ಲಿಂದ ಕಡುಗೆಂಪಿನ ರೋಬ್ ಮತ್ತು ಚಕ್ರಾಧಿಪತ್ಯದ ಕಿರೀಟ ಧರಿಸಿ ರಾಯಲ್ ಗ್ಯಾಲರಿ ಮುಖಾಂತರ ಲಾರ್ಡ್ಸ್ ಛೇಂಬರ್ಸ್‌ಗೆ ಮೆರವಣಿಗೆ. ಸಿಂಹಾಸನಾರೂಢ ರಾಗಿ ರಾಣಿಯವರ ಅನುಗ್ರಹ ಭಾಷಣ, ನಂತರ ಪಾರ್ಲಿಮೆಂಟ್—ಇದೇ ಬ್ರಿಟಿಷ್ ಸಾಮ್ರಾಜ್ಯದ ಸಂಪ್ರದಾಯ ; ವೈಭವದ ಪರಮಾವಧಿ !

ಮುಂದೆ ವೆಸ್ಟ್‌ಮಿನ್‌ಸ್ಟರ್ ಅಬೆ. ಅದು ೧೦೬೬ರ ತನಕ ಕಿರೀಟಧಾರಣ ಮಹೋತ್ಸವಕ್ಕೆ ಮೀಸಲು. ಈ ಕ್ರೈಸ್ತ ಮಠ ಮೂರನೇ ಹೆನ್ರಿ ಕಾಲದಿಂದ. ಪವಿತ್ರ ಸಮಾಧಿ ಇಲ್ಲ; ಬೃಂದಾವನವಾಯಿತು. ಎಡ್ವರ್ಡ್ ದಿ ಕಾಂಕರರ್ ೧೧೬೧ರಲ್ಲಿ ಫಿರಂಗಿಗೆ ಬಲಿಯಾದ. ಮೂರನೆ ಹೆನ್ರಿ ಕಾಂಕರರನ ಆರಾಧಕ. ಕಾರಣ ಕಾಂಕರರ್‌ಗೆ ಶ್ರೇಷ್ಠ ದರ್ಜೆಯ ಬೃಂದಾವನ ಸೃಷ್ಟಿಸಿದ. ಏಳನೆ ಹೆನ್ರಿ ತನಗೂ ತನ್ನ ಪತ್ನಿ ಯಾರ್ಕ್‌ನ ಎಲಿಜಬೆತ್‌ಳಿಗೂ ಬದುಕಿದ್ದಾಗಲೇ ಬೃಂದಾವನ ಕಟ್ಟಿಸಿದ. ದುರದೃಷ್ಟವಶಾತ್ ಕಟ್ಟಿಸಿದ ಮೂರೇ ವಾರಗಳಲ್ಲಿ ಹೆಂಡತಿ ಹೆರಿಗೆಯ ಸಮಯದಲ್ಲಿ ಮೃತಳಾದಳು ; ಏಳನೇ ಹೆನ್ರಿ ಕೂಡ ೬ ವರ್ಷಗಳಲ್ಲಿ ಮೃತನಾದ ದಾರುಣವಾರ್ತೆ ಕೇಳಿದೆವು. ಮೇರಿ, ಕ್ವೀನ್ ಆಫ್ ಸ್ಕಾಟ್ಸ್ ಕೂಡ ಅಲ್ಲಿ ಗೋರಿ ಕಂಡಿದ್ದಾಳೆ. ಆಕೆ ೭ ನೇ ಹೆನ್ರಿಯ ಮೊಮ್ಮಗಳು. ಮೇರಿಯ ಶಿರಚ್ಛೇದನ ೧೫೮೭ರಲ್ಲಿ. ಅವಳ ಮಗ ಒಂದನೇ ಜೇಮ್ಸ್ ತಾಯಿಯ ಮೃತದೇಹವನ್ನು ಅಲ್ಲಿಗೆ ತಂದದ್ದು ೧೬೧೨ರಲ್ಲಿ ! ದಾರುಣ ದುರಂತಗಳಿಗೆ ಸಿಕ್ಕಿದ ರಾಜಮನೆತನ

ಪವರ ಸಂಗಡ ಕವಿಪುಂಗರಾದ ಟೆನಿಸನ್, ಡ್ರೈಡೆನ್ನರೂ ಅಲ್ಲಿ ಹೂಳಲ್ಪಟ್ಟಿದ್ದಾರೆ. ಮೊನ್ನೆ ಮೊನ್ನೆ ಕೈ ಬಾಂಬ್ ದುರಂತಕ್ಕೀಡಾದ ಲಾರ್ಡ್‌ಮೌಂಟ್ ಬೇಟನ್ನರ ಪಾರ್ಥೀವ ಶರೀರವು ಅಲ್ಲಿ ಬೃಂದಾವನ! ಮೊದಲನೇ ಮಹಾ ಯುದ್ಧದಲ್ಲಿ ಮಡಿದ ಸಾಮಾನ್ಯ ಸೈನಿಕನೂ ಅಲ್ಲಿ ನೆಲೆ ಕಂಡಿದ್ದಾನೆ! ವಿಚಿತ್ರ ಮಿಲನವೆಂದರೆ ಕ್ವೀನ್ ಎಲಿಜಬೆತ್ ಮತ್ತು ಅವರ ಮಗಳು ಪ್ರಿನ್ಸೆಸ್‌ಅನ್ನೇ ಮದುವೆಯಾದದ್ದೂ ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲೇ! ಸತ್ತವರ ಶವ ಸಂಸ್ಕಾರ ಮಂಗಳಕರ ಮದುವೆ ಎರಡೂ ಒಂದೇ ಆಶ್ರಯದಲ್ಲಿ, ಒಂದೇ ನೆರಳು, ನೆಮ್ಮದಿ. ಯಾರ ಸಂಸ್ಕೃತಿ ಹಿರಿಯದು ?

ನಾವು ಚರ್ಚಿಸುತ್ತಾ ಹಾಸ್ಟೆಲ್‌ಗೆ ಬಂದಾಗ ಗಂಟೆ ರಾತ್ರಿ ೮, ಆಗಲೇ ಪಂಜಾಬಿನಿಂದ ಒಬ್ಬರು ಹಿಂದಿ ಪಿ.ಎಚ್.ಡಿ. ಮಾಡಲು ಲಂಡನ್ನಿಗೆ ಬಂದಿದ್ದರು. ನನಗೇನೋ ಅತಿ ಆಶ್ಚರ್ಯ! ಹಿಂದಿ ತವರೇ ಇಂಡಿಯಾ. ಅಲ್ಲಿ ಸಿಗದ ಪಿ.ಎಚ್.ಡಿ. ಇಂಗ್ಲಿಷ್‌ನವರ ದೇಶದಲ್ಲಿ ಸಿಗಬಲ್ಲದೆ ? ಅದಕ್ಕೆ ಉತ್ತರವೂ ಉಂಟು. ಮೂಲ ಹಿಂದಿ ಸಂಪತ್ತೆಲ್ಲಾ ಲಂಡನ್ ಮ್ಯೂಸಿಯಂನಲ್ಲಿದೆಯಂತೆ. ಸಂಪತ್ತನ್ನು ನಕಲು ಮಾಡಿ ಹಿಂದಿರುಗುವವರಿದ್ದರು.

ಮತ್ತೊಬ್ಬರು ಬಾಟಾ ಶೂ ಕಂಪನಿಯಲ್ಲಿ ಕಲಿಯಲು ವಿದ್ಯಾರ್ಥಿ ವೇತನ ಪಡೆದು ಬಂದಿದ್ದರು. ಅವರೂ ಉತ್ತರ ಇಂಡಿಯಾದ ಒಂದು ಭಾಗಕ್ಕೆ ಸೇರಿದವರು. ಅವರ ಸಂಬಳ ಆಗ ರೂ. ೬೦೦. ಇಂಗ್ಲೆಂಡ್‌ನಲ್ಲಿ ಕಲಿತು ಹಿಂದಿರುಗಿದರೆ ಬಡ್ತಿ ಪ್ರಾಪ್ತಿ. ನಮ್ಮಲ್ಲಿ ಚಪ್ಪಲಿ, ಶೂ, ತಯಾರಕರಿಗೆ ಸಮಾಜದಲ್ಲಿ ಹೀನಸ್ಥಾನ. ಕಾಲಿನ ಚಪ್ಪಲಿಗೆ 'ಪಾದರಕ್ಷೆ' ಎಂಬ ಸೊಗಸಿನ ಪದ. ಅದರ ಕರ್ತೃವಿಗೇ ರಕ್ಷೆ ಇಲ್ಲ. ಸಮನಾದ ಸ್ಥಾನಮಾನವಿಲ್ಲ. ಅವನ ಬಾಳು ಹೀನಾಯ ; ನಾಯಿ ಬಾಳು. ಕಾಲಿನಿಂದ ಸಡಲಿಸಿದ ಪಾದರಕ್ಷೆಯನ್ನು ಅದರ ಕರ್ತೃ ಎರಡು ಕೈಗಳಿಂದ ಸ್ವೀಕರಿಸಿ, ಸರಿಪಡಿಸಿ 'ಪಾದ ರಕ್ಷೆಯ ಒಡೆಯನ' ಕಾಲಿನ ಮುಂದೆ ಅವುಗಳನ್ನಿಡುತ್ತಾನೆ. 'ಒಡೆಯ' ಎಸೆದ ಕಾಸು ಕರ್ತೃವಿನ ಜೀವನ! 'ಒಡೆಯ'ನನ್ನು ಕರ್ತೃ ಮುಟ್ಟಲರ್ಹನಲ್ಲ. ಕಾರಣ, ಅವನು ಸ್ಪರ್ಶಕ್ಕೆ ಅನರ್ಹ! ಎಂದಿನಿಂದ ಈ ನಾಚಿಕೆಗೇಡು ? ತಲೆತಲಾಂತರದಿಂದ! ಅಂದಿನಿಂದ ಇಂದಿನವರೆಗೆ ಈ ದೇಶದಿಂದ ಕಲಿತು ತಾಯ್ನಾಡಿಗೆ ಮರಳಿದ ಮಾನವರೆಷ್ಟೋ. ಕಲಿತದ್ದೇನಾಯಿತು ? ಆ ಪಾದ ರಕ್ಷೆಯ ಕರ್ತೃವಿನ ನಾಶಕ್ಕೆ ನೆರವಾಯಿತು ; ಮೆರಗುಕೊಟ್ಟಿತು. ಮಧ್ಯೆ

ಮಧ್ಯೆ ಅವತಾರ ಪುರುಷರೆಷ್ಟೋ ಇವನಿಗೆ, ಇವನ ಬಾಳಿಗೆ ನೆರವಾದರು. ಕಾರಣ ಅವರು ಅವತಾರಪುರುಷರೆನ್ನಿಸಿಕೊಳ್ಳಲಿಲ್ಲ. ಸಮಾಜ ಸುಧಾರಕರೆಂದೆನ್ನಿಸಿ ಮನ್ನಣೆ ಪಡೆಯಲು ಸನ್ನಿವೇಶದ ಒತ್ತಡವಿದ್ದಿರಲೂಬಹುದು, ರಾಜಕೀಯ ದೃಷ್ಟಿಯಿಂದಿರಲೂ ಸಾಧ್ಯ. ಅವರಲ್ಲಿ ಕೆಲವರು ಈ ರಂಗಕ್ಕೆ ಇಳಿದರು. ಪರಿಣಾಮ ಧ್ಯೇಯವಿನಾಶ !

ಈಗ ನಿಜವಾಗಿಯೂ ಅವರ ಸ್ಥಿತಿಗತಿಗಳ ಕಡೆಗೆ ಆದ್ಯತೆ ಉಂಟು. ಆಳಿದ ಸರ್ಕಾರದಿಂದ ಅನೇಕ ಯೋಜನೆಗಳ ಸೃಷ್ಟಿ. ಆದರೆ ಕಾರ್ಯಗತಕ್ಕೆ ಯಾರು ? ಯೋಜನಾಸೃಷ್ಟಿಕರ್ತರೆ ? ಅದು ಅವರಿಂದ ಅಸಾಧ್ಯ. ಕಾರಣ ಕಾರ್ಯಗತಕ್ಕೆಂದೇ ಬೇರೆಯವರಿದ್ದಾರೆ. ಅವರ್‍ಯಾರು ? ಅದೇ, ಇವನ ಬಾಳಿನ ಹೀನಸ್ಥಿತಿಗೆ ಕಾರಣರಾದವರೇ ; ಇವನು ಸಮಾಜದಲ್ಲಿ ಸಮಾನತೆ ಪಡೆದರೆ ಅವತಾರ ಪುರುಷರಿಗೆ, ಉತ್ತಮರಿಗೆ, ಆಚಾರ್ಯರಿಗೆ ಧಕ್ಕೆ ಎಂದು ನಂಬಿದವರೇ !

ಡಾ|| ಬಿ. ಆರ್. ಅಂಬೇಡ್‌ಕರ್ ಅವರ ಜ್ಞಾಪಕ ಬರುತ್ತದೆ. ಮಹಾತ್ಮ ಗಾಂಧಿಯವರನ್ನೊಮ್ಮೆ ಭೇಟಿ ಆದಾಗ ಗಾಂಧೀಜಿಯವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ "ಹೌದು ಸ್ವಾಮಿ, ಇರಲು ಜಾಗವಿಲ್ಲ. ಬೆಳೆಯಲು ನೆಲವಿಲ್ಲ. ಇಂಥ ಜನ ಯಾವ ದೇಶದಲ್ಲೇ ಇದ್ದರೂ ಹೇಗೆ ತಾನೆ ಆ ದೇಶವನ್ನು ಮಾತೃಭೂಮಿ ಎನ್ನಲು ಸಾಧ್ಯ" ಎಂದಿದ್ದರು. ಸತ್ಯಕ್ಕೆ ಮೃತ್ಯುವಿಲ್ಲ. ಸತ್ಯ ಕಠಿಣ ಮತ್ತು ಕಹಿ. ಇದನ್ನೋದುವವರಲ್ಲಿ ಕೆಲವರಿಗೆ ಮೈ ಬಿಸಿಯಾಗ ಬಹುದು, ನನಗೆ ಗೊತ್ತು. ಆದರೆ ಸತ್ಯಾಂಶವನ್ನು ಮುಚ್ಚಿ ಮುಂದುವರಿಯ ಬಲ್ಲೆವೇ ? ಇಪ್ಪತ್ತಂಶಗಳ ಕಾರ್ಯಕ್ರಮ ವರದಾನ !

ಇದಕ್ಕೆ ಸಂಬಂಧಿಸಿದ ಘಟನೆ ಇನ್ನೊಂದು. ಆ ದಿನ ಭಾನುವಾರ. ಮಧ್ಯಾಹ್ನ ನಮ್ಮ ಹಾಸ್ಟಲ್‌ನಲ್ಲಿ ಡಿನ್ನರ್. ಡಾ|| ಸ್ಟಾವ್‌ರಾಸ್‌ಸಿಂಗ್ ಲೊಗ್ಲು, ಗ್ರಿಸ್ ದೇಶದ ಅಥೆನ್ಸ್ ನಗರದವರು. ನಮ್ಮಂತೆ ಕಲಿಯಲು ಬಂದಿದ್ದರು. ನಾನು ಊಟಕ್ಕೆ ಆಹ್ವಾನಿಸಿದ್ದೆ. ಊಟ ಆದ ಮೇಲೆ ಚುಟ್ಟ ಸೇದುತ್ತ "ಡಾಕ್ಟರವರೇ ೨೦ ವರ್ಷಗಳ ಮೇಲಾಗಿದೆ ನಿಮಗೆ ಸ್ವಾತಂತ್ರ್ಯ ಬಂದು, ಏಕೆ ಬಹಳಷ್ಟು ಮುಂದುವರಿದಿಲ್ಲ ?" ಎಂದರು.

"ನಿಮ್ಮ ಪ್ರಶ್ನೆ ಸರಿ. ನಮ್ಮ ದೇಶದ ಸಮಸ್ಯೆಗಳು ಅನೇಕ. ಅಲ್ಲದೆ ಇತರ ದೇಶಗಳ ಸಮಸ್ಯೆಗಳಂತಲ್ಲದೆ ಬಹಳ ವಿಭಿನ್ನ. ಶಿಸ್ತು, ದೇಶಪ್ರೇಮ,

ಒಂದುತನವಿಲ್ಲ. ಅಶಿಸ್ತು, ಜಾತಿಪ್ರೇಮ, ಭಿನ್ನತೆಗೆ ನಮ್ಮಲ್ಲಿ ಪ್ರಾಧಾನ್ಯ. (ತಮಾಷೆಗೆ) ಅಲ್ಲದೆ ನಾವೂ ಯಾವುದಾದರೊಂದು ರಾಷ್ಟ್ರವನ್ನಾಳಲು ಅವಕಾಶ ಮಾಡಿಕೊಡಿ. ನಂತರ ನಮ್ಮ ಅಭ್ಯುದಯ ನೋಡುವಿರಂತೆ !" ಎಂದೆ.

ಡಾ|| ರಾಧಾಕೃಷ್ಣರವರ ಭಾವಚಿತ್ರ ನೋಡಿ "ಪೇಟದ ವಿಶೇಷವೇನು ?" ಎಂದು ಕೇಳಿದರು.

"ನಮ್ಮ ದೇಶದ ಸಂಸ್ಕೃತಿಗಳಲ್ಲೊಂದು. ಸಾಮಾನ್ಯವಾಗಿ ಅದನ್ನು ದಕ್ಷಿಣ ಇಂಡಿಯಾದವರು ಧರಿಸುತ್ತಾರೆ. ಅದರಲ್ಲೂ ಮೈಸೂರು ಪೇಟ ಪ್ರಸಿದ್ಧ. ಹತ್ತೊಂಬತ್ತನೇ ಶತಮಾನದಲ್ಲಿ ಇಂಗ್ಲೆಂಡಿನ ಸ್ತ್ರೀಯರು ಇದೇ ತರಹೆಯ ಟೋಪಿ ಧರಿಸುತ್ತಿದ್ದರಂತೆ."

ಕೊನೆಯ ಪ್ರಶ್ನೆ : "ನಿಮ್ಮಲ್ಲಿ ಅಸ್ಪೃಶ್ಯರು ಅಂದರೆ ಹೇಗಿದ್ದಾರೆ? ನಿಮಗೂ ಅವರಿಗೂ ಇರುವ ಅತಿ ಮುಖ್ಯ ವ್ಯತ್ಯಾಸವೇನು ?" ನನಗೆ ಖುಷಿಯಾಯಿತು ಆ ಪ್ರಶ್ನೆ ಕೇಳಿ.

"ನಾನೇ ಅಸ್ಪ್ರಶ್ಯನಾಗಿದ್ದರೆ !" ಎಂದಾಗ, ನಕ್ಕು ನನ್ನ ಬೆನ್ನು ತಟ್ಟಿ ಚುಟ್ಟದ ಬೆಂಕಿ ಆರಿಸಿದರು. ನಾನು ನಿಜವಾಗಿಯೂ ಭಾರತ ಸರ್ಕಾರದ ನಿಮ್ನ ವರ್ಗದ ಸ್ಕಾಲರ್‌ಷಿಪ್ ಪಡೆದೇ ಹೋಗಿದ್ದೆ, ನಾನೇ ಅಸ್ಪೃಶ್ಯ ! ಅದು ಜೀವನದ ಮುಖ್ಯ ಘಟನೆಗಳಲ್ಲೊಂದಾಯಿತು.

ಡಾ|| ಜೆ. ಎನ್. ಸಿಂಗ್ ಬೆಳಿಗ್ಗೆ ಗಡಗಡ ನಡುಗುತ್ತಿದ್ದರು. ಹಲ್ಲುಗಳ ಕಟಕಟ, ಕಡಕಟ್ಟಕಡ ಶಬ್ದ ಬೇರೆ ! "ಏನು ಸಮಾಚಾರ ? ಬನ್ನಿ, ಹೀಟರ್ ಹತ್ತಿರ ಹೋಗೋಣ" ಎಂದಾಗ "ಅಲ್ಲಿ.....ಈಗಾ.....ಗಲೇ.....ಕಡಕಟ್ಟಕಡರು..... ಘುಂಬಿದ್ದಾರೆ" ಎಂದರು.

"ನಿಮಗೇಕೆ ಈ ವಯಸ್ಸಿನಲ್ಲಿ ತಣ್ಣೀರು ಸ್ನಾನ, ನವೆಂಬರ್ ಛಳಿ. ಉಷ್ಣಾಂಶ ೧೫-೧೬ ಸೆಂ.ಗ್ರೇ. ಇದೆ" ಎಂದೆ.

"ಆಯ್ತು ಬನ್ನಿ....ಬ್ರೇಕ್.....ಫಾಸ್ಟ್.....ಗೆ"

ಉಪಹಾರಕ್ಕೆ ಕೆಳಗಿಳಿದು ಹೊರಟೆವು. ಹಲ್ಲುಗಳ ಶಬ್ದ ಸತತವಾಗಿತ್ತು. ಅಲ್ಲೇ ಇದ್ದ ಅರಶದ್‌ಮಸೂದ್ ಮತ್ತು ಬ್ರಾರ್ ಇಬ್ಬರೂ "ಗುಡ್ ಮಾರ್ನಿಂಗ್, ಎಲ್ಲಿಗೆ ಟೆಲಿಗ್ರಾಫಿಕ್ ಮೆಸೇಜ್ ?. ಊರಿಗೋ ಅಥವಾ ಇಲ್ಲೇ ಹೈಡ್‌ಪಾರ್ಕ್‌ಗೊ ?" ಎಂದಾಗ ಡಾ|| ಸಿಂಗ್ "ನೀವೆಲ್ಲಾ..... ಯಂಗ್.....ಸ್ಟರ್ಸ್.....ಆದರೂ ಈ ಛಳಿಯಲ್ಲಿ ಒಂದು,,,,ದಿನ....ತ,....ಣ್ಣೀರು,....

ಸ್ನಾನಮಾಡಿ.....ನನ್ನ.....ಹಾಗೆ" ಎಂದು ಪಕ್ಕದಲ್ಲಿದ್ದ ಕುರ್ಚಿಯನ್ನೇರಿದು ಕುಳಿತರು. ಬಿಸಿಬಿಸಿ ಆಮ್ಲೆಟ್, ರೋಸ್ಟ್ ಬ್ರೆಡ್‌ಗೆ ಬೆಣ್ಣೆ ಹಚ್ಚಿ ತಿನ್ನಲು ಶುರು. ಡಾ॥ ಸಿಂಗ್‌ರ ಕಟಕಟ ಶಬ್ದ—ನಿಶ್ಶಬ್ದ !

"ತಿಳಿಯಿತು ಬಿಡಿ. ಬ್ರೇಕ್‌ಫಾಸ್ಟ್‌ಗೆ ಮೆಸೇಜ್ ಹೋಗ್ತಾಯಿತ್ತು" ಅಂದರು ಅರ್‌ಶದ್. ಎಲ್ಲರೂ ಗೊಳ್ಳೆಂದು ನಕ್ಕೆವು.

ಶ್ರೀಮತಿ ಇಂದಿರಾಗಾಂಧಿಯವರು ಆಗ ನಮ್ಮ ದೇಶದ ಪ್ರಧಾನ ಮಂತ್ರಿಗಳು. ಇಂಗ್ಲೆಂಡಿಗೆ ಬಂದಿದ್ದರು. ಲಂಡನ್ನಿನ ವೈ.ಎಮ್.ಸಿ.ಎ.ನಲ್ಲಿ ಅಂದು ಸಂಜೆ ಇಂಡಿಯಾದ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ. ನಾವೆಲ್ಲ ೩೦ ನಿಮಿಷ ಮೊದಲೇ ಹಾಜರ್. ಪ್ರಧಾನಮಂತ್ರಿ ಆಗಮನ. ಆಗ ಹೊರಬಾಗಿಲಲ್ಲೇನೋ ಗುಸುಗುಸು ಮತ್ತು ಗದ್ದಲ ನಡೆದಿತ್ತು ; ಪಾಕಿಸ್ಥಾನದ ಇಬ್ಬರು ವಿದ್ಯಾರ್ಥಿಗಳಿಂದ ಅವಾಚ್ಯ ಶಬ್ದ ಪ್ರಯೋಗದಿಂದ. ಶ್ರೀಮತಿ ಇಂದಿರಾಗಾಂಧಿಯವರೇ "ಅವರಿಗೇನೂ ಮಾಡಬೇಡಿ. ಹಾಗೇ ಬಿಟ್ಟು ಬಿಡಿ" ಎಂದು ಸರಸರ ವೇದಿಕೆಯತ್ತ ನಡೆದರು. ಸುಮಾರು ೨೦ ನಿಮಿಷ ಸ್ವಚ್ಛ ಭಾಷಣ. ನಂತರ ಪ್ರಶ್ನೆಗಳಿಗೆ ಉತ್ತರ. ಪ್ರಶ್ನೆಗಳನ್ನು ಕಾಗದದಲ್ಲಿ ಬರೆದು ಕಳುಹಿಸುವುದಿತ್ತು. ಗ್ಯಾಲರಿಯಿಂದ "ನನ್ನಲ್ಲಿ ಪೇಪರ್‌ಗೆ ಹಣವಿಲ್ಲ" ಎಂದೊಂದು ಕೂಗು ಕೇಳಿ ಬಂತು. ಹುಟ್ಟುಗುಣ ಲಂಡನ್ ಆದರೇನು ಡೆಲ್ಲಿಯಾದರೇನು ? ಇದರ ಅರಿವು ನಮಗೆ ಯಾವಾಗ ? ಆ ಕೂಗು ಕೇಳಿ ಮೇಡಂ ಗಾಂಧಿ ನಕ್ಕರು, ಜನಗಣಮನ ಹಾಡಿದೆವು. ಸಭೆ ಮುಗಿದಿತ್ತು.

ಅಂದು ಟ್ರೆಪಾಲ್‌ಗರ್‌ಸ್ಕ್ವೇರ್‌ಅನ್ನು ಟ್ಯೂಬ್‌ಟ್ರೈನಿನಿಂದ ತಲುಪಿದೆವು. ವಿಶಾಲ ಸ್ಕ್ವೇರ್ ಮಧ್ಯದಲ್ಲಿ ೧೬೭ ಅಡಿ ಎತ್ತರದ ಲಾರ್ಡ್‌ನೆಲ್ಸನ್ ಕಂಬವಿದೆ. ಕಂಬದ ತುದಿಯಲ್ಲಿ ಇಂಗ್ಲೆಂಡಿನ ಅತ್ಯಂತ ನೌಕಾ ಪರಾಕ್ರಮಿ ನೆಲ್ಸನ್ ಪ್ರತಿಮೆ ಇದೆ. ನಾಲ್ಕು ಕಡೆಯೂ ಸಿಂಹಗಳ ಪ್ರತಿಮೆಗಳು, ಪಕ್ಕದಲ್ಲಿ ಕಾರಂಜಿಗಳು. ಅಲ್ಲಿ ನೆಲೆ ಕಂಡ ಪಾರಿವಾಳಗಳ ಸಮೂಹ ಆಕರ್ಷಕ. ಅಲ್ಲದೆ ನೆಪೋಲಿಯನ್‌ನ ಸೋಲಿನನಂತರ ಶಾಂತಿಧೂತರಂತೆ ಆ ಪಾರಿವಾಳಗಳ ಸಮೂಹ ! ಸೆರೆಹಿಡಿದ ಫ್ರೆಂಚ್ ಸಿಪಾಯಿಗಳ ಬಂದೂಕಗಳು ನೆಲ್ಸನ್ ಕಂಬದ ತಳದಲ್ಲಿ ಜೋಡಿಸಲ್ಪಟ್ಟಿವೆ.

ಅಲ್ಲಿಂದ ಮುಂದೆ ಬಕ್ಕಿಂಗ್‌ಹ್ಯಾಮ್ ಅರಮನೆಗೆ ನೇರ ದಾರಿ. ಜಾನ್ ಶಫೀಲ್ಡ್, ಡ್ಯೂಕ್ ಆಫ್ ಬಕ್ಕಿಂಗ್‌ಹ್ಯಾಂ ಅದನ್ನು ಕಟ್ಟಿಸಿದ್ದು. ಟ್ರೆಪಾಲ್

ಗರ್ ಸ್ಕ್ವೇರ್‌ನಿಂದ ನಡೆದುಹೋದಾಗ 'ಮಾಲ್' ಎಂಬ ಸ್ಥಳ. ಅಲ್ಲಿ ವಿಶಾಲ ವಿಹಾರ ರಸ್ತೆಗಳು. ಅಚ್ಚ ಹಸಿರು ನೆಲ ಮತ್ತು ಹೆಮ್ಮರಗಳಿವೆ. ಅರಮನೆಯ ಮುಂಭಾಗದಲ್ಲಿ ದೊಡ್ಡ ದೊಡ್ಡ ದ್ವಾರಗಳನೇಕ ! ಅವುಗಳಲ್ಲಿ ಒಂದು ಇಂಡಿಯಾ ಗೇಟ್. ಪಕ್ಕದ್ದು ಆಸ್ಟ್ರೇಲಿಯಾ ಗೇಟ್. ಮುಂದೆ ವಿಕ್ಟೋರಿಯಾ ಮಹಾರಾಣಿಯ ಅಮೃತಶಿಲಾ ಪ್ರತಿಮೆ ಜಗತ್ತಿನ ಒಡತಿ ಎಂಬ ಹೆಮ್ಮೆ ತೃಪ್ತಿಗಳ ಮಿಲನದಂತೆ. ಎಡ ಮತ್ತು ಬಲಕ್ಕೆ ವಿಶಾಲ ಗ್ರೀನ್ ಪಾರ್ಕ್ ಮತ್ತು ಸೆಯಿಂಟ್ ಜೇಮ್ಸ್ ಪಾರ್ಕ್‌ಗಳಿವೆ.

ಮಧ್ಯಾಹ್ನ ೩ ಗಂಟೆ ಸಮಯ. ಹಿಂದಿರುಗಿ ಬರುವಾಗ ಟ್ರಫಾಲ್ ಗರ್ ಸ್ಕ್ವೇರ್ ಮುಂದೆ ಸುಮಾರು ಒಂದು ಫರ್ಲಾಂಗ್ ಉದ್ದದ ಮುಷ್ಕರದ ಸಾಲು ! ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿದ್ಯಾರ್ಥಿಗಳಿಂದ. ಅರ್ಧ ವಿದ್ಯಾರ್ಥಿಗಳು ಅರ್ಧ ವಿದ್ಯಾರ್ಥಿನಿಯರು. ನಾಲ್ಕನೇ ಒಂದು ಭಾಗದಷ್ಟು ಲಂಡನ್ ಪೋಲಿಸ್ಸೇ ಅಲ್ಲಿತ್ತು. ಮುಷ್ಕರದವರಿಗೇನೂ ತೊಂದರೆಯಾಗದಂತೆ ನೋಡಿಕೊಳ್ಳುವಂತಿತ್ತು ಅವರ ಹಾಜರಿ. ಕೈಲಿ ಲಾಠಿ ಇಲ್ಲ ; ಬಂದೂಕ ಪಿಸ್ತೂಲ್‌ಗಳಾವುವೂ ಇಲ್ಲ. ನೂರಾರು ಮಂದಿ ಪೋಲೀಸ್ ಕಾನ್‌ಸ್ಟೇಬಲ್ ಗಳು ಅವರಿಗೆ ರಕ್ಷಣೆಯಾಗಿದ್ದರು. ನಿಶ್ಶಬ್ದ, ಗಂಭೀರ ಮೌನ. ಮೆರವಣಿಗೆ, ಕಲ್ಲು ತೂರಾಟ, ಕೂಗಾಟ, ವಾಹನಗಳ ತಡೆ, ಬೆಂಕಿ ಹೊತ್ತಿಸುವುದು ಅಲ್ಲಿನ ಸಂಪ್ರದಾಯವಲ್ಲ. ದೇಶದ ಮತ್ತು ವಿದೇಶಗಳ ಸಮಸ್ಯೆಗಳ ಮೇಲೆ ಈ ಮೆರ ವಣಿಗೆಗಳು ಲಂಡನ್ ನಗರದಲ್ಲಿ ಆಗಾಗ್ಗೆ ನಡೆಯುತ್ತವೆ. ಒಮ್ಮೆ ಆಫ್ರಿಕಾ ಹೌಸ್‌ನ ಕೊನೆ ಮಹಡಿಯ ಮೇಲೆ ವಿದ್ಯಾರ್ಥಿನಿಯೊಬ್ಬಳು ಕಾಣಿಸಿಕೊಂಡಳು. ಆಕೆ ಅಲ್ಲಿನ ಬಾವುಟ ಕೀಳುವುದರಲ್ಲಿದ್ದಾಗ ಪೋಲೀಸರಿಗೆ ಗೋಚರ ! ಸರಿ ಆಕೆ ಅಲ್ಲಿಂದ ಧುಮುಕಿ ಪ್ರಾಣಾರ್ಪಣೆ ಮಾಡದಂತೆ ಹತ್ತಾರು ಪೋಲೀಸರು ದೊಡ್ಡ ಬಲೆಯೊಂದನ್ನು ಹಿಡಿದರು. ಆಕೆ ಮಹಡಿ ಮೇಲಿಂದ ಇಳಿದದ್ದು ಮೂರನೇ ದಿನ. ಮೂರು ದಿನವೂ ಪೋಲೀಸರು ಸರದಿ ಮೇಲೆ ಬಲೆ ಮಾತ್ರ ಹಿಡಿದಿದ್ದರು !

ಗ್ರೀಕ್ ದೇಶದ ಅಥೆನ್ಸ್ ನಗರದ ವಿಶ್ವವಿದ್ಯಾನಿಲಯದ ಘಟನೆಯೊಂದು ನನಗೆ ನೆನಪಿನಲ್ಲಿದೆ. ಅಲ್ಲಿ ೩ ತಿಂಗಳು ೬ ತಿಂಗಳಿಗೊಮ್ಮೆ ಮುಷ್ಕರಗಳ ಅವಾಂತರ. ಅನೇಕ ಸಾರಿ ಕಾರಣ ಅತಿ ಕ್ಷುಲ್ಲಕ. ಒಮ್ಮೊಮ್ಮೆ ಕಾರಣವೇ ಇಲ್ಲ. ಪ್ರಾಧ್ಯಾಪಕವರ್ಗ ಬೇಸತ್ತಿತ್ತು. ಕಾಲೇಜ್ ಕೌನ್ಸಿಲ್ ಮೀಟಿಂಗ್

ನಡೆಯಿತು. ಚರ್ಚೆಗಳಾದವು, ಅನೇಕ ಸಲಹೆಗಳಾದವು. ಪ್ರಯೋಜನವಾಗ ಲಿಲ್ಲ. ಸರಿ, ಮಿಂಚಿನಂತೆ ಹೊಳೆಯಿತು ಸಲಹೆಯೊಂದು ಪ್ರಾಧ್ಯಾಪಕರಿಂದ, ಏನು ? ಪ್ರಾಧ್ಯಾಪಕರೆಲ್ಲಾ ಉಪನ್ಯಾಸ ಶುರು ಮಾಡುವ ಮುನ್ನ ಮುಷ್ಕರದ ಉತ್ತೇಜನದಂತೆ, ಅದರ ಆಗುಹೋಗುಗಳ ಮೇಲೆ ಪೀಠಿಕೆ ಹಾಕುವುದು. ಈ ಸಾರಿ ಪ್ರಾಧ್ಯಾಪಕ ವರ್ಗವೇ ಮುಷ್ಕರಕ್ಕೆ ಪ್ರಚೋದಿಸುವುದು. ಮುಷ್ಕರ, ಶುರುವಾದ ಮೇಲೆ ಒಂದು ವರ್ಷಕಾಲ ಕಾಲೇಜುಗಳನ್ನು ಮುಚ್ಚುವುದು ! ಬೇಸತ್ತಿದ್ದವರಿಗೆ ಇದೇ ಒಳ್ಳೆಯ ಸಲಹೆಯಾಯಿತು.

ಒಳ್ಳೆಯ ಕೆಲಸ ಮಾಡಿತು ಈ ಯೋಜನೆ. ಮುಷ್ಕರ ಶುರುವಾದ ಒಂದು ವಾರದಲ್ಲಿ ಎಲ್ಲಾ ಕಾಲೇಜುಗಳು ಮುಚ್ಚಲ್ಪಟ್ಟವು ಒಂದು ವರ್ಷದ ದೀರ್ಘಾವಧಿಗೆ ! ನಾಲ್ಕಾರು ವಾರ ಮುಷ್ಕರ ನಡೆಸುವುದು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಹು ದುಸ್ತರವಾಯಿತು. ಕೆಲಸವಿಲ್ಲ, ಕಾರ್ಯವಿಲ್ಲ. ಕಾಲಕಳೆವುದೊಂದು ಧರ್ಮಸಂಕಟ. ತಂದೆತಾಯಿಗಳ ತಲೆ ಮೇಲೆ ಆಕಾಶ ಬಿದ್ದಂತೆ ಭಾಸವಾಯಿತು. ಕೊನೆಗೆ ಪ್ರತಿಯೊಬ್ಬರೂ ಮುಚ್ಚಳಿಕೆ ಬರೆದು ಕೊಟ್ಟರು 'ನನ್ನ ವಿದ್ಯಾಭ್ಯಾಸ ಮುಗಿಸುವ ತನಕ ಮುಷ್ಕರವಿಲ್ಲ'—ಎಂದು. ಕಾಲೇಜುಗಳ ಪುನರಾರಂಭ ! ಸಡಗರ, ಓದಿನಲ್ಲಿ ಮಗ್ನತೆ, ವಾತಾವರಣ ಬದಲಿತ್ತು. ಪರಿಣಾಮ ಮುಷ್ಕರ ಕಂಡರಿಯದ ಪುಣ್ಯ ೫ ವರ್ಷಗಳ ದೀರ್ಘಾವಧಿ !

೧೧

ಇಂಗ್ಲೆಂಡ್‌ನಲ್ಲಿ ಡಿಸೆಂಬರ್ ತಿಂಗಳ ಅವತಾರ. ಮರಗಿಡಗಳಲ್ಲಿ ಎಲೆ ಇಲ್ಲ, ಹೂವಿಲ್ಲ, ನೋಡಲು ಮನಸ್ಸಿಲ್ಲ. ಬೋಳು ಮರಗಳು ! ಚಿತ್ರಕಾರನ ಬರಿ ಕಾಂಡ ಮತ್ತು ರೆಂಬೆಗಳ ರಚನೆಯಂತೆ. ಅವಕ್ಕೆ ಎಲೆ, ಹೂ ತುಂಬಲು ಅಸಾಧ್ಯ. ಸಾಯಂಕಾಲ ಸಮೀಪಿಸುತ್ತಿದ್ದಂತೆ ಕತ್ತಲು ಕವಿಯುತ್ತಿದ್ದಂತೆ ಲಕ್ಷೋಪಲಕ್ಷ ಬಿಳಿಹೂದಳಗಳನ್ನು ಕಿತ್ತು ಚೆಲ್ಲಿದಂತೆ ಆಕಾಶದಿಂದ ಮಂಜಿನ ಚೂರು ತೂರಿ, ಹಾರಿ, ಮಂದಗೈದು ಧರೆಗಿಳಿದು ನೆಲೆ ಕಾಣುತ್ತದೆ. ರಾತ್ರಿ ಸೂರೆ ಸೂರೆಯಂತೆ ಧವಳಿಸಿ ಬೆಳಕು ಹರಿದಾಗ ಮಂಜಿನ ಮುತ್ತು, ಹರಳು, ಸಣ್ಣ ದಪ್ಪ ಧವಳಗೆಡ್ಡೆ ರಾಶಿ ರಾಶಿ ಎಲ್ಲೆಲ್ಲೂ ! ಇತರರನ್ನು ಗೆದ್ದು ಆಳಿದ್ದ ಇಂಗ್ಲಿಷ್ ರಾಜ್ಯದಲ್ಲಿ ಮಂಜಿನ ಸಾರ್ವಭೌಮತ್ವ ! ವರ್ಷ ವರ್ಷ ನೂರು

ಮಾಸಗಳ ಪ್ರಕೃತಿಯು ಒಡೆತನಕ್ಕೆ ಶರಣು ! ಜನಜೀವನ ಸ್ಥಗಿತ, ದಾರಿ ಕಾಣದ, ದೋಣಿ ಗೋಚರಿಸದ ವಾಹನ ಚಲಿಸದ ಮುಂಕುಬಡಿದ ನಗರಗಳು ! ಪ್ರಕೃತಿಯ ನಿರಂಕುಶಾಧಿಕಾರದ ಬಿಗಿಮುಷ್ಟಿಯಲ್ಲಿ ತಲ್ಲಣಿಸಿತ್ತು ಲಂಡನ್‌ನಗರ. ಒಮ್ಮೊಮ್ಮೆ ಅಪ್ಪಳಿಸಿದ ಕೊರೆವ ಛಳಿಗಾಳಿಯಲ್ಲಿ ಮೈ, ಇಡೀ ದೇಹ, ಕಿವಿ, ಮೂಗು, ಮುಖಗಳ ಜರ್ಝರಿತ ಆಘಾತ. ಹೊರ ವಲಯದಲ್ಲಿನ ಹಿಮದ ರಾಶಿಯಲ್ಲಿ ಮುಚ್ಚಿದ ವಾಹನಗಳೆಷ್ಟೋ, ಸೇತುವೆ ಮನೆ ಮರಗಿಡಗಳೆಷ್ಟೋ ಲೆಕ್ಕ ಬಲ್ಲವರಾರು !

ಪ್ರಯಾಣಿಕರು ಹಿಮ ಹೊತ್ತ ಬಿರುಗಾಳಿಯ ವೇಗದ ರಭಸಕ್ಕೆ ಹೆದರಿ ವಾಹನಗಳನ್ನು ದಾರಿಯಲ್ಲೇ ಬಿಟ್ಟು ರಕ್ಷಣೆಗೆ ಧಾವಿಸುತ್ತಾರೆ. ಶಾಲೆಯ ಮಕ್ಕಳು ಅನೇಕ ದಿನ ಮನೆಗೆ ಬರಲಸಾಧ್ಯ. ಆಗ ಹೆಲಿಕಾಪ್ಟರ್‌ಗಳಲ್ಲಿ ಅವರಿಗೆ ಆಹಾರ, ಉಡುಪು ಸರಬರಾಜಾಗುತ್ತದೆ. ಅನೇಕರು ಸಾವಿಗೀಡಾಗುತ್ತಾರೆ. ಜಾನುವಾರುಗಳು ಹಿಮರಾಶಿಯಲ್ಲಿ ಮುಚ್ಚಿ ಸಾವನ್ನಪ್ಪುತ್ತವೆ. ಸೂರ್ಯನೇ ಮುಳುಗದಿದ್ದ ಸಾಮ್ರಾಜ್ಯದಲ್ಲಿ ಎಷ್ಟೋ ದಿನಗಳು ಸೂರ್ಯನ ಸುಳಿವಿಲ್ಲ ! ಮಾನವನ ನಿರ್ವೀರ್ಯತೆ ಪ್ರಕೃತಿಗೆ ಅಧೀನತೆ. ಹಿಮಸಾಗರದಲ್ಲಿ ಅರ್ಧಮುಳುಗಿ ಅರ್ಧ ತೇಲುವಂತಿತ್ತು ಆ ಪಶ್ಚಿಮ ಜಗತ್ತು. ಆನಂದ ! ಎಲ್ಲಿ ನೋಡಿದರಲ್ಲಿ ತೇಲುತ್ತಿದ್ದ ಹಿಮಮೋಡಗಳು ತುಂತುರು ಹವಳವಾಗಿ ಸತತವಾಗಿ ಸುರಿದು ಧರೆ ಗಿಳಿದು ಹಿಮದ ರಾಶಿಯಾಗಿ ನಿದ್ರಿಸುತ್ತಿತ್ತು. ದುಗುಡ ! ಏನೋ ಕಳೆದು ಕೊಂಡಂತೆ. ಮನದ ಬಡಿತ, ಕತ್ತಲು ಕವಿದಂತೆ.

ಈ ದಿನಚರಿಗೆ ಅಭ್ಯಾಸವಿಲ್ಲದ ನಾವು ನಡೆದುಹೋಗುವುದಿತ್ತು. ನಡೆವಾಗ ನೊರ್ಕ್, ನೊರ್ಕ್ ಎಂದು ಮಂಜುಗಡ್ಡೆಗಳು ನಡೆತಕ್ಕೆ ಸುಚ್ಚು ನೂರಾಗು ತ್ತವೆ. ಬ್ಯಾಲೆನ್ಸ್ ಹಿಡಿದು ಸರ್ಕಸ್‌ನವರಂತೆ ನಡೆದೆವು. ಡಾ|| ಸುಬ್ಬಯ್ಯ ನವರು ಸಮತೋಲನ ತಪ್ಪಿ ಜಾರಿಬಿದ್ದು ಕೊರೆವ ಛಳಿಯಲ್ಲಿ ಇಂದ್ರಿಯಾನುಭವ ತಪ್ಪಿ ಬೆಂಡಾಗಿದ್ದ ಕೈಕಾಲುಗಳಿಂದಾಗಿ ಏಳಲಾರದೆ ಹಿಮರಾಶಿಯನ್ನು ಅಪ್ಪಿ ದ್ದರು. ನಾವು ಎತ್ತಿ ನಿಲ್ಲಿಸಿದಾಗ ಅವರ ಮೀಸೆಗೆ ಅಂಟಿದ್ದ ಅರಳುಗಳೆಷ್ಟೋ ಗಾಬರಿಯಿಂದ ಬಿಟ್ಟ ಮೂಗಿನ ಉಸಿರಿನ ಬಿಸಿಗೆ ಒಂದೊಂದೂ ನೀರಾಗಿ ಜಾರಿ ದ್ದವು. ಅವರ ಕನ್ನಡಕ ಸಧ್ಯ ಸುರಕ್ಷಿತವಾಗಿತ್ತು. ರಕ್ತನಾಳಗಳು ಛಳಿಗೆ ಹೆದರಿ ದೇಹದ ಒಳಭಾಗದಲ್ಲಿ ಹುದುಗಿದ್ದು ಮುಖ ಬಿಳಿಚಿಕೊಂಡಿತ್ತು. ಕಿವಿ ಮೂಗುಗಳನ್ನು ಜಿಗುಟಿದರೆ ನೋವಾಗುತ್ತಿರಲಿಲ್ಲ ! ತಮ್ಮದೇ ಎಂಬ ಅರಿವೂ

ಆಗುತ್ತಿರಲಿಲ್ಲ. ಎಲ್ಲವೂ ಮರಗಟ್ಟಿ ಬೆಂಡಾಗಿದ್ದವು.

ಹಾಸ್ಟಲ್‌ನಲ್ಲಂತೂ ವಿದ್ಯುತ್ ಹೀಟರ್ ಆಶ್ರಯಪಡೆಯಬೇಕಾದರೆ ಮ್ಯೂಸಿಕಲ್ ಛೇರ್‌ನಂತೆ ! ಒಂದು ಸೀಟು ಖಾಲಿ ಇದ್ದರೆ ಅನೇಕರು ಧಾವಿಸುವುದು ವಾಡಿಕೆ. ಮುಂದಿನ ಸೀಟು ಹಿಡಿದವರೇ ವಿಜಯೋತ್ಸಾಹಿಗಳು. ಕೆಲವು ವೈದ್ಯರು ದಿನವಿಡೀ ಹೀಟರ್ ಆವರಣದಲ್ಲಿ ಕೆಲವು ಖಾಲಿಯಿರುವ ಅಡ್ರೆಸ್ ಹುಡುಕುವುದು ಮತ್ತು ಅಲ್ಲಿನ ಕೆಲಸಕ್ಕೆ ಅರ್ಜಿ ಬರೆಯುವುದೇ ಕೆಲಸ. ಕಾರಣ ಬ್ರಿಟನ್‌ನಲ್ಲಿ ೬ ತಿಂಗಳಿಗೊಮ್ಮೆ ಕೆಲಸ ಬದಲಾಯಿಸಬೇಕು. ಇಂಟರ್‌ವ್ಯೂಗೆ ಹೋದರೆ ಕೆಲಸ ಸಿಗಲಿ, ಸಿಗದಿರಲಿ, ಪ್ರಯಾಣದ ಖರ್ಚು ಮತ್ತು ಭತ್ಯ ಸಿಗುತ್ತದೆ. ಕೆಲವರು 'ಲೋಕಂ' ಕೆಲಸಕ್ಕೆ ಅರ್ಜಿ ಹಾಕುತ್ತಾರೆ. 'ಲೋಕಂ' ಎಂದರೆ ರಜಕ್ಕೆ ಹೋದವರ ಜಾಗದಲ್ಲಿ ಕೆಲಸಕ್ಕೆ ಸೇರುವುದು. ಕೆಲಸವೇ ಸಿಗದೆ ೨-೩ ತಿಂಗಳು ಅರ್ಜಿ ಬರೆಯುವುದೂ ಉಂಟು. ಅಂಥವರಿಗೆ ಆಗ ೩-೪ ಪೌಂಡ್ ಸಹಾಯಧನ ಸಿಕ್ಕುತ್ತಿತ್ತು. ಡಾ|| ನಾಗರಾಜ್ ಮೈಸೂರಿನವರು. ಲಂಡನ್ನಿಗೆ ಬಂದು ೨ ತಿಂಗಳಾದರೂ ಕೆಲಸ ಸಿಕ್ಕಿರಲಿಲ್ಲ. ಕೈಯಲ್ಲಿ ಹಣವಿಲ್ಲ. ಲಂಡನ್ನಿನ ವಾಸ ತಮಾಷೆಯೇನಲ್ಲ. ಆದ್ದರಿಂದ ಜಿಗುಪ್ಸೆಗೊಂಡು ನನ್ನನ್ನೊಂದು ಸಾರಿ "ಸಾರ್ ಹಣವಿದ್ದರೆ ಕೊಡಿ, ವಾಪಸ್ ಹೋಗುತ್ತೇನೆ. ಅಲ್ಲಿ ನಿಮ್ಮ ಮನೆಗೆ ಪೌಂಡ್‌ಗೆ ಸಮನಾದ ರೂಪಾಯಿ ಕೊಡುತ್ತೇನೆ" ಎಂದು ಹೇಳಿದ್ದರು. ನನ್ನಲ್ಲಿ ಹಣವಿರಲಿಲ್ಲ. ಅದು ಮುಖ್ಯವೂ ಆಗಿರಲಿಲ್ಲ. "ಇಷ್ಟು ದೂರ ಬಂದು ಸುಮ್ಮನೆ ಹಿಂತಿರುಗುವುದು ಸರಿಯಲ್ಲ. ಸ್ವಲ್ಪ ಸಮಾಧಾನದಿಂದಿರಿ" ಎಂದಿದ್ದೆ. ನನಗೆ ಅವರು ೧೯೭೭ರಲ್ಲಿ ಮೈಸೂರಿನಲ್ಲಿ ಸಿಕ್ಕಿದ್ದರು. ಇಂಗ್ಲೆಂಡಿನಿಂದ ಅನೇಸ್ತೀಸಿಯಾಲಜಿಯಲ್ಲಿ ಡಿಪ್ಲೊಮ ಮಾಡಿ ಬಂದಿದ್ದರು.

ಶ್ರೀ ರಾಘವನ್ ಮದ್ರಾಸಿನವರು. ಯಾವುದೋ ಪ್ರೈವೆಟ್ ಕಂಪನಿಯಲ್ಲಿ ಆಗ ತಿಂಗಳಿಗೆ ೫೦೦ ರೂ. ಸಂಬಳಕ್ಕಿದ್ದರು. ಡಿಪ್ಲೊಮ ಇಂಜಿನಿಯರಿಂಗ್ ಮಾಡಿದ್ದರು. ಅಪ್ಲೈಡ್‌ಸೈನ್ಸ್ ಲ್ಯಾಬೊರೆಟೊರಿಯೊಂದರಲ್ಲಿ ಕೆಲಸ ಮಾಡಲು ಲಂಡನ್ನಿಗೆ ಬಂದಿದ್ದರು. ಅದೂ ಅಲ್ಲಿನ ಪ್ರೊಫೆಸರ್ ಒಬ್ಬರ ಕರುಣೆಯಿಂದ ಅಪ್ಲೈಡ್‌ಸೈನ್ಸ್ ಲ್ಯಾಬೊರೆಟೊರಿಯಲ್ಲೊಂದು ಕೆಲಸ ದೊರೆತಿತ್ತು. ಇವರಿಗೆ ಆ ಕೆಲಸ ಇಷ್ಟವಿಲ್ಲ. ಕಾರಣ ಅದೊಂದು ಟೆಕ್ನೀಷಿಯನ್ ಹುದ್ದೆ. ಅಂತಸ್ಥಿಗೆ ಕಮ್ಮಿ, ಏನು ಮಾಡುವುದು ? ವಿಧಿ ಇಲ್ಲ. ಮಲ್ಕ ಕಟ್ಟಬೇಕು,

ಊಟ ಮತ್ತು ವಸತಿಯಾಗಬೇಕು. ಕಣ್ಣಲ್ಲಿ ನೀರು ಹಾಕಿದರು. "ನಾನು ಊರಲ್ಲಿ ಉತ್ತಮ ಹುದ್ದೆಯಲ್ಲಿದ್ದೆ. ದೂರದ ಬೆಟ್ಟವನ್ನು ಹುಡುಕಿ ಬಂದೆ" ಎಂದು ; ಸಂತೈಸಿದೆವು. ಒಂದು ಓವರ್ ಕೋಟ್ ಕೂಡ ಅವರಲ್ಲಿ ರಲಿಲ್ಲ, ಛಳಿಯಲ್ಲಿ ಸಂಶೋಧನೆಗೆ ಉಪಯೋಗಿಸುವ ಗಿನಿಪಿಗ್‌ನಂತಿತ್ತು ಅವರ ಆಗಿನ ಸ್ಥಿತಿ.

ಡಾ|| ಎಂ. ಚಕ್ರವರ್ತಿ, ಪಿ.ಎಚ್.ಡಿ ೨೪, ಥಾಕೂರ್ ಪಲ್ಲಿರೋಡ್ ಅಗರ್‌ತಲ, ತ್ರಿಪುರಾದವರು. ನನ್ನ ಎದುರು ಕೊಠಡಿಯಲ್ಲಿ ವಾಸ. ಜರ್ಮನಿ ಯಲ್ಲಿ ಪಿ.ಎಚ್.ಡಿ. ಮಾಡಿ ಲಂಡನ್ನಿನಲ್ಲಿ ಕೆಲಸಕ್ಕಿದರು. ಅವರೂ ನಾನು ಸುಮಾರು ಮಧ್ಯರಾತ್ರಿಯ ತನಕ ಇಂಡಿಯಾ ದೇಶದ ರಾಜಕೀಯವನ್ನು ಮೆಲುಕು ಹಾಕುತ್ತಿದ್ದೆವು. ಕಾರಣ ನಿದ್ರೆ ಬರುವತನಕ ಎಚ್ಚರವಾಗಿರುತ್ತಿದ್ದೆವು. ಮಧ್ಯರಾತ್ರಿಯವರೆಗೂ ನಿದ್ರೆಬರುತ್ತಿರಲಿಲ್ಲ. ಹಾಸಿಗೆಯಲ್ಲಿ ಕಾಲು ಚಾಚಿ ಮೈ ಒಡ್ಡಿದರೆ ಮಾಘಮಾಸದಲ್ಲಿ ದಟ್ಟಕಾಡಿನ ಹೊಂಗೇ ಮರದ ನೆರಳಿನಲ್ಲಿದ್ದ ಕೊಳಕ್ಕೆ ಈಜಲು ಬೆಳಗಿನಜಾವ ಧುಮುಕಿದಂತಾಗುತ್ತಿತ್ತು. ಇಡೀ ದೇಹವೇ ಕುಳಿರ್ ಎಂದು ನಡುಗುತ್ತಿತ್ತು. ನನಗಂತೂ ಗ್ಯಾಸ್ ಉರಿಸಿ ಕೊಠಡಿ ಬೆಚ್ಚ ಗಾದ ಮೇಲೆಯೇ ನಿದ್ರೆ ಹತ್ತುತ್ತಿತ್ತು. ಹಾಸಿಗೆ ಮೇಲೆ ಹಾಸಲು ಎರಡು ಉಣ್ಣೆಯ ಕಂಬಳಿ, ಹೊದಿಯಲು ಎರಡು ಉಣ್ಣೆಯ ಕಂಬಳಿ, ಅಲ್ಲದೆ, ಎರಡು ಸ್ವೆಟರ್ ತೊಟ್ಟು ಸತತ ಅಭ್ಯಾಸವಾಗಿ ಹೋಗಿರುವ ಈ ದೇಹಕ್ಕೆ ಗ್ಯಾಸ್ ಉರಿಸಿ ಕೊಠಡಿ ಬೆಚ್ಚಗಾದಾಗ ಮಾತ್ರ ನಿದ್ರೆ ಹತ್ತುತ್ತಿತ್ತು ! ಅದೇ, ಚಕ್ರವರ್ತಿಗಳು ಲಂಡನ್‌ನಲ್ಲಿ ಕೆಲಸಕ್ಕಿದ್ದರೂ ಗ್ಯಾಸ್‌ಗಾಗಿ ಎಂದೂ ನಾಲ್ಕಾಣೆ ತೆತ್ತವರಲ್ಲ. ಜಿಪುಣಶ್ರೇಷ್ಠರೆಂದು ಸಾರಿ ಹೇಳುತ್ತಿತ್ತು ಅವರ ಕೊಠಡಿಯಲ್ಲಿನ ವಾತಾವರಣ. "ನನಗೆ ಈ ಛಳಿಯ ಅನುಭವ ಜರ್ಮನಿಯಲ್ಲೇ ಆಗಿದೆ. ಅಲ್ಲೂ ಗ್ಯಾಸ್ ಉರಿಸದೆ, ಸೆಂಟ್ರಲ್ ಹೀಟಿಂಗ್ ಇಲ್ಲದ ಕೊಠಡಿಯಲ್ಲಿ ವಾಸ ಮಾಡಿ ಅಭ್ಯಾಸವಾಗಿ ಛಳಿಗೆ ಹೊಂದಿಕೊಂಡುಬಿಟ್ಟಿದ್ದೇನೆ" ಎನ್ನುತ್ತಿದ್ದರು. ಆಗಿನ ಕನಿಷ್ಠ ಉಷ್ಣಾಂಶ–೫ ಡಿಗ್ರಿ ಸೆಂಟಿಗ್ರೇಡ್ ಇತ್ತು.

ಮೂರನೆ ದಿನ ಭಾನುವಾರ ಸುಮಾರು ೧೫ ಮಂದಿ ಇಂಡಿಯಾದಿಂದ ಬಂದಿದ್ದ ವಿದ್ಯಾರ್ಥಿಗಳು ಮತ್ತು ಕೆಲಸಕ್ಕೆ ಬಂದವರು ನಮ್ಮಲ್ಲಿಗೆ ಬಂದರು. "ನಿಮ್ಮನ್ನು ಈ ದೇಶದಲ್ಲಿ ಸರಿಸಮನಾಗಿ ಕಾಣುತ್ತಾರೆಯೆ ? ಇಲ್ಲ, ನಮಗೆ

ಅನೇಕ ರೀತಿಯಲ್ಲಿ ತಾರತಮ್ಯ ತೋರಿಸುತ್ತಾರೆ. ಕೆಲಸಕ್ಕೆ ತೆಗೆದುಕೊಳ್ಳುವಾಗ, ಕೆಲಸ ತೆಗೆದುಕೊಳ್ಳುವಾಗ, ಅಲ್ಲದೆ ಪರೀಕ್ಷೆಗಳಲ್ಲೂ ತಾರತಮ್ಯ ತೋರುತ್ತಾರೆ. ಇದಕ್ಕೆ ನಾವು ಪ್ರತಿಭಟಿಸಲಿದ್ದೇವೆ. ಇಂಡಿಯಾ ಹೈಕಮಿಷನರ್‌ರನ್ನು ಕಾಣಲು ನಾಳೆ ಸೋಮವಾರ ಹೋಗುತ್ತೇವೆ. ನಮಗೆ ನಿಮ್ಮ ಸಹಕಾರ ಅಗತ್ಯ" ಎಂದರು.

ಈ ಘಟನೆಯ ಹಿಂದಿನವಾರ ಡಾ|| ಕಪಿಲ ಅವರು ಹೇಳಿದ್ದುದ್ದು ಥಟ್ಟನೆ ಹೊಳೆಯಿತು. "ನಾವೇಕೆ ತಾರತಮ್ಯದಿಂದ ನೋಡುತ್ತಾರೆಂದು ಭಾವಿಸಬೇಕು. ಕೆಲಸ ಹುಡುಕಿ ಬಂದ ನಮಗೆ ಕೆಲಸ ಕೊಟ್ಟಿದ್ದಾರೆ, ವಸತಿ ಇಲ್ಲದವರಿಗೆ ವಸತಿ ಕೊಟ್ಟಿದ್ದಾರೆ" ಎಂದಿದ್ದರು ; ಎಂದು ನಕ್ಕಿದ್ದರು.

"ಇದೊಂದು ಗುರುತರವಾದ ಸಂದಿಗ್ಧತೆ. ಸತ್ಯ ಮತ್ತು ಅಸತ್ಯ ಎರಡೂ ಹೆಡೆ ಎತ್ತಿವೆ. ಸತ್ಯಸಂಗತಿ ಇಷ್ಟು : ಅನೇಕಾನೇಕ ಭಾರತೀಯರು ಲಂಡನ್ ನಗರದಲ್ಲಿದ್ದಾರೆ ; ಪ್ರವಾಸಿಗರಲ್ಲ. ಅಲ್ಲಿಗೆ ಜ್ಞಾನಾರ್ಜನೆಗೆ ಬಂದವರು, ಕೆಲಸ ಹುಡುಕಿಕೊಂಡು ಬಂದವರು, ಎಕ್ಸ್‌ಚೇಂಜ್ ಪ್ರೋಗ್ರಾಂ. ಡಬ್ಲ್ಯೂ.ಎಚ್.ಓ. ಯೂನಿಸೆಫ್ ; ಕಾಮನ್‌ವೆಲ್ತ್ ಪ್ರೋಗ್ರಾಂಗಳಲ್ಲಿ ಬಂದವರಿಗೆ ಆಶ್ರಯವಿತ್ತಿದೆ ಆ ದೇಶ. ಮಾನವೀಯತೆ, ಗೌರವ, ಉದಾರತ್ವ ಅವರ ಸಂಸ್ಕೃತಿ. ಕ್ರೈಸ್ತ ಮತಾವಲಂಬಿಗಳು. ಜಗತ್ತಿಗೆ ಮಾನವೀಯ ಅನುಕಂಪ, ಲೌಕಿಕ ದೃಷ್ಟಿ ಮತ್ತು ಅದರ ಮೌಲ್ಯ ಅಲ್ಲದೆ ಪ್ರಜಾಪ್ರಭುತ್ವವನ್ನು ಸಾರಿದ ಜನಾಂಗ ಮತ್ತು ದೇಶ. ವಿಜ್ಞಾನದ ತಳಹದಿ ಆ ದೇಶದ ಅಭ್ಯುದಯಕ್ಕೆ ಕಾರಣ. ಅಲ್ಲಲ್ಲಿ ಕೆಲವು ತಾರತಮ್ಯಗಳು ಕಾಣಿಸಿಕೊಂಡಿರಬಹುದು. ನಾನಾಗಲೇ ಕೆಲವು ಕಡೆ ಸೂಕ್ಷ್ಮವಾಗಿ ತಿಳಿಸಿದ್ದೇನೆ. ಸತ್ಯಸಂಗತಿ ಇಷ್ಟು : ನಮ್ಮವರೇ ನಮ್ಮ ದೇಶದ ಸತ್ಯ ತಿಳಿಯದೆ ಇರುವುದು. ಮಾನವೀಯತೆಯ ಅಭಾವ, ಅಲೌಕಿಕ ದೃಷ್ಟಿ, ಅಗೌರವ, ಅಸಹಿಷ್ಣುತೆ, ಬಹುಮತಾವಲಂಬನೆ ನೀಚ, ಉಚ್ಚ, ಎಂಬ ಸಣ್ಣತನ. ಮೌಢ್ಯತೆಯೇ ನಮ್ಮ ಜ್ಞಾನದ ತಳಹದಿ—ಇವುಗಳಾವುದರ ಅರಿವಿಲ್ಲ. ಅರಿಯದಿದ್ದವರಿಗೆ ಅರಿತಿರುವಷ್ಟೇ ಸತ್ಯ.

ನೆಪೋಲಿಯನ್ ಚರಿತ್ರಾರ್ಹ ವಾಟರ್‌ಲೂ ಕದನದ ಸೋಲಿಗಿಂತ ಮುಂಚೆ ಇಂಡಿಯಾ ದೇಶಕ್ಕೆ ಮುತ್ತಿಗೆ ಹಾಕಲು ಮನಸ್ಸು ಮಾಡಿದ್ದನಂತೆ. ನಮ್ಮ ದೇಶದ ಅಜ್ಞಾನ, ಮೂಢ ನಂಬಿಕೆಗಳೇ ಅವನ ಮದ್ದು ಗುಂಡುಗಳಾಗಿದ್ದವಂತೆ ! ಇದಕ್ಕೆಲ್ಲಾ ಕಾರಣಕರ್ತರ್ಯಾರು ?, ಅಜ್ಞಾನ ಮತ್ತು ಮೂಢ

ನಂಬಿಕೆಗಳು ; ಬೋಧಿಸಿದವರಲ್ಲವೇ ? ಈ ಸತ್ಯವೇ ಅರಿಯದ, ಅರಿತಿದ್ದರೂ ಅರಿಯದವಂತೆ ತೋರ್ಪಡಿಸುವುದೇ ಅಸತ್ಯ. ಇದಲ್ಲದೆ ನಾವು ಅನೇಕರು ವಿದ್ಯಾರ್ಥಿ ವೇತನ ಪಡೆದು ಬಂದವರು. ನಮಗೆ ಆದರ, ಗೌರವಾತಿಥ್ಯವಿತ್ತು. ಆದ್ದರಿಂದ ನಾವು ನಿಮಗೆ ಸಹಾನುಭೂತಿ ವ್ಯಕ್ತಪಡಿಸುತ್ತೇವೆ. ಸಹಾಯಕ್ಕೆ ಮಾತ್ರ ಎಳೆಯಬೇಡಿ" ಎಂದಿದ್ದೆವು.

* * * *

ರಂಗುರಂಗಿನ ಕ್ರಿಸ್‌ಮಸ್ ಹಬ್ಬ ಲಂಡನ್ ನಗರ ಪ್ರವೇಶ ಮಾಡಿತು. ಬೀದಿ ಬೀದಿಗಳಲ್ಲಿ ಏಸುವಿನ ಅನೇಕ ಬೋಧಪ್ರಧಾನ ಭಂಗಿಗಳ ಪ್ರದರ್ಶನ, ಕ್ರಿಸ್‌ಮಸ್ ಟ್ರೀಗಳು ; ಅದರಲ್ಲಿನ ನಕ್ಷತ್ರ ರಾಶಿಗಳು ; ವಿದ್ಯುತ್ ಅಲಂಕಾರದ ವೈವಿಧ್ಯಗಳಿಂದ ನಗರ ಶೃಂಗರಿಸಲ್ಪಟ್ಟಿತ್ತು. ರೀಜೆಂಟ್ ರಸ್ತೆಯಲ್ಲಂತೂ ಕಣ್ಣಿಗೆ ಹಬ್ಬ. ಪ್ರತಿ ಅಂಗಡಿಮುಂಗಟ್ಟುಗಳಲ್ಲಿ ಪ್ರತಿಭೆಯ ಪ್ರದರ್ಶನ. ನಮ್ಮ ಹಾಸ್ಟಲ್‌ನಲ್ಲಿ ಒಂದು ಪ್ರಕಟಣೆ : ಇಂಡಿಯಾ ದೇಶದ ಅತಿಥಿಗಳಿಗೆ ಕ್ರಿಸ್‌ಮಸ್ ಹಬ್ಬಕ್ಕೆ ಅನಾಮಿಕರಿಂದ ಆಹ್ವಾನ. "ನಮ್ಮಲ್ಲಿ ದಯಮಾಡಿ ಎರಡು ದಿನ ತಂಗಿದ್ದು ಆತಿಥ್ಯ ಸ್ವೀಕರಿಸಿ" ಎಂದಿತ್ತು. ಇಂತಹ ಆಹ್ವಾನವನ್ನು ನಾನಾಕಡೆ ನಾನು ಓದಿದ್ದೆ.

ನಮ್ಮ ಆಸ್ಪತ್ರೆಯಲ್ಲಿ ಬಹಳ ಸಡಗರ. ಎಂದೂ ಕಾಣದ ಹಬ್ಬದ ವಾತಾವರಣ. ಫಾದರ್ ಕ್ರಿಸ್‌ಮಸ್‌ಗೆ ಮಕ್ಕಳು ಬಹು ಮುದ್ದು. ಬೆಳಗ್ಗೆ ಪ್ರೊಫೆಸರ್ ಎಲ್ಲರಿಗೂ ಶ್ಯಾಂಪೇನ್ ಕೊಡುತ್ತಾರೆ. ಕೆಲವರಿಗೆ ಅವರ ಅರ್ಹತೆಯ ಮೇಲೆ ಜ್ಞಾಪಕಾರ್ಥ ಉಡುಗೊರೆ ಕೊಡುತ್ತಾರೆ. ನಂತರ ಫಾದರ್ ಕ್ರಿಸ್‌ಮಸ್ ಆಗಮನ ! ಅಕ್ಕಪಕ್ಕದಲ್ಲಿ ಮೊಲದಾಕೃತಿಗಳು ! ಹೊತ್ತು ತಂದರು ಬಗೆಬಗೆಯ ಆಟದ ಸಾಮಾನು ! ಎಲ್ಲರಿಗೂ ಮುದ್ದು ಮಾಡಿ ಬೊಂಬೆಗಳ ವಿತರಣೆ ; ಕ್ಯಾಮರಾಗಳ ಕ್ಲಿಕ್ ; ಎಲ್ಲೆಲ್ಲೂ ಸಡಗರ. ಮಧ್ಯಾಹ್ನ ಹುರಿದ ಟರ್ಕಿಶ್ ಬಾತುಕೋಳಿ ಕತ್ತರಿಸಿ ಹಂಚಿದರು. ರಾತ್ರಿ ಪಾರ್ಟಿ.

ಟ್ರಫಾಲ್‌ಗರ್ ಸ್ಕ್ವೇರ್‌ನಲ್ಲಿ ರಾತ್ರಿ ೧೨ರ ಸಮಯ. ಲಕ್ಷಾಂತರ ಜನಸಂದಣಿ. ಮಧ್ಯರಾತ್ರಿ ಗಂಟೆ ೧೨ ಬಾರಿಸಿತು. ಚರ್ಚ್‌ಗಳಿಂದ ಗಂಟೆಗಳ ನಾದ ಮೊಳಗಿ ತೇಲಿತು, ಪ್ರಾರ್ಥನೆಗಳಾದವು. ಯೇಸುವಿನ ಉದಯವಾಯಿತು ! ಬೆಳಗಿತು ಪೃಥ್ವಿ. ನಾವೆಲ್ಲರೂ ಅಲ್ಲಿ ಸಮಭಾಗಿಗಳು. ಮನ, ಹೃದಯ ಎರಡೂ ತುಂಬಿದ್ದವು.

ಆಸ್ಪತ್ರೆಗಳಲ್ಲಿ ರೋಗಿಗಳ ಅಭಾವ. ಕ್ರಿಸ್‌ಮಸ್‌ಹಬ್ಬದ ಸಡಗರ, ಛಳಿಗಾಲ, ಇವೆಲ್ಲ ಮುಗಿವ ತನಕ ಆಸ್ಪತ್ರೆಯಲ್ಲಿನ ದಾಖಲಾತಿ ಬಹಳ ಕಡಿಮೆ. ಶಸ್ತ್ರ ಚಿಕಿತ್ಸೆಗಳಂತೂ ಅಪರೂಪ. ನನಗೆ ಬಿಡುವು. ಡಾ|| ಸಿಂಗ್, ನಾನು, ಬ್ರಾರ್, ಮಸೂದ್ ಲಂಡನ್ನಿನ ಪ್ಲಾನೆಟೋರಿಯಂ ಮತ್ತು ಮೇಡಂ ಟುಸ್ಸಾಡ್ ನೋಡಲು ಹೊರಟೆವು. ಬೇಕರ್ ಸ್ಟ್ರೀಟ್ ಅನ್ನು ಟ್ಯೂಬ್ ಟ್ರೈನ್‌ನಿಂದ ತಲುಪಿದೆವು. ಪಕ್ಕದಲ್ಲೇ ಪ್ಲಾನೆಟೋರಿಯಂ ಮೆರಿಲ್‌ಬೋನ್ ರಸ್ತೆಯಲ್ಲಿದೆ ; ರಾತ್ರಿಯ ನಕ್ಷತ್ರಖಚಿತ ಆಕಾಶವನ್ನು ಪ್ರತಿಬಿಂಬಿಸುತ್ತದೆ. ಅದನ್ನು ದೊಡ್ಡ ಜೆಯಿಸ್ ಪ್ರೊಜೆಕ್ಟರ್‌ನಿಂದ ತೋರಿಸುತ್ತಾರೆ. ಅರ್ಧ ಗೋಳಾಕಾರದ ದೊಡ್ಡ, ವಿಶಾಲ ಗೋಪುರದಂತಿರುವ ಮೇಲ್ಛಾವಣಿಯಲ್ಲಿ ರಾತ್ರಿಯ ನಕ್ಷತ್ರ ವೈಭವದ ಪ್ರತಿಬಿಂಬವನ್ನು ಕಾಣಬಹುದು. ಪ್ರಪಂಚದ ಯಾವುದೇ ಭಾಗದಿಂದ ನೋಡಿದರೂ ಗೋಚರಿಸುವ ನಕ್ಷತ್ರಬಿಂಬವನ್ನು ತೋರಿಸುತ್ತಾರೆ. ಡಾ|| ಸಿಂಗ್ ಹೊರಬಂದಾಗ ಕಲ್ಕತ್ತದಲ್ಲಿ ಇಷ್ಟೇ ದೊಡ್ಡ ಪ್ಲಾನೆಟೋರಿಯಂ ಇದೆ ಎಂದಿದ್ದರು. ಅದುವರೆಗೂ ನನಗೆ ಅದರ ಅರಿವಿರಲಿಲ್ಲ.

ಲಂಡನ್ನಿನ ಅತ್ಯಂತ ಅಸಾಧಾರಣ ವಸ್ತುಪ್ರದರ್ಶನಗಳಲ್ಲಿ ಮೇಡಂ ಟುಸ್ಸಾಡ್ ಒಂದು. ಪ್ರವೇಶ ದ್ವಾರದಲ್ಲಿದ್ದ ಕಾನ್ಸ್‌ಟೇಬಲ್‌ಗಳನ್ನು ಪ್ರವೇಶ ಶುಲ್ಕವೆಷ್ಟೆಂದು ಕೇಳಲು ನಾನು ಮತ್ತು ಮಸೂದ್ ಹೋಗಿ ಪೆಚ್ಚಾದೆವು. ಆ ಕಾನ್ಸ್‌ಟೇಬಲ್‌ಗಳಿಬ್ಬರೂ ಮೇಣದ ಮಾಡಲ್ ಪ್ರತಿಮೆಗಳು ! ಅಷ್ಟೊಂದು ನೈಜತೆ ಜೀವ ಅಲ್ಲಿನ ಪ್ರತಿಮೆಗಳಲ್ಲಿ ತುಂಬಿದೆ. ಅದರ ಸೃಷ್ಟಿಕರ್ತೆ ಫ್ರಾನ್ಸ್ ದೇಶದ ಮಹಿಳೆ ಮೇಡಂ ಟುಸ್ಸಾಡ್. ಆಕೆ ಫ್ರೆಂಚ್ ರೆವಲ್ಯೂಶನ್‌ನಲ್ಲಿ ಬಲಿಯಾದವರ ಮುಖವಾಡವನ್ನು ಮೇಣದಿಂದ ತಯಾರಿಸುತ್ತಿದ್ದರು. ಆಕೆ ೧೮೦೨ ರಲ್ಲಿ ಇಂಗ್ಲೆಂಡಿಗೆ ಬಂದರೂ ೩೦ ವರ್ಷಗಳ ತನಕ ಆ ಸಂಸ್ಥೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಇಂದು ಅದೊಂದು ಅಧ್ಯಯನ ಸಂಸ್ಥೆಯಾಗಿದೆ. ಅಲ್ಲಿನ 'ಮಾಡಲ್‌ಗಳು' ಪ್ರಕಾಶಮಾನವಾದ, ನೈಜ, ಜೀವ ತುಂಬಿದ, ಅತ್ಯಂತ ಸೊಗಸಿನ ಕೈಚಳಕ. ಟ್ರೆಫಲ್‌ಗರ್ ಯುದ್ಧದಿಂದ ಹಿಡಿದು ರಾಣಿ ಎಲಿಜಬೆತ್ II, ಡ್ಯೂಕ್ ಆಫ್ ಎಡಿನ್‌ಬರ್ಗ್, ಜವಾಹರಲಾಲ್ ನೆಹರು, ಮಹಾತ್ಮಗಾಂಧೀಜಿ, ಸೋಫಿಯಾ ಲೋರೆನ್ ಮುಂತಾದವರ ಪ್ರತಿಮೆಗಳು ಅಲ್ಲಿವೆ.

ಕುಪ್ರಸಿದ್ಧ ಕೊಲೆಪಾತಕರೂ ಅಲ್ಲಿ ಮಾಡಲ್‌ಗಳಾಗಿದ್ದಾರೆ. ಅವರೆಲ್ಲಾ 'ಭೀಕರ ಕೊಠಡಿ'ಯೊಂದರಲ್ಲಿ ನೆಲೆ ಕಂಡಿದ್ದಾರೆ. ಕೊಲೆಯಾದ ಮರತ್ ಗ್ರೀಕ್ ಯುದ್ಧದ ರಕ್ತಸ್ರಾವವಿನ್ನೂ ಭಯಾನಕ ! , ಫ್ರಾನ್ಸ್ ದೇಶದಲ್ಲಿದ್ದ ಶಿರಚ್ಛೇದನ, ಗಿಲ್ಲೊಟಿನ್ ಖಡ್ಗ ಪ್ರಯೋಗ, ಬಲಿದಾನ, ಈಗಲೂ ಮೈ ನಡುಗಿಸುತ್ತದೆ. ಕತ್ತಲಕೋಣೆಯೊಳಗೆ ಸುತ್ತಿಸುತ್ತಿ ನಡೆವಾಗ, ದೈತ್ಯ ಕೊಲೆಗಾರರು, ಶಿರಚ್ಛೇದದ ಬಿಸಿರಕ್ತ, ಗಿಲ್ಲೊಟಿನ್‌ಗೆ ತಲೆಯೊಡ್ಡಿದವರ ಸಾವಿನ ನೋವು ಉಸಿರು ಕಟ್ಟಿಸುತ್ತದೆ.

ನಾವು ಹೊರಬಂದೆವು. ಪಕ್ಕದಲ್ಲಿನ ಕೆಫೆಟೇರಿಯಾದಲ್ಲಿ ಟೀ ಕುಡಿದು ಬಸ್ ಹತ್ತಿದೆವು. ಜವಹರಲಾಲ್ ನೆಹರೂ ಅವರ ವ್ಯಾಕ್ಸ್ ಮಾಡಲ್‌ಗೆ ಹಾಕಿದ್ದ ಖಾದಿ ಬಟ್ಟೆ ಬಹಳ ಒರಟಾಗಿ ಕಂಡಿತ್ತು, ಮತ್ತೆ ಮಾಸಿತ್ತು. ಇದರಿಂದ ನಮಗೆಲ್ಲಾ ಅಸಮಾಧಾನ. ಖಾದಿ ಬಟ್ಟೆಗಳಿಂದ ತಯಾರಿಸಿದ ಉಡುಪುಗಳು ಅತ್ಯಂತ ಆಕರ್ಷಕ. ಬಣ್ಣದಲ್ಲಿ ನಯನತೆಯಲ್ಲಿ ಮನೋಹರ. ಬೇರೆ ದೇಶಗಳಲ್ಲಿ ಅವುಗಳಿಗೆ ಬೇಡಿಕೆ ಇದೆ. ಇಷ್ಟಾದರೂ ಅದರ ಮಲಿನತೆ, ಒರಟುತನಕ್ಕೆ ಕಾರಣ ತಿಳಿಯಲಿಲ್ಲ. ಬಹುಶಃ ಉಡುಪು ತೊಡಿಸಿದವರಿಗೆ ಖದ್ದರ್ ಎಂದರೆ ಒರಟು ಮತ್ತು ಮಲಿನ ಮಿಶ್ರಣ ಎಂಬರಿವಿರಬಹುದೆ ? ಇಲ್ಲ ಆ ಉಡುಪು ತೊಡಿಸಿ ೮-೧೦ ವರ್ಷಗಳಾಗಿವೆಯೆ ? ಸಾವಿರಾರು ವಿದೇಶಿಗಳು ಬಂದು ಹೋಗುವ ವಸ್ತು ಪ್ರದರ್ಶನವಲ್ಲವೆ ? ಹೌದು. ವಿಷಯ ಸಣ್ಣದಾದರೂ ಅಪಪ್ರಚಾರ ಅತ್ಯಧಿಕ. ನಮ್ಮ ದೇಶದಲ್ಲಿ ಬಡತನವಿದೆ, ಐಶ್ವರ್ಯವಂತರಿಗೂ ಬಡವರಿಗೂ ಕಣಿವೆಯಷ್ಟು ಆಳ, ಅಂತರವಿದೆ. ಮಧ್ಯಮ ವರ್ಗ ಒಂದಿದೆ. ಅದು ಆಳ ಮತ್ತು ಅಂತರವನ್ನು ಕಡಿಮೆ ಮಾಡುತ್ತದೆ. ಬಡವರಲ್ಲಿ ಮತ್ತೊಂದು ವರ್ಗವೆಂದರೆ ಕಡುಬಡವರು. ಮನೆ ಇಲ್ಲ, ನೆಲವಿಲ್ಲ. ಉಡಲು ಬಟ್ಟೆ ಇಲ್ಲ. ಇದು ಬಡತನದಿಂದಾದುದಲ್ಲ. ಸಾವಿರಾರು ವರ್ಷಗಳ ಶೋಷಣೆಯ ಫಲ ; ಮೂಢ ನಂಬಿಕೆಯ ಫಲ. ಆದರೆ ದೇಶದ ಪ್ರಥಮ ಪ್ರಧಾನ ಮಂತ್ರಿ ೧೭ ವರ್ಷಗಳ ದೀರ್ಘಾವಧಿಯಲ್ಲಿ. ಪ್ರಧಾನ ಮಂತ್ರಿಯಲ್ಲದೆ ಶ್ರೀಮಂತ ಸಂಜಾತರಿಗೆ ಶೋಭಿಸುವುದಿಲ್ಲ ; ಅಂದಿನ ಆ ಉಡುಪು.

ನಮ್ಮ ದೇಶ ಬಡದೇಶವಲ್ಲ. ಶ್ರೀಮಂತ ದೇಶ. ಬಹಳಷ್ಟು ಜನ ಬಡವರಿದ್ದಾರೆ ಅಷ್ಟೆ. ಹೇಗೆ ಸಾಧ್ಯ ? ಮೇಲೆ ಹೇಳಿದಂತೆ ಕೆಲವಷ್ಟು ಜನ

ರಲ್ಲಿ ದೇಶದ ಸಂಪತ್ತೆಲ್ಲಾ ಇದೆ. ಒಬ್ಬ ಯಜಮಾನನಿದ್ದಾನೆ. ಅವನಿಗೆ ಹತ್ತಾರು ದುಡಿವ ಆಳುಗಳು. ಈ ಆಳುಗಳ ಜಮೀನೆಲ್ಲಾ ಯಜಮಾನನದೇ. ಆ ಜಮೀನಿನಲ್ಲಿ ಕೆಲಸ ಮಾಡಿ ಅವನ ಮನೆ ತುಂಬುವವರು, ಬೊಕ್ಕಸ ತುಂಬುವವರು ಆಳುಗಳು ! ಸ್ತ್ರೀಯರಲ್ಲಿನ ಚಿನ್ನದ ವ್ಯಾಮೋಹ ಅತ್ಯಧಿಕ. ಕೆಲವು ಪುರುಷರೂ ಇದಕ್ಕೆ ಹೊರತಲ್ಲ. ಚಿನ್ನ, ಬೆಳ್ಳಿ ದಾಸ್ತಾನು ಕೂಡಿಡುವ ರೂಢಿ ನಮ್ಮ ದೇಶದ ಸಂಸ್ಕೃತಿಗಳಲ್ಲೊಂದು. ದೇಶದ ಅಭ್ಯುದಯಕ್ಕಿಲ್ಲ ಚಿನ್ನ. ಬರಿ ಕಿವಿ, ಕತ್ತು, ಕೈಗಳ ಶೃಂಗಾರಕ್ಕೆ ಮತ್ತು ಸಂಪತ್ತನ್ನು ಚಿನ್ನದ ರೂಪದಲ್ಲಿ ಕೂಡಿಡುವುದಕ್ಕೆ ಮಾತ್ರ ಚಿನ್ನ. ಹಣವಂತರು ಚಿನ್ನವನ್ನು ಬಿಸ್ಕತ್‌ಗಳಾಗಿ, ಇಟ್ಟಿಗೆಗಳಾಗಿ ಹೂತಿಡುತ್ತಾರೆ. ದಾಸ್ತಾನುಗಳ ಅಭಾವ ಸೃಷ್ಟಿಸುತ್ತಾರೆ. ಬೆಲೆ ಗಗನಕ್ಕೇರುತ್ತದೆ. ಮಾನವ ಕರುಣೆಯಂತೂ ಅವರ ಕೂರ್ಮಾವತಾರದಲ್ಲಿ ಮಾಯ ! ದೇವಸ್ಥಾನಗಳಲ್ಲಿ ಚಿನ್ನದ, ಬೆಳ್ಳಿಯ ವಿಗ್ರಹ, ಒಡವೆ, ಇತ್ಯಾದಿ ಇತ್ಯಾದಿ. ಯೂರೋಪಿನ ಮಹಿಳೆಯರಲ್ಲಿ ಒಂದು ಮದುವೆಯ ಉಂಗುರ ಸರ್ವೇಸಾಮಾನ್ಯ. ಕತ್ತಿಗೊಂದು ಚೈನ್ ಇರಬಹುದು. ನಮ್ಮ ದೇಶದಲ್ಲಿನ ಚಿನ್ನ ಸುಮಾರು ೫ ಪಂಚವಾರ್ಷಿಕ ಯೋಜನೆಗಳಿಗಾಗುವ ಖರ್ಚು ನಿಭಾಯಿಸುತ್ತದೆ.

“ತಾಯಿ, ಮಕ್ಕಳನ್ನು ಬಾವಿಗೆ ತಳ್ಳಿ ತಾನೂ ಪ್ರಾಣ ತೆತ್ತಳು, ಕಾರಣ ಬಡತನ. ಅನ್ನವಿಲ್ಲದೆ ನರಳಿ ಪ್ರಾಣಬಿಟ್ಟರು, ಛಳಿ ತಡೆಯಲಾರದೆ ಉತ್ತರ ಇಂಡಿಯಾದಲ್ಲಿ ಇಷ್ಟು ಜನ ಅಸು ನೀಗಿದರು” ಎಂದೆಲ್ಲಾ ಓದಿದ್ದೇವೆ. ಕೂರ್ಮಾವತಾರಿಗಳೂ ಓದುತ್ತಾರೆ. ಆದರೇನು ಬಂತು. ನನ್ನ ದೇಶ, ನಾವು ಇಂಡಿಯಾ ದೇಶದವರೆಂಬ ಅಭಿಮಾನವಿಲ್ಲ, ಮಾನವತ್ವ ಇಲ್ಲ. ಎಷ್ಟೊಂದು ಚಿನ್ನದ ದಾಸ್ತಾನು ಕೊಳೆಯುತ್ತಿದೆ ; ದೇಶಾಭ್ಯುದಯಕ್ಕೆ, ಜನಪ್ರಗತಿಗೆ ದೊರಕದು. ಅಂತೆಯೇ ಆಹಾರ ಸಾಮಗ್ರಿಗಳಿಗೆ ಅಭಾವವಿಲ್ಲ. ಅಭಾವ ಕೃತಕ ; ಅಯೋಗ್ಯರಿಂದಾದದ್ದು.

ಎರಡನೆ ಮಹಾಯುದ್ಧದಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿ ಚರ್ಚಿಲ್ಲರು ಒಬ್ಬ ಪ್ರಜೆಗೆ ಒಂದು ಊಟಕ್ಕೆ ೬ ಔನ್ಸ್ ಬ್ರೆಡ್ ಎಂದು ರೇಷನ್ ತಂದಿದ್ದರು. ಶ್ರೀಮತಿ ಚರ್ಚಿಲ್ಲರು ಪ್ರತಿ ಊಟಕ್ಕೂ ಕ್ಯೂನಲ್ಲಿ ನಿಂತು ಒಬ್ಬರಿಗೆ ೬ ಔನ್ಸ್ ನಂತೆ ಬ್ರೆಡ್ ಕೊಡುತ್ತಿದ್ದರಂತೆ ! ದೇಶಪ್ರೇಮ, ಶಿಸ್ತು, ವಿಜಯಕ್ಕೆ ನಾಂದಿ. ಸೀಮೆಎಣ್ಣೆ ರೇಷನ್ ಮಾಡುತ್ತಾರೆಂದು ವದಂತಿ ನಮ್ಮಲ್ಲಿ ಬಂತು. ರಾತ್ರೋ

ರಾತ್ರಿ ೨–೩ ತಿಂಗಳಿಗಾಗುವಷ್ಟು ಸೀಮೆಎಣ್ಣೆ ಶೇಖರಣೆಯಾಯಿತು. ಎಲ್ಲಿ ? ಹಣವಿದ್ದವರ ಮನೆಯಲ್ಲಿ, ಅಧಿಕಾರವಿದ್ದವರಲ್ಲಿ. ಆ ದಿನದ ಸೀಮೆಎಣ್ಣೆ ಆ ದಿನವೇ ಕೊಂಡೊಯ್ಯುವವನಿಗೆ ? ಇದು ಉದಾಹರಣೆಗೊಂದು.

ಇನ್‌ಕಂಟ್ಯಾಕ್ಸ್ ಹೊರೆ ತಡೆಯಲಾರದೆ, ಧರ್ಮ ಸಂಕಟದಿಂದಾಗಿ ಹೊಸಜೀವನ ಒಂದು ತಲೆ ಹಾಕಿದೆ. ವ್ಯಾಪಾರಿಗಳ, ಇತರ ಐಶ್ವರ್ಯವಂತರ ಹುಡುಗರು ಸ್ಟಾರ್ ಹೋಟೆಲ್‌ಗಳಲ್ಲಿ ಭೋಜನ ಮತ್ತು ಕ್ಯಾಬರೇ ನರ್ತನಕ್ಕೆ ಹಣ ಖರ್ಚು ಮಾಡುತ್ತಾರೆಂದು ಕೇಳಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರ ಭಾಷಣಕ್ಕೆ ಮೈಸೂರಿನ ವಿಶ್ವವಿದ್ಯಾನಿಲಯದ ಆಟದ ಮೈದಾನದಲ್ಲಿ ನಿಂತಿದ್ದೆ. ನಮ್ಮವರು ಮುಂದೆ ಕುಳಿತಿದ್ದರು. ಪ್ರೊಫೆಸರರ ಸ್ನೇಹಿತರೊಬ್ಬರು "ಏನಿದು ? ನಮ್ಮ ಮನೆಯಲ್ಲಿ ೪೦ ವರ್ಷದಿಂದ ಕೆಲಸಕ್ಕಿದ್ದ ನಮ್ಮ ರಾಮು. ಆರಾಮು ಜೀವನ. ಈಗಿನ ೨೦ ಪಾಯಿಂಟ್ ಪ್ರೋಗ್ರಾಂ ಪ್ರಕಾರ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಿಲ್ಲ. ಅವನಿಗೆ ಕೆಲಸವಿಲ್ಲ. ಅದಿಲ್ಲದೆ ಅವನಿಗೆ, ಅವನ ಮಕ್ಕಳಿಗೆ ಅನ್ನವಿಲ್ಲ" ಎಂದರು. ನನಗೇಕೊ ಕೋಪ ಬಂದಿತ್ತು. "ಹೌದು ನಿಮ್ಮಲ್ಲಿ ೪೦ ವರ್ಷಕಾಲ ದುಡಿದವನಿಗೆ ಒಂದು ದಿನದ ಅನ್ನಕ್ಕೆ ನಿಮ್ಮನ್ನೇ ಆಶ್ರಯಿಸುವಂತೆ ಮಾಡಿದ್ದೀರಲ್ಲ" ಎಂದಿದ್ದೆ.

ಡಾ|| ವಾಡಗಿಯವರಿಂದ ಕಾಗದ ಬಂದಿತ್ತು. ಕಳೆದುಹೋದದ್ದೇನೊ ಸಿಕ್ಕಿದಂತಾಯಿತು. ಅಡ್ರೆಸ್‌ನಲ್ಲಿ ವೆಸ್ಟ್‌ಹೀತ್ ಹಾಸ್ಪೆಟಲ್, ರೆಡ್‌ನಾಲ್‌ರೋಡ್, ಬರ್ಮಿಂಗ್ ಹ್ಯಾಂ, ೩೦ ಎಂದಿತ್ತು. ಅವರು ಅಲ್ಲಿಗೆ ಹೋದದ್ದೇ ನನಗೆ ತಿಳಿದಿರಲಿಲ್ಲ. ಕಾಗದ ಓದಿದಾಗ 'ನಾಳೆ ಲಂಡನ್ನಿಗೆ ಬರುತ್ತೇನೆ' ಎಂದು ಬರೆದಿದ್ದರು. ಸ್ನೇಹಿತರಿಗೆ ತಿಳಿಸಿದೆ. ಡಾ|| ಇ. ವಿ. ಲಿಲಿ ೮ : ೪, ರೂಪ್‌ನಗರ್, ಸಬ್ಜಿಮಂಡಿ, ಡೆಲ್ಲಿ—೭, ಅವರ ಪರಿಚಯವಾಗಿತ್ತು. ಡಾ|| ಲಿಲಿ ನಮ್ಮ ಆಸ್ಪತ್ರೆಯಲ್ಲಿ ಇ. ಎನ್. ಟಿ. ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಆರನೇ ಸಾರಿಗೆ ಎಫ್. ಆರ್. ಸಿ. ಎಸ್. ಮಾಡಿದ್ದರು. ಮಿ|| ಮ್ಯಾಥಿವ್ಸ್ ಇ.ಎನ್.ಟಿ. ಕನ್ಸಲ್ಟೆಂಟ್. ಇವರಿಗೆ ಡಾ|| ಲಿಲಿ ಅಸಿಸ್ಟೆಂಟ್. ಮ್ಯಾಥಿವ್ಸ್ ಒಳ್ಳೆ ಸರ್ಜನ್ ಅಲ್ಲದೆ ದೊಡ್ಡ ಮನುಷ್ಯರೂ ಹೌದು. ಇಂಡಿಯಾದ ಡಾಕ್ಟರ್‌ಗಳಿಗೆ ಅವರ ಅಂತರಾತ್ಮದಲ್ಲಿ ಜಾಗವಿತ್ತು. ಶಸ್ತ್ರ ಚಿಕಿತ್ಸೆಗೆ ಅವರಲ್ಲಿ ಕೆಲಸ ಮಾಡುವವರಿಗೆ ಅವಕಾಶ ಹೆಚ್ಚು. ಕೆಲವು ಕಡೆಗಳಲ್ಲಿ ಈ ಅವಕಾಶ ನಮ್ಮವರಿಗೆ ಕಡಿಮೆ. ಒಟ್ಟಿನಲ್ಲಿ ಸರ್ಜನ್‌ಗಳಿಗೆ ಅಸಿಸ್ಟ್ ಮಾಡಿ

ಆಪರೇಶನ್ ಕಲಿತುಕೊಳ್ಳುವವರೇ ಹೆಚ್ಚು. ಸ್ವತಃ ಆಪರೇಶನ್‌ಗಳಿಗೆ ಅವಕಾಶ ಸಿಕ್ಕಿ ಕಲಿತುಕೊಳ್ಳುವವರು ಬಹಳ ಕಡಿಮೆ. ಇದು ಆ ದೇಶಕ್ಕೇ ಸೀಮಿತವಾದದ್ದಲ್ಲ. ನಮ್ಮ ದೇಶದಲ್ಲೂ ಉಂಟು. ಆ ದೇಶದ ವೈದ್ಯರಿಗೆ ಸ್ವತಃ ಶಸ್ತ್ರ ಚಿಕಿತ್ಸೆ ಮಾಡುವ ಅವಕಾಶ ಕಡಿಮೆ ಎಂದ ಮೇಲೆ ಹೊರದೇಶದಿಂದ ಕಲಿಯಲು ಹೋದ ವೈದ್ಯರಿಗೆ ಮತ್ತೂ ಕಡಿಮೆ ಅವಕಾಶ. ಸ್ವಾರಸ್ಯಕರ ಆಪರೇಶನ್‌ಗಳಂತೂ ಸ್ವತಃ ಮಾಡಲು ಅತಿ ದುರ್ಲಭ. ಕಾರಣ ಸ್ವಾರಸ್ಯಕರ ಶಸ್ತ್ರಚಿಕಿತ್ಸೆಗಳು ಯಾವ ಅನುಭವಿಗೂ ಆಸೆ. ಅವರೇ ಮಾಡಿ ಮುಗಿಸುತ್ತಾರೆ. ಅವರಿಗೆ ಆಗ ಮುಜುಗರವೂ ಉಂಟು. ಹೀಗಾಗಿ, ಅಸಿಸ್ಟೆಂಟ್‌ಗಳಿಗೆ ಅವುಗಳ ಅವಕಾಶ ಕಡಿಮೆ. ಇದು ಒಂದು ದೇಶದ್ದಲ್ಲ. ಎಲ್ಲಾ ದೇಶಗಳಲ್ಲೂ ಕಂಡುಬರುವ ಸತ್ಯ. ಇದರಲ್ಲಿ ಇನ್ನೊಂದು ಮುಖವಿದೆ. ಅದೇ ವೃತ್ತಿದ್ವೇಷ ಅಂದರೆ ಪ್ರೊಫೆಶನಲ್ ಜಲಸಿ. ತನ್ನ ಅಸಿಸ್ಟೆಂಟ್ ಇದೆಲ್ಲವನ್ನೂ ಒಮ್ಮೆಗೆ ಕಲಿತರೆ ತನ್ನ ದೊಡ್ಡತನಕ್ಕೆ ಧಕ್ಕೆ. ಇದೇ ಸ್ವಲ್ಪ ಹೆಚ್ಚೆಂದು ಕಾಣುತ್ತದೆ. ಆದರೆ ಆಪರೇಷನ್‌ಗಳಿಗೆ ಅಸಿಸ್ಟ್ ಮಾಡಿಯೋ, ಇಲ್ಲ ಕೆಲವು ಶಸ್ತ್ರಚಿಕಿತ್ಸಾ ವಿಧಾನಗಳನ್ನು ನೋಡಿಯೋ ಗ್ರಹಿಸಲು ಸಾಧ್ಯ. ಹೀಗಾಗಿ, ಎಷ್ಟೋ ಅಸಿಸ್ಟೆಂಟ್‌ಗಳು ಸರ್ಜನ್‌ಗಳನ್ನೇ ಚಿಕಿತ್ಸಾ ವಿಧಾನದಲ್ಲಿ ಮೀರಿಸಿದ್ದಾರೆ. ಶಸ್ತ್ರಚಿಕಿತ್ಸಾಕಲೆ ಅಮೋಘವಾದದ್ದು. ಶಸ್ತ್ರಚಿಕಿತ್ಸೆಯೋ ಅತ್ಯಂತ ಶ್ರೇಷ್ಠ ದರ್ಜೆಯ ಕರಕುಶಲ ಕೆತ್ತನೆಯ ಕೆಲಸ. ತಪಸ್ಸಿಗೆ ಇಲ್ಲುಂಟು ಪ್ರಥಮ ಸ್ಥಾನ. ದೈಹಿಕ, ಮಾನಸಿಕ ಪರಮೋಚ್ಚ ಸಂಗಮ—ಶಸ್ತ್ರಚಿಕಿತ್ಸೆ ! ಅನುಭವ ಬೇಕು, ನಿಜ. ಅನುಭವವನ್ನು ಹೇಗೆ ಗುರುತಿಸುವುದು ? ಕಪಾಲದಲ್ಲಿನ ನರೆಕೂದಲುಗಳಿಂದಲೇ ; ಇಲ್ಲ ಮುಖದಲ್ಲಿನ ಸುಕ್ಕುಗಳಿಂದಲೇ. ಅವೆರಡರಿಂದಲೂ ಅಲ್ಲ, ಅಸಾಧಾರಣ ಸತತ ಅಭ್ಯಾಸದಿಂದ. ಪ್ರತಿ ಶಸ್ತ್ರಚಿಕಿತ್ಸೆಯಲ್ಲೂ 'ಸಾವಿರಕ್ಕೆ ಇಷ್ಟು ಪ್ರಮಾಣ' ಎಂದು ಸಾವು, ನೋವುಗಳುಂಟು. ಒಂದು ಉದಾಹರಣೆ : ಒಮ್ಮೆ ಬೆಂಗಳೂರಿನಲ್ಲಿ ಮಹಾಬೋಧಿ ಸಂಸ್ಥೆಯವರಿಂದ ಏರ್ಪಟ್ಟ ಒಂದು ಸಮಾರಂಭ. ಬುದ್ಧರಕ್ಷಿತ ತೇರ ಅವರಿಂದ ಕಾರ್ಯಗತವಾಗಿತ್ತು ಆ ದಿನದ 'ಸುಟ್ಟಗಾಯಗಳ ಚಿಕಿತ್ಸಾ ವಾರ್ಡ್‌ನ ಉದ್ಘಾಟನಾ ಸಮಾರಂಭ.' ಐ.ಎ.ಎಸ್. ಆಫೀಸರೊಬ್ಬರ ಭಾಷಣ. ಸರ್ವೇ ಸಾಮಾನ್ಯವಾಗಿ ವೈದ್ಯರ ಅಲಕ್ಷ್ಯ, ಕಟುಕತನ, ರೋಗಿಗಳ ರಕ್ತ ಹೀರುವಿಕೆಗೆ ಸಂಬಂಧಿಸಿದ್ದು. ನಂತರ ಮಾತಿನ ಮಧ್ಯೆ ಒಂದು ಉದಾಹರಣೆ ಕೊಟ್ಟರು. "ನನ್ನ ಸ್ನೇಹಿತರೊಬ್ಬರು

ಶಸ್ತ್ರಚಿಕಿತ್ಸಾ ಪರಿಣಿತರು. ಅವರು ೨೦೦೦ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಒಂದೂ ಸಾವು, ನೋವಿಲ್ಲ" ಎಂದು ಉದಾಹರಿಸಿದರು. ನಾನು ಎದ್ದು "ಸ್ವಾಮಿ, ನಿಮ್ಮ ಈ ಉದಾಹರಣೆ ನಿಜವಾಗಿದ್ದರೆ ನಿಮ್ಮ ಸ್ನೇಹಿತ ಶಸ್ತ್ರಚಿಕಿತ್ಸಕನೂ ಅಲ್ಲ, ಶಸ್ತ್ರಚಿಕಿತ್ಸೆಯನ್ನು ಮಾಡಿಯೂ ಇಲ್ಲ" ಎಂದೆ. ಯಾವ ಶಸ್ತ್ರಚಿಕಿತ್ಸ ಕನೇ ಆಗಲಿ, ಜಗತ್ತಿನ ಯಾವ ದೇಶದವನೇ ಆಗಲಿ ಈ ಸತ್ಯವನ್ನು ಒಪ್ಪದಿದ್ದರೆ ಆತ ಮಹಾಸುಳ್ಳುಗಾರ !

ಮಿ॥ ಮ್ಯಾಥಿವ್ಸ್‌ರವರ ಅಪ್ಪಣೆ ಪಡೆದು ಡಾ॥ ಲಿಲೆ, ಮತ್ತು ನಾವು ಮೊದಲೇ ನಿಶ್ಚಿತವಾಗಿದ್ದಂತೆ ಕೇಂಬ್ರಿಡ್ಜ್ ನೋಡಲು ಹೊರಬಿದ್ದೆವು. ಮ್ಯಾಥಿವ್ಸ್‌ರವರು "ಅಲ್ಲಿನ ಸೈಕಲ್‌ಗಳನ್ನು ನೋಡಲು ಮರೆಯಬೇಡಿ" ಎಂದು ಘೊಳ್ಳೆಂದು ನಕ್ಕರು, ಸುಖ ಪ್ರಯಾಣ ಕೋರಿದರು.

ಕೇಂಬ್ರಿಡ್ಜ್ ಪಟ್ಟಣ ಲಂಡನ್ ನಗರದಿಂದ ೫೨ ಮೈಲಿ ದೂರ. ಲಿಲೆ ಯವರ ವೋಕ್ಸ್‌ವ್ಯಾಗನ್ ಕಾರಿನಲ್ಲಿ ನಮ್ಮ ಪ್ರಯಾಣ. ಡಾ॥ ವಾಡಗಿಯವರೂ ಸೇರಿದರು. ಕೇಂಬ್ರಿಡ್ಜ್ ಪಟ್ಟಣ ಪ್ರಖ್ಯಾತ ವಿದ್ಯಾಪೀಠಗಳಿಗೆ ಹೆಸರುವಾಸಿ. ಪಟ್ಟಣ ತಲುಪಿದಾಗ ಮೈಸೂರು ನಗರ ಜ್ಞಾಪಕಕ್ಕೆ ಬಂತು. ಗಡಿಬಿಡಿ ಇಲ್ಲ, ವೇಗದ ವಾಹನಗಳಿಲ್ಲ, ಅಧಿಕ ಜನಸಂದಣಿ ಇಲ್ಲ. ಜನರಲ್ಲಿ ಲಂಡನ್ ನಗರದಲ್ಲಿದ್ದ ಆತುರವಿಲ್ಲ. ಪ್ರಶಾಂತತೆ ಎಲ್ಲೆಲ್ಲೂ, ಸಮಾಧಾನ, ಸಂತೃಪ್ತಿ ಕಂಡಿತ್ತು. ಇಷ್ಟು ದಿವಸಕ್ಕೆ ನೂರಾರು ಸೈಕಲ್ ಸವಾರರ ಗೋಚರ ! ಅಲ್ಲಿನ ಸೈಕಲ್‌ಗಳ ವೈವಿಧ್ಯತೆ, ಚರಿತ್ರೆಯೇ ಬೇರೆ. ಕೆಲವಕ್ಕೆ ಬೆಲ್‌ಗಳಿಲ್ಲ. ಮತ್ತೆ ಕೆಲವುಗಳಿಗೆ ಮಡ್‌ಗಾರ್ಡ್ ಇಲ್ಲ, ತುಕ್ಕು ಹಿಡಿದು, ಗುಜರಿಯಿಂದ ಬಂದಿರಬಹುದೇ ? ಇಲ್ಲ. ಗುಜರಿಯಲ್ಲಿನ ಬೆಲೆಯನ್ನು ತಪ್ಪಿಸಿಕೊಂಡಿರಬಹುದೆ ? ಆಶ್ಚರ್ಯ ! ಸ್ವಾರಸ್ಯ ಸತ್ಯ ಸಂಗತಿ ಎಂದರೆ ಪುರಾತನವಾದಷ್ಟು ಅಧಿಕ ಬೆಲೆ ! ಆಗಾಗ್ಗೆ ಅವುಗಳ ಪ್ರದರ್ಶನ ಉಂಟು. ಅತಿ ಪುರಾತನ ಸೈಕಲ್ಲಿಗೆ ಬಹುಮಾನವುಂಟು. ಅಲ್ಲಿನ ಜನ ಪುರಾತನ ವಸ್ತುಪ್ರಿಯರು. ಚರ್ಚ್ ಆಕಾರದ ಕಿಂಗ್ಸ್ ಕಾಲೇಜು ಮತ್ತು ಟ್ರಿನಿಟಿ ಕಾಲೇಜುಗಳಿವೆ. ಒಳಗಡೆ ವಿಶಾಲವಾದ ಪ್ರಾಂಗಣ. ಕಾಲೇಜಿನ ಹೊರಗೆ ಸುತ್ತಲೂ ಹಸುರಿನ ಹಾಸಿಗೆ. ಪಕ್ಕದಲ್ಲೊಂದು ಕಾಲುವೆ. ಕಾಲುವೆಯ ದಂಡೆಯ ಮೇಲೆ ಸಾಲು ಮರಗಳು. ನಾವು ಹೋದಾಗ ಕಾಲುವೆ ಬತ್ತಿತ್ತು. ಅನೇಕ ಉದ್ಯಾನವನಗಳುಂಟು. ಅಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಹೆಚ್ಚು. ಎಲ್ಲೋ ತಲ್ಲೀನ

ರಾಪಂತೆ ; ಎಲ್ಲಿಯೋ ವಿಹರಿಸುತ್ತಿದ್ದವರಂತೆ. ಕಾಣದ್ದನ್ನು ಕಂಡಂತೆ ಕಂಡರು ಆ ಜ್ಞಾನಾರ್ಥಿಗಳು ! ಪ್ರೊಫೆಸರ್‌ಗಳು ಕೆಲವರು ಇದ್ದಿರಬಹುದು. ಹೇಗೆ ತಿಳಿಯಿತು ? ನೀಳವಾದ ತಲೆಗೂದಲು, ಭುಜದ ಮೇಲೆ ಮಲಗಿತ್ತು, ಇಲ್ಲ ನಡೆವಾಗ ನಲಿಯುತ್ತಿತ್ತು. ಅಲ್ಲಲ್ಲಿ ಬಿಳಿ ಕೂದಲು ! ಸುಕ್ಕಿಡಿದ ಹಣೆ ! ಕೈಯಲ್ಲಿ ಸರಸ್ವತಿ ! ಅಡ್ಡಾಡಿದೆವು ; ಲಂಚ್ ಮುಗಿಸಿ ಹೊರಬಿದ್ದೆವು.

ಸಾಯಂಕಾಲ ಹಾಗೇ ಹೈಡ್‌ಪಾರ್ಕ್‌ನಲ್ಲಿ ಅಡ್ಡಾಡಿದೆವು. ಅದು ವಿಸ್ತೀರ್ಣದಲ್ಲಿ ೩೪೦ ಎಕರೆಗಳಷ್ಟು. ಹದಿನೆಂಟನೆ ಮತ್ತು ಹತ್ತೊಂಬತ್ತನೆ ಶತಮಾನದಲ್ಲಿ ಅದು ಸಮಾಜದಲ್ಲಿನ ಉನ್ನತ ಮಟ್ಟದ ಉತ್ತಮ ಉಡುಪು ಧರಿಸಿ ಎಲ್ಲರ ಮೆಚ್ಚಿಗೆಗೆ ಪಾತ್ರರಾದ, ನೀಟುಗಾರ ನೀಟುಗಾತಿಯರ ಕುದುರೆ ಸವಾರಿಯ ಸ್ಥಳವಾಗಿತ್ತಂತೆ. ಈಗಲೂ 'ರಾಟೆನ್‌ರೊ' ಎಂಬ ೧-೧.೫ ಮೈಲಿ ಉದ್ದದ ಕುದುರೆ ಸವಾರಿಯ ದಾರಿ ಇದೆ. ಅಲ್ಲಿ ಲಂಡನ್ ನಗರದ ಮುಖ್ಯ ಸವಾರರು ಈಗಲೂ ಕಂಡುಬರುತ್ತಾರೆ. ಪಾರ್ಕ್‌ಲೇನ್‌ನಿಂದ ಬಾಂಡ್‌ಸ್ಟ್ರೀಟ್‌ನವರೆಗೆ ಇರುವ ಜಾಗ ಶ್ರೀಮಂತ ನಿವಾಸ. ಸಂವೃದ್ಧ ಭರಿತ ಗ್ರೋಸವೆನಾರ್, ಡಾರ್ಚೆಸ್ಟರ್ ಮತ್ತು ಹಿಲ್ಟನ್ ಎಂಬ ವೈಭವದ ಹೋಟೆಲ್‌ಗಳೂ ಅಲ್ಲಿವೆ. ಹೈಡ್ ಪಾರ್ಕ್‌ನ ವಿಶೇಷವೆಂದರೆ ಭಾಷಣಾ ಸ್ವಾತಂತ್ರ್ಯ. ಯಾರು ಬೇಕಾದರೂ ಅಲ್ಲಿ ಇರುವ ವೇದಿಕೆಯನ್ನೇರಿ ಭಾಷಣ ಬಿಗಿಯಬಹುದು. ವಿಷಯ ಯಾವುದಾದರೂ ಅಡ್ಡಿ ಇಲ್ಲ. ಮನಸ್ಸಿಗೆ ತೋಚಿದ್ದನ್ನು ಸರಿಕಂಡದ್ದನ್ನು ಹೇಳಬಹುದು. ಅದು ಅಲ್ಲಿನ ವೈಶಿಷ್ಟ್ಯ. ಪಾಕಿಸ್ತಾನದ ಅಡ್ವೊಕೇಟ್ ಒಬ್ಬರು ಆಗ ಇಂಡಿಯಾದ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರನ್ನು ತೆಗಳುತ್ತಿದ್ದರು. ಕಾಶ್ಮೀರದ ವಿಷಯ ವಾದಕ್ಕೆ ಎಡೆ ಮಾಡಿತ್ತು. ನಾವು ಇಂಡಿಯಾದವರು. ಅಡ್ವೊಕೇಟ್‌ರ ಭಾಷಣದಲ್ಲಿ ಉತ್ಪ್ರೇಕ್ಷೆ ಇದ್ದಂತಿತ್ತು. ನನಗೆ ಹಿಡಿಸಲಿಲ್ಲ.

ಪಕ್ಕದ ವೇದಿಕೆಯಲ್ಲಿ ಆಫ್ರಿಕಾದವರೊಬ್ಬರ ಭಾಷಣ. ಅವರ ಸುತ್ತ ಜನಸಂದಣಿಯೂ ಸುಮಾರು ಹೆಚ್ಚೇ. ಆಗಾಗ್ಗೆ ಲಂಡನ್ ಪೋಲೀಸ್ ಟೇಪ್ ರೆಕಾರ್ಡರ್ ಅಥವಾ ವೈರ್‌ಲೆಸ್ ಯಂತ್ರ ಹಿಡಿದು ಗಸ್ತು ತಿರುಗುವುದು ವಾಡಿಕೆ. ಭಾಷಣ ತೀರಾ ಹದ್ದು ಮೀರಿದರೆ ರೆಕಾರ್ಡ್ ಆಗುತ್ತಿತ್ತು. ನಾವು ಜನಸಂದಣಿಯಲ್ಲಿ ಬೆರೆತೆವು. ಇಂಗ್ಲಿಷ್ ಹುಡುಗಿಯೊಬ್ಬಳು "ನಿಮ್ಮ ಊರಿಗೆ ಹೋಗಿ. ಇಲ್ಲೇಕೆ ಅಲೆಯುತ್ತೀರಿ" ಎಂದದ್ದಕ್ಕೆ, ಭಾಷಣಕಾರ "ಇದೂ ನಮ್ಮ ಊರೇ. ನಮ್ಮನ್ನೆಲ್ಲಾ ದೋಚಿದ್ದೀರಿ. ಆದ್ದರಿಂದ ಇದೇ ನಮ್ಮ ಊರು" ಎಂದು ಸಭಿಕರ

ಕಡೆ ಕೈ ತೋರಿಸುತ್ತಾ "ನೋಡಿ ಈಕೆ ಇಲ್ಲೇಕೆ ಅಲೆಯುತ್ತೀರಿ ಎನ್ನೋಣವೆ. ಪಾಪ, ಜರ್ಮನರು ಇವರ ಮೇಲೆ ಬೀಳುತ್ತಾರೆ. ಆಗ ನನ್ನ ಸಹಾಯ ಬೇಕು. ಅದಕ್ಕಾಗಿ ಇಲ್ಲೇ ಇದ್ದೇನೆ" ಎಂದು ನಕ್ಕರು. ಇಂಗ್ಲಿಷ್ ಹುಡುಗನೊಬ್ಬ ಕೆರಳಿ "ಬೋಳಿಮಗ, ನಿನ್ನ ದೋಣಿ, ಬಾಳೆಹಣ್ಣು ನೋಡಿಕೊ ; ಅದೆಲ್ಲ ನಿನಗೇಕೆ ?" ಎಂದೇ ಬಿಟ್ಟ. ಭಾಷಣಕಾರ ತಾಳ್ಮೆಗಾರ, ನಗೆಗಾರ, ನಕ್ಕರು. ಸುತ್ತಲೊಮ್ಮೆ ಅವಲೋಕಿಸಿ "ಇಲ್ಲಿ ನೆರೆದಿರುವವರಿಗೆ ಗೊತ್ತು, ಈತನೋ ಅಥವಾ ನಾನೋ ಬೋಳಿಮಗ ಎಂದು. ನಿನಗೆ ತಂದೆ ಯಾರು ಗೊತ್ತೆ ?" ಎಂದು ಹುಡುಗನನ್ನು ಕೇಳಿದಾಗ ಹುಡುಗ ಮಾಯವಾಗಿದ್ದ ! ಪೊಲೀಸ್ ರೆಕಾರ್ಡ್ ಮಾಡಿಕೊಂಡ. ಇದು ಅಲ್ಲಿನ ವಾಕ್ ಸ್ವಾತಂತ್ರ್ಯದ ವೈಖರಿ. ನಮಗೆ ಈ ಗೊಂದಲ ಬೇಕಿರಲಿಲ್ಲ. ನಮಗೆ ನಮ್ಮ ದೇಶದ ಗೊತ್ತು ಗುರಿ ಇತ್ತು. ಆದ್ದರಿಂದ ಮುಂದೆ ನಡೆದೆವು.

ಡಾ|| ಟಿ. ಎನ್. ಸಿಂಗ್, ನಾನು, ಬ್ರಾರ್ ಮತ್ತು ಮಸೂದ್ ಊಟಕ್ಕೆ ಕುಳಿತಿದ್ದೆವು. ಡಾ|| ಸಿಂಗ್ ಅವರ ಪ್ರೊಫೆಸರ್ ಒಬ್ಬರು ವಾರ್ಡ್‌ನಲ್ಲಿ ರೋಗಿಗಳನ್ನು ಪರೀಕ್ಷಿಸುತ್ತಿದ್ದಾಗ ಒಬ್ಬ ರೋಗಿಗೆ ಆಕಸ್ಮಾತ್ ಹೃದಯ ಬಡಿತ ನಿಂತಿತು. ಕ್ಷಣದಲ್ಲಿ ಅವನನ್ನು ನೆಲದ ಮೇಲೆ ಹಾಕಿ ತಾವು ಮಂಡಿಯೂರಿ ಮುಗ್ಗುಲಲ್ಲಿ ಕುಳಿತು ಹೃದಯಕ್ರಿಯೆಯನ್ನು ಪ್ರಚೋದಿಸಿದರು. ಸುಮಾರು ೨೦ ನಿಮಿಷ ಹೋರಾಡಿ 'ಡಿ ಫಿಬ್ರಿಲೇಟರ್' ಯಂತ್ರೋಪಕರಣವನ್ನು ಉಪಯೋಗಿಸಿ ಅವನನ್ನು ಬದುಕಿಸಿದರು ಎಂದು ಡಾ|| ಸಿಂಗ್ ಹೇಳಿದರು. ಹೇಳುವಾಗ ನಮ್ಮಲ್ಲಿ "ಡಿ ಫಿಬ್ರಿಲೇಟರ್ ಇರುವುದು ಅಪರೂಪ. ಎಷ್ಟೋ ಕಡೆ ನಮ್ಮ ದೇಶದಲ್ಲಿನ ಆಸ್ಪತ್ರೆಗಳಲ್ಲಿ ಉಪಕರಣಗಳಿರುವುದಿಲ್ಲ. ಇದ್ದ ಕಡೆ ತಜ್ಞರಿಲ್ಲ. ಕೆಲವು ಕಡೆಯಂತೂ ತಜ್ಞರನ್ನು ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ವರ್ಗಾಯಿಸುತ್ತಾರೆ. ಹೀಗಾಗಿ ಬ್ರೈನ್ ಡ್ರೈನ್ ನಮ್ಮಲ್ಲೇ ಉಂಟು. ಕೆಲಸದಲ್ಲಿ ಜಿಗುಪ್ಸೆ, ಬೇಸರ, ಸರಿ ; ತಜ್ಞತೆಯು ಕ್ಷೀಣಿಸುತ್ತದೆ. ಅವರನ್ನು ತರಪೇತು ಮಾಡಿದ ವೆಚ್ಚ ನಿಷ್ಪ್ರಯೋಜನ. ನಮ್ಮ ದೇಶದಲ್ಲಿ ವೈದ್ಯಕೀಯ ಸೌಲಭ್ಯ, ಆರೋಗ್ಯ ಸುಧಾರಣೆಗೆ ಆದ್ಯತೆ ಎಲ್ಲಿ ಬಂತು-ಎಷ್ಟೋ ಆಸ್ಪತ್ರೆಯಲ್ಲಿ ಔಷಧಿಗಳು ಪೂರ್ಣಪ್ರಮಾಣದಲ್ಲಿ ದೊರೆಯುವುದಿಲ್ಲ. ಈ ದೇಶದಲ್ಲಿ ಅಪಘಾತಕ್ಕೊಳಗಾದವರಿಗೆ ಟೆಲಿಫೋನ್ ಮಾಡಿ ಆಂಬ್ಯುಲೆನ್ಸ್‌ನ್ನು ಅಪಘಾತವಾದ ಸ್ಥಳಕ್ಕೇ ತರಿಸುತ್ತಾರೆ. ಜೊತೆಯಲ್ಲಿ ಡಾಕ್ಟರ್ಸ್ ಅಥವಾ

ನರ್ಸ್‌ಗಳು ಬರುತ್ತಾರೆ. ತಕ್ಷಣ ಔಷಧೋಪಚಾರ, ಶಸ್ತ್ರಚಿಕಿತ್ಸೆ ಎಲ್ಲಾ ಸೌಲಭ್ಯಗಳೂ ಲಭ್ಯ. ಹೆಳವರಾದ ಮಕ್ಕಳಿಗೆ, ದೊಡ್ಡವರಿಗೆ (ರಿ-ಹೆಬಿಲಿಟೇಶನ್) ಸಂಸ್ಥೆಗಳಿವೆ. ಹೆಚ್ಚುಕಾಲ ಆಸ್ಪತ್ರೆಯಲ್ಲಿರಬೇಕಾದ ರೋಗಿಗಳಿಗೆ ಅಲ್ಲೇ ಉಪಾಧ್ಯಾಯರು ಬಂದು ಪಾಠಪ್ರವಚನ ಹೇಳಿಕೊಡುತ್ತಾರೆ" ಎಂದೆಲ್ಲಾ ಆ ದಿನ ಬೇಸರದಿಂದ ಮನಬಿಚ್ಚಿ ಮಾತಾಡಿದರು.

ಆ ದೇಶದಲ್ಲಿ ಆರೋಗ್ಯಕ್ಕೆ, ವೈದ್ಯಕೀಯ ಸೌಕರ್ಯಕ್ಕೆ ಅತಿ ಹೆಚ್ಚಿನ ಆದ್ಯತೆ ಇದೆ. ಅದೇ ವೈದ್ಯರಿಗೆ ಸಮಾಜದಲ್ಲಿ ಬಹಳ ಗೌರವವಿದೆ. ತಜ್ಞರ ನಾಡು. ಇದೆಲ್ಲಕ್ಕೂ ಕಾರಣ ಮಾನವನಿಗೆ ಅತಿ ಹೆಚ್ಚಿನ ಬೆಲೆಯುಂಟು. ಒಬ್ಬ ರೋಗಿಯನ್ನು ವೈದ್ಯಕೀಯ ಯುದ್ಧವನ್ನಾದರೂ ಮಾಡಿ ಪ್ರಾಣ ಉಳಿಸಲು ಸೆಣಸಾಡುತ್ತಾರೆ. ವೈದ್ಯರಲ್ಲಿ ಒಗ್ಗಟ್ಟಿದೆ. ಪರಸ್ಪರ ಹೊಂದಾಣಿಕೆ ಮೆಚ್ಚಿಗೆ ಉಂಟು. ಆರ್ಥಿಕವಾಗಿ ದೀರ್ಘಕಾಲ ಉನ್ನತಮಟ್ಟದಲ್ಲಿದ್ದ ದೇಶ. ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಯಿತು. ವೈದ್ಯರಿಗೆ ಕೈತುಂಬ ಸಂಬಳ. ವಿರಾಮಕಾಲದಲ್ಲಿ ಖಾಸಗಿಯಾಗಿ ಪರೀಕ್ಷಿಸಿ ಶುಲ್ಕ ತೆಗೆದುಕೊಳ್ಳುವ ಕಾನೂನಿದೆ. ಆಪರೇಶನ್ ಮಾಡಿಯೂ ಕೆಲವರಿಂದ ಶುಲ್ಕ ತೆಗೆದುಕೊಳ್ಳುತ್ತಾರೆ. ಆ ಶುಲ್ಕದಲ್ಲಿ ಶೇ ೧೦ರಷ್ಟು ಸರ್ಕಾರಕ್ಕೆ ತೆರಿಗೆ ಮುಖಾಂತರ ಸಲ್ಲಿಸುತ್ತಾರೆ. ಅದೆಲ್ಲದರಿಂದ ವೃತ್ತಿಯಲ್ಲಿ ತೃಪ್ತಿ ಕಾಣುತ್ತಾರೆ.

ನಮ್ಮ ದೇಶದ ಸಮಸ್ಯೆ ನಮಗೆಲ್ಲಾ ತಿಳಿದಿದೆ. ಸುಮಾರು ಶೇ. ೮೦ರಷ್ಟು ಜನ ಹಳ್ಳಿಗಳಲ್ಲಿ ವಾಸ. ಹಳ್ಳಿ ಎಂದರೆ ಎರಡು ವಿಧಗಳುಂಟು. ಒಂದು ವಿದ್ಯುಚ್ಛಕ್ತಿ, ರಸ್ತೆ, ಪ್ರೈಮರಿ ಇಲ್ಲ ಮಾಧ್ಯಮಿಕ ಶಾಲೆ, ಬಸ್ಸಿನ ಸೌಕರ್ಯಗಳಿಲ್ಲದಿರುವುದು. ಕುಡಿಯಲು ನೀರಿನ ಬಾವಿಗಳಿಲ್ಲ. ನಾನು ಹೇಳುತ್ತಿರುವುದು ಅತಿಶಯೋಕ್ತಿಯಾಗಿ ಕಾಣಬಹುದು. ಏಕೆಂದರೆ ನಮ್ಮ ಸರ್ಕಾರ ಇವುಗಳ ಅಭ್ಯುದಯಕ್ಕೆ ಆದ್ಯತೆ ಕೊಟ್ಟಿದೆ. ಅನೇಕ ಯೋಜನೆಗಳಿವೆ. ತ್ವರಿತವಾಗಿ ತಲುಪುವ ಪ್ರಮಾಣದಲ್ಲಿ ಹಳ್ಳಿಗರಿಗೆ ತಲಪುತ್ತಿಲ್ಲ.

ಇಂಡಿಯಾದಲ್ಲಿ ಲಯನ್ಸ್ ಕ್ಲಬ್‌ನವರೊಮ್ಮೆ ಜನಸೇವೆಗೆಂದು ಹೊರಟಾಗ ಅಕಸ್ಮಾತ್ ನಾನೂ ಸೇರಿದೆ. ಮೈಸೂರಿನಿಂದ ೧೦ ಮೈಲಿ ದೂರದ ಬಿಳಿಕೆರೆ ಗ್ರಾಮ ಅವರ ಸೇವೆಗೆ ಆರಿಸಿದ ಊರು. ಹೆದ್ದಾರಿಯ ಮಗ್ಗುಲಲ್ಲಿದ್ದ ಆ ಹಳ್ಳಿಗೆ ವೈದ್ಯಕೀಯ ಸೌಲಭ್ಯ ಹೊತ್ತೆವು. ಫೋಟೋ ತೆಗೆಯುವವರು, ಪಂಚಾಯತಿ ಛೇರ್‌ಮನ್, ಮೂರು ಜನ ಇಂಡಸ್ಟ್ರಿಯಲಿಸ್ಟ್,

೬ ಕಾರುಗಳು, ೭ ವೈದ್ಯ ತಜ್ಞರು ಹಾಜರಾದೆವು. ಸ್ಕೂಲ್ ಒಂದರಲ್ಲಿ ಭಾನು ವಾರವಾದ್ದರಿಂದ ವ್ಯವಸ್ಥೆಯಾಗಿತ್ತು, ಈ ಸೇವಾಕಾರ್ಯಕ್ರಮ. ಘಮಘಮ ಉಪ್ಪಿಟ್ಟು, ವಡೆ, ಕಾಫಿ ಆದ ಮೇಲೆ ೫೦-೬೦ ರೋಗಿಗಳ ಪರೀಕ್ಷೆ ನಡೆಯಿತು. ಚೀಟಿಯಲ್ಲಿ ಔಷಧಿ ಬರೆದುಕೊಟ್ಟೆವು. ನಿಮೋನಿಯಾದಿಂದ ೨ ವರ್ಷದ ಮಗು ನರಳುತ್ತಿತ್ತು. ಔಷಧಿ ಬರೆದಿದ್ದ ಕಾಗದ ಮಡಚಿ ತಾಯಿ ನಿರಾಶಳಾಗಿ ಹಿಂದಿರುಗಿದಳು. ಇದೊಂದು ಉದಾಹರಣೆಗೆ. ಇದೇ ನಮ್ಮ ಸುಧಾರಕರು ಮಾಡುವ ಸೇವೆ. ಫೋಟೋಗಳಂತೂ ಎಷ್ಟೋ ಆದವು. ಇದೇ ನಮ್ಮ ದೇಶದಲ್ಲಿರುವ ಹಳ್ಳಿಯೇ ? ಹಳ್ಳಿ ಎಂದರೆ ಇವರಿಗೆ ಏನೆಂದು ತಿಳಿದಿದೆಯೆ ? ಎಷ್ಟೋ ಹಳ್ಳಿಗೆ ಕುಡಿಯುವ ನೀರಿಲ್ಲ. ತಲುಪಲು ಸರಿಯಾದ ದಾರಿ ಇಲ್ಲ, ವಿದ್ಯುದ್ದೀಪ ಇಲ್ಲ.

ಇಲ್ಲಿ ಮತ್ತೊಂದು ಮುಖವಿದೆ. ನಮ್ಮ ವೈದ್ಯರನೇಕರು ಮೈಸೂರು, ಬೆಂಗಳೂರು, ಹುಬ್ಬಳ್ಳಿ ಮುಂತಾದ ಆಸ್ಪತ್ರೆಗಳಿಂದ ಹೆಚ್ಚಿನ ವ್ಯಾಸಂಗಕ್ಕೆ ಲಂಡನ್, ಎಡಿನ್‌ಬರೋ ಆಸ್ಪತ್ರೆಗಳಿಗೆ ಹೋಗುತ್ತಾರೆ. ಅವು ಪ್ರಪಂಚ ಪ್ರಖ್ಯಾತ ಸಂಸ್ಥೆಗಳು. ಅವುಗಳ ಜೊತೆ ತಾವು ತಾಯ್ನಾಡಿನಲ್ಲಿ ಕೆಲಸ ಮಾಡುತ್ತಿದ್ದ ಆಸ್ಪತ್ರೆಗಳಿಗೆ ಹೋಲಿಸುತ್ತಾರೆ. ಎಲ್ಲಿಂದೆಲ್ಲಿಗೆ ? ನಮ್ಮಲ್ಲೂ ಪ್ರಖ್ಯಾತ ವೈದ್ಯ ಸಂಸ್ಥೆಗಳಿವೆ. ಡೆಲ್ಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬಾಂಬೆಯ ತಾತಾ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆ, ಮದ್ರಾಸಿನ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟ್‌ಗಳ ಪರಿಚಯವೇ ಇಲ್ಲ, ಈ ವೈದ್ಯರಿಗೆ, ಇವನ್ನರಿತು ಇವುಗಳ ಜೊತೆ ಲಂಡನ್, ಎಡಿನ್ ಬರೋ ಆಸ್ಪತ್ರೆಗಳನ್ನು ಹೋಲಿಸಿದರೆ ತೀರ ವ್ಯತ್ಯಾಸ ಕಾಣದು. ಒಂದು ಔಟ್ ಪೇಷೆಂಟ್ ದಿನ. ಬಾಂಬೆಯಿಂದ ಒಂದು ಮಗುವನ್ನು ಲಂಡನ್ ಆಸ್ಪತ್ರೆಗೆ ಕರೆತಂದಿದ್ದರು. ಅದಕ್ಕೆ ೬ ವರ್ಷ. ಕರುಳಿನ ಕ್ಯಾನ್ಸರ್‌ನಿಂದ ನರಳುತ್ತಿತ್ತು. "ನೀವೇನು ಮಾಡುತ್ತಿದ್ದಿರಿ ಈ ಮಗು ನಿಮ್ಮಲ್ಲಿ ಬಂದಿದ್ದರೆ ?" ಪ್ರೊ|| ಕೇಳಿದರು. "ಕ್ಯಾನ್ಸರ್ ಆದ ಭಾಗವನ್ನು ತೆಗೆದುಹಾಕುವುದು. ಕರೆಂಟ್ ಮತ್ತು ಆಂಟಿಕ್ಯಾನ್ಸರ್ ಔಷಧ ಕೊಡುವುದು" ಎಂದಾಗ "ಒಪ್ಪಿದೆ. ನಾನೂ ಮಾಡುವುದು ಅದೇ. ಅದಕ್ಕೇಕೆ ಬಾಂಬೆಯಿಂದ ಇಲ್ಲಿಗೆ ಬರಬೇಕು, ಬೇಕಿರಲಿಲ್ಲ" ಎಂದರು.

ಇವೆಲ್ಲಾ ನಮ್ಮ ಸಮಸ್ಯೆ. ಇವುಗಳ ಜೊತೆಗೆ ಬಡತನ, ಅಜ್ಞಾನ

ಥೀಪ ಭಾವನೆ ಇವು ಗುರುತರ ಸಮಸ್ಯೆಗಳು. ಮುಂದೆ ಬೆಳವಣಿಗೆಗೆ ಅಡ್ಡ ವಾಗಿವೆ ಜನಸಂಖ್ಯೆ !

ನಾವು ಇದನ್ನೆಲ್ಲಾ ಮೆಲಕುಹಾಕಿ ಮುಗಿಸಿದಾಗ ಗಂಟೆ ಬೆಳಗಿನ ಝಾವ ೩ ಆಗಿತ್ತು.

*   *   *   *

ಮಾರನೇ ದಿನ ನಾನು "ದಿ ರಾಯಲ್ ಕಾಲೇಜ್ ಆಫ್ ಸರ್ಜನ್ಸ್" ಕಟ್ಟಡದ ಕಡೆ ಹೊರಟಿದ್ದೆ. ಡಾ|| ವೆಂಕಟಾಚಲಯ್ಯ ರಸೆಲ್ ಸ್ಕ್ವೇರ್‌ನಲ್ಲಿ ಪ್ರತ್ಯಕ್ಷವಾದರು. "ಏನಿದು ಯಾವಾಗ ಬಂದಿರಿ ?" ಎಂದೆ. "ಬನ್ನಿ, ಎರಡು ವಾರವಾಯಿತು ನಾನು ಬಂದು. ಇಂಡಿಯನ್ ಸ್ಟೂಡೆಂಟ್ಸ್ ಹಾಸ್ಟೆಲ್‌ನಲ್ಲಿ ದ್ದೇನೆ" ಎಂದಾಗ ಇಬ್ಬರಿಗೂ ಆಶ್ಚರ್ಯ. ಒಂದೇ ಕಡೆ ವಾಸ. ಆದರೆ ಭೇಟಿಯೇ ಇಲ್ಲ, ನಕ್ಕೆವು. ವೆಂಕಟಾಚಲಯ್ಯ ಬೆಂಗಳೂರು ಬೌರಿಂಗ್ ಆಸ್ಪತ್ರೆಯಿಂದ ಲಂಡನ್ನಿನ ಯೂರಾಲಜಿ ಇನ್ಸ್‌ಟಿಟ್ಯೂಟ್‌ನಲ್ಲಿ ಕಲಿಯಲು ಬಂದಿದ್ದರು. ಕೈಲೊಂದು ಕಾಗದವಿತ್ತು. "ಬನ್ನಿ ಯಾವುದಾದರೊಂದು ಹೋಟೆಲ್‌ನಲ್ಲಿ ಕುಳಿತು ಊರಿಗೆ ಈ ಕಾಗದ ಬರೆದು ಪೋಸ್ಟ್ ಮಾಡುತ್ತೇನೆ" ಎಂದಾಗ ನಾನು ನಕ್ಕು "ಇದೇನು ನಮ್ಮ ಊರು ಎಂದು ತಿಳಿದಿರ, ಹೋಟೆಲ್ ನಲ್ಲಿ ಕುಳಿತು ಕಾಗದ ಬರೆಯಲಿಕ್ಕೆ" ಎಂದೆ. "ನೀವು ಸುಮ್ಮನೆ ಬನ್ನಿ" ಎಂದು ಒಂದು ಕೆಫೆಟೇರಿಯಾ ಹೊಕ್ಕಿದ್ದಾಯಿತು. ನಾವು ಕುಳಿತ ಕ್ಷಣದಲ್ಲಿ ಮಹಿಳೆಯೊಬ್ಬಳು "ನಿಮಗೇನು ಬೇಕು. ದಯಮಾಡಿ ತಿಳಿಸಿ" ಎಂದಳು.

"ಏನೂ ಬೇಡಿ, ಧನ್ಯವಾದಗಳು" ಎಂದರು ವೆಂಕಟಾಚಲಯ್ಯನವರು. ನನಗೇಕೋ 'ಅವರೇನು ತಿಳಿದುಕೊಳ್ಳುವುದಿಲ್ಲ, ಅಲ್ಲದೆ ಮತ್ತೊಮ್ಮೆ ಎರಡು ಕಪ್ ಟೀ ಕುಡಿದರೆ ಹಾಳಾಗುವುದೇನಿತ್ತು' ಎಂದಿತು ಮನಸ್ಸು. "ಎರಡು ಟೀ ಪ್ಲೀಸ್" ಎಂದೆ. ಟೀ ಕುಡಿಯುತ್ತ ಕಾಗದ ಬರೆದು ಮುಗಿಸಿದರು. ಕುಡಿಯುವಾಗ ಅವರೊಂದು ಸ್ವಾರಸ್ಯಕರ ಘಟನೆ ಹೇಳಿದರು. ಲಂಡನ್ನಿಗೆ ಬಂದ ದಿವಸ ಅವರಿಗೆ ಸಿಕ್ಕಿದ ಇಂಡಿಯಾ ದೇಶದವರಿಬ್ಬರನ್ನು "ಇಂಡಿಯನ್ ವೈ.ಎಮ್.ಸಿ.ಎ. ಎಲ್ಲಿದೆ ದಯವಿಟ್ಟು ತಿಳಿಸಿ" ಎಂದು ಕೇಳಿದ್ದಕ್ಕವರು "ಸಾರಿ, ನಮಗೆ ತಿಳಿಯದು" ಎಂದರಂತೆ. ಆಶ್ಚರ್ಯವೆಂದರೆ ಲಂಚ್ ತೆಗೆದುಕೊಳ್ಳಲು ಇವರು ವೈ.ಎಮ್.ಸಿ.ಎ.ನ ಕ್ಯೂನಲ್ಲಿದ್ದಾಗ ಅವರಿಬ್ಬರೂ ಅಲ್ಲಿ ಆಗಲೇ ಊಟ

ಮುಗಿಸುತ್ತಿದ್ದರಂತೆ. ಅದಕ್ಕೆ ನಾನು "ಅವರಲ್ಲಿಯೂ ಜಿಗುಪ್ಸೆಗೊಂಡವರಿರ ಬೇಕು. ಇಲ್ಲ ನಿಮ್ಮಂತೆ ಹೊಸಬರಿದ್ದು ಬೇರೆಯವರಿಂದ ವೈ.ಎಮ್.ಸಿ.ಎ. ಎಲ್ಲಿದೆ ಎಂದು ತಿಳಿದು ಬಂದಿರಬಹುದು. ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳು ವುದು ಬೇಡ" ಎಂದೆ.

ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಕಟ್ಟಡದಲ್ಲಿ ಅಂದು 'ಹಂಟೇರಿ ಯನ್ ಲೆಕ್ಚರ್'. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದಿದ ಕೆಲವು ವೈದ್ಯರು ಅಲ್ಲಿದ್ದರು. ಇಂಗ್ಲೆಂಡಿಗೆ ಬಂದಾಗಲೇ ೮-೧೦ ವರ್ಷವಾಗಿತ್ತು. ಉನ್ನತ ವ್ಯಾಸಂಗಕ್ಕೆ ಬಂದು ೮-೧೦ ಸಾರಿ ಪರೀಕ್ಷೆಗಳಲ್ಲಿ ಫೇಲಾಗಿದ್ದರು. ಕಾರಣವಿಷ್ಟೆ. ಆ ದೇಶಗಳಲ್ಲಿ ಆಕರ್ಷಣೆಗಳು ಅನೇಕ. ಕೈ ತುಂಬ ಸಂಬಳವಿದ್ದರೆ ಎಲ್ಲಾ ಸಿಗುತ್ತದೆ. ಆದರೆ ಪರೀಕ್ಷೆಗಳಲ್ಲಿ ಪಾಸ್ ಕೊಳ್ಳಲು ಸಿಕ್ಕುವುದಿಲ್ಲ. ಎರಡನೆಯ ದಾಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಿಕೊಂಡು ಪರೀಕ್ಷೆಗಳಿಗೆ ಓದುವುದು ಕಷ್ಟ ಸಾಧ್ಯ. ಆಗಾಗ್ಗೆ ಒಂದೊಂದು 'ಕೋರ್ಸ್ ಲೆಕ್ಚರ್ಸ್' ಏರ್ಪಡಿಸುತ್ತಾರೆ ವಿಶ್ವವಿದ್ಯಾನಿಲಯದವರು. ನಾವಿದ್ದಾಗ ಅಂದರೆ ೧೯೬೮-೬೯ ರಲ್ಲಿ ಒಂದು ಕೋರ್ಸ್ ಲೆಕ್ಚರ್ಸ್‌ಗೆ ೬೦-೭೦ ಪೌಂಡ್ ಫೀ ಇತ್ತು. ಒಂದೆರಡು ತಿಂಗಳು ನಡೆವ ಆ ಕೋರ್ಸ್‌ಗೆ ಹಾಜರಾಗಲು ಬರುವವರಿಗೆ ಆ ತಿಂಗಳಲ್ಲಿ ಸಂಬಳವಿಲ್ಲ. (ವರ್ಷಕ್ಕೆ ಒಂದು ತಿಂಗಳು ರಜೆ ಕೊಟ್ಟು ಸಂಬಳ ಕೊಡುತ್ತಾರೆ.) ಊಟ, ವಸತಿ, ಫೀ ಎಲ್ಲಾ ಸೇರಿ ಶೇಖರಿಸಿದ್ದ ಹಣ ವ್ಯಯವಾಗುತ್ತದೆ. ಪರೀಕ್ಷೆಗಳು ೬ ತಿಂಗಳಿಗೊಮ್ಮೆ. ಪರೀಕ್ಷೆಗಳಿಗೆ ಬೇರೆ ಶುಲ್ಕ. "ಕೋರ್ಸ್"ಗಳು ೬ ತಿಂಗಳಿಗೊಮ್ಮೆ. 'ಕೋರ್ಸ್'ಗಳಿಗೆ ಹಾಜರಾಗದೆ ಪರೀಕ್ಷೆಗೆ ಕೂರಬಹುದು. ಅದೇನು ಕಡ್ಡಾಯವಿಲ್ಲ. ಇವೆಲ್ಲದರಿಂದಾಗಿ ಬಹಳಷ್ಟು ವೈದ್ಯರು ೮-೧೦ ಸಾರಿ ಪರೀಕ್ಷೆಗೆ ಕೂರುತ್ತಾರೆ. ಎಗ್ಸಾಮಿನರ್ಸ್ ಯಾವ ಆಸ್ಪತ್ರೆಯಲ್ಲಿರುತ್ತಾರೋ ಆ ಆಸ್ಪತ್ರೆಯಲ್ಲಿ ಅವರ ಕೈ ಕೆಳಗೆ ಕೆಲಸ ಮಾಡಲು ಹಾತೊರೆಯುತ್ತಾರೆ. ಇದರಿಂದ ಪ್ರಯೋಜನವೂ ಉಂಟು. ಆಯಾ ಪರೀಕ್ಷಕರ ಇಂಗಿತ ಅರಿವಾಗು ತ್ತದೆ. ಅಲ್ಲದೆ ನನ್ನ ಅಸಿಸ್ಟೆಂಟ್ ಎಂಬ ಕರುಣಾಭಾವನೆ ಮಾನವ ಸಹಜ ; ಪ್ರಕೃತಿಯ ಸೃಷ್ಟಿಯಲ್ಲಿ ಅಡಕವಾಗಿರುವ ಮಹೋನ್ನತ ಗುಣ. ಅದಕ್ಕೆ ಯಾವ ಅಸ್ತ್ರದಿಂದಲೂ ವಿನಾಶವಿಲ್ಲ. ಡಾ|| ಮಾಧವರಾವ್, ಬಲ್ಸೆ, ವೆಂಕಟರಾಂ ಇವರೆಲ್ಲ ನನಗೆ ಕಾಲೇಜಿನಲ್ಲಿ ಚಿರಪರಿಚಿತರು. ಇಂಗ್ಲೆಂಡಿಗೆ ಬಂದು ೧೦ ವರ್ಷಗಳಾಗಿದ್ದವು. ಕೆಲವರು ಇನ್ನೂ ಪರೀಕ್ಷೆಗೆ ಕೂರುತ್ತಿದ್ದರು.

ಹಂಟೇರಿಯನ್ ಲೆಕ್ಚರ್ಸ್ 'ಜಾನ್‌ಹಂಟರ್' ರವರ ಜ್ಞಾಪಕಾರ್ಥ ನಡೆವ ಪ್ರಸಿದ್ಧ ಲೆಕ್ಚರ್. ಅಲ್ಲಿ ಲೆಕ್ಚರ್ಸ್ ಮಾಡುವ ಅವಕಾಶ ಕೆಲವರಿಗೆ ಮಾತ್ರ ಲಭ್ಯ. ಜಾನ್‌ಹಂಟರ್ ಸ್ಕಾಟ್‌ಲೆಂಡಿನ ಸರ್ಜನ್, ಅನಾಟಮಿಸ್ಟ್ ಫಿಜಿಯಾಲಜಿಸ್ಟ್ ಮತ್ತು ಪೆಥಾಲಜಿಸ್ಟ್ ಕೂಡ. ಆತ ೧೭೨೮ರಲ್ಲಿ ಜನಿಸಿ ೧೭೯೩ರಲ್ಲಿ ಮರಣಹೊಂದಿದರು.

ಮುಂದುವರಿದ ದೇಶಗಳಲ್ಲಿ ಅಚಾತುರ್ಯದಿಂದ ರೋಗಿ ಸತ್ತರೆ ಪರಿಹಾರ ಹಣ ಕೊಡಲಾಗುತ್ತದೆ. ಅದಕ್ಕೆಂದೇ ವಿಮೆ ಉಂಟು. ಪರಿಹಾರ ಹಣ ಕೊಡುವ ಮೊದಲು ಒಂದು ಬೋರ್ಡ್‌ನಲ್ಲಿ ತೀರ್ಮಾನವಾಗಬೇಕು. ಇದರ ಹಿನ್ನೆಲೆ ಎಂದರೆ ಅಲ್ಲಿ ರೋಗಿಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳೂ ಉಂಟು. ವೈದ್ಯರಲ್ಲಿ ಎಲ್ಲಾ ತರಹೆಯ ತಜ್ಞರೂ ಇದ್ದಾರೆ. ಅವರ ಅಭಿಪ್ರಾಯದ ಮೇರೆಗೆ ಶಸ್ತ್ರಚಿಕಿತ್ಸೆ ನಡೆಯುತ್ತದೆ. ತೊಂದರೆಯಾಗಬಹುದಾದ ರೋಗಿಗಳಿಗೆ, ಅವರ ಸಂಬಂಧಿಕರಿಗೆ ವಿಶದವಾಗಿ ಮೊದಲೇ ತಿಳಿಸುತ್ತಾರೆ. ಅವರ ಒಪ್ಪಿಗೆ ಪಡೆದ ಮೇಲೆ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಆದ್ದರಿಂದ ಅಚಾತುರ್ಯದ ಉದಾಹರಣೆಗಳು ಅತಿ ವಿರಳ. ನಮ್ಮಲ್ಲೂ ಒಂದೆರಡು ಮೊಕದ್ದಮೆ ಕೋರ್ಟಿಗೆ ಹೋದ ಉದಾಹರಣೆಗಳಿವೆ. ಇದು ಹಾಸ್ಯಾಸ್ಪದ. ಗ್ರೇಟ್ ಆರ್‌ಮಂಡ್ ಸ್ಟ್ರೀಟ್ ಆಸ್ಪತ್ರೆಯಲ್ಲಿ ಒಬ್ಬ ರೋಗಿಗೆ ಒಬ್ಬ ದಾದಿ ಇರುತ್ತಾಳೆ. ನಮ್ಮಲ್ಲಿ ೧೫—೨೦ ರೋಗಿಗಳಿಗೊಬ್ಬ ದಾದಿ ಉಂಟು. ತುರ್ತು ಚಿಕಿತ್ಸೆಗೆ ಬಂದ ರೋಗಿಗಳೂ ಕಾಯಬೇಕು. ಕಾರಣ ಒಂದು ಆಪರೇಶನ್ ಥಿಯೇಟರ್, ಒಬ್ಬ ದಾದಿ, ಒಬ್ಬ ಅನೇಸ್ತೀಸಿಯಾ ಪ್ರವೀಣರು ತುರ್ತು ಚಿಕಿತ್ಸೆ ನೋಡಿಕೊಳ್ಳುತ್ತಾರೆ. ಒಂದೇ ದಿನ ೧೦-೧೫ ತುರ್ತು ಚಿಕಿತ್ಸೆಗಳಾಗ ಬೇಕಾದಾಗ ರೋಗಿಗಳು ಕಾಯಲೇಬೇಕು. ಔಟ್‌ಪೇಷಂಟ್‌ಗಳಲ್ಲಿ ೨೦ ಜನರಿಗೆ ಆಕಸ್ಮಾತ್ ಅಪಘಾತದಿಂದ ಗಾಯಗಳಾದರೆ ಒಂದು ಆಪರೇಷನ್ ಟೇಬಲ್ ಇರುತ್ತದೆ. ಕೊನೆಯವನಿಗೆ ಶಸ್ತ್ರಚಿಕಿತ್ಸೆ ಮಾಡುವುದು ಯಾವಾಗ ? ದಿನಂಪ್ರತಿ ರಕ್ತಕ್ಕೆ ನಮ್ಮಲ್ಲಿ ಅತಿ ತೊಂದರೆ, ಸಿಗುವುದೇ ಇಲ್ಲ. ವೈದ್ಯರಿಗೆ ಟೆಲಿಫೋನಿನ ಸಂಪರ್ಕವಿಲ್ಲ. ಒಂದೋ, ಎರಡೋ ಆಂಬ್ಯುಲೆನ್ಸ್ ಇರುತ್ತದೆ. ತುರ್ತು ಚಿಕಿತ್ಸೆಗೆ ಸ್ವಂತ ವಾಹನದಲ್ಲಿ ಬಂದರೆ ವಾಹನದ ಅಲೋಯನ್ಸ್ ಇಲ್ಲ. ಇಷ್ಟೆಲ್ಲಾ ಇದ್ದರೂ ವೈದ್ಯರ ಮೇಲೆ ಕಾನೂನಿನ ಪ್ರಕಾರ ಪರಿಹಾರ ಹೇರುವುದು ಜ್ಞಾನದ ಅಭಾವ ! ಇಲ್ಲ ನೋಡಿನ ಸ್ವಭಾವ !!

ದಾವಣಗೆರೆಯಲ್ಲೊಮ್ಮೆ ತುರ್ತು ಚಿಕಿತ್ಸೆ ಮಾಡಬೇಕಿತ್ತು. ಸುಮಾರು ೧೯೬೦ರ ವಿಷಯ. ಹೊಲಿಗೆ ದಾರವಿರಲಿಲ್ಲ; ಆಪರೇಷನ್ ಥಿಯೇಟರ್‌ನಲ್ಲಿದ್ದ ಟರ್ಕಿಷ್ ಟವೆಲ್‌ನ ದಾರ ತೆಗೆದು ಕುದಿಸಿ ಹೊಲಿಗೆ ಹಾಕಿದ್ದಾಯಿತು. ರೋಗಿ ಎಲ್ಲರಂತೆ ೭ ನೇ ದಿನ ಮನೆಗೆ ಹೋದ.

ಡೆಲ್ಲಿಯ ಆಸ್ಪತ್ರೆಗಳ ವಿಚಾರ ಕೇಳಿದ್ದೇನೆ, ಸ್ವತಃ ನೋಡಿದ್ದೇನೆ. ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ವಿ.ವಿ.ಐ.ಪಿ. ಗಳಿಗೆ; ಸಫ್ದರ್‌ಜಂಗ್ ಆಸ್ಪತ್ರೆ ವಿ.ಐ.ಪಿ. ಗಳಿಗೆ; ಮೌಲಾನ ಆಜಾದ್ ಮೆಡಿಕಲ್ ಕಾಲೇಜ್ ಆಸ್ಪತ್ರೆ ಇತರರಿಗೆ.

ಮೈಸೂರಿನಲ್ಲೊಮ್ಮೆ ಅಂದರೆ ೧೯೭೮ ರಲ್ಲಿ ವೈದ್ಯರು ಮುಷ್ಕರ ಹೂಡಿದ್ದರು. ನಂತರ ಮೆರವಣಿಗೆ ಹೊರಡಬೇಕು ಎಂದು ತೀರ್ಮಾನವಾಯಿತು. ನಾನು ಒಪ್ಪಲಿಲ್ಲ. "ಯಾರ ಮುಂದೆ ಮೆರವಣಿಗೆ ಹೊರಡುತ್ತೀರಿ. ನಿಮಗೆ ಅನುಕಂಪ ಬೇಕು. ಒಂದು ದಿನ ಔಷಧಿ ಸಿಗದೇ, ಇಂಜಕ್ಷನ್ ಸಿಗದೇ, ಹಾಸಿಗೆ ಸಿಗದೇ ಇರುವವರ ಮುಂಧೆ ನಿಮ್ಮ ಮೆರವಣಿಗೆ ಹೋದರೆ ಅನುಕಂಪವೆಲ್ಲಿ? ಉಳಿದ ವೀಕ್ಷಕರು ನರ್ಸಿಂಗ್ ಹೋಂಗಳಿಗೆ ಹೋಗುವವರು. ಆದ್ದರಿಂದ ಮೆರವಣಿಗೆಯಿಂದ ನಿಮಗೇನೂ ಅನುಕೂಲವಿಲ್ಲ" ಎಂದಿದ್ದೆ. ಶುಶ್ರೂಷೆ ಪಡೆದವರಾರೂ ಪ್ರೇಕ್ಷಕರಲ್ಲ. ರಾಜಕೀಯ, ಗುಂಪುಗುಳಿತನ ವಿಪರೀತ. ಮುಂದಾಳಾದವರಿಗೆ ವರ್ಗ; ಬೆಣ್ಣೆ ಹಚ್ಚುವವರಿಗೆ ಬೆಂಗಳೂರು. ಹೀಗೆ, ಅನೇಕ ಸಮಸ್ಯೆಗಳಿಂದಾಗಿ ಮುಷ್ಕರ ವಿಫಲವಾಯಿತು.

ನವಜಾತ ಶಿಶು ಒಂದು ಅಮೇರಿಕಾದ ವಾಯುದಳದ ಉನ್ನತ ಆಫೀಸರ್‌ಗೆ ಸೇರಿದ್ದು. ಅದಕ್ಕೆ ಅನ್ನನಾಳದ ದೋಷ ಹುಟ್ಟಿನಿಂದಲೇ ಬಂದಿತ್ತು. ಮಗು ೨ ದಿನ ವಯಸ್ಸಿನದು. ಪ್ರೊಫೆಸರ್ ವಾರ್ಡಿನಲ್ಲಿ ಅದನ್ನು ದಾಖಲು ಮಾಡಲಾಗಿತ್ತು. ಮಾರನೇ ದಿನ ಆಶ್ಚರ್ಯ ಕಾದಿತ್ತು. ವಾರ್ಡಿನಲ್ಲಿ ದುಗುಡ, ಕಾತುರ ಎಲ್ಲರ ಮುಖದಲ್ಲೂ! ವಾಯುದಳಕ್ಕೆ ಸೇರಿದ ಅತಿ ದೊಡ್ಡ ವಿಶಾಲ ಕಾರುಗಳೆರಡು ಮೊರೆದು ಭೋರ್ಗರೆದು ಬಂದು ನಿಂತವು. ಕಾರುಗಳ ಮೇಲೆ ಕೆಂಪು ದೀಪ ಸುತ್ತುತ್ತಿತ್ತು. ಆ ದುರದೃಷ್ಟ ಮಗುವಿನ ತಂದೆ ಕಾರಿನ ಮೂಲೆಯಲ್ಲಿ ಮಂಡಿಸಿದ್ದರು. ಇನ್‌ಕ್ಯುಬೇಟರ್‌ನಲ್ಲಿದ್ದ ಮಗು ಮತ್ತು ನುರಿತ ದಾದಿ ಕಾರಿನಲ್ಲಿ ಕುಳಿತಾಗ ಕಾರುಗಳೆರಡೂ ಮತ್ತೆ ಮೊರೆದು ಮರೆಯಾದವು. ಮಗು 'ಇನ್‌ಕ್ಯುಬೇಟರ್'ನಲ್ಲಿದ್ದ ಆಮ್ಲಜನಕ,

ಗೊತ್ತಾದ ಉಷ್ಣಾಂಶ ಮತ್ತು ತೇವ, ರಕ್ತನಾಳಕ್ಕಳವಡಿಸಿದ ಗ್ಲೂಕೋಸ್, ಸೆಲೈನ್ ದ್ರವದ ವಾತಾವರಣದಲ್ಲಿ ಹಾಯಾಗಿ ನಿದ್ರಿಸುತ್ತಿತ್ತು. ಆಸ್ಪತ್ರೆಯಿಂದ ವಿಮಾನ ನಿಲ್ದಾಣಕ್ಕೆ ಮಗುವಿನ ಪ್ರಯಾಣ; ಅಲ್ಲಿಂದ ಅಮೇರಿಕಾದಲ್ಲಿನ ಬಾಸ್ಟನ್ ನಗರಕ್ಕೆ ಶಸ್ತ್ರಚಿಕಿತ್ಸೆಗಾಗಿ ವಿಮಾನದಲ್ಲಿ ಹೊರಡುವುದಿತ್ತು. ಇಂಗ್ಲೆಂಡಿನ ಸುಪ್ರಸಿದ್ಧ ಆಸ್ಪತ್ರೆಯೊಂದರಿಂದ ಅಮೆರಿಕಾದ ಬಾಸ್ಟನ್ ನಗರದ ಮತ್ತೊಂದು ಸುಪ್ರಸಿದ್ಧ ಮಕ್ಕಳ ಆಸ್ಪತ್ರೆಗೆ ಕೊಂಡೊಯ್ದರು. ಇದೊಂದು ಬಿಡಿಸಲಾಗದ ಪ್ರಶ್ನೆ. ದೇಶಪ್ರೇಮವೋ ಇಲ್ಲ ಉನ್ನತ ಪದವಿಯ ವಿಪರೀತವೋ ತಿಳಿಯಲಿಲ್ಲ.

೧೨

ವರ್ಜೀನಿಯಾವಾಟರ್ಸ್ ಲಂಡನ್ನಿಗೆ ೧೫ ಮೈಲಿ ದೂರದಲ್ಲಿದೆ. ಸರ್ರೆ ಎಂಬ ಕೌಂಟಿಗೆ ಸೇರಿದ್ದು. ಬಹಳ ಸುಂದರ ಸ್ಥಳ. ಅಲ್ಲದೆ ಅನೇಕ ಸಿನಿಮಾ ನಟನಟಿಯರು ಅಲ್ಲಿ ವಾಸಿಸುತ್ತಾರೆ. ವಿಂಬಲ್‌ಡನ್ ಟೆನ್ನಿಸ್ ಮ್ಯಾಚ್‌ಗಳು ಅಲ್ಲಿ ನಡೆಯುತ್ತವೆ. ನಾನೂ ಡಾ|| ಸಿಂಗ್ ಡಿಸೆಂಬರ್ ೮ನೇ ತಾರೀಖು ಅಲ್ಲಿಗೆ ಪ್ರಯಾಣ ಮಾಡಿದೆವು. ಅಲ್ಲಿನ ನಂ. ೨, ಸೆಡ್‌ಹೌಸ್, ಸುಟ್ರಡೇ ರೋಡ್, ಅಲ್ಲೇ ಡಾ|| ಕೇಶವ್ ಮತ್ತು ಶ್ರೀಮತಿ ಕೇಶವ್ ವಾಸ. ಡಾ|| ಕೇಶವ್ ಮೈಸೂರಿನವರು. ಶ್ರೀಮತಿ ಕೇಶವ್ ಡಾ|| ಸಿಂಗ್‌ರವರ ಊರಾದ ಡಾಲ್ಮಿಯಾ ನಗರದವರು. ಆದ್ದರಿಂದ ಡಾ|| ಸಿಂಗ್ ಮತ್ತು ನಾನು ನೆಂಟರು! ಡಾ|| ಕೇಶವ್‌ಗೆ ಅಲ್ಲಿನ ವೃದ್ಧರ ಆಸ್ಪತ್ರೆಯೊಂದರಲ್ಲಿ ಕೆಲಸ. ಅತಿ ವಯಸ್ಸಾದವರಿಗೆ ಅಲ್ಲಿ ಆಸ್ಪತ್ರೆಗಳಿವೆ. ಅವನ್ನೇ ಜಿರಿಯಾಟ್ರಿಕ್ಸ್ ಆಸ್ಪತ್ರೆ ಎನ್ನುವುದು. ಆವಾಗ ಅಂದರೆ ೧೯೬೯ರಲ್ಲಿ ಜಿರಿಯಾಟ್ರಿಕ್ಸ್ ಆಸ್ಪತ್ರೆಯಲ್ಲಿ ವಿದೇಶಿಯರಿಗೆ ಕೆಲಸ ಸಿಗುತ್ತಿತ್ತು. ನಾನು ೧೯೭೦ನೇ ಜುಲೈ ತಿಂಗಳಿನಲ್ಲೊಮ್ಮೆ ಲಂಡನ್ ಹತ್ತಿರದಲ್ಲೇ ಇದ್ದ ಕೆಂಟ್ ಡಿಸ್ಟ್ರಿಕ್ಟ್‌ನ ಗ್ರೇವ್ಸ್ ಎಂಡ್ ಆಸ್ಪತ್ರೆಯಲ್ಲಿದ್ದ ನಮ್ಮ ಅಣ್ಣನವರ ಮಗ ಡಾ|| ರಂಗಸ್ವಾಮಿಯವರನ್ನು ನೋಡಲು ಸ್ಪೇಯ್ನ್‌ನಿಂದ ಹೋಗಿದ್ದೆ. ಆಗ ತಿಳಿಯಿತು ಜೇರಿಯಾಟ್ರಿಕ್ಸ್‌ನಲ್ಲೂ ಕೆಲಸ ಸಿಗುವುದು ಅಷ್ಟು ಸುಲಭವಲ್ಲ ಎಂದು.

ಸರ್ರೆ ರೈಲ್ವೆ ಸ್ಟೇಷನ್ ತಲುಪಿದಾಗ ಗಂಟೆ ೪. ಡಾ|| ಕೇಶವ್ ನಮ್ಮನ್ನು

ರೈಲ್ವೆ ಸ್ಟೇಷನ್‌ನಲ್ಲಿ ಭೇಟಿಯಾಗುವುದಿತ್ತು. ಆದರೆ ಅವರು ಕಾಣಲಿಲ್ಲ. ಡಾ|| ಸಿಂಗ್ ಆಸ್ಪತ್ರೆಗೆ ಟೆಲಿಫೋನ್ ಮಾಡಿದರು. ಆಗ ತಿಳಿಯಿತು. ಡಾ|| ಕೇಶವ್ ಆಕಸ್ಮಾತ್ ಆ ದಿನ ಡ್ಯೂಟಿಯಲ್ಲಿದ್ದರೆಂದು. ನಾವು ಬಂದದ್ದು ತಿಳಿದು ೧೦-೧೫ ನಿಮಿಷದಲ್ಲಿ ಸ್ಟೇಷನ್‌ಗೆ ಬಂದರು. ಸರಿ, ಅವರ ಮಿನಿ ಮೈನರ್ ಕಾರ್‌ನಲ್ಲಿ ಕುಳಿತು ಮನೆ ತಲುಪಿದೆವು. ಶ್ರೀಮತಿ ಕೇಶವ್ ಮನೆಯಲ್ಲಿರಲಿಲ್ಲ. ಆಕೆ ಅಂಗಡಿಯೊಂದರಲ್ಲಿ ಸೇಲ್ಸ್ ಕೆಲಸಕ್ಕೆ ಇದ್ದರಂತೆ. ಅರ್ಧ ಗಂಟೆ ತಡವಾಗಿ ಬಂದರು. ಕುಶಲ ಪ್ರಶ್ನೆ, ಕಾಫಿ ಮುಗಿದು ನಾವು ಸಾಯಂಕಾಲವಾದ್ದರಿಂದ ಅಡ್ಡಾಡಿ ಬರುವುದೆಂದೂ ಶ್ರೀಮತಿ ಕೇಶವ್ ಊಟ ತಯಾರು ಮಾಡುವುದೆಂದೂ ಒಪ್ಪಿ ಹೊರಬಿದ್ದೆವು. ಛಳಿ ಹೆಚ್ಚಾಗಿತ್ತು. ಪಕ್ಕದಲ್ಲೊಂದು ತಿಳಿನೀರಿನ ಸರೋವರ. ಅದರ ಆಕಾರಕ್ಕೆ ತಕ್ಕಂತೆ ಬೆಳೆಸಿ ಸುತ್ತಲೂ ಆವರಿಸಿದ್ದ ನೀಲಗಿರಿ ಮರಗಳ ತಿಳಿನೀರಿನಲ್ಲಿನ ಪ್ರತಿಬಿಂಬ, ನಿಶ್ಶಬ್ದ ನಿರ್ಜನ ಸನ್ನಿವೇಶ ! ಕಲ್ಲುಬಂಡೆಯ ಮೇಲೆ ಕುಳಿತೆವು. ಮೈಸೂರಿನ ಕಾರಂಜಿ ಕೆರೆಯ ಏರಿಯಲ್ಲಿ ಕುಳಿತಂತಿತ್ತು ! ಕಾಡಿನ ಮಧ್ಯೆ ಅಲ್ಲೊಂದು ಇಲ್ಲೊಂದು ಅರ್ಧ ಮರೆಯಾದ ಬಂಗಲೆಗಳು. ಸುತ್ತಿ ಹತ್ತಿ ಇಳಿದ ಸ್ವಚ್ಛ ರಸ್ತೆಗಳು ಹಿತಕರ. ಅಡ್ಡಾಡಿದೆವು. ಕತ್ತಲು ಕವಿಯುತ್ತಿದ್ದಂತೆ ಮನೆ ತಲುಪಿದ್ದೆವು.

ಡಾ|| ಕೇಶವ್ ಇಂಗ್ಲೆಂಡಿಗೆ ಬಂದು ೨ ವರ್ಷಗಳಾಗಿತ್ತು. ಮನೋರೋಗದಲ್ಲಿ ಎಮ್.ಆರ್.ಸಿ.ಪಿ. ಮಾಡುವವರಿದ್ದರು. ನನ್ನನ್ನು ಮೈಸೂರು ಮೆಡಿಕಲ್ ಕಾಲೇಜಿನಲ್ಲಿದ್ದಾಗ ಬಲ್ಲರು. ನನಗೂ ಹೆಚ್ಚಿನ ಪರಿಚಯವಿತ್ತು. ಆದರೆ ಅದೆಲ್ಲಾ ಅವರ ಮುಖ ನೋಡಿದಾಗ ಹೊಳೆಯಿತು. ಊರಿನ ವೈಚಿತ್ರ್ಯ, ಸ್ನೇಹಿತರ ಪ್ರಾಧ್ಯಾಪಕರ ನೆನಪು, ಪ್ರಾಧ್ಯಾಪಕರು ಪಾಠ ಹೇಳುತ್ತಿದ್ದ ವೈಖರಿ, ಮೇಧಾವಿತನ, ನಾವು ಹೆದರುತ್ತಿದ್ದದ್ದೆಲ್ಲಾ ಮೆಲುಕು ಹಾಕಿದೆವು.

"ಆ ಚಂದ್ರಶೇಖರ್ ಅನಾಟಮಿ ಪಾಸ್ ಮಾಡಿದ್ನ ಸಾರ್" ಎಂದರು ಡಾ|| ಕೇಶವ್. "ಇಲ್ಲ ಡಾ|| ಕೇಶವ್ ನಾನು ಊರು ಬಿಟ್ಟಾಗ ೧೩ನೇ ಸಾರಿ ಅನಾಟಮಿ ಪರೀಕ್ಷೆಗೆ ಕುಳಿತಿದ್ದರು." "ಅವರಿಗೇಕೆ ಓದು. ಎಸ್ಟೇಟ್ ಇದೆಯಂತೆ. ಬಿಟ್ಟು ಬೇರೇನಾದರೂ ಕೆಲಸ ಮಾಡಬಹುದಲ್ಲಾ." "ಅಯ್ಯೋ ಅಷ್ಟು ಸುಲಭ ಎಂದಿದ್ದಿರಾ. ಒಮ್ಮೆ ಚಂದ್ರಶೇಖರ್ ತಂದೆ ಸಿಕ್ಕಿದ್ದರು. ನಾವು ನಾಲ್ಕು ಜನ ಸ್ನೇಹಿತರು ಸೇರಿ ಅನುಕಂಪ ತೋರುವಂತೆ 'ಸಾರ್ ನಿಮ್ಮ ಮಗ ಇನ್ನೆಷ್ಟು ದಿನಕ್ಕೆ ಎಂ.ಬಿ.ಬಿ.ಎಸ್. ಮುಗಿಸುವುದು. ಅನಾಟಮಿಯಲ್ಲೇ

ಹನ್ನೆರಡು ಸಾರಿ ಫೇಲಾಗಿದ್ದಾನೆ. ಹೇಗಿದ್ದರೂ ತಮಗೆ ಎಸ್ಟೇಟ್ ಇದೆ. ಅದನ್ನಾದರೂ ಇವನು ನೋಡಿಕೊಳ್ಳಲಿ' ಎಂದಾಗ, ಅವರು 'ನೋಡಿರಪ್ಪ ಅವನಿಗೆ ಈಗಾಗಲೇ ಎರಡು ಮಕ್ಕಳಿವೆ. ಎಸ್ಟೇಟಿನಲ್ಲಿ ಅವನ ಖರ್ಚು ಕಾಲೇಜಿನ ಖರ್ಚಿಗಿಂತ ಹೆಚ್ಚು. ಆದ್ದರಿಂದ ಅವನು ಕಾಲೇಜಿನಲ್ಲೇ ಇರಲಿ' ಎಂದರು ಎಂದೆ." ಸತತವಾಗಿ ನಕ್ಕೆವು.

"ಆ ದಾಸಪ್ಪ, ಅವನದೇನಾಯಿತು ?"

"ಹೋ. ಶೇಕ್ಸ್‌ಪಿಯರ್ ದಾಸಪ್ಪನಾ"

"ಹೌದೌದು. ಒಳ್ಳೆ ದೊಡ್ಡ ಹಣೆ"

"ಲೈಬ್ರರಿಯಲ್ಲೊಮ್ಮೆ ಸಿಕ್ಕಿದ್ದರು. ನಾನು "ನಮಸ್ಕಾರ" ಎಂದೆ, ಅದಕ್ಕವರು "ಅಡ್ಡ ಬಿದ್ದೆ ಗುರು" ಎಂದರು. ನಾನು "ನಿಮ್ಮ ಹಣೆ ನೋಡಿದರೆ ನನಗೆ ಸಹಿಸದು. ಎಂಥಾ ದೊಡ್ಡ ಹಣೆ ! ಶೇಕ್ಸ್‌ಪಿಯರ್‌ನಂಥಾ ಹಣೆ" ಎಂದದ್ದಕ್ಕೆ "ಗುರು ನನ್ನ ಹಣೆಯಲ್ಲಿರುವುದು ನಿಮಗೇನು ಗೊತ್ತು. ನಮ್ಮ ಅನಾಟಮಿ ಪ್ರೊಫೆಸರಿಗೆ ಮಾತ್ರ ಗೊತ್ತು. ಅದಕ್ಕೇ ೭ನೇ ಸಾರಿ ಅನಾಟಮಿ ಪರೀಕ್ಷೆ ತೆಗೆದುಕೊಳ್ಳುತ್ತಿರುವುದು" ಎಂದರು, ಎಂದಾಗ ಮತ್ತೆ ನಗುವಿನ ಅಲೆ ಹರಿಯಿತು.

ಬೆಳಿಗ್ಗೆ ಉಪಾಹಾರ ಏರ್ಪಾಡಾಗಿತ್ತು. ಶ್ರೀಮತಿ ಕೇಶವ್ ಎಲ್ಲೋ ಹೊರಗೆ ಹೊರಡುವುದರಲ್ಲಿದ್ದರು. ಮನೆಯಲ್ಲಿ ಸೆಂಟ್ರಲ್ ಹೀಟಿಂಗ್ ವ್ಯವಸ್ಥೆ ಇದ್ದದ್ದರಿಂದ ಡಾ|| ಸಿಂಗ್ ಮತ್ತು ನಾನು ಸುಖ ನಿದ್ರೆಯಿಂದ ಎದ್ದಾಗ ಗಂಟೆ ೯ ಆಗಿತ್ತು. "ಬ್ರೇಕ್‌ಫಾಸ್ಟ್ ರೆಡಿ ಇದೆ. ದಯವಿಟ್ಟು ಇಬ್ಬರೂ ತೆಗೆದು ಕೊಳ್ಳಿ. ನಾನು ಅರ್ಧ ಗಂಟೆಯಲ್ಲಿ ಬಂದುಬಿಡುತ್ತೇನೆ" ಎಂದು ಶ್ರೀಮತಿ ಕೇಶವ್ ಹೊರಬಿದ್ದರು. ಭಾನುವಾರವಾದ್ದರಿಂದ ಡಾ|| ಕೇಶವ್ ಟೆಲಿವಿಷನ್ ಮುಂದೆ ವೃತ್ತ ಪತ್ರಿಕೆ ಹಿಡಿದು ಕುಳಿತಿದ್ದರು.

'ಗುಡ್‌ಮಾರ್ನಿಂಗ್'ಗಳಾದವು. "ನಾನು ಎಲ್ಲಾ ಮುಗಿಸಿದ್ದೇನೆ. ನೀವು ಬ್ರೇಕ್‌ಫಾಸ್ಟ್ ಮುಗಿಸಿಬನ್ನಿ" ಎಂದರು.

ಸರಿ. ಉಪಾಹಾರಕ್ಕೆ ಕಾರನ್‌ಫ್ಲೇಕ್ಸ್ ಇತ್ತು. ಸಕ್ಕರೆ ಇರಲಿಲ್ಲ. ಹಾಲೂ ಕಾಣಲಿಲ್ಲ. ಡಾ|| ಸಿಂಗ್ ಆ ಮನೆಗೆ ಮೊದಲೇ ಒಗ್ಗಿ ಹೋಗಿದ್ದರಿಂದ ಸಕ್ಕರೆ ಮತ್ತು ಹಾಲಿಗಾಗಿ ಕೋಣೆಯೆಲ್ಲಾ ತಡವರಿಸಿದರು ; ಶೋಧಿಸಿದರು. ಒಂದು ಡಬ್ಬದಲ್ಲಿದ್ದ ಸ್ವಲ್ಪ ಸಕ್ಕರೆ ಅರ್ಧ ಗ್ಲಾಸ್ ಹಾಲು ಪತ್ತೆ ಹಚ್ಚಿ

ದ್ದಾಯಿತು. ಡಾ|| ಸಿಂಗ್ ಮನಸ್ಸು ನೊಂದಂತೆ ಕಂಡಿತು.

"ನಿಮ್ಮನ್ನಿಲ್ಲಿಗೆ ಕರೆತರಬಾರದಿತ್ತು. ಒಂದೇ ಊರಿನವರು. ಪರಿಚಯ ವಾಗಲೆಂದು ಕರೆತಂದೆ. ಶ್ರೀಮತಿ ಕೇಶವ್ ಜಿಪುಣಿ ಎಂದು ಮೊದಲೇ ಗೊತ್ತು. ನನಗೆ ಒಗ್ಗಿ ಹೋಗಿದೆ" ಎನ್ನುತ್ತಿದ್ದಂತೆ ಡಾ|| ಕೇಶವ್ "ಇಷ್ಟೊತ್ತು ಏನ್ ಮಾಡ್ತಿದ್ದೀರಾ" ಎಂದು ಊಟದ ಟೇಬಲ್ ಹತ್ತಿರ ಬಂದರು. "ಬರೀ ಕಾರನ್‌ಫ್ಲೇಕ್ಸ್ ಇಟ್ಕೊಂಡಿದ್ದೀರಿ. ಹಾಲು ಹಾಕ್ಕೊಳ್ಳಿ ಇಲ್ಲದಿದ್ದರೆ ಹಸಿ ಅವಲಕ್ಕಿ ಮುಕ್ಕಿದ ಹಾಗೆ ಅದು. ತಿನ್ನೋಕಾಗೊಲ್ಲ" ಎಂದು ಹಾಲಿಗಾಗಿ ಹುಡುಕಾಡಿದರು. ಕೊನೆಗೆ "ನನಗೆ ಗೊತ್ತು. ಅವಳು ಫ್ರಿಜ್‌ನಲ್ಲಿ ಇಟ್ಟು ಹೋಗಿದ್ದಾಳೆ" ಎಂದು ಫ್ರಿಜ್‌ನಲ್ಲಿದ್ದ ಯಥೇಚ್ಛ ಹಾಲಿನ ಬಾಟಲ್ ತಂದರು. ಉಪಹಾರ ಮುಗಿಯಿತು.

ಮಧ್ಯಾಹ್ನ ಮಾಂಸಾಹಾರಿ ಊಟ. ನನ್ನನ್ನು ಬಿಟ್ಟು ಉಳಿದ ಮೂವರೂ ಜಾತಿಯಲ್ಲಿ ಬ್ರಾಹ್ಮಣರು. ಬ್ರಾಹ್ಮಣತನ ಇಂಡಿಯಾ ದೇಶದಲ್ಲಿ ಅಥವಾ ಸ್ವದೇಶದಲ್ಲಿ, ಅವರ ಮನೆಯಲ್ಲಿ. ಹೊರ ದೇಶದಲ್ಲಿ ಯಾವತನವೂ ಇಲ್ಲ. ಎಲ್ಲರೂ ಒಂದುತನದವರು. ಊಟವಾಯಿತು, ಸಂತುಷ್ಟರಾದಂತೆ ಕಂಡೆವು.

ಸಾಯಂಕಾಲ 'ಟೀ' ಮುಗಿಸಿ ಲಂಡನ್ನಿಗೆ ಹೊರಡಲನುವಾದೆವು. ಡಾ|| ಕೇಶವ್ "ನಾಳೆ ಹೋಗಬಹುದು. ಏನ್ ಮಹಾ ನೀವು ರಾತ್ರಿ ಸಾಧಿಸೋದು ಲಂಡನ್‌ನಲ್ಲಿ" ಎಂದು ಗೊಣಗಾಡಿದರು. ಸಾಯಂಕಾಲ ೬ ಗಂಟೆಗೆ ಸ್ಟೇಷನ್ ನಲ್ಲಿ ಟ್ರೈನಿಗಾಗಿ ಕಾದೆವು. ಕೊರೆವ ಛಳಿ. ಕಾಲುಗಳು ಕೊರೆದು ಬೆಂಡಾಗಿ ದ್ದವು. ಅವುಗಳಿಗೆ ಚಲನೆ ಬೇಕಿತ್ತು. ಚಲನೆಯಿಂದ ರಕ್ತಸಂಚಾರ ಉತ್ತಮ ಗೊಂಡು ಸ್ವಲ್ಪ ಆರಾಮವಾಗುತ್ತದೆ. ಆದ್ದರಿಂದ ಒಂದೊಂದು ಕಾಲನ್ನು ಒಂದೊಂದು ಸಾರಿ ಎತ್ತಿ ಕೆಳಗಿಡುತ್ತ, ಆಕಡೆ ಈಕಡೆ ವಾಲಾಡಿದೆವು. ಹೀಗಾಗಿ ಅಲ್ಲಿ ಕಾದಿದ್ದ ಜನಸ್ತೋಮ ಕೊನೆಕೊನೆಗೆ ತಾಳಕ್ಕೆ ತಕ್ಕಂತೆಯೋ ಎಂಬಂತೆ ಒಂದಾಗಿ ಓಲಾಡುತ್ತಿತ್ತು ! ಛಳಿಗಾಗಿ ಒಬ್ಬರು ಮತ್ತೊಬ್ಬರ ಸಮೀಪ ಬಯಸಿ ಬೆಂಡಾಗಿದ್ದ ಕಾಲುಗಳನ್ನು ಬಿಸಿಮಾಡುತ್ತಿದ್ದರು. ಅದೇ ರಾಕ್ ಅಂಡ್ ರೋಲ್‌ನ ಉಗಮವೆಂದು ಕಂಡಿತು ಆ ಜನಸ್ತೋಮದ ಚಲನೆ !

ಟ್ರೈನ್ ಲಂಡನ್ ಕಡೆ ಚಲಿಸಿತು. ಡಾ|| ಸಿಂಗ್ "ನನಗೆ ಉಪಹಾರದ ಸಮಯದಲ್ಲಿ ವ್ಯಥೆಯಾಯಿತು" ಎಂದರು. ಅವರ ವ್ಯಥೆಯ ಆಳವರಿತ ನಾನು "ಡಾ|| ಸಿಂಗ್, ನಾವಿಬ್ಬರೂ ಈಗ ನೆಂಟರು. ನೀವು ಶ್ರೀಮತಿ ಕೇಶವ್

ಕಡೆಯವರು. ಅಂದರೆ, ಮಾವನವರು. ನಾನು ಡಾ॥ ಕೇಶವ್ ಕಡೆಯವನು. ಅಂದರೆ, ಅತ್ತೆಯವರು. ಅತ್ತೆಗೆ ಸೊಸೆಯ ಆತಿಥ್ಯ ತಿಳಿಯದೇ ?" ಎಂದಾಗ ವಾತ್ಸಲ್ಯದಿಂದ ನನ್ನ ಕೈ ಅಪ್ಪಿದ್ದರು.

* * * *

ಪ್ರೊ॥ ವಿಲ್ಕಿನ್‌ಸನ್ನರಿಗೆ ವಿಸಿಟಿಂಗ್ ಪ್ರೊಫೆಸರ್ ಆಗಿ ಕೆನಡಾದ ಟೊರೆಂಟೋಗೆ ಹೊರಡುವ ಆತುರ. ನನ್ನನ್ನು ಮರೆತಂತೆ ಕಂಡಿತು. ಏಕೆಂದರೆ ಡಾ॥ ಸುಬ್ಬಯ್ಯನವರನ್ನು ಯೂರಾಲಜಿ ಸರ್ಜನ್ ಹತ್ತಿರ ಕೆಲಸ ಮಾಡಲು ಏರ್ಪಾಡು ಮಾಡಿದ್ದರು. ನನಗೆ ಆ ತರಹದ ಯಾವುದೇ ಏರ್ಪಾಡು ಮಾಡಿರಲಿಲ್ಲ. ಅಂದು ಹೋಗುವ ದಿನ. ನಾವೆಲ್ಲಾ ಸುಖ ಪ್ರಯಾಣ ಕೋರಿದೆವು. ಅವರು ಹೊರಟ ದಿನದಿಂದ ನಾನು ಸ್ವಲ್ಪ ಆರಾಮವಾಗಿದ್ದೆ. ಆದ್ದರಿಂದ ಮಿ॥ ಎಚ್.ಎಚ್. ನಿಕ್ಸನ್‌ರ ಘಟಕದಲ್ಲಿ ಕೆಲಸ ಮಾಡುತ್ತಿದ್ದೆ. ಮಿ॥ ಎಚ್. ಎಚ್. ನಿಕ್ಸನ್‌ರವರಿಗೂ ಪ್ರೊ॥ ವಿಲ್ಕಿನ್‌ಸನ್‌ರಿಗೂ ವ್ಯತ್ಯಾಸ ಕಂಡುಬಂತು. ಮಿ॥ ನಿಕ್ಸನ್ ಪ್ರೊಫೆಸರ್ ಅಲ್ಲದಿದ್ದರೂ ಆ ಆಸ್ಪತ್ರೆಯಲ್ಲಿ ಒಳ್ಳೆಯ ಹೆಸರು ಮಾಡಿದ್ದರು. ಇಂಡಿಯಾದವರನ್ನು ಕಂಡರೆ ಮಮತೆಯಿತ್ತು. ಮಿತಭಾಷಿ. ಒಳ್ಳೆ ಸರ್ಜನ್. ಎಡಗೈ ಬಲಗೈಗಳೆರಡರಿಂದಲೂ ಕತ್ತರಿ ಉಪಯೋಗಿಸುತ್ತಿದ್ದರು. ಹೊರರೋಗಿಗಳ ಪರೀಕ್ಷೆಯ ಮಧ್ಯಾಂತರದಲ್ಲಿ ಸುಮಾರು ೧೦-೩೦ಕ್ಕೆ ಟೀ ಕುಡಿಯುವ ವಾಡಿಕೆ. ಆ ಸಮಯದಲ್ಲಿ ನಮ್ಮೆಲ್ಲರನ್ನೂ ಕರೆದೊಯ್ಯುತ್ತಿದ್ದರು. ಪ್ರೊ॥ ವಿಲ್ಕಿನ್‌ಸನ್‌ರು "ಎಕ್ಸ್‌ಕ್ಯೂಸ್‌ಮಿ" ಎಂದು ಎದ್ದು ಹೋಗಿ ಒಬ್ಬರೇ ಟೀ ಮುಗಿಸಿ ಬರುತ್ತಿದ್ದರು. ಬಹುಶಃ ಪ್ರೊಫೆಸರ್‌ಗೆ ಅವಕ್ಕೆಲ್ಲಾ ವೇಳೆ ಸಾಲುತ್ತಿರಲಿಲ್ಲವೆಂದು ಕಾಣುತ್ತದೆ. ವಾರದ ವಿಚಾರ ವಿನಿಮಯಗಳಲ್ಲಿ ನಮ್ಮನ್ನು ಭಾಗವಹಿಸುವಂತೆ ಪ್ರೇರೇಪಿಸುವುದು ನಿಕ್ಸನ್ನರ ವಾಡಿಕೆ. ಇವರ ಘಟಕದಲ್ಲಿ ಬಿಡುವಿದ್ದಾಗ ರಿಜಿಸ್ಟ್ರಾರ್ ಮಿ॥ ಹೊವೆಟ್‌ರ ಜೊತೆ ಪ್ರೊಫೆಸರ್ ಘಟಕದಲ್ಲಿರುತ್ತಿದ್ದೆ. ನಾನು ಈ ಪ್ರವಾಸ ಪುಸ್ತಕ ಬರೆಯುತ್ತಿದ್ದಾಗ, ಅಂದರೆ ೧೯೮೦ನೇ ಫೆಬ್ರವರಿಯ ಕೊನೆ ವಾರ ಶ್ರೀಮತಿ ಮತ್ತು ಮಿ॥ ನಿಕ್ಸನ್‌ರು ಮೈಸೂರಿಗೆ ಬಂದು ಒಂದು ದಿನ ನಮ್ಮ ಆತಿಥ್ಯ ಸ್ವೀಕರಿಸಿ, ಚಾಮುಂಡೇಶ್ವರಿ ಬೆಟ್ಟ, ದೇವಸ್ಥಾನ, ಅರಮನೆ ಮತ್ತು ಬೃಂದಾವನಗಳನ್ನು ವೀಕ್ಷಿಸಿ ಮೆಚ್ಚಿದ ಅವಕಾಶ ಒದಗಿತ್ತು. 'ವಿಸಿಟಿಂಗ್ ಲೆಕ್ಚರ್ಸ್'ಗಾಗಿ ಬಾಂಬೆಗೆ ಬಂದಿದ್ದರು.

ಆಲ್ಲಿಂದ ಬೆಂಗಳೂರಿನಲ್ಲಿ ನಡೆದ ಪೀಡಿಯಾಟ್ರಿಕ್ಸ್ ಕಾನ್ಫರೆನ್ಸ್‌ನಲ್ಲಿ ಅವರ ಭಾಷಣವಿತ್ತು. ಅಲ್ಲಿಂದ ಮೈಸೂರಿಗೆ ದಯಮಾಡಿಸಿದ್ದರು.

ಮಿ|| ಹೊವೆಟ್‌ರವರ ಮನೆಯಲ್ಲಿ ಒಂದು ದಿನ ಔತಣ. ನನಗೂ ಸಹ ಆಹ್ವಾನವಿತ್ತು. ಡಾ|| ಬ್ರೌನ್ ಕೂಡಾ ಬಂದಿದ್ದರು. ಶ್ರೀಮತಿ ಹೊವೆಟ್ ಅನೆಸ್ತಿಸಿಯಾದಲ್ಲಿ ಡಿಪ್ಲೊಮಾ ಪಡೆದಿದ್ದರೂ ಉದ್ಯೋಗ ತ್ಯಜಿಸಿ ಗೃಹಿಣಿಯಾಗಿದ್ದುದು ಆಶ್ಚರ್ಯದ ಸಂಗತಿ ! ಅವರಿಗೆ ಇಬ್ಬರು ಮಕ್ಕಳಿದ್ದರು. ನನ್ನ ತಿಳಿ ಗ್ರೇ ಕಲರ್ ಸೂಟ್ ನೋಡಿ ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು. ಮಿ|| ಹೊವೆಟ್ "ಹೌದು, ಸಿಂಪಲ್ ಆದರೆ ಎಲಿಗೆಂಟ್" ಎಂದು ಮಾತು ಸೇರಿಸಿದ್ದರು. ಮಾತಿನ ಮಧ್ಯೆ ನಮ್ಮ ದೇಶದ ಅವಿಭಕ್ತ ಕುಟುಂಬದ ಬಗ್ಗೆ ಅವರಿಗಿದ್ದ ಮೆಚ್ಚುಗೆ ವೇದ್ಯವಾಯಿತು. ಮಿ|| ಹೊವೆಟ್‌ರ ತಂದೆ ತಾಯಿಗಳು ೪೬, ಸ್ಟರ್‌ಲಿಂಗ್, ಅವೆನ್ಯೂ ವೆಸ್ಟರ್‌ಟನ್, ಬೇರ್ಸ್‌ಡನ್, ಗ್ಲಾಸ್‌ಗೊ ನಗರದಲ್ಲಿದ್ದರಂತೆ. "ಅವರನ್ನು ನೋಡಿಬರಲು ಎರಡು ವರ್ಷಗಳಿಂದ ಸಾಧ್ಯವಾಗುತ್ತಿಲ್ಲ. ನಮಗೆ ಮದುವೆಯಾಗಿ ನಾವು ತಂದೆ ತಾಯಿಗಳಾದಾಕ್ಷಣ ನಮ್ಮ ತಂದೆ ತಾಯಿಯರನ್ನು ಮರೆಯಲು ಸಾಧ್ಯವೇ ? ಇದು ಮುಂದುವರಿದ ದೇಶಗಳ ವಿದ್ಯಮಾನವಿರಬಹುದು. ಆದರೆ ಪ್ರೀತಿ ವಾತ್ಸಲ್ಯದ ಬಂಧನ ಎಲ್ಲವನ್ನೂ ಮೀರಿಸಿದ್ದು, ಜಗತ್ತನ್ನೇ ಜಯಿಸಿದ್ದು, ಅದಕ್ಕೆ ಸೋಲಿಲ್ಲ. ಆದ್ದರಿಂದ ನಿಮ್ಮಲ್ಲಿನ ಅವಿಭಕ್ತ ಕುಟುಂಬ ನಮಗೆ ಇಷ್ಟ. ವಯಸ್ಸಾದ ತಂದೆತಾಯಿಗಳು ಮಕ್ಕಳಂತೆ ! ಅವರ ಸೇವೆ ನಮಗೆ ಇಷ್ಟ. ಮೊಮ್ಮಗ, ಮೊಮ್ಮಗಳು, ಅಜ್ಜಿ, ಅಜ್ಜಂದಿರ ನುರಿತ ಅನುಭವ, ಅಪಾರ ಪ್ರೀತಿ ವಾತ್ಸಲ್ಯದಲ್ಲಿ ಬೆಳೆಯಬೇಕು. ಆಗಲೇ ಅವರಿಗೂ ತೃಪ್ತಿ. ಈ ನಮ್ಮ ಸಂಪ್ರದಾಯ ವಾತ್ಸಲ್ಯಕ್ಕೆ ಅಡ್ಡಿ ; ತುಂಬಲಾರದ ಕೊರತೆ" ಎಂದರು. ಬೀಳ್ಕೊಟ್ಟಾಗ ರಾತ್ರಿ ೧೧ ಗಂಟೆ.

೧೩

ಡಾ|| ಜೆ. ಎನ್. ಸಿಂಗ್ ವಾಪಸ್ ಹೊರಡುವವರಿದ್ದರು. ಅವರು ಬಂದಾಗಲೇ ೩ ತಿಂಗಳಾಗಿತ್ತು. ಆಕಸ್ಮಾತ್ತೋ ಎನ್ನುವಂತೆ ಬ್ರಾರ್ ಕೂಡ ನಮ್ಮ ಹಾಸ್ಟಲ್ ಬಿಟ್ಟು ೧೦೪, ಎಲ್ಗಿನ್ ರೋಡ್, ಸೆವೆನ್‌ಕಿಂಗ್ಸ್, ಇಲ್‌ಫೊರ್ಡ್, ಎಸ್ಸೆಕ್ಸ್‌ಗೆ ಹೋಗುವುದಾಗಿ ಅನುವಾಗಿದ್ದರು. ನಮ್ಮಲ್ಲಿ ಸ್ವಲ್ಪ

ನಿರುತ್ಸಾಹ. ಆದರೂ ಡಾ|| ಸಿಂಗ್ ತಾಯ್ನಾಡಿಗೆ ಮರಳುವವರಿದ್ದರಿಂದ ಒಮ್ಮೆ ಸಂತೋಷವೂ ನಿರುತ್ಸಾಹದ ಮರೆಯಲ್ಲಿ ಮೆರೆದಿತ್ತು. ಶ್ರೀ ಬ್ರಾರ್ ಇಂಗ್ಲೆಂಡ್‌ನಲ್ಲೇ ಎಸ್ಸೆಕ್ಸ್ ಎಂಬ ಸ್ಥಳಕ್ಕೆ ಹೊರಡುವವರಿದ್ದರಿಂದ ಇಲ್ಲೇ ಇದ್ದಾರೆ ಅನ್ನೋ ಅನುಭವ ಇಣುಕುತ್ತಿತ್ತು. ಹೀಗಾಗಿ ನಾಲ್ಕಾರು ದಿನಗಳಲ್ಲಿ ಸ್ವಲ್ಪ ಸ್ವಲ್ಪ ದೂರವಾಗತೊಡಗಿದೆವು. ಆದರೂ ಆತ್ಮಗಳು ಮೊದಲಿನಂತೆ ಹತ್ತಿರ ಹತ್ತಿರ ! ಇದೊಂದು ವಿಚಿತ್ರಾನುಭವ. ಆ ದಿನ ರಾತ್ರಿ ಡಾ|| ಮೋಹಿಂದರ್‌ಸಿಂಗ್ ನಾವೆಲ್ಲಾ ಒಟ್ಟಿಗೆ ಕ್ಯಾಬ್ರೆ ಡ್ಯಾನ್ಸ್ ನೋಡುವುದೆಂದು ತೀರ್ಮಾನಿಸಿದರು. ಸರಿ, ಊಟ ಮುಗಿಸಿ ಹೊರಬಿದ್ದೆವು. ಪಿಕ್ಕಡಿಲ್ಲೀ ಸರ್ಕಸ್‌ಗೆ ನಡೆದೇ ಹೊರಟೆವು. ನಮ್ಮ ಹಾಸ್ಟಲ್‌ಗೆ ಅದು ಸುಮಾರು ೧.೫ ಮೈಲಿ ಇದ್ದಿರಬಹುದು. ಹೀಗೆ ನಡೆಯುತ್ತಿದ್ದಾಗ ಒಂದು ಕಡೆ 'ಕ್ಯಾಬ್ರೆ ಡ್ಯಾನ್ಸ್ ಕ್ಲಬ್, ಪ್ರವೇಶ ೧೫ ಷಿಲ್ಲಿಂಗ್ಸ್' ಎಂದಿತ್ತು. ಡಾ|| ಜೆ. ಎನ್. ಸಿಂಗ್ ೧೫ ಷಿಲ್ಲಿಂಗ್ ಕೊಡಲು ಇಷ್ಟಪಡಲಿಲ್ಲ. ಮುಂದೆ ಗಲ್ಲಿಯೊಂದರಲ್ಲಿ ನಡೆದಾಗ 'ಪ್ರವೇಶ ೫ ಷಿಲ್ಲಿಂಗ್ಸ್' ಎಂದಿತ್ತು. "ಹಾ, ನೋಡಿದಿರಾ. ಒಬ್ಬೊಬ್ಬರಿಗೆ ೧೦ ಷಿಲ್ಲಿಂಗ್ಸ್ ಉಳಿತಾಯ. ನಮಗೇನು ಡ್ಯಾನ್ಸ್ ನೋಡ ಬೇಕು, ಅಷ್ಟೇ. ಅಲ್ಲಿ ಊಟ, ಉಪಾಹಾರ ಬೇಕಿಲ್ಲ" ಎಂದಾಗ ಡಾ|| ಮೋಹಿಂದರ್‌ಸಿಂಗ್ ದುಡ್ಡಿನ ಪ್ರಶ್ನೆಯಿರಲಿ, ಎಲ್ಲರೂ ಕೊನೆದಿನಗಳ ಭೇಟಿ ಯಲ್ಲಿ ಒಟ್ಟಿಗೆ ಸೇರಿರೋಣ. ಆಯಿತು, ನಡೆಯಿರಿ" ಎಂದು ಮುಂದಾಗಿ ೫ ಜನರಿಗೂ ಟಿಕೆಟ್ ಕೊಂಡರು. ಶ್ರೀ ಮಸೂದ್ "ನಾಳೆಯ ಖರ್ಚು ನನ್ನದು" ಎಂದು ಹೇಳಿ ಸಮಾಧಾನ ಮಾಡಿದರು. ನಾನೇಕೆ ಸುಮ್ಮನಿರಲಿ ? "ನಾಳಿದ್ದು ಡಿನ್ನರ್ ನನ್ನದು" ಎಂದೆ. "ಓಹೋ ತಿಳಿಯಿತು. ಈಗ ಉಳಿಸಿದ ೧೦ ಷಿಲ್ಲಿಂಗ್ಸ್ ಸೇರಿಸಿ ಇದೆಲ್ಲಾ ಏರ್ಪಾಡು" ಎಂದು ಡಾ|| ಜೆ. ಎನ್. ಸಿಂಗ್ ಎಲ್ಲರನ್ನೂ ನಗಿಸಿದರು. ಮುಂದೆ ಒಳಗೆ ನುಗ್ಗಿದಾಗ ನಿರ್ಜನವಾಗಿತ್ತು. ಒಂದೆರಡು ನಿಮಿಷದಲ್ಲಿ "ಎಸ್ ಸಾರ್, ದಯಮಾಡಿ ಕೆಳಗಡೆ ಹೋಗಿ" ಎಂದೊಂದು ವ್ಯಕ್ತಿ ಹೇಳಿ ಮರೆಯಾದ. ಕೆಳಗಡೆ ಸೆಲ್ಲಾರ್‌ನ ಮೆಟ್ಟಲಿಳಿದು ತಿರುಗಿಕೊಳ್ಳುವ ಜಾಗದಲ್ಲಿ ಒಬ್ಬ ಇಟಲಿ ದೇಶದ ೪೦ರ ಮನುಷ್ಯ "೧೦ ಷಿಲ್ಲಿಂಗ್ಸ್ ಒಬ್ಬೊಬ್ಬರಿಗೆ" ಎಂದ. "ನಾವು ಟಿಕೆಟ್ ಆಗಲೇ ಪಡೆದಿದ್ದೇವೆ" ಎಂದರು ಡಾ|| ಮೊಹಿಂದರ್‌ಸಿಂಗ್. "ಹೌದು ಗೊತ್ತಿದೆ. ಡ್ಯಾನ್ಸ್ ನೋಡು ವುದಕ್ಕೆ ೫ ಷಿಲ್ಲಿಂಗ್ಸ್. ಅದಕ್ಕೆ ಮೊದಲೇ ಈ ಕ್ಲಬ್‌ಗೆ ನೀವು ಮೆಂಬರ್ಸ್

ಆಗಬೇಕು. ಮೆಂಬರ್‌ಶಿಪ್‌ಗೆ ಪ್ರತಿಯೊಬ್ಬರಿಗೆ ೧೦ ಷಿಲ್ಲಿಂಗ್ಸ್" ಎಂದ. ನಾವು "ಅದ್ಹೇಗೆ ? ನೀವು ಹೊರಗಡೆ ೫ ಷಿಲ್ಲಿಂಗ್ಸ್ ಎಂದಿದ್ದೀರಾ. ಅದಾಗದು" ಎಂದು ಗೊಣಗುತ್ತಿದ್ದಂತೆ ದಢೂತಿಯಾದ ನೀಗ್ರೋ ಒಬ್ಬ ಮುಖ ಸಿಂಡರಿಸಿ "ಏನದು ? ನಿಶ್ಯಬ್ದ !" ಎಂದು ಕೆಳಗಿನಿಂದ ಮೇಲೆ ಬಂದ. ಅವನನ್ನು ಹಿಂಬಾಲಿಸಿ ಮತ್ತೊಬ್ಬ ಜಟ್ಟಿ ! ತೋಳು ಮಡಚಿ ಕೆಕ್ಕರುಗಣ್ಣಿನಿಂದ ದುರುಗುಟ್ಟಿದ. ಡಾ|| ಮೊಹಿಂದರ್‌ಸಿಂಗ್ ಎತ್ತರದ ಗಟ್ಟಿಮುಟ್ಟಾದ ಆಳು. ನಾವು ಒಟ್ಟು ೫ ಜನರಿದ್ದರೂ ಬೆವರಿದೆವು. ಮುಖ ಬಿಳಿಚಿಕೊಂಡಿತು. ಬ್ರಾರ್ ಕೂಡ ಗಟ್ಟಿಮುಟ್ಟಾದ ಆಳು. ಆದರೆ ಸನ್ನಿವೇಶ ಗಲಾಟೆ ಮಾಡುವಂತಿರಲಿಲ್ಲ. ಆ ಗಲ್ಲಿಯಲ್ಲಿ ಒಬ್ಬ ಪೋಲೀಸ್‌ನ ಸುಳಿವೂ ಇಲ್ಲ. ಜನರಂತೂ ಇಲ್ಲವೇ ಇಲ್ಲ. ದೀಪದ ಬೆಳಕು ಮಂಕು ಮಂಕಾಗಿತ್ತು. ಆಗಲೇ ಗಂಟೆ ರಾತ್ರಿ ೧೦ ಆಗಿದ್ದಿರಬೇಕು ! "ನಾವು ವಾಪಸ್ ಹೋಗುವುದೇ ಉತ್ತಮ" ಎಂದು ಹಿಂದಿ ಭಾಷೆಯಲ್ಲಿ ವಿನಿಮಯ ಮಾಡಿಕೊಂಡೆವು. ಹಿಂತಿರುಗಿ ಮೆಲ್ಲನೆ ಕಾಲೆಳೆದುಕೊಂಡು ಮೇಲಕ್ಕೆ ಬಂದೆವು. ಹೊರಗೆ ಬಾಗಿಲಲ್ಲಿದ್ದಾತ ಏನೂ ಅರಿಯದವನಂತೆ ಬಾಗಿಲು ತೆರೆದ. ಉಸಿರು ಜೋರಾಗಿ ಆಡಿತು. ಎದೆ ಬಡಿತ ನಿಂತಿತ್ತು. ಎಲ್ಲರೂ ಬೆವರು ಒರೆಸಿಕೊಂಡೆವು. ನಾನು "ಪರವಾಗಿಲ್ಲ ಒಳ್ಳೆ ಅನುಭವ. ಬನ್ನಿ ಹಾಸ್ಟೆಲಿಗೆ ಹೋಗಿ ನಿದ್ರೆಮಾಡೋಣ" ಎಂದೆ. ಎಲ್ಲರೂ ಸರಿ ಎಂದರು. ಯಾವುದೋ ಅಪಘಾತ ತಪ್ಪಿಸಿಕೊಂಡಂತಿದ್ದೆವು !

ಮಾರನೇ ದಿನ ರಸಲ್‌ಸ್ಕ್ವೇರ್ ಟ್ಯೂಬ್ ಸ್ಟೇಷನ್‌ನಲ್ಲಿ ಡಾ|| ಜೆ. ಎಸ್. ಸಿಂಗ್ ನಮಗೆಲ್ಲಾ ಟಿಕೆಟ್ ಕೊಂಡರು. ಆ ಸ್ಟೇಷನ್‌ನಲ್ಲಿ ಭೂಗರ್ಭದಲ್ಲಿನ ಟ್ಯೂಬ್‌ಟ್ರೈನ್ ಹಿಡಿಯಲು ಮೆಟ್ಟಲುಗಳಿರಲಿಲ್ಲ, ಎಸ್ಕಲೇಟರ್ ಕೂಡ ಇರಲಿಲ್ಲ. ಅದಕ್ಕೆ ಬದಲು ಲಿಫ್ಟ್‌ನಿಂದ ಪ್ರಯಾಣಿಕರನ್ನು ಕೆಳಗಿಂದ ಮೇಲಕ್ಕೆ ಮೇಲಿನಿಂದ ಕೆಳಕ್ಕೆ ಸಾಗಿಸುತ್ತಿದ್ದರು. ಇಬ್ಬರು ಇಂಗ್ಲಿಷ್ ಪುಂಡು ಹುಡುಗರು ಟಿಕೆಟ್ ಇಲ್ಲದೆ ಪ್ರಯಾಣ ಮಾಡಿ ಹೊರ ಬರಲು ಯತ್ನಿಸಿದರು. ಅಲ್ಲಿಯ ಟಿಕೆಟ್ ಕಲೆಕ್ಟರ್ ಒಬ್ಬ ಮಹಿಳೆ. ಆಕೆ ನೀಗ್ರೊ ಜನಾಂಗಕ್ಕೆ ಸೇರಿದವಳು. ಪುಂಡರನ್ನು ಲಿಫ್ಟ್‌ಗೆ ಸೇರಿಸಿರಲಿಲ್ಲ. ಹುಡುಗರು ಅವಳ ಕಡೆ ಬೆಟ್ಟು ಮಾಡಿ ರೋಷಾವೇಷದಿಂದ ಮಾತನಾಡುತ್ತಿದ್ದರು. ಆಕೆ "ಐ ಡೋಂಟ್ ಕೇರ್, ಹೂ ಯೂ ಆರ್, ನನಗೆ ಟಿಕೆಟ್ ತೋರಿಸಿ" ಎಂದು ಶಿಸ್ತಿನ ಸಿಪಾಯಿಯಂತೆ ಗರ್ಜಿಸಿದಳು. ಪುಂಡರು ಬಲವಂತ ಮಾಡಿ ನುಗ್ಗುವವರಿದ್ದಾಗ ಒಂದು

ಕೋಣೆಗೆ ತಳ್ಳಿ, ಕೂಡಿಹಾಕಿ ಟೆಲಿಫೋನ್ ಮಾಡಿದಳಾಕೆ. ಹೆದರಿಕೆ ಭೂಗರ್ಭದ ಕತ್ತಲು ಕೋಣೆಯಲ್ಲಿ ನೆಲೆಸಿತ್ತು! ಆಗ ನಮಗೆ ಅರಿವಾಯಿತು. ಹಿಂದಿನ ಒಂದು ವಾರದಿಂದ ಟೆಲಿವಿಷನ್‌ನಲ್ಲಿ, ವೃತ್ತಪತ್ರಿಕೆಯಲ್ಲಿ ಪ್ರಾಮುಖ್ಯ ಪಡೆದ ವಿಷಯವೆಂದರೆ ಗ್ಲಾಸ್‌ಗೋನಲ್ಲಿನ ಗಲಾಟೆ. ಆ ನಗರದ ಜನ ಭಯ ಭೀತರಾಗಿದ್ದರು. ಅಲ್ಲಿನ ಪುಂಡರ ಗುಂಪೊಂದು ಸಿಕ್ಕಿದ ಜನರನ್ನು ಬ್ಲೇಡು, ಚಾಕುಗಳಿಂದ ಮುಖ, ಕತ್ತು, ಕೈ, ಕಾಲೆನ್ನದೆ ಗೆರೆ ಎಳೆದುಬಿಡುತ್ತಿದ್ದರು. ಆ ಜನಸಂದಣಿ, ನೂಕು ನುಗ್ಗಲು, ಆತುರದ ನಡಿಗೆಯಲ್ಲಿ ಯಾರೆಂದು ಪತ್ತೆ ಹಚ್ಚುವುದಕ್ಕಾಗದೆ ಪೋಲೀಸರು ವಿಫಲರಾಗಿದ್ದರು. ಗೆರೆ ಎಳೆಸಿಕೊಂಡವರು ರಕ್ತಸ್ರಾವವಾದಾಗ ದಿಗಿಲುಬಿದ್ದು ಆಸ್ಪತ್ರೆಗೆ ಓಡುತ್ತಿದ್ದರು. ಕೋಟುಗಳ ಜೇಬು ಹರಿಯುತ್ತಿತ್ತು, ಮುಖದಲ್ಲಿ ಕತ್ತರಿಸಿದ ಚರ್ಮದಿಂದ ರಕ್ತಸ್ರಾವ, ಮುಂಗೈಯಲ್ಲಿ ರಕ್ತ ಹೀಗೆ ಅನೇಕರಿಗೆ ಅನೇಕ ವಿಧದಲ್ಲಿ ಹಿಂಸೆಯಾಗಿತ್ತು. ಆಗ ಅನಿಸಿತು ನಮಗೆ 'ಇವರು ಬಹುಶಃ ಆ ಗುಂಪಿನವರಿರಬೇಕೇ'ದು. ಪಾಪ, ಆಕೆಗೆ ಏನು ಮಾಡುವರೋ ಎಂದುಕೊಂಡು ನಾವು ಮುಂದೆ ಧಾವಿಸಿದೆವು. ಅಲ್ಲಿಂದ ಲಿವರ್‌ಪೂಲ್ ಸ್ಟ್ರೀಟ್‌ನ ಮಾರ್ಕೆಟ್ ಕಡೆಗೆ ಬಂದದ್ದಾಯಿತು.

ಲಿವರ್‌ಪೂಲ್‌ಸ್ಟ್ರೀಟ್‌ನ ಮಾರ್ಕೆಟ್‌ನಲ್ಲಿ ಭಾನುವಾರ ಜನಜಾತ್ರೆ. ಲಕ್ಷೋಪಲಕ್ಷ ಜನಸಂದಣಿ, ತಿರುಗಾಡಲು ಜಾಗವಿಲ್ಲ. ನೂಕುನುಗ್ಗಲು. ಕೈಗಡಿಯಾರ ಮಾರುವವರಲ್ಲೊಬ್ಬ ಸುತ್ತಿಗೆಯಿಂದ ಗಡಿಯಾರಕ್ಕೆ ಹೊಡೆದು "ಇದೋ, ಬಿದ್ದರೂ ಒಡೆಯದ ಗಡಿಯಾರ, ಬನ್ನಿ ಬನ್ನಿ, ಬೆಲೆ ಕೇವಲ ೨ ಪೌಂಡು" ಎಂದು ಕೂಗುತ್ತಿದ್ದ. ಮತ್ತೊಬ್ಬ, "ಪೆನ್ನುಗಳು ಅನ್‌ಬ್ರೇಕಬಲ್" ಎನ್ನುತ್ತಿದ್ದ. ಒಂದೊಂದು ಉಲ್ಲನ್ ಕಂಬಳಿಗೆ ೧ ಪೌಂಡ್! ಸಿಲ್ಕ್ ಟೈಗಳು ೮-೧೦ ರೂಪಾಯಿಗೆ ಸಿಗುತ್ತಿದ್ದವು. ಸಿಲ್ಕ್ ಟೈ, ಕಾಟನ್ ಶರಟುಗಳು ಅಲ್ಲಿ ಐಶ್ವರ್ಯತನದ ಅಳತೆಗೋಲು! ಒಂದೊಂದು ಮಫ್ಲರ್‌ಗೆ ೩ ರೂ. ಮತ್ತೊಬ್ಬ ಇಡೀ ಶರೀರವನ್ನೇ ಹಿಂದಿನ ೩ ಕಾಸಿನ ನಾಣ್ಯಗಳಿಂದ ಮುಚ್ಚಿ ಭಿಕ್ಷೆ ಬೇಡುತ್ತಿದ್ದ. ಲಿವರ್‌ಪೂಲ್ ಸ್ಟ್ರೀಟ್ ಭಾನುವಾರದ ಮಾರುಕಟ್ಟೆಯಲ್ಲಿ ಸಿಗದ ವಸ್ತುವಿಲ್ಲ. ಬೆಲೆ ಅರ್ಧಕ್ಕರ್ಧ ಕಡಿಮೆ. ಲಂಡನ್‌ನಲ್ಲಿ ಮಾಯವಾದ, ಕಳೆದುಹೋದ, ಹೊಸ, ಹಳೆಯ ವಸ್ತುಗಳು ಅಲ್ಲಿ ಕಂಡುಬರುತ್ತವೆ. ನಾವು ಕೆಲವು ಸಿಲ್ಕ್ ಟೈ, ಮಫ್ಲರ್ಸ್ ಕೊಂಡೆವು.

ಮುಂದೆ ಬಸ್ ಹತ್ತಿ ವಿಂಡ್‌ಸಾರ್‌ನಲ್ಲಿನ ಅರಮನೆ ನೋಡಲು

ಹೊರಟೆವು. ವಿಂಡ್‌ಸಾರ್ ಥೇಮ್ಸ್ ನದಿಯ ಕಣಿವೆಯಲ್ಲಿ ಲಂಡನ್ ಪಶ್ಚಿಮಕ್ಕೆ ೨೦ ಮೈಲಿ ದೂರದಲ್ಲಿದೆ. ಅದೇ ವಿಲಿಯಂ ದಿ ಕಾಂಕರರ್‌ನ ಕೋಟೆಯಾಗಿತ್ತು. ನದಿಯ ಸಮತಲದಿಂದ ಪಕ್ಕದಲ್ಲಿರುವ ತಿಳುಬಿಳುಪಿನ ಬೆಟ್ಟದ ಮೇಲಿದೆ ಅರಮನೆ. ಅದನ್ನು ಕ್ಯಾಸಲ್ ಎನ್ನುತ್ತಾರೆ. ಹೆನ್ರಿ ರಾಜರು, ಎಡ್ವರ್ಡ್ ರಾಜರು ಅದರ ವೈಭವಕ್ಕೆ ಭೋಗ ವಿಲಾಸಗಳಿಗೆ ಕಾರಣಕರ್ತರು. ನಂತರ ರಾಣಿ ಎರಡನೇ ಎಲಿಜಬೆತ್‌ರ ಅಂತಃಪುರವಾಯಿತು. ಮಹಾರಾಣಿ ವಿಕ್ಟೋರಿಯ ವಿಂಡ್‌ಸಾರ್ ಅರಮನೆಗೆ ೯ ಲಕ್ಷ ಪೌಂಡ್‌ಗಳನ್ನು ಖರ್ಚುಮಾಡಿ ಅದರ ಮೆರಗು, ರಾಜಠೀವಿಗೆ ನೆರವಾಗಿದ್ದರಂತೆ.

ಟವರ್‌ಹಿಲ್ ಟ್ಯೂಬ್‌ಸ್ಟೇಷನ್ನಿಗೆ ಬಂದೆವು. ಅಲ್ಲಿ ಟವರ್ ಆಫ್ ಲಂಡನ್ ನೋಡಿದೆವು, ಅದು ವಿಲಿಯಂ ದಿ ಕಾಂಕರರ್‌ನಿಗಾಗಿ ೧೦೭೮ರಲ್ಲಿ ಗನ್‌ಡಲ್ಫ್ ಎಂಬ ಭಿಕ್ಕುವಿನಿಂದ ರಚಿತವಾದ ಕೋಟೆ. ಆತ್ಮರಕ್ಷಣೆಗೋಸ್ಕರ ಆತುರದಲ್ಲಿ ಕಟ್ಟಿದ್ದು. ಅಂದು ಪಾಳುಬಿದ್ದಿದ್ದ ಚರಂಡಿ ಜೌಗು ಜಾಗದಲ್ಲಿ ಅದರ ಸ್ಥಾಪನೆಯಾಯಿತು. ಅದರ ಗೋಡೆಗಳ ಗಾತ್ರ ೧೧ ಅಡಿಯಿಂದ ೧೫ ಅಡಿಗಳಷ್ಟು. ಮೇಲಿನ ಎರಡು ಮಹಡಿಗಳಲ್ಲಿ ಪ್ರಾಂಗಣವಿದೆ. ಅಲ್ಲಿ ಹಿಂದೆ ರಾಜಮನೆತನ ಪೂಜೆ ಸಲ್ಲಿಸುತ್ತಿದ್ದರಂತೆ. ಆದರೆ ಅನೇಕ ಸಾರಿ ಅರಮನೆಯಾಗಿರಬೇಕಾಗಿದ್ದ ಟವರ್ ಬಂದೀಖಾನೆಯಾಗಿ ಮಾರ್ಪಾಡಾಗಿತ್ತು. ಸುತ್ತಲೂ ನೀರು ತುಂಬಿ ಹರಿವ ಕಂದಕಗಳಿವೆ. ಸೆಯಿಂಟ್ ಥಾಮಸ್ ಗೇಟಿನಿಂದ ಥೇಮ್ಸ್‌ನ ನೀರುಹರಿದು ಕಂದಕಗಳಿಗೆ ಬೀಳುತ್ತದೆ; ಇದೇ ಗೇಟಿನಲ್ಲಿ ದೇಶದ್ರೋಹಿಗಳು ನಂತರ ಪ್ರವೇಶ ಮಾಡಿದರು. ಮೂರನೇ ಹೆನ್ರಿಯ ಎರಡನೆ ಹೆಂಡತಿ ಅನ್ನೆ ಬೊಲೇಯ್ನ್ ಒಂದನೇ ಎಲಿಜಬೆತ್ ಕೂಡ ಆ 'ಟ್ರೈಟರ್ಸ್‌ಗೇಟ್'ನಿಂದ ಟವರನ್ನು ಹೊಕ್ಕು ಶಿಕ್ಷೆ ಅನುಭವಿಸಿದ್ದಾರೆ. ತಪ್ಪಿಸಿಕೊಂಡಿದ್ದ ಕೈದಿಗಳಿಗೆ ನೇಣು ಹಾಕಿದರಂತೆ! ಹೊಟ್ಟೆ ಸೀಳಿ ಕರುಳು ತೆಗೆದರಂತೆ! ಎಷ್ಟೋ ಜನಕ್ಕೆ ಶಿರಚ್ಛೇದನ! ವಿಲಿಯಂ, ಲಾರ್ಡ್ ಹೇಸ್ಟಿಂಗ್ಸರೂ ಕೂಡ ಶಿರಚ್ಛೇದನಕ್ಕೊಳಗಾದವರಲ್ಲಿ ಸೇರಿದ್ದಾರೆ. ಒಂದು ಟೌವರಿಗೆ 'ಬ್ಲಡಿ ಟವರ್' ಎಂದೇ ಹೆಸರಿದೆ. ಮಾರ್ಗರೆಟ್‌ಪೋಲ್, ಸಾಲಿಸ್‌ಬುರಿ ಕೌಂಟೆಸ್, ಒಂಬತ್ತೇ ದಿನ ರಾಣಿಯಾಗಿದ್ದ ಮುಗ್ಧೆ ಲೇಡಿ ಜೇನ್‌ಗ್ರೇ ಕೂಡ ಅಲ್ಲಿ ಕೊಲ್ಲಲ್ಪಟ್ಟರು. ಟಾಲ್ ವರ್ಟೆ ಎಡ್ವರ್ಡ್ ಎಂಬ ೮೦ರ ಮುದುಕ ಕಿರೀಟರತ್ನಗಳನ್ನು ಕಾಯುತ್ತಿದ್ದನಂತೆ ಆಗ, ಕರ್ನಲ್ ಥಾಮಸ್‌ಬ್ಲಡ್ ಅವನ್ನು ಕದಿಯಲು ಸಂಚುಮಾಡಿ ಬಿಳ

ನುಗ್ಗಿದಾಗ ಮುದುಕ ಎಡ್ವರ್ಡ್‌ನನ್ನು ಅಲ್ಲಿ ಕೊಂದನಂತೆ. ಅಲ್ಲಿನ ಕೊನೆ ಸೆರೆಯಾಳು ರುಡಾಲ್ಫ್ ಹೆಸ್. ರುಡಾಲ್ಫ್ ಹೆಸ್ ಅಡಲ್ಫ್ ಹಿಟ್ಲರನ ಡೆಪ್ಯುಟಿ. ಆತ ೧೯೪೧ರಲ್ಲಿ ಏಕಾಂಗಿಯಾಗಿ ಜರ್ಮನಿಯಿಂದ ವಿಮಾನದಲ್ಲಿ ಸ್ಕಾಟ್‌ಲೆಂಡ್‌ಗೆ ಶಾಂತಿವೆತ್ತನಾಗಿ ಬಂದನಂತೆ! ಆರನೆ ಹೆನ್ರಿ ವೇಕ್‌ಫೀಲ್ಡ್ ಟವರಿನಲ್ಲಿ ಪ್ರಾರ್ಥನೆಯಲ್ಲಿದ್ದಾಗ ತಿವಿಯಲ್ಪಟ್ಟು ಸಾವಪ್ಪಿದ. ಈಗ ಅಲ್ಲಿನ ಮೂಲೆಯೊಂದರಲ್ಲಿರುವ "ಕ್ವೀನ್ಸ್‌ಹೌಸ್"ನಲ್ಲಿ ರೆಸಿಡೆಂಟ್ ಡೆಪ್ಯುಟಿ ವಾಸವಾಗಿದ್ದಾನೆ. ಕಿರೀಟ ವಜ್ರಗಳು ಅವನ ಅಧೀನದಲ್ಲಿವೆಯಂತೆ. ಫುಟ್‌ಗಾರ್ಡ್ ಎಂಬ ರೆಜಿಮೆಂಟ್ ಇವರ ರಕ್ಷಣೆಯನ್ನು ನೋಡಿಕೊಳ್ಳುತ್ತದೆ. ರಾತ್ರಿ ೧೦ ಗಂಟೆಗೆ "ಕೀ ಸೆರ್ಮೊನಿ" ಅಂದರೆ ಪ್ರತಿ ದಿನ ರಾತ್ರಿ ೧೦ ಗಂಟೆಗೆ ಕಿರೀಟರತ್ನಗಳಿಗೆ ಬೀಗಮುದ್ರೆ! ಇದೇ ಲಂಡನ್ ಟವರ್‌ನಲ್ಲಿನ ಕೌತುಕ. ಭಯಂಕರ ಪೈಶಾಚಿಕ ಗತಿಸಿದ ಚರಿತ್ರೆ.

* * * *

ಡಾ|| ಜೆ. ಎನ್. ಸಿಂಗ್ ಅವರಿಗೆ ಅಂದು ಮಾತೃಭೂಮಿಗೆ ಬೀಳ್ಕೊಡುಗೆ, ಬೆಳಿಗ್ಗೆ ಉಪಹಾರದ ಸಮಯದಲ್ಲಿ ಎಲ್ಲರನ್ನೂ ಆತ್ಮೀಯವಾಗಿ ವಂದಿಸಿ ಕೈಕುಲುಕಿದರು. ನಾವು ನಾಲ್ಕು ಜನ ದುಗುಡದಿಂದ ಅವರ ಸಣ್ಣ ಪುಟ್ಟ ಪ್ಯಾಕೆಟ್ ಹಿಡಿದು ದುಃಖವನ್ನು ತೋರ್ಪಡಿಸಿಕೊಳ್ಳದಂತೆ "ಹೊತ್ತಾಗುತ್ತೆ. ಹೊರಡಿ" ಎಂದೆವು.

ಹೀತ್ರೋ ವಿಮಾನ ನಿಲ್ದಾಣಕ್ಕೆ ಬಂದಾಗ ೧೧ ಗಂಟೆ. ವಿಮಾನ ೧೧-೪೫ಕ್ಕೆ ಹೊರಡುವುದಿತ್ತು. ಕೈಕುಲುಕಿದೆವು. ಸುಖಪ್ರಯಾಣ ಕೋರಿದೆವು. ಡಾ|| ಸಿಂಗ್ ನನಗೆ ಮಾತ್ರ ಒತ್ತಿಒತ್ತಿ ಹೇಳಿದರು "ನೀವು ನನ್ನಲ್ಲಿ ಒಂದೆರಡು ದಿನ ಆತಿಥ್ಯ ಸ್ವೀಕರಿಸಲೇಬೇಕು. ಇಂಡಿಯಾಕ್ಕೆ ಮರಳಿದ ದಿನ ನನಗೆ ಕಾಗದ ಬರೆಯಿರಿ" ಎಂದು ಪದೇ ಪದೇ ಹೇಳಿದರು. "ಏನು ನಮ್ಮನ್ನು ಮಾತ್ರ ಒಂದೇ ಸಾರಿ ಕರೆದಿರಿ, ನಿಮ್ಮ ವೃತ್ತಿಯವರಾದ್ದರಿಂದ ಡಾ|| ಗೋಪಾಲ್ ಅನ್ನು ಅನೇಕ ಸಾರಿ, ಮನಃಪೂರ್ವಕ ಕರೆಯುತ್ತಿದ್ದೀರಿ" ಎಂದು ಅಲ್ಲೂ ಮಸೂದ್ ಛಟಾಕಿ ಹಾರಿಸಿದರು. ಡಾ|| ಜೆ. ಎನ್. ಸಿಂಗ್ ಸೋಲಲಿಲ್ಲ—"ಅರೇ ನಾವೆಲ್ಲಾ ಉತ್ತರ ಇಂಡಿಯಾದವರು, ಅಲ್ಲದೆ ತುಂಬಾ ಹತ್ತಿರದಲ್ಲಿದ್ದೇವೆ. ನೀವು ಬೇಡ ಎಂದರೂ ಎಂದಾದರೊಂದು ದಿನ ಭೇಟಿಯಾಗು

ತ್ತೇನೆ. ಆದರೆ ಅವರು ಮೈಸೂರಿನವರು. ಸುಮಾರು ೧೦೦೦ ಮೈಲಿ ದೂರ ದವರು. ಜೀವನದಲ್ಲೊಮ್ಮೆಯು ಭೇಟಿ ಅನಿರೀಕ್ಷಿತವಾಗಿ ಬರಬಹುದು. ಇಲ್ಲ ಬರದಿರಲೂ ಸಾಧ್ಯ. ಮೈಸೂರೇ ಚಂದ ; ಮೈಸೂರಿನವರ ಮನಸ್ಸು ಮತ್ತೂ ಚಂದ" ಎಂದಾಗ ನಾನು ಅವರನ್ನು ಆಲಂಗಿಸಿದೆ.

ನಾವು ಮರಳಿ ಬರುವಾಗ ಅಕಸ್ಮಾತ್ ಛಾರಿಂಗ್ ಕ್ರಾಸ್‌ನ ಮುಂದೆ ನಡೆದುಹೋಗುತ್ತಿದ್ದೆವು. ಅಲ್ಲಿನ ಆಸ್ಪತ್ರೆ ಮುಂಭಾಗದಲ್ಲಿ ಡಾ|| ಪಾಶ ಸಿಕ್ಕಿ ದರು. "ಹಲೋ ಬ್ರದರ್, ಹೌ ಆರ್ ಯು" ಎಂದು ಕೈ ಹಿಡಿದು ಎಳೆದು ಕೊಂಡರು. ಶ್ರೀ ಮಸೂದ್ ಮತ್ತು ಬ್ರಾರ್‌ರ ಪರಿಚಯುವಾಯಿತು. "ನೀವು ನನ್ನಿಂದ ಲಂಚ್ ಸ್ವೀಕರಿಸಿ ಪ್ಲೀಸ್" ಎಂದು ಡಾ|| ಪಾಶ ಒತ್ತಾಯಿಸಿದ್ದರಿಂದ ಪಕ್ಕದ ಹೋಟೆಲ್ ಒಂದರಲ್ಲಿ ಊಟ ಮಾಡಿದೆವು. ನಂತರ ನಾನು ಪಾಶ ರವರಿಗೆ ಆಹ್ವಾನವಿತ್ತೆ. "ಆಹ್ವಾನ ಏಕೆ ಬೇಕು, ನನಗೆ ನಿಮ್ಮಲ್ಲಿಗೆ ಬರಲಿಕ್ಕೆ ಅವಕಾಶ ಸಿಕ್ಕಿತು" ಎಂದರು. ಅಲ್ಲಿಂದ ಹಾಸ್ಟಲ್ ತಲುಪಿದೆವು.

ನನ್ನ ಮಕ್ಕಳಿಂದ ಕಾಗದ ಬಂದಿತ್ತು. ಸಂಕ್ರಾಂತಿ ಹಬ್ಬಕ್ಕೆ ಉಡು ಗೊರೆಗಾಗಿ ಅದರಲ್ಲಿ ಒಂದೆರಡು ಪದಗಳಿದ್ದವು. ಉಳಿದೆಲ್ಲಾ "ಬೇಗ ಬಾ" ಎನ್ನುವ ಅರ್ಥಗಳಿಂದ ತುಂಬಿದ ವಾಕ್ಯಗಳೇ ! ನಾನು ಇಂಗ್ಲೆಂಡಿಗೆ ಬಂದಾಗಲೇ ೯-೧೦ ತಿಂಗಳಾಗುತ್ತ ಬಂದಿತ್ತು. ವಿದ್ಯಾರ್ಥಿವೇತನ ಒಂದು ವರ್ಷಕ್ಕೆ ಮಂಜೂರಾಗಿತ್ತು, ಮತ್ತೆ ೬ ತಿಂಗಳಿಗೆ ಮಂಜೂರು ಮಾಡುವಂತೆ ಕೇಳಿ ಕೊಂಡಿದ್ದೆ. ಉತ್ತರವಿನ್ನೂ ಬಂದಿರಲಿಲ್ಲ. ಮನಸ್ಸಿನಲ್ಲೇನೋ ಆತುರ ! ಡಾ|| ಜೆ. ಎನ್. ಸಿಂಗ್ ಬೇರೆ ಈಗಾಗಲೇ ಊರು ತಲುಪಿದ್ದರು. ದೇಶಕ್ಕೆ ಮರಳುವ ದೂರದಾಸೆಯೊಂದು ಎತ್ತರದ ಕಪ್ಪು ಆಕಾಶದಲ್ಲಿ ಎಲ್ಲೋ ಗೋಚರಿಸಿದ ನಕ್ಷತ್ರ ಒಂದರಂತೆ ಕಂಡಿತ್ತು. ಲಂಡನ್ ನಗರ ಬಿಡುವ ಆ ದಿನ, ಊರಿನ ಕಡೆ ಪ್ರಯಾಣ ಮಾಡುವ ಸುದಿನ ಕಾಡ್ಗತ್ತಲೆಯುಲ್ಲೊಂದು ತೈಲದೀಪ ಗೋಚರಿಸಿ ಅಗೋಚರವಾದಂತೆ ! ಬಿರುಗಾಳಿಯ ಹೊಡೆತಕ್ಕೆ ತತ್ತರಿಸುತ್ತ ಇನ್ನೇನು ಆರಿಹೋಗುವ ಹಣತೆ ಮತ್ತೆ ಬೆಳಕು ಚೆಲ್ಲಿದಂತೆ ! ಬೃಹತ್ ಅಲೆ ಗಳೊಡೆತದಿಂದ ಗಿರ್ ಎಂದು ತಿರುಗಿ, ಆ ಕಡೆ ಈ ಕಡೆ ಮುಗ್ಗುರಿಸಿ ಮುಳುಗು ವುದರಲ್ಲಿದ್ದು ಚೇತರಿಸಿಕೊಂಡ ದೋಣಿಯಂತೆ ! ಮನಸ್ಸಿಗೆ ಕಳೆದುಹೋದ ಬೆಲೆಬಾಳುವ ವಸ್ತು ದೊರಕಿದಂತೆ ಭಾಸವಾಗುತ್ತಿತ್ತು. ದಿನಕ್ಕೆತ್ತು ರಾತ್ರಿ ಗಳು ಉರುಳಿ ಆ ದಿನ ಬೇಗ ಬಾರದೇ ? ಹಗಲು ರಾತ್ರಿಗಳೆನ್ನದೆ ನಡೆದರೆ ಆ

ದಿನ ಕಂಡು ನನ್ನೂರು ದೃಷ್ಟಿಗೆ ನಿಲುಕಬಾರದೇಕೆ ? ಎಂದೆಲ್ಲಾ ಮನಸ್ಸು ತಲ್ಲಣ ಗೊಂಡಿದೆ ! ಕೂರಲು ಮನಸ್ಸಿಲ್ಲ ; ನಿದ್ರಿಸಲು ನಿದ್ರೆ ಬಾರದು, ಹಸಿವಿಲ್ಲ, ದಾಹವಿಲ್ಲ, ಆಸೆಯು ದಣಿವನ್ನು ನೀಗಿತ್ತು. ಆಸ್ಪತ್ರೆಗೆ, ಹಾಸ್ಟಲ್‌ಗೆ ಸ್ನೇಹಿತ ರಲ್ಲಿಗೆ, ಅಲ್ಲಿಗೆ ಇಲ್ಲಿಗೆ ಎಲ್ಲೆಲ್ಲಿಗೂ ಓಡಾಡಿದೆ. ಹಗಲು ರಾತ್ರಿಗಳನ್ನು ನಾಗಾ ಲೋಟದಿಂದ ನೆಗೆಯಲನುವಾದೆ. ಕೊನೆಗೆ ದೇಹ ಬಳಲಿದಾಗ, ಮಕ್ಕಳಿಗೆ ಮಾರ್ಕ್ಸ್ ಅಂಡ್ ಸ್ಪೆನ್ಸರ್‌ನಲ್ಲಿ ಉಡುಪು ಕೊಂಡೆ. ವೇಗದಲ್ಲಿ ಮತ್ತೆ ಅಂಚೆ ಕಛೇರಿ ; ಆತುರದಲ್ಲಿ ಪಾರ್ಸಲ್ ರವಾನೆ. ಮನಸ್ಸಿಗೆ ನೆಮ್ಮದಿ ಕಂಡೆ. ದೇಹ ಎಳೆದುಕೊಂಡು ಹಾಸ್ಟಲ್ಲಿಗೆ ಬಂದೆ. ಹಾಸಿಗೆಯಲ್ಲಿ ಮೈ ಚಾಚಿದೆ. ನಂತರ ಏನೂ ಅರಿಯೆ. ಮಸೂದ್ ಬಾಗಿಲು ತಟ್ಟಿದಾಗ ಎದ್ದೆ. ಬೆಳಿಗ್ಗೆ ಉಪಹಾರದ ಸಮಯ !

ಎಂದಿನಂತೆ ಆಸ್ಪತ್ರೆಯ ಕೆಲಸದಲ್ಲಿ ಮಗ್ನನಾಗಿದ್ದೆ, ಆಗಾಗ್ಗೆ ಮನಸ್ಸು ಕಲಕುತ್ತಿತ್ತು. ಕೊನೆಗೆ ಪ್ರೊ|| ವಿಲ್ಕಿನ್‌ಸನ್‌ರಲ್ಲಿಗೆ ನಡೆದೆ. ದಾರಿಯಲ್ಲಿ ಡಾ|| ಸ್ಟ್ಯಾವ್‌ರಾಸ್ ಸಿಕ್ಕಿ "ಎಲ್ಲಿಗೆ ಸವಾರಿ" ಎಂದರು. ವಿಷಯ ತಿಳಿಸಿದೆ.

"ಅವರು ಸೂಕ್ಷ್ಮಮತಿಗಾರ. ಈ ದಿನ ಅವರ ಭೇಟಿ ಬೇಡ. ಏನಿದ್ದರೂ ಶನಿವಾರ ೧೧ ಗಂಟೆಯಾದ ಮೇಲೆ ಪ್ರಶಾಂತರಾಗಿರುತ್ತಾರೆ. ಆ ದಿನ ವಾರದ ಮೀಟಿಂಗ್‌ಗಳಲ್ಲಿ ಅಧ್ಯಕ್ಷತೆ ಅವರದು. ಮೀಟಿಂಗ್ ಮುಗಿದಾಗ ಅಧ್ಯಕ್ಷರಾಗಿದ್ದ ಸಂತೃಪ್ತಿ ಅವರಿಗಾಗುತ್ತದೆ. ನಾನು ಇದನ್ನು ಬಲ್ಲೆ. ಆ ಸಂತೋಷದಲ್ಲಿ ಭೇಟಿಯಾದರೆ ತಾಳ್ಮೆ ಇರುತ್ತದೆ. ಆಗದ ಕೆಲಸಗಳೂ ಆಗುತ್ತವೆ" ಎಂದು ಹಿಡಿದು ನಿಲ್ಲಿಸಿದರು. "ಥ್ಯಾಂಕ್ಯೂ ವೆರಿಮಚ್ ಫಾರ್ ಆಲ್ ದಿ ಇನ್‌ಫರ್ ಮೇಷನ್" ಎಂದೆ. ಇಬ್ಬರೂ ಟೀ ಕುಡಿಯಲು ಧಾವಿಸಿದೆವು.

ಮಾರನೆಯ ದಿನ ಬಿಡುವಿದ್ದಾಗ ಇಂಡಿಯನ್ ಹೈಕಮಿಷನ್ ಆಫೀಸಿಗೆ ಹೋದೆ. ಅಲ್ಲಿ ಶ್ರೀ ಎಂ. ಎಸ್. ಓಬರಾಯ್ "ಡಾಕ್ಟರ್ ಏನು ವಿಷಯ" ಎಂದರು.

"ಸಾರ್ ನಾನು ಇನ್ನೊಂದು ವರ್ಷವಿರಬೇಕೆಂದಿದ್ದೇನೆ. ಅದಕ್ಕೆ ತಾವು ಶಿಫಾರಸ್ ಮಾಡಿ ಮೈಸೂರು ಸರ್ಕಾರಕ್ಕೆ ಬರೆಯಬೇಕು, ದಯಮಾಡಿ ಬರೆಯಿರಿ"

"ನಿಮ್ಮ ಸ್ಕಾಲರ್‌ಶಿಪ್ ಒಂದು ವರ್ಷಕ್ಕೆ ಮಾತ್ರ. ಅಲ್ಲದೆ ನಿಜ ಹೇಳಿ. ನಿಮಗೆ ಇನ್ನೊಂದು ವರ್ಷ ಇಲ್ಲಿದ್ದರೆ ಪ್ರಯೋಜನವಿದೆಯೇ ? ಯಾವುದಕ್ಕೂ

ನಮ್ಮಲ್ಲಿ ಸಲಹೆಗಾರರಿದ್ದಾರೆ. ಅವರು ಎಫ್.ಆರ್.ಸಿ.ಎಸ್. ಮಾಡಿದ್ದಾರೆ. ಅಲ್ಲಿ ವಿಚಾರಿಸಿ ಬನ್ನಿ"

"ಹಾಗೇ ಆಗಲಿ ಸಾರ್. ಥ್ಯಾಂಕ್ಸ್" ಎಂದು ಕೆಳಗಿನ ಮಹಡಿಯಲ್ಲಿದ್ದ ಡಾ॥ ಮಾಥೂರ್ ಅವರಲ್ಲಿ ಬಂದೆ.

"ಬನ್ನಿ ಡಾಕ್ಟರ್, ಕುಳಿತುಕೊಳ್ಳಿ. ನನಗೆ ವಿಷಯ ಈಗ ತಾನೆ ಶ್ರೀ ಓಬರಾಯ್ ತಿಳಿಸಿದರು. ನನ್ನದೂ ಅದೇ ಪ್ರಶ್ನೆ. ನಿಜವಾಗಿಯೂ ಇಲ್ಲಿ ನೀವು ಇನ್ನೊಂದು ವರ್ಷವಿರಲು ಬಯಸಿದ್ದೀರಾ ? ಅಲ್ಲದೆ ಅದರಿಂದ ಉಪಯೋಗ ವಿದೆಯೆ. ನನಗೆ ನಿಜಸ್ಥಿತಿ ಗೊತ್ತು. ಮತ್ತೊಂದು ವರ್ಷವಿರುವಂಥ ಸನ್ನಿವೇಶ ನಿಮಗಿಲ್ಲ, ನೀವೆಲ್ಲಾ ನುರಿತವರು. ದೇಶಕ್ಕೆ ಮರುಳಿ ಸೇವೆಯಲ್ಲಿ ಮಗ್ನ ರಾವರೆ ಲೇಸು ಯೋಚಿಸಿ" ಎಂದರು.

ಅವರ ತಿಳುವಳಿಕೆ ಅಥವಾ ಸೂಚನೆಯಲ್ಲಿ ಸತ್ಯವಿತ್ತು. ಮೊದಲೇ ನಾನು ವಿಮರ್ಶಿಸಿದಂತೆ ಅವಕಾಶ ಅಪರೂಪ. ಸ್ವತಃ ಮಾಡಲು ದುಸ್ಸಾಧ್ಯ. ಇದು ವರೆಗೂ ಕಲಿತದ್ದು ಸಾಕೆನಿಸಿತು. ಆದ್ದರಿಂದ ಮುಂದಿನ ವಾರ ತಮ್ಮಲ್ಲಿ ಬರುತ್ತೇನೆಂದು ಹೇಳಿ ಹೊರಬಂದೆ. ಮೊದಲೇ ಸ್ನಾತಕೋತ್ತರ ಪದವಿ ಪಡೆದಿದ್ದರಿಂದ ವಿಷಯಗ್ರಹಿಕೆ ಅಷ್ಟಾಗಿ ಕಷ್ಟವೆನಿಸಿರಲಿಲ್ಲ. ಸ್ವದೇಶಕ್ಕೆ ಮರಳಿ ತನ್ನದೇ ಆದ ರೀತಿಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸೆಯನ್ನು ಹೊಸದಾಗಿ ಸ್ಥಾಪಿಸ ಬೇಕು. ಇಲ್ಲಿ ಕಲಿತದ್ದನ್ನು ಸ್ವದೇಶದಲ್ಲಿನ ಜನರಿಗೆ ಅಲ್ಲಲ್ಲಿ ಅವರ ಜೀವನಕ್ಕೆ ಬಡತನಕ್ಕೆ ಸಂಪ್ರದಾಯಗಳಿಗನುಗುಣವಾಗಿ ಬದಲಾಯಿಸಿಕೊಂಡು ಮಕ್ಕಳ ಶಸ್ತ್ರಚಿಕಿತ್ಸೆಯನ್ನು ಪ್ರಥಮ ಬಾರಿಗೆ ಸ್ಥಾಪಿಸಬೇಕು. ಅದೇನು ಸುಲಭದ ಕೆಲಸವಲ್ಲ. ಅನೇಕ ತೊಡಕುಗಳಿವೆ. ಅನೇಕರು ದ್ವೇಷಿಸಬಹುದು, ಕೆಲವರು ಅಧಿಕಾರಿಗಳಲ್ಲಿ ಚಾಡಿ ಹೇಳಿ ತಡೆ ತರಬಹುದು. ಸರ್ಕಾರ ಮಂಜೂರು ಮಾಡ ದಂತೆ ತಂತ್ರ ಹೂಡಬಹುದು. ಇದೇನು ನಮ್ಮ ದೇಶದಲ್ಲಿ ಹೊಸದೇನಲ್ಲ. ಎಲ್ಲಾ ಹಳೆಯ ಸಂಪ್ರದಾಯ. ಇದರಿಂದಾಗಿ ಬಹಳಷ್ಟು ಮುಂದುವರಿಯಲಾಗ ಲಿಲ್ಲ ದೇಶ. ಆದರೂ ಸತತ ಪ್ರಯತ್ನ ನಮ್ಮದು, ನೋಡೋಣ, ದೈವೇಚ್ಛೆ ಎಂದೆಲ್ಲಾ ಮನಸ್ಸಿನಲ್ಲಿ ಮರುಕಳಿಸಿತು.

ಪ್ರೊ॥ ವಿಲ್ಕಿನ್‌ಸನ್‌ರನ್ನು ಭೇಟಿಮಾಡೋಣವೆಂದು ಶನಿವಾರಕ್ಕಾಗಿ ಕಾದೆ. ಶನಿವಾರ ಗಂಟೆ ೧೧-೩೦ ಆಗಿತ್ತು. ಅವರ ಕೊಠಡಿಯತ್ತ ನಡೆದೆ. ಬಾಗಿಲು ಮೃದುವಾಗಿ ತಟ್ಟಿದಾಗ "ಎಸ್ ಪ್ಲೀಸ್" ಎಂದರು. ನನ್ನನ್ನು ಕಂಡು

ದುರುಗುಟ್ಟಿ "ದಯವಿಟ್ಟು ಕುಳಿತುಕೊಳ್ಳಿ. ಏನು ವಿಷಯ, ನನ್ನಿಂದೇನಾದರೂ ಆಗಬೇಕಾಗಿದೆಯೆ ?" ಎಂದರು ಆಶ್ಚರ್ಯಭರಿತರಾಗಿ. "ಸಾರ್ ದಯವಿಟ್ಟು ಕ್ಷಮಿಸಿ. ನನ್ನ ವಿದ್ಯಾರ್ಥಿವೇತನ ಏಪ್ರಿಲ್ ತಿಂಗಳಿಗೆ ಮುಗಿಯುತ್ತವೆ. ನಾನಾದರೋ ಮತ್ತೊಂದು ವರ್ಷವಿರಬೇಕೆಂದಿದ್ದೇನೆ. ತಾವು ನನಗೆ ಯಾವುದಾದರೂ ರಿಸರ್ಚ್ ಪ್ರೋಗ್ರಾಂನಲ್ಲಿ ವಿದ್ಯಾರ್ಥಿವೇತನ ಕೊಟ್ಟರೆ ಉಪಕಾರವಾಗುವುದು."

"ನಿಮ್ಮನ್ನು ನಾನು ರಿಸರ್ಚ್ ಪ್ರೋಗ್ರಾಂನಲ್ಲಿ ಸೇರಿಸಿಕೊಳ್ಳಲು ಸಂತೋಷಿಸುತ್ತೇನೆ, ಆದರೆ ಈ ವರ್ಷದಲ್ಲಿ ಅಷ್ಟಾಗಿ ಗ್ರ್ಯಾಂಟ್ ಇಲ್ಲ. ಸ್ವಲ್ಪ ಸಮಯ ಕಾದು ನೋಡಿ. ಮರಳಿ ನನ್ನನ್ನು ಭೇಟಿ ಮಾಡಿ. ಅಲ್ಲದೆ ಸಾಮಾನ್ಯವಾಗಿ ಮಕ್ಕಳ ಶಸ್ತ್ರಚಿಕಿತ್ಸೆಗೆ ಒಂದು ವರ್ಷ ಮಾತ್ರ ತರಬೇತಿ ಕೊಡಲಾಗುತ್ತದೆ. ಆದ್ದರಿಂದ ನಿಮಗೇಕೆ ಮತ್ತೊಂದು ವರ್ಷ ? ನೀವು ಸ್ವದೇಶಕ್ಕೆ ಮರಳಿ ಸೇವೆ ಸಲ್ಲಿಸಬಹುದು. ಹೇಗಿದ್ದರೂ ನನ್ನನ್ನು ಮತ್ತೊಮ್ಮೆ ಭೇಟಿಮಾಡಿ, ಗುಡ್‌ಲಕ್"—ಎಂದರು.

ನನಗಾಗಿ ಕಾದಿದ್ದ ಮಿ. ಹೋವೇಟ್ ಮತ್ತು ಡಾ॥ ಸ್ಟ್ರಾವ್‌ರಾಸ್ ವಿಷಯ ತಿಳಿದು "ಹಾಗಿದ್ದಲ್ಲಿ ನೀವೇಕೆ ಹಿಂದಿರುಗಬಾರದು. ಹೇಗಿದ್ದರೂ ಸರ್ಕಾರದ ಕೆಲಸದಲ್ಲಿದ್ದೀರಿ. ಅಲ್ಲಿ ನೀವು ಮಕ್ಕಳ ಶಸ್ತ್ರಚಿಕಿತ್ಸೆಯನ್ನು ಸ್ಥಾಪಿಸಬಹುದು. ಇಲ್ಲಿ ಕಲಿಯಲು ಮತ್ತೇನಿದೆ ? ನಿಮ್ಮಲ್ಲಿರುವಷ್ಟು ಕ್ಲಿನಿಕಲ್ ಅಕ್ಯುಮೆನ್ ಈ ದೇಶದಲ್ಲಿಲ್ಲ. ಬೈ ಬೈ, ನಾಳೆ ಸಿಗೋಣ" ಎಂದು ಕೈಕುಲುಕಿದರು.

ಹೌದು, ನಾನು ಸಾಧಿಸಬೇಕಾದ್ದು ಮಕ್ಕಳ ಶಸ್ತ್ರಚಿಕಿತ್ಸೆಯನ್ನೇ ಕಂಡರಿಯದ ವೈದ್ಯಕೀಯ ಇಲಾಖೆಯಲ್ಲಿ ನನ್ನದೊಂದು ಸಾಧನೆ. ಇದರಿಂದ ಸೇವಾಕ್ಷೇತ್ರ ವಿಶಾಲಗೊಳ್ಳುತ್ತದೆ. ಅನೇಕ ಮಕ್ಕಳಿಗೆ ತನ್ನದೇ ಆದ ವಿಶಿಷ್ಟ ರೀತಿಯ ಸೇವೆಗೆ ಅವಕಾಶವಾಗುತ್ತದೆ. ಇಂಡಿಯಾದೇಶದಲ್ಲಿ ಮಿತ ಸಂತಾನಕ್ಕೆ ಬಹು ಪ್ರಾಮುಖ್ಯತೆಯನ್ನು ಸರ್ಕಾರ ಕೊಟ್ಟಿದೆ. ಅದರ ಆಗು ಹೋಗುಗಳನ್ನರಿತು ಮಿತಸಂತಾನದ ಸುಖ ಸಂಸಾರಕ್ಕೆ ಆದ್ಯತೆ ದೊರೆತು ಬಹಳಷ್ಟು ಹಣ ವ್ಯಯವಾಗುತ್ತಿದೆ. ದೇಶದ ಪ್ರಗತಿಗೆ ಅದೊಂದು ಅತಿ ಮುಖ್ಯ ಮೈಲುಗಲ್ಲು. ಅದರಂತೆಯೇ ಅಷ್ಟೇ ಮುಖ್ಯವಾದದ್ದು ಮತ್ತೊಂದು ಇದೇ ಮಿತ ಸಂತಾನದಲ್ಲಿನ ಮಕ್ಕಳ ಬೆಳವಣಿಗೆ, ಅಭ್ಯುದಯ. ಇವೆರಡೂ ಒಂದು ನಾಣ್ಯದ

ಎರಡು ಮುಖಗಳು. ಒಂದು ಸಂಸಾರಕ್ಕೆ ೨-೩ ಮಕ್ಕಳಂತೆ ಸಂತಾನ ನಿಯಂತ್ರಣವಿದ್ದರೆ ಆ ಸಂಸಾರದಲ್ಲಿನ ಮಕ್ಕಳು ಹೆಳವರೊ ಕುರುಡರೊ ಕುಂಟರೊ ಆದರೆ ಸಂಸಾರಕ್ಕಾಗುವ ಆಘಾತ ಅಧಿಕ. ಸರಿಪಡಿಸುವ ನ್ಯೂನತೆಗಳು ನವಜಾತ ಶಿಶುವಿನಲ್ಲಿ ಶೇ. ೧೮ರಷ್ಟು ಕಂಡುಬರುತ್ತವೆ. ಸರಿಪಡಿಸದಿದ್ದರೆ ಅವರು ವಿಕಲಾಂಗರಾಗಿ ಸಂಸಾರಕ್ಕೂ, ದೇಶಕ್ಕೂ ಭಾರವಾಗುತ್ತಾರೆ. ಆದ್ದರಿಂದ ಅಭ್ಯುದಯ ಬರಿ ಸಂತಾನ ನಿಯಂತ್ರಣದಿಂದ ಮಾತ್ರವಲ್ಲ. ಹುಟ್ಟುವ ಮಕ್ಕಳ ಆರೋಗ್ಯ, ಬೆಳವಣಿಗೆ ಮತ್ತು ಪೋಷಣೆಗಳೂ ಮುಖ್ಯ ಆದ್ದರಿಂದ ನನ್ನ ಧ್ಯೇಯಸಾಧನೆಗಾಗಿ ಶಸ್ತ್ರಚಿಕಿತ್ಸಾ ಘಟಕವನ್ನು ಸ್ಥಾಪಿಸಬೇಕು. ಸ್ಥಾಪಿಸಿ ಅದರ ಅಭ್ಯುದಯಕ್ಕೆ ಶ್ರಮಿಸಬೇಕು ಎಂದೆಲ್ಲಾ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲವಾಯಿತು. ಆ ಘಟಕವನ್ನು ಉನ್ನತ ಮಟ್ಟದಲ್ಲಿ ಬೆಳೆಸಬೇಕು ಎಂದು ಮನಸ್ಸು ದೃಢವಾಯಿತು : ಸಂಕಲ್ಪಿಸಿತು.

ಆ ದಿನ ಪ್ರೊ|| ವಿಲ್ಕಿನ್‌ಸನ್‌ರ ಹೊರರೋಗಿಗಳ ಪರೀಕ್ಷಾದಿನ. ಮಿ|| ಲಿಂಡೆನ್, ಯೂನಿವರ್ಸಿಟಿ ಆಫ್ ನೆಟಾಲ್, ಕರ್‌ಬಾನ್, ಸೌತ್ ಆಫ್ರಿಕಾ ; ಮಿ|| ಟೈಲರ್, ಸಿಕ್ ಚಿಲ್ಡ್ರನ್ ಹಾಸ್ಪಿಟಲ್, ಟೊರ್ಯಾಂಟೊ, ಕೆನಡ ಇವರ ಪರಿಚಯವಾಯಿತು. ಯಾವುದೋ ಯೋಜನೆ ಮೇಲೆ ಲಂಡನ್ನಿಗೆ ಬಂದಿದ್ದರು.

"ಮಿ|| ಲಿಂಡೆನ್, ನಿಮ್ಮಲ್ಲಿ ಕಪ್ಪು ಜನರಿಗೆಂದೇ ಆಸ್ಪತ್ರೆಗಳಿವೆಯಂತೆ. ನಿಜವೆ ? ಅವುಗಳ ವಿಶೇಷವೇನು ?" ಎಂದು ಪಿಸುಗುಟ್ಟಿದೆ.

"ಹೌದು ನೀವು ಹೇಳುವುದು ನಿಜ. ನಾನಿರುವುದೇ ಅಂತಹ ಒಂದು ಆಸ್ಪತ್ರೆಯಲ್ಲಿ. ನಾನಾ ತರಹೆಯ ಕುತೂಹಲಕಾರಿ ರೋಗಗಳು ಅಲ್ಲಿ ಕಂಡು ಬರುತ್ತವೆ. ಬಹಳ ಸ್ವಾರಸ್ಯ. ನೀವೇನಾದರೂ ತಿಳಿದುಕೊಳ್ಳಿ, ನನಗೇನೋ ಅವರ ಸೇವೆಯಿಂದ ಶಾಂತಿ ಮತ್ತು ನೆಮ್ಮದಿ ದೊರೆತಿದೆ".

"ನಾನೇನಾದರೂ ಬಂದರೆ ಅವಕಾಶ ಉಂಟೆ ?"

"ಓಹೋ, ದಯವಿಟ್ಟು ಬನ್ನಿ. ಕೆಲಸ ಸಿಗುತ್ತೆ. ನನಗೆ ಬರೆಯಿರಿ".

ನನಗೆ ನಂತರ ಅರಿವಾಯಿತು. ಇಂಡಿಯಾ ದೇಶದವರು ಅಲ್ಲಿಗೆ ಹೋಗಕೂಡದೆಂದು ಸರ್ಕಾರ ಆಜ್ಞೆ ಹೊರಡಿಸಿತ್ತು. ಕಾರಣ ಶ್ರೀ ಇಯಾನ್ ಸ್ಮಿತ್ ಅವರ ಪ್ರಧಾನ ಮಂತ್ರಿತ್ವದಲ್ಲಿ ಅಶಾಂತಿ, ಅಮಾನುಷ್ಯತೆ ತಾಂಡವವಾಡುತ್ತಿತ್ತು. ಶ್ರೀ ಸ್ಮಿತ್ ಕಡೆಯವರಿಗೂ ಆಫ್ರಿಕಾದ ರೊಡೇಶಿಯಾದ ಕಪ್ಪು ಜನರ ನಾಯಕರಿಗೂ ಲಂಡನ್‌ನಲ್ಲಿ ವೇದಿಕೆಯೊಂದು ತಯಾರಾಗಿತ್ತು. ಅವರ

ಮಾತುಕತೆಗಳು ಟೆಲಿವಿಷನ್‌ನಲ್ಲಿ ಪ್ರದರ್ಶಿಸಲ್ಪಡುತ್ತಿದ್ದುವು.

ಅಲ್ಲಿಂದ ೧೧ ಗಂಟೆಗೆ ಲೆಕ್ಚರ್ ಹಾಲ್ ಕಡೆ ನಡೆದೆವು. ಮಿ॥ ಟೈಲರ್ ಅವರ ಭಾಷಣವಿತ್ತು ; ಟೊರ್ಯಾಂಟೊ ಆಸ್ಪತ್ರೆಯಲ್ಲಿ ಶ್ವಾಸನಾಳದ ರೋಗಕ್ಕೆ (ಬ್ರಾಂಕಿ ಎಕ್ಟೇಸಿಸ್) ಮಾಡುವ ಶಸ್ತ್ರಚಿಕಿತ್ಸಾ ವಿಧಾನವನ್ನು ವಿವರಿಸಿದರು. ಆ ಶಸ್ತ್ರಚಿಕಿತ್ಸೆಗೆ ಒಳಗಾದ ಅತಿ ಚಿಕ್ಕ ವಯಸ್ಸಿನ ಮಗು ಅಂದರೆ ೨ ವರ್ಷದ್ದು. ಉಳಿದ ಮಕ್ಕಳು ೬ ರಿಂದ ೧೨ ವರ್ಷಕ್ಕೆ ಸೇರಿದವು. ಮುಗಿಸಿ ಮತ್ತೆ ಹೊರ ರೋಗಿಗಳ ವಿಭಾಗಕ್ಕೆ ಬಂದಾಗ ಬಂಗಾಳದ ದಂಪತಿಗಳು ತಮ್ಮ ೬ ತಿಂಗಳ ಮಗುವನ್ನು ತೋರಿಸಲು ಬಂದರು. ಇಬ್ಬರಿಗೂ ಇಂಗ್ಲಿಷ್ ಸುಮಾರಾಗಿ ಬರುತ್ತಿತ್ತು. ಆದ್ದರಿಂದ ಹೇಳಬೇಕಾದ್ದನ್ನು ಸರಿಯಾಗಿ ಹೇಳುವುದಕ್ಕಾಗುತ್ತಿರಲಿಲ್ಲ. ಪ್ರೊಫೆಸರ್ "ನೀವು ಯಾವ ದೇಶದವರು" ಎಂದು ನಕ್ಕರು, "ಇಂಡಿಯಾದಿಂದ" ಎಂದಳು ಮಗುವಿನ ತಾಯಿ. ತಕ್ಷಣ "ಡಾ॥ ಗೋಪಾಲ್ ನಿಮಗೆ ಅವರ ಭಾಷೆ ತಿಳಿದಿರಬೇಕಲ್ಲ" ಎಂದು ನನ್ನ ಕಡೆ ನೋಡಿದರು. "ಸಾರಿ ಸರ್" ಎಂದೆ. "ಹೋಗಲಿ ಬಿಡಿ" ಎಂದು ಸಮಾಧಾನದ ಮಾತಾಡಿ ಮುರುಕಲು ಇಂಗ್ಲಿಷ್‌ನಲ್ಲೇ ಆ ತಾಯಿಗೆ ಹೇಳಿದರು. "ನೀವು ಎದೆ ಹಾಲು ಕುಡಿಸುವುದು ಮಗುವಿಗೆ ಒಳ್ಳೆಯದು, ತಪ್ಪಿಸಬೇಡಿ. ನನಗೆ ಸಂತೋಷ. ಅದು ಶ್ರೇಷ್ಠವಾದ ಆಹಾರ".

ಮಗುವಿಗೆ ತಾಯಿ ಹಾಲು ಅತಿ ಶ್ರೇಷ್ಠ ದರ್ಜೆಯ ಆಹಾರ. ಇದು ಪ್ರಪಂಚಕ್ಕೆ ತಿಳಿದಿದೆ. ನವ ಯುಗವಲ್ಲಿನ ಅನೇಕರು ವಿದ್ಯಾವಂತ ಮಹಿಳೆಯರು ಶ್ರೀಮಂತ ಕುಟುಂಬದವರು ಇದಕ್ಕೆ ವಿರುದ್ಧ. ಅಂದರೆ ಪ್ರಕೃತಿಯ ನಿಯಮಕ್ಕೆ ವಿರುದ್ಧ. ತಾಯಿ ಹಾಲು ಸಂಪೂರ್ಣ ಆಹಾರ ಅಲ್ಲದೆ ಪೂರ್ತಿ ಜೀರ್ಣವಾಗುತ್ತದೆ. ಆದ್ದರಿಂದ ಬೇರೆ ಹಾಲಿನಿಂದಾಗಬಹುದಾದ ಉದರ ಬೇನೆ, ಕರುಳು ಬೇನೆಗಳು ಕಾಣಿಸಿಕೊಳ್ಳುವುದಿಲ್ಲ. ಮನಸ್ಸಿನ ಮೇಲೆ ಮತ್ತು ಮಗುವಿನ ಬೆಳವಣಿಗೆಯ ಮೇಲೆ ತಾಯಿ ಮಗುವಿನ ಸಂಬಂಧ ಅತ್ಯಂತ ಪ್ರಭಾವ ಬೀರುತ್ತದೆ. ಈಗ ಮುಂದುವರಿದ ದೇಶಗಳಲ್ಲೂ ಸಹ ತಾಯಿ ಹಾಲು ಶ್ರೇಷ್ಠವಾದದ್ದೆಂದು ಅಲ್ಲದೆ ಮೇಲಿನ ಕಾರಣಗಳಿಗಾಗಿ ಅದನ್ನು ಮಗುವಿಗೆ ಕುಡಿಸಬೇಕೆಂದು ಪ್ರಚಾರ ನಡೆಯುತ್ತಿದೆ. ಉಳಿದ ಅಥವಾ ಬೇಕಾದ ಅನ್ನಾಂಗಗಳನ್ನು ಕಬ್ಬಿಣ ಅಂಶ ಮುಂತಾದ ವಸ್ತುಗಳನ್ನು ಪ್ರತ್ಯೇಕವಾಗಿ ಕೊಡಬಹುದು. ಬಡ ಕುಟುಂಬಗಳಲ್ಲಿ ಇಂಥ ಪ್ರಚಾರದ ಪ್ರಶ್ನೆ ಏಳುವುದಿಲ್ಲ. ತಾಯಿಯ ಕ್ಷೀಣತೆ

ಯಿಂದ, ದುರ್ಬಲ ದೇಹದಿಂದಾಗಿ ನ್ಯಾಯವಾಗಿ ಆಕೆ ಹಾಲು ಕುಡಿಸಬಾರದು. ಆದರೆ ವಿಧಿ ಇಲ್ಲ. ಪೌಷ್ಠಿಕ ಆಹಾರಾಂಶಗಳನ್ನು 'ಕೇರ್' ಮತ್ತು 'ಯೂನಿಸೆಫ್' ಸಂಸ್ಥೆಗಳು ಇವರಿಗೆ ಸಾಧ್ಯವಾದಷ್ಟು ಸರಬರಾಜು ಮಾಡುತ್ತಿವೆ. ಕುಟುಂಬ ಕಲ್ಯಾಣದಿಂದಾಗಿ ಬರುವ ಕೆಲವು ವರ್ಷಗಳಲ್ಲಿ ಈ ಸಮಸ್ಯೆಗೆ ಉತ್ತರ ಸಿಗಬಹುದು ; ಸಾಧಿಸಲೂಬಹುದು. ಇದಕ್ಕೆಲ್ಲಾ ಮುಖ್ಯವಾಗಿ ಯೋಜನೆಗಳು ಇವರಿಗಾಗಿ ಪ್ರತ್ಯೇಕವಾಗಿ ರೂಪಿತವಾಗಬೇಕು. 'ಶೇಕಡ ಇಷ್ಟು ಹಣ ಇವರ ಏಳಿಗೆಗಾಗಿ' ಎಂದು ಪ್ರತ್ಯೇಕಿಸಲ್ಪಟ್ಟು ವಿನಿಯೋಗವಾಗಬೇಕು. ಈ ಸಮಸ್ಯೆಯನ್ನು ಎಲ್ಲಿಯ ತನಕ ತೆಗೆದುಕೊಂಡು ಹೋಗೋಣ ? ತಲೆ ತಲಾಂತರಕ್ಕೆ ಕೊಂಡೊಯ್ಯಬೇಕೆ ? ಇದರಿಂದ ಸಾಧಿಸಿದ್ದೇನು ? ನೆಪಮಾತ್ರದಿಂದ, ಬಾಯಿ ಮಾತಿನಿಂದಾಗದ ಕೆಲಸ. ಬಡತನವನ್ನು ತೊಡೆಯಲಿಚ್ಛೆ ಇದ್ದವರು ಅದರ ವಿರುದ್ಧ ಯುದ್ಧ ಸಾರಬೇಕು. ಕೆಲವು ಕಡೆ ಹರಿದು ಹೋಗುವ ಹಣವನ್ನು ಇಲ್ಲಿಗೆ ಮೀಸಲು ಮಾಡಬೇಕು. ಅನೇಕ ಸಂಸ್ಥೆಗಳ ಬೆಳವಣಿಗೆಗೆ ಕೆಲವು ದಿನ ವಿರಾಮ ಹಾಕಿ ಉಳಿದೆಲ್ಲಾ ಹಣ ಈ ಬಡತನದ ವಿರುದ್ಧದ ಯುದ್ಧಕ್ಕೆ ವಿನಿಯೋಗವಾಗಬೇಕು. ಇದನ್ನು ತುರ್ತುಸ್ಥಿತಿಯಾಗಿ ಘೋಷಿಸಿ ಸಾಧಿಸಿದರೆ ಸೇವೆ ಸಾರ್ಥಕ. ಇಲ್ಲದಿದ್ದರೆ ಎಲ್ಲವೂ ಸ್ವಾರ್ಥ !

೧೪

ಆಗಾಗ್ಗೆ ಮಕ್ಕಳಿಗಾಗಿ ಸ್ವಲ್ಪ 'ಪಾಕೆಟ್ ಮನಿ' ಕಳುಹಿಸುತ್ತಿದ್ದೆ. ಈ ಸಾರಿ ೧೦ ಪೌಂಡ್‌ಗಳನ್ನು ಮನಿ ಆರ್ಡರ್ ಮಾಡಿದ್ದೆ. ಮಾಡಿ ಒಂದು ತಿಂಗಳಾದರೂ ಹಣ ತಲುಪಿಲ್ಲ ಎಂಬ ಸುದ್ದಿ ಬಂತು. ಮನಸ್ಸಿಗೆ ವ್ಯಥೆಯಾಯಿತು. ಮಕ್ಕಳಿಗೆ ನಿರಾಶೆಯಾಗಿದೆ. ಮೃದು ಮನಸ್ಸಿಗೆ ಇದು ಆಘಾತವೇ ಸರಿ ! ಅವರ ಸಣ್ಣ ಪುಟ್ಟ ಯೋಜನೆಗೆ ಬಾಗಿಲು ಹಾಕಿದಂತೆ. ಇದ್ದ ಹಣದಲ್ಲಿ ಮತ್ತೆ ಸ್ವಲ್ಪ ಕಳುಹಿಸಿದೆ. ಆದರೂ ಮೊದಲಿನ ೧೦ ಪೌಂಡ್ ಏನಾಯಿತು ? ಏನು ಕಳುಹಿಸಿದರೂ ಮನಸ್ಸಿಗೆ ನೆಮ್ಮದಿಯಾಗಲೆಂದು ಎಲ್ಲವನ್ನೂ ವಿಮಾನದಲ್ಲಿ ಕಳುಹಿಸುತ್ತಿದ್ದೆ. ಎಷ್ಟೋ ಸಾರಿ ಸ್ವೆಟರ್‌ಗಳ ಬೆಲೆಯಷ್ಟೇ ಟಪಾಲು ಖರ್ಚು ಬಿದ್ದಿತ್ತು. ಹಾಗೂ ವಸ್ತುಗಳು ತಲುಪಲು ೭-೮ ದಿನ ಬೇಕು. ಅದೂ ನಿಧಾನವೇ ! ಈ ದಿನದ ರವಾನೆ ನಾಳೆ ತಲುಪಿದ್ದರೆ !

ಇಲ್ಲ ಈ ಸಾಯಂಕಾಲವೇ ತಲುಪಿದ್ದರೆ! ಮತ್ತೆರಡು ಪೌಂಡ್ ಟಪಾಲು ರವಾನೆಗೆ ಖರ್ಚಾದರೂ ಸರಿಯೆ ಎನ್ನಿಸುತ್ತದೆ. ಇದೇ ಅನುಪಮ ಭಾಂದವ್ಯ!

ಅಂಚೆ ಕಛೇರಿಗೆ ಹೋದೆ, ವಿಚಾರಿಸಿದೆ. ಅವರಿಗೂ ಅತ್ಯಾಶ್ಚರ್ಯ. "ವೆರಿ ಸಾರಿ, ಅದು ಹಾಗಾಗಬಾರದು, ನಿಮ್ಮಲ್ಲಿ ದಾಖಲೆ ಏನಾದರೂ ಇದ್ದರೆ ಹೇಳಿ. ನಾವೀಗಲೇ ಮುಖ್ಯ ಕಛೇರಿಗೆ ಟೆಲಿಫೋನ್ ಮಾಡುತ್ತೇವೆ" ಎಂದರು. ನಾನು ಪಾಕೆಟ್ಟಿನಲ್ಲಿದ್ದ ಕೆಲವು ಮುಖ್ಯ ರಶೀದಿಗಳನ್ನು ಹುಡುಕಿದೆ. ಪ್ರಯೋಜನವಾಗಲಿಲ್ಲ".

"ನಿಮಗೆ ನಾಳೆ ತಿಳಿಸುತ್ತೇನೆ. ಧನ್ಯವಾದಗಳು" ಎಂದು ಹೇಳಿ ಹಾಸ್ಟೆಲ್‌ಗೆ ಮರಳಿದೆ. ಶೋಧನೆ ಪ್ರಾರಂಭವಾಯಿತು, ಎಲ್ಲಾ ಪುಸ್ತಕ, ಪಾಕೆಟ್, ಜೇಬು ಶೋಧಿಸಿದ್ದಾಯಿತು. ಕೊನೆಗೆ ನನ್ನ ಪುಟ್ಟ ಮಗಳ ಕಾಗದ ಬಿಚ್ಚಿದೆ ಅಲ್ಲಿತ್ತು ಅದಕ್ಕೆ ಉತ್ತರ. ಆ ಕಾಗದ ಬಂದ ದಿನ "ಹತ್ತು ಪೌಂಡು ಈ ದಿನ ನಿನಗೆ" ಎಂದು ಬರೆದು ಆ ದಿನವೇ ಕಳುಹಿಸಿದ್ದೆ. ಪೋಸ್ಟ್ ಆಫೀಸಿಗೆ ಟೆಲಿಫೋನ್ ಮಾಡಿ ತಿಳಿಸಿದೆ. "ಥ್ಯಾಂಕ್ಯು. ಅಷ್ಟೇ ನಮಗೆ ಸಾಕು. ವಿಷಯವನ್ನು ಸ್ವಲ್ಪ ದಿನದಲ್ಲೇ ತಿಳಿಸುತ್ತೇವೆ" ಎಂದರು. ನಾಲ್ಕಾರು ದಿನಗಳಾದ ಮೇಲೆ ಮುಖ್ಯ ಅಂಚೆ ಕಛೇರಿಯಿಂದ ಕಾಗದ ಬಂತು. ಅದರಲ್ಲಿ ನಿಮ್ಮ ಮನಿ ಆರ್ಡರ್ ಆಕಸ್ಮಾತ್ ಹಡಗಿನಲ್ಲಿ ಹೊರಟಿದೆ. ಎಲ್ಲೋ ಏನೋ ಕೈ ತಪ್ಪಿ ವಿಮಾನದಲ್ಲಿ ಹೋಗುವ ಅಂಚೆ ಹಡಗಿನಲ್ಲಿ ಹೊರಟಿದೆ. ದಯವಿಟ್ಟು ಕ್ಷಮಿಸಿ. ಸ್ವಲ್ಪ ನಿಧಾನವಾಗಿ ನಿಮ್ಮವರಿಗೆ ತಲುಪುತ್ತದೆ ಎಂದು ಬರೆದಿದ್ದರು. ಸಧ್ಯ ಹಣಕ್ಕೆ ಮೋಸವಿಲ್ಲ! "ನಿಮ್ಮ ಮುತುವರ್ಜಿಗೆ ನನ್ನ ಧನ್ಯವಾದಗಳು" ಎಂದು ನಾನೊಂದು ಉತ್ತರ ಬರೆದೆ. ಅದರಂತೆ ಊರಿಗೆ ಕಾಗದ ಬರೆದು ತಿಳಿಸಿದೆ.

ಡಾ|| ಸುಬ್ಬಯ್ಯ ನನ್ನನ್ನೊಮ್ಮೆ ಭೇಟಿ ಆದರು. ಅದು ದಿನಚರಿಯ ಆಸ್ಪತ್ರೆಯಲ್ಲಿನ ಭೇಟಿಯಾಗಿರಲಿಲ್ಲ. ಅದೊಂದು ಮಹತ್ತರ ಭೇಟಿ. ವಿಷಯ ವೇನೆಂದು ಕೇಳಿದಾಗ ನಾಳೆ ಸಂಜೆಗೆ ವೈ.ಎಂ.ಸಿ.ಎ.ನಲ್ಲಿ ಊಟಕ್ಕೆ ಬನ್ನಿ. ನಾನು ಮುಂದಿನವಾರ ಮದ್ರಾಸಿಗೆ ಹೊರಡುವವನಿದ್ದೇನೆ. ನನ್ನ ೬ ತಿಂಗಳ ವಿದ್ಯಾರ್ಥಿ ವೇತನ ಮುಗಿಯಿತು. ವಿಮಾನದ ಟಿಕೆಟ್ ಕೂಡ ತಯಾರಾಗಿದೆ" ಎಂದು

ಹೇಳಿದರು. ನನಗೆ ನಿರಾಶೆಯ ಮೇಲೆ ನಿರಾಶೆಯಾದಂತಾಯಿತು. ಆದರೂ ಆಸೆಯೊಂದು ಹತ್ತಿರ ಹತ್ತಿರವಾದಂತಿತ್ತು. 'ಡಾ|| ಸಿಂಗ್ ತಾಯ್ನಾಡಿಗೆ ಮರಳಿ ಇನ್ನೂ ತಿಂಗಳಾಗಿಲ್ಲ, ಈಗ ಮತ್ತೊಬ್ಬ ಆಪ್ತಸ್ನೇಹಿತರು ಮರಳು ತ್ತಿದ್ದಾರೆ. ನನಗೆ ಎಟುಕದ್ದು ಇವರಿಗೆ ಸಿಕ್ಕಿದೆ. ಸಂತೋಷದ ವಿಷಯ, ಆದರೆ ಇವರೆಲ್ಲಾ ಹೊರಟ ಮೇಲೆ ನನ್ನದೇನು ? ನಾನೇಕೆ ಸಿದ್ಧತೆ ಮಾಡಿಕೊಳ್ಳ ಬಾರದು ?' ಎಂದೆಲ್ಲಾ ಒಂದು ಕಡೆ ಪಿಸುಗುಟ್ಟುತ್ತಿತ್ತು ಮನಸ್ಸು. "ಏಕೆ, ನೀವು ಇನ್ನೊಂದು ಆರು ತಿಂಗಳು ಇರಬಹುದಿತ್ತಲ್ಲ." ಎಂದೆ.

"ಇಲ್ಲ, ನನಗೆ ವಿದ್ಯಾರ್ಥಿವೇತನವಿದ್ದದ್ದು ಆರು ತಿಂಗಳಿಗೆ ಮಾತ್ರ, ಅವಧಿ ಮುಗಿದಿದೆ. ಕಾಮನ್‌ವೆಲ್ತ್ ಅಧಿಕಾರಿಗಳು ನಮಗೆ ರಿಟರ್ನ್ ಟಿಕೆಟ್ ಕೊಟ್ಟಿರುತ್ತಾರೆ. ಅಲ್ಲದೆ ಲಂಡನ್ ಆಸ್ಪತ್ರೆಯಲ್ಲಿ ನಡೆವ ಅನೇಕ ಶಸ್ತ್ರಚಿಕಿತ್ಸೆ ಗಳು ನಮ್ಮಲ್ಲಿ ದಿನವಿಡೀ ನಡೆಯುತ್ತವೆ. ಇಲ್ಲಿ ಏನು ಕಲಿಯಬೇಕೆಂದರೆ ಕೆಲವು ಮುಂದುವರಿದ ರೋಗ ಪತ್ತೆಹಚ್ಚುವ ಸಾಧನಗಳ ಬಗ್ಗೆ. ಅಲ್ಲದೆ ಇವರ ರೆಕಾರ್ಡ್ ಸಿಸ್ಟಂ ಬಹಳ ಚೆನ್ನಾಗಿದೆ, ಮದ್ರಾಸಿನಲ್ಲಿನ ರೆಕಾರ್ಡ್ ಸಿಸ್ಟಂ ಕೂಡಾ ಆಧುನಿಕವಾದದ್ದು. ನಿಮಗೇನಾದರೂ ಬೇಕಿದ್ದರೆ ೩ ಅಥವಾ ೫ ನಿಮಿಷದಲ್ಲಿ ದೊರಕುತ್ತದೆ. ಇಲ್ಲೂ ಹಾಗೆ, ಎಲ್ಲವನ್ನೂ ಬರೆದಿಡುತ್ತಾರೆ. ಆಗ ಅದು ಪುಸ್ತಕವಾಗುತ್ತದೆ. ಅದನ್ನೇ ನಾವೂ ನೀವೂ ಎಲ್ಲರೂ ಓದುವುದು. ಇಲ್ಲಿ ಕಲಿಯಬೇಕಾದ್ದನ್ನು ಕಲಿಯಲಿಕ್ಕೆ ಆರು ತಿಂಗಳು ಸಾಕೆಂದು ಕಾಣುತ್ತದೆ. ಮರೆತಿದ್ದೆ. ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ್ದು ಶವಪರೀಕ್ಷೆ. ಪ್ರತಿ ಸತ್ತ ರೋಗಿಯನ್ನು ಶವಪರೀಕ್ಷೆ ಮಾಡಬೇಕೆಂಬ ಕಟ್ಟಳೆ ಇದೆ. ಆದ್ದ ರಿಂದ ಅರಿಯದ ಅನೇಕ ರೋಗಗಳು ಜ್ಞಾನ ಭಂಡಾರವನ್ನು ತುಂಬುತ್ತವೆ. ಶವ ಪರೀಕ್ಷೆ ಮಾಡಿ ರೋಗ ಪತ್ತೆ ಮಾಡುವ ಸಂದರ್ಭದಲ್ಲಿ ಅಧಿಕ ಸಾವಿನ ಕಾರಣವೂ ತಿಳಿಯುತ್ತದೆ. ಇವುಗಳ ತಿಳುವಳಿಕೆಯಿಂದ ಬದುಕಿದ್ದಾಗಿನ ರೋಗಿಯ ಚರಿತ್ರೆ ಇಂಥ ಕಾಯಿಲೆಗೆ ಸಂಬಂಧಿಸಿದ್ದೆಂದು ಸಿಂಹಾವಲೋಕನವಾಗಿ ಮುಂದೆ ಇಂಥ ರೋಗಗಳನ್ನು ಮೊದಲೇ ಕಂಡುಕೊಳ್ಳಲು ಅನುಕೂಲವಾಗುತ್ತದೆ. ಸಾವು ನೋವು ಕಡಿಮೆಯಾಗುತ್ತವೆ. ನಮ್ಮಲ್ಲಿ ಶವಪರೀಕ್ಷೆಗೆ ಕಾನೂನು ಇಲ್ಲ. ಇದ ರಿಂದ ಎಷ್ಟೋ ಅರಿಯದ ಖಾಯಿಲೆಗಳನ್ನು ಅರಿತುಕೊಳ್ಳಲು ಅಸಾಧ್ಯ. ಇವು ಇಲ್ಲಿನ ವೈಶಿಷ್ಟ್ಯಗಳು" ಎಂದು ಭಾಷಣ ಮಾಡಿದರು.

"ಅದು ಸರಿ, ನಿಮ್ಮ ಆಹ್ವಾನ ತದ್ವಿರುದ್ಧ. ಊರಿಗೆ ಮರುಳುವವರು ನೀವು, ನಿಮ್ಮನ್ನು ಬೀಳ್ಕೊಡಬೇಕಾದವನು ನಾನು. ದಯವಿಟ್ಟು ನನ್ನ ಆತಿಥ್ಯವನ್ನು ಸ್ವೀಕರಿಸಿ. ನಾಳೆ ನಮ್ಮ ಹಾಸ್ಟಲ್‌ನಲ್ಲಿ ಊಟಕ್ಕೆ ಬನ್ನಿ."

"ಅದೆಲ್ಲಾ ಸಂಪ್ರದಾಯದ ಮಾತು. ನಾನೆಷ್ಟೋ ಸಾರಿ ನಿಮ್ಮಲ್ಲಿ ಊಟ ಮಾಡಿದ್ದೇನೆ. ನೀವು! ಅದೆಲ್ಲಾ ಬಿಟ್ಟು ನಾಳೆ ಮರೆಯದೆ ಬನ್ನಿ. ಎನ್ನಾಂಗೊ, ಪ್ಲೀಸ್."

"ಆಯಿತು. ನಾನು ಬರುತ್ತೇನೆ."

"ಮಕ್ಕಳಿಗೆ ಮತ್ತು ನನ್ನ ಪತ್ನಿಗಾಗಿ ಕೆಲವು ಒಡವೆ ತೆಗೆದುಕೊಂಡಿದ್ದೇನೆ. ಇವುಗಳಿಗೆ ೧೪ ಕ್ಯಾರೆಟ್ ಗೋಲ್ಡ್ ಹಾಕಿ ಮಾಡಿದ್ದಾರೆ" ಎಂದು ಒಂದು ೪೦ ಪೌಂಡಿನ ನೆಕ್ಲೇಸ್, ೧೦ ಪೌಂಡ್‌ನ ಎರಡು ಕೈಬಳೆ ತೋರಿಸಿದರು. ಎರಡು ಒಡವೆಗಳೂ ಮಾಸಲು; ಚಿನ್ನದಂತೆ ಇಲ್ಲ. ಬಿಳಿ ಚಿನ್ನದಂತೆ ಕಂಡವು. ಅಷ್ಟು ಆಕರ್ಷಕವಾಗಿರಲಿಲ್ಲ. ಆದರೂ ನಾಜೂಕಾಗಿ ಮಾಡಲಾಗಿತ್ತು. ಅವಕ್ಕೆ ಹಣದ ಬೆಲೆಗಿಂತ ಚಿನ್ನದ ಮೌಲ್ಯಕ್ಕಿಂತ ಅತಿ ಬೆಲೆಯೊಂದಿತ್ತು. ಅಪಾರ ಪ್ರೀತಿ ! ಆರು ತಿಂಗಳ ಕಾಲ ೫೦೦೦ ಮೈಲಿ ದೂರದಲ್ಲಿದ್ದ ತಂದೆಯ ಕೊಡುಗೆ, ಪತಿಯ ಕೊಡುಗೆ ಅವಾಗಿದ್ದವು. ಡಾ|| ಸುಬ್ಬಯ್ಯನವರ ಮನಸ್ಸಿನಲ್ಲಿ ಹಿಗ್ಗಿತ್ತು ; ತೃಪ್ತಿ ಇತ್ತು. ಮುಖ ಅರಳಿತ್ತು. ಒಡವೆಗಳನ್ನೇ ಇನ್ನೊಮ್ಮೆ ಮತ್ತೊಮ್ಮೆ ಹತ್ತಿರದಿಂದ, ಸ್ವಲ್ಪ ದೂರದಿಂದ ನೋಡುತ್ತಿದ್ದರು. ಅದೇ ಅವಕ್ಕೆ ಕಟ್ಟಲಾರದ ಬೆಲೆ.

"ಚೆನ್ನಾಗಿದೆ ನೀವು ಆರಿಸಿರುವುದು, ಊರಿಗೆ ಕಾಗದ ಬರೆದಿದ್ದೀರಾ ಇದೆಲ್ಲ ತರುತ್ತೇನೆ ಎಂದು ?"

"ಇಲ್ಲ ಹಾಗೆ ಬರೆಯಬಾರದು. ಅಕಸ್ಮಾತ್ ಆ ವಸ್ತು ಅವರಿಗೆ ಸಿಗದೇ ಹೋದರೆ ಅಥವಾ ತಲುಪದೆ ಹೋದರೆ ಮನಸ್ಸಿನ ಆಘಾತ ಬಹಳ. ಆದ್ದರಿಂದ ನಾನು ಯಾವಾಗಲೂ ಇವೆಲ್ಲಾ ಬರೆಯುವುದಿಲ್ಲ" "ಅಂಥ ಪರಿಸ್ಥಿತಿ ಅತಿ ವಿರಳ. ಬರೆದಿದ್ದರೆ ನೀವು ಇಂಗ್ಲೆಂಡ್‌ನಿಂದ ಮರುಳುವ ಸಂತೋಷವನ್ನು ನೀವು ತೆಗೆದು ಕೊಂಡು ಹೋಗುವ ಒಡವೆ ವಸ್ತುಗಳು ಮರೆಸುತ್ತಿದ್ದವು. ಮಕ್ಕಳಿಗೆ ನೀವು ಬರುವುದು ಬೇಕು. ಅದು ಖಚಿತ. ಆದರೆ ನಿಮ್ಮ ಜೊತೆಯಲ್ಲಿ ಬರುವ

ಉಪಮೆಗೊರೆ ಅಪ್ರತಿಮ ; ಆ ಆಕಾಂಕ್ಷೆಯಲ್ಲಿ ನೀವು ಅಗೋಚರ."

"ಒಪ್ಪಿದೆ. ಈಗ ಬರೆದರೆ ಕಾಗದ ತಲುಪುವ ಮುನ್ನ ನಾನೇ ತಲುಪಿರುತ್ತೇನೆ" ನಕ್ಕೆವು.

ನಾನು ಹೊರಡುವುದು ಖಚಿತವಾದರೆ ನನ್ನಲ್ಲಿ ಅಷ್ಟಾಗಿ ಹಣವಿಲ್ಲ. ಆದ್ದರಿಂದ ಒಡವೆ ಕೊಳ್ಳಲು ಆಗದು. ನಮ್ಮ ಮನೆಯಿಂದೇನೋ ಕಾಗದಗಳು ಬರುತ್ತಿದ್ದವು. ಡಾ|| ಸುಬ್ಬಯ್ಯನವರಿಗೆ ತಿಂಗಳೊಂದಕ್ಕೆ ವಿದ್ಯಾರ್ಥಿ ವೇತನ ೭೫ ಪೌಂಡುಗಳು. ನನಗೆ ೪೫ ಪೌಂಡುಗಳು ಮಾತ್ರ. ಇದಕ್ಕೆ ಅರ್ಥವಿಲ್ಲ. ಅವರು ಕಾಮನ್‌ವೆಲ್ತ್ ವಿದ್ಯಾರ್ಥಿ ವೇತನದಲ್ಲಿ ಬಂದಿದ್ದರು. ಯಾವ ವೇತನವೇ ಆಗಲಿ ಲಂಡನ್ನಿನಲ್ಲಿ ಎಲ್ಲರೂ ಒಂದೇ. ಇಂಡಿಯಾದಲ್ಲೂ ಎಲ್ಲರೂ, ಎಲ್ಲಾ ವಿದ್ಯಾರ್ಥಿಗಳೂ ಒಂದೇ. ಈ ತಾರತಮ್ಯ ಯಾರು ಮಾಡಿದರೋ ತಿಳಿಯದು. ಮಾಡಿದವರ ಉದ್ದೇಶ ಸಂಕುಚಿತ ಮನೋಭಾವದ್ದು. ಅದೂ ಹೊರದೇಶದಲ್ಲಿ ಎರಡು ವಿದ್ಯಾರ್ಥಿಗಳಲ್ಲಿ ವೇತನದ ವ್ಯತ್ಯಾಸ ಅರ್ಥಕ್ಕರ್ಥ. ಒಂದೇ ಕಾರಣಕ್ಕಾಗಿ ಬಂದವರಲ್ಲಿ ಒಬ್ಬರಿಗೆ ಅರ್ಧ ಹೊಟ್ಟೆ ಮತ್ತೊಬ್ಬರಿಗೆ ಪೂರ್ತಿ ! ಇದರಲ್ಲೂ ಇಬ್ಬಗೆಯ ಭಾವನೆ ; ಪ್ರತ್ಯೇಕತೆ ಎದ್ದು ಕಾಣುತ್ತದೆ. ಅಲ್ಪ ಸ್ವಲ್ಪ ಉಳಿದಿದ್ದರಲ್ಲಿ ಏನಾದರೂ ಕೊಂಡೊಯ್ಯಬೇಕು. ಆದರೆ ಧ್ಯೇಯ ಸಾಧನೆಯೆ ಬೇರೆ. ಮೊದಲೇ ಹೇಳಿದ್ದಂತೆ ಮಕ್ಕಳ ಶಸ್ತ್ರಚಿಕಿತ್ಸಾ ಘಟಕ ಸಾಧನೆ ! ನನ್ನದಾಗಿ ಅದಕ್ಕೆ ಗೌರವ ಘನತೆ ಬರುವುದಾದರೆ ಲೇಖನಗಳು, ಪ್ರಬಂಧಗಳನ್ನು ಬರೆಯಬೇಕು. ಒಂದು ಟೈಪ್‌ರೈಟರ್ ಅಗತ್ಯ. ಒಂದು ಕ್ಯಾಮರಾ ಬೇಕು. ಸ್ವಾರಸ್ಯವಾದ ಅಪರೂಪದ ರೋಗಗಳಿಗೆ ಸಂಬಂಧಪಟ್ಟದ್ದನ್ನು ಸಂಶೋಧನೆ ಮಾಡಿದರೆ ಅದನ್ನು ಫೋಟೋ ತೆಗೆದು ತೋರಿಸಬೇಕು ; ಇಲ್ಲ ಸ್ಲೈಡ್ ಮಾಡಿ ತೋರಿಸಬೇಕು. ಕಾನ್‌ಫರೆನ್ಸ್‌ಗಳಲ್ಲಿ ಪ್ರಬಂಧಗಳನ್ನೋದಲು ಸಹಾಯಕವಾಗುತ್ತದೆ. ನಮ್ಮ ವಿದ್ಯಾರ್ಥಿಗಳಿಗೆ ಇದರ ಅಭ್ಯಾಸ ಸುಲಭವಾಗಲು, ತಿಳುವಳಿಕೆ ಹೆಚ್ಚಲು ಆಗಾಗ್ಗೆ ಇವುಗಳನ್ನು ತೋರಿಸಬಹುದು. ಅದಕ್ಕಾಗಿ ಒಂದು ಪ್ರೊಜೆಕ್ಟರ್ ಬೇಕು. ಇದಕ್ಕೆಲ್ಲಾ ಹಣಬೇಕು. ಉಳಿದಿದ್ದು ನಂತರ.

೧೫

ಅಂದು ಇಂಡಿಯನ್ ಹೈಕಮಿಷನ್‌ಗೆ ಹೋದೆ. ಶ್ರೀ ಓಬರಾಯ್

"ಬನ್ನಿ, ನಿಮ್ಮನ್ನು ವಾಪಸ್ಸು ಕಳುಹಿಸಲು ತೀರ್ಮಾನಿಸಿದ್ದೇವೆ. ನಮ್ಮಲ್ಲಿನ ಡಾಕ್ಟರ್ ನಿಮ್ಮ ಆಸ್ಪತ್ರೆಯ ಅಧಿಕಾರಿಗಳಿಗೆ ಬರೆದು ತಿಳಿದುಕೊಂಡಿದ್ದಾರೆ. ಅವರ ಪ್ರಕಾರ ನಿಮ್ಮ ಕೆಲಸ ನೆಮ್ಮದಿ ತರುವಂತಹುದು, ಅಲ್ಲದೆ ಪೂರ್ಣಗೊಂಡಿವೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ" ಎಂದು ತಿಳಿಸಿದರು. ಹಾಗೇ ಪಕ್ಕದಲ್ಲಿದ್ದ ಗುಮಾಸ್ತರೊಬ್ಬರ ಪರಿಚಯಮಾಡಿ "ಮುಂದಿನ ಏರ್ಪಾಡು ಇವರು ಮಾಡುತ್ತಾರೆ. ನೀವು ಈಗಲೇ ಹೊರಡಿ ಎಂದೇನಲ್ಲ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ತಯಾರು ಮಾಡಿಕೊಳ್ಳಿ" ಎಂದು ಹೇಳಿಕಳುಹಿಸಿದರು. ಗುಮಾಸ್ತ ಖಂಠ ಮನುಷ್ಯ. ಅವರಿಗೆ ಲಂಡನ್ನಿನಲ್ಲಿನ ಕೆಲಸ ಖುಷಿ ಇದ್ದಂತೆ ಕಂಡಿತು. "ಸಾರ್ ನೀವು ಯಾವಾಗ ಹೊರಡುವಿರಿ ತಿಳಿಸಿ. ಟಿಕೆಟ್ ರೆಡಿ ಮಾಡಿಸುತ್ತೇನೆ. ವಿಮಾನದಲ್ಲಿ ಪ್ರಯಾಣ ಮಾಡುತ್ತೀರೋ ಅಥವಾ ಹಡಗಿನಲ್ಲೋ ?" ಎಂದು ಕೇಳಿದರು.

"ಇನ್ನೂ ತೀರ್ಮಾನಿಸಿಲ್ಲ"

"ಬರುವಾಗ ಹೇಗೆ ಬಂದಿರಿ"

"ವಿಮಾನದಲ್ಲಿ"

"ಹಾಗಾದರೆ ಮರಳುವಾಗ ಹಡಗಿನಲ್ಲಿ ಹೋಗಿ. ಒಳ್ಳೆ ಅನುಭವವಾಗುತ್ತೆ. ಹಾಗೇ ಕೆಲವು ಬಂದರುಗಳನ್ನು ನೋಡಿದ ಹಾಗಾಗುತ್ತದೆ. ನೀವಿನ್ನೂ ಚಿಕ್ಕವಯಸ್ಸಿನವರು."

"ಎಷ್ಟು ದಿನಗಳ ಪ್ರಯಾಣ ? ಪಾಕೆಟ್‌ಮನಿ ಎಷ್ಟುಕೊಡುವಿರಿ ?"

"ಮೂರು ವಾರಗಳಾಗಬಹುದು. ಮೂರು ಪೌಂಡ್ ಕೊಡುತ್ತೇವೆ."

"ಅದಾಗದ ಮಾತು. ನನ್ನಲ್ಲಿ ಮೊದಲೇ ಹಣಕ್ಕೆ ಅಭಾವ. ಮೂರು ವಾರ ಪ್ರಯಾಣ ಮಾಡಿ ಅಲ್ಲಲ್ಲೇ ಬಂದರುಗಳಲ್ಲಿಳಿದು ನಾನೇನು ಕೊಳ್ಳಲಿ ? ನಿಮ್ಮ ಹಣ ಒಂದು ವಾರಕ್ಕಾಗಬಹುದು. ಅಲ್ಲದೆ ಮೂರು ವಾರ ಪ್ರಯಾಣ ಬಹಳ ಪ್ರಯಾಸದ್ದು, ಸೋಮಾರಿತನದ್ದು" ಎಂದೆ.

"ಸಾರ್ ಊರಿಗೆ ಏನು ತೆಗೆದುಕೊಂಡು ಹೋಗುತ್ತೀರಿ".

"ಏನು ತೆಗೆದುಕೊಳ್ಳಬೇಕು ಹೇಳಿ,"

"ಒಂದು ಟೇಪ್‌ರೆಕಾರ್ಡರ್, ಒಂದು ಟೆಲಿವಿಷನ್ ಸೆಟ್ ತೆಗೆದುಕೊಳ್ಳಿ. ಅವಕ್ಕೆ ಬೆಲೆ ಬಹಳ ಇಂಡಿಯಾದಲ್ಲಿ. ಬೇಡಿಕೆಯೂ ಅಧಿಕ."

"ನೀವೇನು ಸ್ವಂತ ಹಣದಲ್ಲಿ ಒಂದು ೧೦೦ ಪೌಂಡು ಕೊಡುತ್ತೀರಾ ?"

"ಅದಕ್ಕೇನ್ ಸಾರ್" ಎಂದು ನಕ್ಕರು.

ಅಲ್ಲಿಂದ ಹೊರಬಂದೆ. ಮನಸ್ಸು ಭಾರವಾಗಿತ್ತು. ನನ್ನ ದೇಶಕ್ಕೆ ಮರಳುವುದು ಖಚಿತ. ಇನ್ನೊಂದೆರಡು ತಿಂಗಳಲ್ಲೇ. ಆದರೆ ಆರು ತಿಂಗಳು ಆಸರೆ ಇತ್ತಿದ್ದ, ಓಡಾಡಿದ, ಚಿರಪರಿಚಿತ ನಗರದ ರಸ್ತೆಗಳು, ಆಸ್ಪತ್ರೆ, ಸ್ನೇಹಿತರು. ಹೈಕಮಿಶನ್ ಕಛೇರಿ, ಪ್ರಪಂಚದಲ್ಲೇ ಹೆಸರುಪಡೆದ ಅದ್ಭುತ ಜ್ಞಾನ ಸಂಸ್ಥೆಗಳು, ಪ್ರೇಕ್ಷಣೀಯ ಸ್ಥಳಗಳು, ಅಂತರಾತ್ಮಕ್ಕೆ ಅಂಟಿಕೊಂಡಿದ್ದವು. ಬಿಟ್ಟುಹೋಗಲು ಮನಸ್ಸಿಗೆ ದುಗುಡ. ಹೃದಯ ಭಾರವಾಗಿದ್ದಂತೆ ಭಾಸವಾಗಿ ನಿಧಾನವಾಗಿ ನಡೆದೆ. "ಸೇಲ್ಸ್ ವಿಂಡೋ" ಗಳಲ್ಲಿ ಮುಖವಿಟ್ಟು ಕಣ್ಣು ಹಾಯಿಸಿದೆ. ಕ್ಯಾಮರಾಗಳು ಸೇಲ್ಸ್‌ಗಿದ್ದವು. 'ಪ್ರಾಕ್ಟಿಕ' ಜರ್ಮನಿಯಲ್ಲಿ ತಯಾರಾದ ಉತ್ತಮ ಕ್ಯಾಮರ. ಅದರ ಬೆಲೆ ೨೦ ಪೌಂಡುಗಳು. 'ಯಶಿಕ' ಜಪಾನಿನ ಉತ್ತಮ ಕ್ಯಾಮರ. ಅದರ ಬೆಲೆ ೨೨ ಪೌಂಡುಗಳು. ಒಳ ನುಗ್ಗಿದೆ.

"ಎಸ್ ಪ್ಲೀಸ್."

"ಗುಡ್ ಆಫ್ಟರ್ ನೂನ್. ನನಗೆ ಒಂದು ಕ್ಯಾಮರಾ ಬೇಕು. ಅದರ ಉಪಯೋಗ ನಾನು ಬಹಳಷ್ಟು ಹತ್ತಿರದಿಂದ ಕ್ಲಿನಿಕಲ್ ಫೋಟೋ ತೆಗೆಯ ಬೇಕು. ಅದರ ಪ್ರತಿಭಾಗವೂ ಸ್ವಚ್ಛವಾಗಿ ಕಾಣಬೇಕು. ಅದರ ಬೆಲೆ ಎಷ್ಟಾಗಬಹುದು. ನಾನು ವೃತ್ತಿಯಲ್ಲಿ ಸರ್ಜನ್"

"ಹೌದು, ನಿಮ್ಮ ಅಪೇಕ್ಷೆ ನನಗೆ ತಿಳಿಯಿತು. ಸಿಂಗಲ್ ಲೆನ್ಸ್ ರಿಫ್ಲೆಕ್ಸ್, ಬಿಲ್ಟಿನ್ ಎಕ್ಸ್‌ಪೋಸರ್, ಲೆನ್ಸ್‌ದೂರ ೧.೨ ಮತ್ತು ಫ್ಲಾಶ್ ಬೇಕು. ಅದಕ್ಕೆಲ್ಲಾ ೭೦ ಪೌಂಡುಗಳಾಗಬಹುದು."

"ಥ್ಯಾಂಕ್ಯು ವೆರಿಮಚ್" ಎಂದು ಹೇಳಿ ಹೊರಬಂದೆ.

ಸಮಸ್ಯೆ ಬಗೆಹರಿಯುವಂತೆ ಕಾಣಲಿಲ್ಲ. ಆದರೂ ಭಂಡ ಧೈರ್ಯ,

ಏನಾದರೂ ಮಾಡಿ ಇವನ್ನು ತೆಗೆದುಕೊಳ್ಳಬೇಕೆಂದು ಮುಂದೆ ಮುಂದೆ ನಡೆದೆ. ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲೊಂದು ಕಡೆ ಸೇಲ್ಸ್. ಅದೂ 'ಕ್ಲಿಯರೆನ್ಸ್ ಸೇಲ್ಸ್' ಎಂದರೆ ವ್ಯಾಪಾರಸ್ಥರು ಎಲ್ಲವನ್ನೂ ಮಾರಿ ಮುಂದೆ ಹೋಗುವವರು ಅಥವಾ ಬೇರೆ ವ್ಯಾಪಾರಕ್ಕೆ ಕೈ ಹಾಕುವವರು. ಚೌಕಾಸಿ ಮಾಡಬಹುದು. ಜನದ ಜಾತ್ರೆಯೇ ಅಲ್ಲಿ ನಡೆದಿತ್ತು. ಪ್ರಯಾಸಪಟ್ಟು ಒಳ ನಡೆದೆ. ಮುಂದೆ ಕಣ್ಣು ಮನ ಎಲ್ಲವನ್ನೂ ಕೇಂದ್ರೀಕರಿಸಿ ಹುಡುಕಿದೆ. ಒಂದು ಕಡೆ ೪ ಪ್ರೊಜೆಕ್ಟರ್‌ಗಳಿದ್ದವು. ಜಪಾನ್ ದೇಶದವು ಬೆಲೆ ೫ ಪೌಂಡ್. ಒಂದು ಪ್ರೊಜೆಕ್ಟರ್ ಕೊಂಡೆ. ಹೆಮ್ಮೆ ಎನಿಸಿತು. "ಸಾರ್ ಎಕ್ಸ್‌ಟ್ರಾ ಬಲ್ಬ್ ಬೇಕೇ ? ಒಂದು ಬಲ್ಬಿಗೆ ೧ ಪೌಂಡು".

ನನಗೆ ಹೊಳೆಯಿತು. ನಮ್ಮ ಕಾಲೇಜಿನಲ್ಲಿದ್ದ ಪ್ರೊಜೆಕ್ಟರ್ ಒಂದಕ್ಕೆ ಸರಿಯಾದ ಬಲ್ಬ್ ಸಿಗದೆ ಆರು ತಿಂಗಳು ಅದನ್ನು ಉಪಯೋಗಿಸಿರಲಿಲ್ಲ.

"ಹೌದು, ಒಂದು ಬಲ್ಬ್ ಕೊಡಿ" ಎಂದು ಒಟ್ಟು ೬ ಪೌಂಡ್ ಕೊಟ್ಟು ಕೊಂಡು ಬಂದೆ. ಆ ಒಂದು ಎಕ್ಸ್‌ಟ್ರಾ ಬಲ್ಬ್ ನನ್ನಲ್ಲಿ ೧೦ ವರ್ಷಗಳಿಂದ ಇಂದಿಗೂ ಹಾಗೇ ಇದೆ.

ಹಾಗೇ ರೀಜೆಂಟ್ ಸ್ಟ್ರೀಟ್‌ನಲ್ಲಿ ಹಾಯ್ದೆ. ಪಿಕ್ಕಡಿಲ್ಲಿ ಸರ್ಕಸ್‌ನಲ್ಲಿನ ಅಂಗಡಿಯೊಂದರಲ್ಲಿ "೨೨ ಪೌಂಡ್, ಸಿಂಗಲ್‌ಲೆನ್ಸ್ ರಿಫ್ಲೆಕ್ಸ್, ಪ್ರಾಕ್ಟಿಕ ಕ್ಯಾಮರಾ" ಎಂದಿತ್ತು. ಅಂಗಡಿಯವನನ್ನು ವಿಚಾರಿಸಿದಾಗ ಅದಕ್ಕೆ ಬೇಕಾದ ಲೆನ್ಸ್ ಲಗತ್ತಿಸಬಹುದು. ಎಲೆಕ್ಟ್ರಾನಿಕ್ ಅಥವಾ ಬ್ಯಾಟರಿ ಸೆಲ್ಸ್‌ನ ಫ್ಲ್ಯಾಷ್ ಉಪಯೋಗಿಸಬಹುದು. ಬಿಲ್ಟಿನ್ ಎಕ್ಸ್‌ಪೋಸರ್ ಸಹಾ ಇತ್ತು. ಕೊಂಡು ಕೊಂಡೆ. ನನ್ನ ಅಂತಸ್ತು ದೊಡ್ಡದಾದಂತಾಯಿತು ! ನನ್ನ ಕಾರ್ಯಕ್ಕೆ, ಕಾರ್ಯಸಾಧನೆಗೆ ಸ್ನೇಹಿತರು, ಹಿತೈಷಿಗಳು ಸಿಕ್ಕಿದಂತಾಯಿತು. ನನಗಾದ ಮನಸ್ಸಿನ ನೆಮ್ಮದಿಯಲ್ಲಿ ನಾನು ಕ್ರಮಿಸಿದ ೮ ಮೈಲಿಗಳು ೮ ಫರ್‌ಲಾಂಗ್‌ಗಳಂತೆ ಕಂಡವು. ಹಾಸ್ಟೆಲ್ ತಲುಪಿ ಹಾಸಿಗೆಯಲ್ಲಿ ವಿಶ್ರಮಿಸಿದಾಗ ಗಾಢ ನಿದ್ರೆ ; ಸತತ ೮ ಗಂಟೆಗಳಲ್ಲಿ ಒಂದು ಸೆಕೆಂಡ್ ಕೂಡ ನಿದ್ರಾಭಂಗವಿಲ್ಲ !

ಬೆಳಿಗ್ಗೆ ಉಪಹಾರ. ಸ್ನೇಹಿತರು ಸುತ್ತುವರೆದರು, "ನೀವು ಊರಿಗೆ ಹೊರಡುವುದೆಂದು ಗುಸು ಗುಸು ಮಾತು ಕೇಳಿದ್ದೇವೆ. ನಿಜವೇ ?, ಹಾಗಿ

ದ್ದಲ್ಲಿ ನಮಗೇಕೆ ತಿಳಿಸಲಿಲ್ಲ ? ಹೊರಡುವುದು ಎಂದು ?" ಎಂದೆಲ್ಲಾ ಪ್ರಶ್ನೆಗಳಾದವು. ಇದ್ದುದನ್ನು ತಿಳಿಸಿದೆ. ಸ್ವಲ್ಪ ಹೊತ್ತು ಮೌನ, ನಂತರ ಎಲ್ಲರೂ ಎದ್ದೆವು.

"ಸಾಯಂಕಾಲ ಸಿಗೋಣ" ಎಂದಂದು ಕೆಲಸಕ್ಕೆ ಧಾವಿಸಿದೆವು. ಮಧ್ಯಾಹ್ನದ ಊಟದ ಸಮಯದಲ್ಲಿ ನನ್ನ ಪತ್ನಿಗೆ ಕಾಗದ ಬರೆದೆ. ನಾನು ಬಹುಶಃ ಇನ್ನೊಂದು ತಿಂಗಳಲ್ಲಿ ತಾಯ್ನಾಡಿಗೆ ಮರಳಬಹುದು. ಮಕ್ಕಳೆಲ್ಲಾ ಚೆನ್ನಾಗಿದ್ದಾರೆಂದು ನಂಬಿದ್ದೇನೆ. ಅವರಿಗೆಲ್ಲಾ ನನ್ನ ಆಶೀರ್ವಾದಗಳು ಎಂದೆಲ್ಲಾ ಬರೆದೆ. ಅವರಿಗಾಗಬಹುದಾದ ಆನಂದದಲ್ಲಿ ನಾನೂ ಭಾಗಿಯಾಗಿದ್ದೆ. ವಿಮಾನ ನನ್ನ ನಾಡನ್ನು ಸ್ಪರ್ಶಿಸಿತು. ಬೆಂಗಳೂರಿನ ವಿಮಾನನಿಲ್ದಾಣಕ್ಕೆ ಮಕ್ಕಳು, ನಮ್ಮ ಅಣ್ಣ ಮತ್ತು ಮಾವ ಬಂದಿದ್ದರು. ನಿಲ್ದಾಣದಲ್ಲಿ ಅವರನ್ನೆಲ್ಲಾ ದೂರದಿಂದಲೇ ಹುಡುಕಿದೆ. ನೂರು ! ಸಾವಿರ ಕೈಗಳು ಆಡುತ್ತಿವೆ. ಹೋ ! ಅಲ್ಲಿ ನನ್ನ ಕಣ್ಮಣಿಗಳ ಪುಟ್ಟ ಕೈಗಳು ! ಓಡಿ ಬಂದರು, ನೂಕು ನುಗ್ಗಲಲ್ಲಿ, ಡ್ಯಾಡಿ ! ಡ್ಯಾಡಿ ! ಅಪ್ಪಿದೆ. ಮುತ್ತಿನ ಮಳೆಗರೆದೆ. ಆನಂದ ಬಾಷ್ಪ ಉದುರಿತು. ಬರೆದ ಕಾಗದ ತೋಯ್ದಿತ್ತು !

ನನ್ನ ಸ್ಥಿತಿ ಗಮನಿಸಿದ ಡಾ|| ಬ್ರೌನ್ ಆಶ್ಚರ್ಯಚಕಿತರಾದರು. "ಡಾಕ್ಟರ್, ನಿಮಗೇನಾದರೂ ಸಹಾಯ ಬೇಕೆ ?"

ಹಗಲುಗನಸ್ಸಿನಿಂದ ಎಚ್ಚರವಾಯಿತು. "ಇಲ್ಲ, ಧನ್ಯವಾದಗಳು. ನಾನು ಮರಳಿ ನನ್ನ ದೇಶಕ್ಕೆ ಹೊರಡುವವನಿದ್ದೇನೆ. ಮಕ್ಕಳಿಗೆ ಕಾಗದ ಬರೆದೆ."

"ನೀವು ನಮ್ಮನ್ನು ಆಹ್ವಾನಿಸುವುದಿಲ್ಲವೆ ?"

"ಖಂಡಿತ ಬನ್ನಿ. ನಮ್ಮ ದೇಶದ ದ್ವಾರ ನಿಮಗಾಗಿ ತೆರೆದಿದೆ."

"ನಿಮ್ಮಲ್ಲಿ ಗೋಮಾಂಸ ಸಿಗುವುದಿಲ್ಲವಂತೆ. ಅಲ್ಲದೆ ನನಗೆ ಹಾವು, ಚೇಳುಗಳನ್ನು ಕಂಡರೆ ಭಯಂಕರ ಹೆದರಿಕೆ."

"ನಿಮಗೆ ಯಾರೋ ತಪ್ಪು ಅಭಿಪ್ರಾಯ ಕೊಟ್ಟಿದ್ದಾರೆ, ಗೋಮಾಂಸ ನಿಷೇಧಕ್ಕೆ ಆಗಾಗ್ಗೆ ಆಂದೋಳನ, ಚಳುವಳಿ ನಡೆಯುತ್ತದೆ ; ಪತ್ರಿಕೆಯಲ್ಲಿ

ಇಲ್ಲ ಕೆಲವು ಮಠಗಳಲ್ಲಿ. ದೊಡ್ಡ ವೈಭವಯುತ ಹೋಟೆಲ್‌ಗಳಲ್ಲಿ ಯಥೇಚ್ಛವಾಗಿ ಅದು ಸಿಗುತ್ತದೆ. ಬೇರೆ ಮಾಂಸದ ಬೆಲೆ ಅಧಿಕ. ದಲ್ಲ ರಿಂದ ಎಷ್ಟೋ ಹಳ್ಳಿಯಲ್ಲಿನ ಮಾಂಸಾಹಾರಿಗಳು, ಅನೇಕ ವಾರಗಳಿಗೊಮ್ಮೆ ಒಂದೆರಡು ತಿಂಗಳಿಗೊಮ್ಮೆ ಮಾಂಸಾಹಾರಿಗಳು, ಉಳಿದೆಲ್ಲಾ ದಿನ ಅವರು ಸಸ್ಯಾಹಾರಿಗಳು. ಕಂಡರೂ ಕಾಣದಂತೆ ಗೋಮಾಂಸವನ್ನು ಉಪಯೋಗಿಸು ತ್ತಾರೆ. ಮತ್ತೊಂದು ವಿಷಯ. ಹಾವು, ಚೇಳುಗಳು ಮನೆಗಳಲ್ಲಿಲ್ಲ, ಬೀದಿ ಗಳಲ್ಲಿಲ್ಲ. ಕಾಡಿನಲ್ಲಿ, ಪೊದೆಗಳಲ್ಲಿ ಇದ್ದಿರಬಹುದು. ಅಂಥ ಪರಿಸ್ಥಿತಿ ಎಂದೋ ಒಂದು ದಿನ, ಒಂದು ಕ್ಷಣ. ನೀವು ಹಾವು ಹಲ್ಲಿಗಳು ಓಡಾಡುವ ಕಡೆ ಹೋಗ ಬೇಕಾದ್ದಿಲ್ಲ. ಇಂಡಿಯಾದೇಶ ವಿಶಾಲದೇಶ, ನಿಮ್ಮ ನಗರಗಳಂತೆ ನಮ್ಮಲ್ಲೂ ಸುಂದರನಗರಗಳಿವೆ. ಸ್ವಚ್ಛ ಸ್ಥಳಗಳಿವೆ, ಪ್ರವಾಸಿಕೇಂದ್ರಗಳಿವೆ, ಪ್ರಯಾಣ ಸೌಕರ್ಯ ಎಲ್ಲವೂ ಇದೆ. ಜನ ಸಾಂಪ್ರದಾಯಿಕವಾಗಿ ಅತಿಥಿಸತ್ಕಾರಿಗಳು. ನಿಮ್ಮಷ್ಟು ನಯವಿಲ್ಲದಿರಬಹುದು. ಆದರೆ ಹೃದಯ ತುಂಬಿ ಅತಿಥಿಸತ್ಕಾರ ಮಾಡುತ್ತಾರೆ" ಎಂದೆಲ್ಲಾ ತಿಳಿಸಬೇಕಾಯಿತು.

"ಹಣ್ಣು ಹಂಪಲು ಸಿಗುವುದೇ ?"

"ನೋಡಿ ಡಾ॥ ಬ್ರೌನ್ ನಮ್ಮಲ್ಲಿ ೩ ರೂಪಾಯಿ ಅಂದರೆ ೩ ಷಿಲ್ಲಿಂಗ್ಸ್‌ಗೆ ಒಂದು ಕೆ.ಜಿ. ಬಿಳಿ ದ್ರಾಕ್ಷಿ ಸಿಗುತ್ತದೆ. ಕಪ್ಪು ದ್ರಾಕ್ಷಿ ಮತ್ತೂ ಕಡಿಮೆ. ಸೇಬು ಒಂದು ಕೆ.ಜಿ.ಗೆ ಅಷ್ಟೇ ಬೆಲೆ. ಬಾಳೆಹಣ್ಣಂತೂ ೧ ಷಿಲ್ಲಿಂಗ್‌ಗೆ ಒಂದು ಡಜನ್."

ಡಾ॥ ಬ್ರೌನ್ ಹಿಗ್ಗಿ ಹೋದರು. ನನ್ನ ಗಡ್ಡ ಹಿಡಿದುಕೊಂಡು "ಅಯ್ಯೋ ಈ ನನ್ನ ಸ್ನೇಹಿತ ಬೇಗ ಊರು ತಲುಪಲಿ. ನಾನೊಮ್ಮೆ ಅವರಲ್ಲಿ ಆತಿಥ್ಯ ಸ್ವೀಕರಿಸುವಂತಾಗಲಿ" ಎಂದು ಹರಸಿದರು.

ಸಾಯಂಕಾಲ ಡಾ॥ ಸುಬ್ಬಯ್ಯನವರ ಅತಿಥಿಯಾಗಿ ವೈ.ಎಂ.ಸಿ.ಎ.ಗೆ ಹೊರಟೆ. ಅಲ್ಲಿ ಡಾ॥ ರಾಧಾಕೃಷ್ಣ ಶೆನಾಯ್ ಭೇಟಿಯಾದರು. ಊಟ ಮುಗಿಸಿ ಸುಖಪ್ರಯಾಣ ಕೋರಿ ಮರಳಿದೆ.

ಡಾ॥ ವಾಡಗಿಯವರಿಗೆ ಕಾಗದ ಬರೆದು ಪರಿಸ್ಥಿತಿ ತಿಳಿಸಿದೆ. ಮೂರನೆ ದಿನವೇ ಉತ್ತರ ಬಂತು. "ನೀವು ಯಾಕೆ ಇಲ್ಲಿ ಮತ್ತಷ್ಟು ದಿನ ಒದ್ದಾಡ

ಬೇಕು. ಒಂದು ವರ್ಷದ ಟ್ರೈನಿಂಗ್ ಸಾಕು. ನಾನು ಮುಂದಿನ ಶನಿವಾರ ಸಂಜೆ ನಿಮ್ಮಲ್ಲಿಗೆ ಬರುತ್ತೇನೆ. ನನಗಾಗಿ ಕಾದಿರಿ" ಎಂದಿದ್ದರು. ನಮ್ಮ ಅಣ್ಣ ಶ್ರೀ ಜಿ. ವೆಂಕಟಯ್ಯನವರಿಂದ ಕಾಗದ ಬಂತು. 'ನನಗೆ ಆಸ್ತಮಕ್ಕೆ ಅಲ್ಲಿಯ ಯಾವುದಾದರೂ ಒಳ್ಳೆ ಔಷಧವಿದ್ದರೆ ತೆಗೆದುಕೊಂಡು ಬಾ' ಎಂದು ಬರೆದಿದ್ದರು. ನಮ್ಮ ಅಣ್ಣನವರಿಗೆ ೩೦ ವರ್ಷದಿಂದ ಆಸ್ತಮ ಅಥವಾ ಗೂರಲು ಕೆಮ್ಮು. ಎಷ್ಟೋ ವೈದ್ಯ ಪ್ರವೀಣರಿಂದ ಔಷಧೋಪಚಾರವಾಯಿತು. ಅಲೋಪತಿ, ಆಯುರ್ವೇದ, ಯುನಾನಿ, ಅಜ್ಜಿಯ ಹಿತ್ತಲ ಮದ್ದು ಎಲ್ಲವೂ "ಶ್ರೀರಾಮನಳಿಯನೆ, ಶ್ರೀ ಕೃಷ್ಣನಳಿಯನೆ, ವ್ಯಾಸ ಷಂಪಾದಿರನ್ನರಳಿಯರೆ." ಎಂಬಂತೆ ಮುಗಿದಿತ್ತು. ಆದರೆ ಗೂರಲು ಕೆಮ್ಮು ಮಾತ್ರ ಜೀವ ವಿರುವವರೆಗಿತ್ತು.

ನಮ್ಮ ಆಸ್ಪತ್ರೆಯ ಪಕ್ಕದಲ್ಲೇ ಕ್ವೀನ್ಸ್ ಸರ್ಕಲ್. ಅಲ್ಲೊಂದು ಆಯುರ್ವೇದ ಆಸ್ಪತ್ರೆ. ಅಲ್ಲಿ ವಿಚಾರಿಸಿದೆ. ಸ್ತ್ರೀಯೊಬ್ಬರು ಅಲ್ಲಿನ ಮುಖ್ಯಸ್ಥರು. ನನ್ನನ್ನು ಆದರದಿಂದ ಬರಮಾಡಿಕೊಂಡರು. ವಿಷಯ ತಿಳಿಸಿದೆ. ಅವರು ನಕ್ಕು "ನಿಮ್ಮ ದೇಶ ಆಯುರ್ವೇದದ ಔಷಧಕ್ಕೆ ಪ್ರಸಿದ್ಧ. ಈ ಔಷಧ ಪದ್ಧತಿ ಹುಟ್ಟಿದ್ದೇ ಇಂಡಿಯಾ ದೇಶದಲ್ಲಿ. ಅಲ್ಲಿಲ್ಲದ ಔಷಧ ಇಲ್ಲಿ ಸಿಗಬಹುದೇ ? ಯೋಚಿಸಿ" ಎಂದರು. ನಾನು ಧನ್ಯವಾದಗಳೆಂದು ತಿಳಿಸಿ ಮರಳಿದೆ.

ನಿಜ ನಮ್ಮ ದೇಶದಲ್ಲಿ ಆಯುರ್ವೇದ ಔಷಧ ಪದ್ಧತಿ ಬಹಳ ಹಿಂದಿನಿಂದ ಇದೆ. ಚರಕ, ಸುಶ್ರುತರು ಅದನ್ನು ಬೆಳೆಸಿದ, ಪೋಷಿಸಿದ ಪ್ರಭುಗಳು. "ಹಿಸ್ಟರಿ ಆಫ್ ಮೆಡಿಸಿನ್" ಪುಸ್ತಕದಲ್ಲಿ ನಾನು ಓದಿದ್ದೆ. ಕ್ರಿ.ಶ. ೧೦೦೦ ಅಂತ್ಯಭಾಗದಲ್ಲಿ ಉತ್ತರ ಇಂಡಿಯಾದಲ್ಲೊಬ್ಬ ಸುಪ್ರಸಿದ್ಧ ಶಸ್ತ್ರಚಿಕಿತ್ಸಕನಿದ್ದ. ಆತ ಮೂತ್ರಕೋಶದಲ್ಲಿನ ಕಲ್ಲುಗಳನ್ನು ತೆಗೆಯುವುದರಲ್ಲಿ ಪ್ರಾವೀಣ್ಯ ಪಡೆದಿದ್ದ. ಆದ್ದರಿಂದ ಇಂಗ್ಲೆಂಡಿನಿಂದ ಒಬ್ಬ ತರುಣ ವೈದ್ಯ ತನ್ನಲ್ಲಿದ್ದು ತೊಂದರೆ ಕೊಡುತ್ತಿದ್ದ ಮೂತ್ರಕೋಶದ ಕಲ್ಲು ತೆಗೆಸಲು ಉತ್ತರ ಇಂಡಿಯಾಕ್ಕೆ ಪ್ರಯಾಣ ಬೆಳೆಸಿದ. ಇಂಡಿಯಾದೇಶ ತಲುಪಿ ಹೋಟೆಲ್ ಒಂದರಲ್ಲಿ ಇಳಿದಿದ್ದಾಗ ಆ ಹೋಟೆಲ್‌ನಲ್ಲಿ ಕೆಲವು ಹೆಗ್ಗಣಗಳು ಮತ್ತು ಅವುಗಳ ವಾಸ ಸ್ಥಳವಾದ ಬಿಲಗಳಿದ್ದವು. ಮಾರನೆದಿನ ಬೆಳಿಗ್ಗೆ ಪ್ರಸಿದ್ಧ ಆಯುರ್ವೇದ ಶಸ್ತ್ರಚಿಕಿತ್ಸಕನನ್ನು

ಭೇಟಿಮಾಡಿದ. ಅಲ್ಲಿದ್ದ ಆಪರೇಷನ್ ಕೊಠಡಿಯಲ್ಲಿ ಕಂಡದ್ದೇನು ? ನೂರಾರು ಹೆಗ್ಗಣಗಳ ಬಿಲಗಳು ! ಅಲ್ಲಲ್ಲಿ ರಕ್ತಮಯವಾಗಿ ಮಾಸಿದ ಬಟ್ಟೆಗಳು ! ಇದ ನೆಲ್ಲಾ ಕಂಡು ದಿಗ್‌ಭ್ರಮೆಯಿಂದ ಇಂಗ್ಲಿಷ್ ತರುಣವೈದ್ಯ ಸ್ವದೇಶಕ್ಕೆ ಮರಳಿದ. ಆ ಶಸ್ತ್ರಚಿಕಿತ್ಸಕ ಪ್ರವೀಣನೇ ಸುಶ್ರುತ.

ಚರಕ ಸಂಹಿತದಲ್ಲಿ ಅನೇಕ ರೋಗರುಜಿನಗಳ ಹೇಳಿಕೆ ಇದೆ. ಸಿಹಿಮೂತ್ರ ರೋಗ, ಸ್ಕರ್ವಿ ಎಂಬ 'ಸಿ' ಅನ್ನಾಂಗ ಕಮ್ಮಿಯಾಗಿ ಬರುವ ರೋಗ, ಹೃದಯ ರೋಗ ಮುಂತಾದ ಎಲ್ಲಾ ರೋಗಗಳ ಉಲ್ಲೇಖವಿದೆ. ಸುಶ್ರುತ ಸಂಹಿತದಲ್ಲಿ ಶಸ್ತ್ರಚಿಕಿತ್ಸೆಗೆ ಪ್ರಾಧಾನ್ಯವಿದೆ. ಶವಗಳನ್ನು ಕತ್ತರಿಸಿ ಕಲಿತ ಅಂಗರಚನಾ ಶಾಸ್ತ್ರಾಭ್ಯಾಸವೂ ಸೇರಿ ೧೦೧ ಶಸ್ತ್ರಚಿಕಿತ್ಸಾ ಉಪಕರಣಗಳು, ಆರು ವಿಧವಾಗಿ ವಿಂಗಡಿಸಿರುವ ಶಸ್ತ್ರಚಿಕಿತ್ಸಾ ಕ್ರಮಗಳ ವಿವರಣೆ ಇದೆ. ಆಯುರ್ವೇದ ವೈದ್ಯ ವಿದ್ಯೆಯ ಜನಕ ಆತ್ರೇಯ. ಆತ್ರೇಯ ಸಂಹಿತೆಯಲ್ಲಿ ರೋಗಗಳನ್ನು ಗುಣಪಡಿಸ ಬಹುದಾದ ಗುಣಪಡಿಸಲಾಗದ ರೋಗಗಳೆಂದು ಎರಡು ವಿಧವಾಗಿ ವಿಭಜಿಸಲಾಗಿದೆ. ಸುಶ್ರುತ ಸಂಹಿತದಲ್ಲಿ ಅದ್ಭುತವಾದದ್ದು ಪ್ಲಾಸ್ಟಿಕ್ ಸರ್ಜರಿ ; ವಿಕಾರವಾಗಿ ಹರಿದ, ಕತ್ತರಿಸಿದ ಮೂಗಿಗೆ ಪ್ರಖ್ಯಾತ ಶಸ್ತ್ರಚಿಕಿತ್ಸಾ ವಿವರಣೆ ಉಂಟು. ಕ್ಯಾನಬಿಸ್ ಇಂಡಿಕ, ಹೈಯೋಸ, ಯಮಸ್ ನೈಜರ್ ಎಂಬ ಇಂದಿನ ಅಲೋಪತಿಯಲ್ಲಿ ಉಪಯೋಗಿಸುವ ನೋವನ್ನು ತಪ್ಪಿಸುವ ಔಷಧಗಳು ಅಂದಿ ನಿಂದಲೂ ಉಪಯೋಗದಲ್ಲಿವೆ. ಚರಕ ಸಂಹಿತದಲ್ಲಿ ದೇಹದಲ್ಲಿನ ೩೦೬ ಮೂಳೆ ಗಳ, ಸುಶ್ರುತ ಸಂಹಿತದಲ್ಲಿ ೭೦೦ ರಕ್ತನಾಳಗಳ, ೯೦೦ ಸ್ನಾಯುಗಳ ಮತ್ತು ೫೦೦ ಮಾಂಸಖಂಡಗಳ ವಿವರಣೆ ಇದೆ. ಇಷ್ಟೆಲ್ಲಾ ವೈದ್ಯಕೀಯ ರತ್ನರಾಶಿ ಇದ್ದರೂ ಅವು ಪ್ರಕಾಶಿಸಲಿಲ್ಲ ; ಬೆಳಗಲಿಲ್ಲ !

ಆಯುರ್ವೇದ ಜ್ಞಾನ ಬೆಳೆಯಬೇಕಾದರೆ ಈಗಿನ ಕಾಲೇಜುಗಳಲ್ಲಿ ಶುದ್ಧ ಆಯುರ್ವೇದ ಕಲಿಯುವುದರ ಜೊತೆಗೆ ಅವರಲ್ಲಿನ ಔಷಧಿಗಳನ್ನು 'ಬಯೊ ಅಸ್ಸೆ'ಗೆ ಒಳಪಡಿಸಬೇಕು. ಅಂದರೆ ಔಷಧದ ಪ್ರಮಾಣ, ಶುದ್ಧತೆ, ಅನುಕೂಲ, ಅನಾನುಕೂಲಗಳನ್ನು ಪ್ರಾಣಿಗಳ ಮೇಲಿನ ಪ್ರಯೋಗದಿಂದ ನಿಷ್ಕರ್ಷಿಸಬೇಕು. ನಂತರವೇ ಮಾರುಕಟ್ಟೆಗೆ ಮಾನವನ ಉಪಯೋಗಕ್ಕಾಗಿ ರವಾನಿಸಬೇಕು ? (ಮಿಶ್ರಣದಲ್ಲಿರುವ ಅಂಶವನ್ನು ಮೊದಲೇ ಪತ್ತೆ ಹಚ್ಚಿರಬೇಕು) ಈ ಗುರುತರ ವಾದ ಕೆಲಸಕ್ಕೆ ಸಂಶೋಧಕರು ಅಗತ್ಯ. ಸಂಶೋಧಕರು ಪ್ರಾಣಿಯ ಅಂಗ

ರಚನೆ, ಅಂಗಾಂಗಗಳು ಕೆಲಸಮಾಡುವ ಶರೀರ ವಿಜ್ಞಾನದಲ್ಲಿ ಪರಿಣಿತರಿದ್ದು, ಜೀವರಾಸಾಯನಿಕ ಜ್ಞಾನವುಳ್ಳವರಾಗಬೇಕು. ಅಂದು ಆಯುರ್ವೇದ ಪದ್ಧತಿಗೆ ಬೆಲೆಯುಂಟು. ಆತ್ಮವಿಶ್ವಾಸಕ್ಕೆ ಅರ್ಹತೆಯುಂಟು. ಇದೂ ಅಲ್ಲದೆ ಜೊತೆಗೆ ಶವಪರೀಕ್ಷೆ, ರೋಗದ ಜೀವಾಣು ಪರೀಕ್ಷೆಯೂ ಅಗತ್ಯ. ಇಲ್ಲದೆ ಹೋದರೆ ಆಭಾಸವಾದೀತು ! ಇಂದಿನ ಅಲೋಪತಿ ವೈದ್ಯಜ್ಞಾನ ಹಿಮಾಲಯದಷ್ಟೆತ್ತರಕ್ಕೆ, ಅಗಲಕ್ಕೆ ಬೆಳೆದಿದೆ. ಬದಲೀ ಹೃದಯ ಜೋಡಣೆ, ಮೂತ್ರಪಿಂಡ ಜೋಡಣೆ ಇಂದಿನ ಅಲೋಪತಿಯು ಬೆಳೆದುಬಂದ ಶಿಖರ. ಇದು ಬಿಟ್ಟು ಆಯುರ್ವೇದ ಜ್ಞಾನಕ್ಕೆ ಜನ್ಮಕೊಟ್ಟ ದೇಶವೇ ನಮ್ಮದು, ಹಿಂದೂ ದೇಶವೇ ಸಂಸ್ಕೃತಿಯ ತೊಟ್ಟಿಲು, ರಾವಣನಲ್ಲಿದ್ದ ಪುಷ್ಪಕ ವಿಮಾನವೇ ಇಂದಿನ ರಾಕೆಟ್—ಎಂದುಕೊಂಡು ನೆಮ್ಮದಿಯಿಂದಿದ್ದರೆ ಬಾಳು ಹಸನಾಗುವುದಿಲ್ಲ. ವಿಜ್ಞಾನ ಬೆಳೆಯುವುದಿಲ್ಲ, ದೇಶ ಪ್ರಗತಿ ಸಾಧಿಸಲಾರದು.

ಡಾ॥ ವಾಡಗಿಯವರು ಲಂಡನ್ನಿಗೆ ಬಂದರು. ಅವರ ಆಗಮನವನ್ನು ಎದುರು ನೋಡುತ್ತಿದ್ದೆ. ಇದ್ದಕ್ಕಿದ್ದಂತೆ ಮನಸ್ಸು ಹಗುರವಾಗಿತ್ತು. ನಾನು ಹೊರಡುವ ವಿಷಯ ತಿಳಿದು "ನಾನು ನಿಮ್ಮಲ್ಲಿದ್ದು ಮರಳುತ್ತೇನೆ. ಒಂದು ೫೦ ಪೌಂಡು ಬೇಕಾದರೆ ಕೊಡುತ್ತೇನೆ. ಅದನ್ನು ಊರಿಗೆ ಮರಳಿದ ಮೇಲೆ ರೂಪಾಯಿ ಮೌಲ್ಯದಲ್ಲಿ ಕೊಟ್ಟುಬಿಡಿ. ಹಾಗೇ ನನ್ನ ಸಹೋದರ ಶ್ರೀ ಉಮೇಶ ವಾಡಗಿ, ಮುನ್ನವ, ಪೂನ–೨, ಅವರಿಗೆ ಒಂದು ಟೇಪ್‌ರೆಕಾರ್ಡರ್ ತೆಗೆದುಕೊಂಡಿದ್ದೇನೆ. ಅವನು ಬೊಂಬಾಯಿಗೆ ಬರುತ್ತಾನೆ. ದಯವಿಟ್ಟು ಕೊಟ್ಟುಬಿಡಿ."

"ಅದೆಲ್ಲಾ ಹೇಗೆ ಕಸ್ಟಂಸ್‌ನಲ್ಲಿ ಬಿಡುತ್ತಾರೆ. ನನ್ನದೂ ಸ್ವಲ್ಪ ಸಾಮಾನಿದೆ"

"ಹಾಗೇನಿಲ್ರಿ. ೧ ವರ್ಷ ಇಂಗ್ಲೆಂಡ್‌ನಲ್ಲಿದ್ದವರಿಗೆ ೧೦೦೦ ರೂಪಾಯಿ ನಷ್ಟು ಸಾಮಾನು ಒಯ್ಯಲಿಕ್ಕೆ ಬಿಡುತ್ತಾರೆ. ೧ ಕ್ಯಾಮರ, ೧ ಟೇಪ್ ರೆಕಾರ್ಡರ್, ಒಂದು ಕೈಗಡಿಯಾರ. ಹೀಗೆ ಒಂದೊಂದು ಸಾಮಾನು ಮಾತ್ರ ಬಿಡುತ್ತಾರೆ. ಒಂದೇ ತರಹದ್ದು ಎರಡಿದ್ದರೆ ತಾಪತ್ರಯ. ನೀವೇನೂ ಯೋಚಿಸ ಬೇಡ್ರಿ. ಹಾಗೂ ತೊಂದರೆಯಾದರೆ ನನ್ನ ತಮ್ಮ ಉಮೇಶ್ ನೋಡಿಕೊಳ್ಳುತ್ತಾನೆ. ಆಯ್ತು, ನಿಮ್ಮಲ್ಲೇನೇನಿದೆ ?"

"ಒಂದು ಕ್ಯಾಮರ, ಒಂದು ಸಣ್ಣ ಪ್ರೊಜೆಕ್ಟರ್ ಇವೆ. ಒಂದು ಪೋರ್ಟ್‌ಬಲ್ ಟೈಪ್‌ರೈಟರ್ ಬೇಕು."

"ನಡೀರ್ರಿ ಮತ್ತೆ. 'ಟೆಪ್ಪ' ಅಂತ ಜರ್ಮನಿ ಟೈಪ್‌ರೈಟರ್ ರಿಯಾಯಿತಿಗೆ ಮಾರಾಟವಾಗ್ತಿವೆ. ಸುಮಾರು ೧೮-೨೦ ಪೌಂಡ್ ಇರ್ಬೇಕು" ಎಂದು ಹೊರಟೇಬಿಟ್ಟರು. ನಾನು ಹಿಂಬಾಲಿಸಿದೆ. ಬಾಂಡ್‌ಸ್ಟ್ರೀಟ್‌ನಲ್ಲಿ ಒಂದು 'ಟೆಪ್ಪ' ಪೋರ್ಟ್‌ಬಲ್ ಟೈಪ್‌ರೈಟರ್ ಕೊಂಡೆವು, ಅದಕ್ಕೆ ಬೆಲೆ ೧೮ ಪೌಂಡ್‌ಗಳು.

ಹಾಸ್ಟಲ್‌ಗೆ ಬಂದಾಗ ಶ್ರೀ ಕೃಷ್ಣಮೂರ್ತಿ, ಇಂಜಿನಿಯರ್, ಅವರು ಬೆಂಗಳೂರಿನಿಂದ ಇಂಗ್ಲೆಂಡಿಗೆ ಕೆಲಸಕ್ಕಾಗಿ ಆಗಮಿಸಿದ್ದು, ಯಾವುದೋ ಪ್ರೈವೇಟ್ ಫ್ಯಾಕ್ಟರಿಯಲ್ಲಿ ಕೆಲಸಕ್ಕಿದ್ದರಂತೆ. ಸರಿ ಬೀಳಲಿಲ್ಲ ಎಂದು ಅಲ್ಲಿನ ವೃತ್ತಿ ತ್ಯಜಿಸಿ ಲಂಡನ್ನಿಗೆ ಬಂದಿದ್ದರು. ಆಶ್ಚರ್ಯವೆಂದರೆ, ಅವರ ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಮಾವನವರ ಮನೆಗೆ ಅಂದರೆ ಬೊಂಬಾಯಿಗೆ ಕಳುಹಿಸಿ ಅವರಿಗೆ ತಿಳಿಯದಂತೆ ಸಮುದ್ರ ದಾಟಿ ಬಂದಿದ್ದರು ! ಬಂದ ನಂತರ ಸಧ್ಯ ಒಂದು ಕಾಗದ ಬರೆದು ತಿಳಿಸಿದ್ದರಂತೆ. ಕನ್ನಡಿಗರು ಮತ್ತೊಬ್ಬರು ಬಂದದ್ದು ನಮಗೆ ಅತ್ಯಾನಂದ. ಆದರೆ ಅವರು ಬಂದ ರೀತಿ ದುಃಖ ತಂದಿತ್ತು. "ನೀವು ಹೀಗೆ ಮಾಡಬಾರದಿತ್ತು" ಎಂದಾಗ "ಇಲ್ಲ. ಇದು ಮೊದಲನೇ ಸಾರಿಯಲ್ಲ, ನಾನು ಚಿಕಾಗೋನಲ್ಲಿ ೧೯೬೨ರಲ್ಲಿ ೨ ವರ್ಷವಿದ್ದೆ. ಆವಾಗಲೂ ನಾನು ಯಾರಿಗೂ ತಿಳಿಸಿರಲಿಲ್ಲ. ಕಾರಣ ನನ್ನನ್ನು ಹೊರದೇಶಕ್ಕೆ ಹೋಗಲು ಬಿಡರು. ನೀವು ಇಂಡಿಯಾಕ್ಕೆ, ಅದರಲ್ಲೂ ಮೈಸೂರಿಗೆ ಮರಳುತ್ತೀರಿ. ನನ್ನ ದೊಂದು ಬೇಡಿಕೆ. ನನ್ನ ಮಕ್ಕಳಿಗೆ ಎರಡು ಬೊಂಬೆ ಕೊಡುತ್ತೇನೆ. ದಯವಿಟ್ಟು....." ಬಿಕ್ಕಿ ಬಿಕ್ಕಿ ಅತ್ತರು. ಸಮಾಧಾನ ಪಡಿಸಿದೆವು. ಆಗಲಿ ಎಂದು ಒಪ್ಪಿದೆ.

"ಬೊಂಬಾಯಿಯಲ್ಲಿ ನಮ್ಮ ಮಾವ ಇದ್ದಾರೆ. ನೀವು ಅಲ್ಲಿ ಒಂದು ದಿನ ತಂಗಿದ್ದು ಅವರ ಆತಿಥ್ಯ ಸ್ವೀಕರಿಸಿ".

"ಹಾಗೇ ಆಗಲಿ. ನೀವು ಯೋಚಿಸಬೇಡಿ" ಎಂದೆ.

ಹಾಸ್ಟಲ್‌ನಲ್ಲಿ ನಾನು ಹೊರಡುವ ವಿಷಯ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿತ್ತು. ಪಶ್ಚಿಮ ಬಂಗಾಳದ ವಿದ್ಯಾರ್ಥಿನಿಯರಿಬ್ಬರು, ಮಧ್ಯ ಪ್ರದೇಶದ ವರೊಬ್ಬರು ಏಪ್ರಿಲ್‌ನಲ್ಲಿ ಸ್ವದೇಶಕ್ಕೆ ಮರಳುವವರಿದ್ದರು. ವಾರ್ಡನ್ ಶ್ರೀ ಸೇನ್‌ರವರು ಅವರಿಗಾಗಿ ಬೀಳ್ಕೊಡುವ ಸಮಾರಂಭ ಏರ್ಪಡಿಸಿದ್ದರು. ನಾನು ಹೊರಡುವ ವಿಷಯ ತಿಳಿದು ಸಮಾರಂಭ ಎರಡು ದಿನ ಮುಂದಿಟ್ಟು ನನ್ನನ್ನೂ ಆಹ್ವಾನಿಸಿದ್ದರು. ನನ್ನ ಪ್ರಯಾಣ ಇನ್ನೂ ಖಚಿತವಾಗಿಲ್ಲ. ಆದರೂ ವಾತವರಣ ಅದನ್ನು ಖಚಿತಪಡಿಸಿತ್ತು. ನಾನೂ ಒಪ್ಪಿದೆ. ರಾತ್ರಿ ಊಟ ವಾದ ಮೇಲೆ ಹಾಲ್‌ನಲ್ಲಿ ಎಲ್ಲರೂ ಸೇರಿದರು. ಶ್ರೀಮತಿ ಸೇನ್ ಅವರೂ ಹಾಜರಾದರು. ಶ್ರೀ ಸೇನ್ ಎದ್ದು "ಇಲ್ಲಿ ನಾವು ಸೇರಿರುವುದು ತಮಗೆ ಗೊತ್ತಿದೆ. ನಮ್ಮ ಹಾಸ್ಟಲ್‌ನ ಪದ್ಧತಿಯಂತೆ ತಾಯ್ನಾಡಿಗೆ ಮರಳುವವ ರನ್ನು ಅತ್ಯಾನಂದದಿಂದ ಬೀಳ್ಕೊಡಲು ಸೇರಿದ್ದೇವೆ. ವಿಶಾಲ ಇಂಡಿಯಾದ ನಾನಾ ಭಾಗಗಳಿಂದ ಜ್ಞಾನಾರ್ಜನೆಗೆ ಬಂದ ನನ್ನವರನ್ನು ಮರಳಿ ನನ್ನ ದೇಶಕ್ಕೆ ಕಳುಹಿಸಿಕೊಡುವ ಭಾಗ್ಯ ಆಗಾಗ್ಗೆ ನನ್ನದು. ಈ ಮೇಧಾವಿಗಳಿಂದ ದೇಶಕ್ಕೆ, ಜನತೆಗೆ ಸೇವಾಗತ್ಯವಿದೆ. ಅದಕ್ಕಾಗಿ ಈ ಸಮಾರಂಭ ; ಆನಂದ ತರುವ ಸಮಾರಂಭ. ಹಿರಿಯನಾಗಿ ನಾನು ಅವರಿಗೆ ದೇವರು ಆರೋಗ್ಯ, ಉನ್ನತ ಪದವಿ ಕೊಟ್ಟು ದೇಶ ಸೇವೆಗೆ ನೆರವಾಗಲೆಂದು ಹಾರೈಸಿ ಸುಖಪ್ರಯಾಣ ಕೋರುತ್ತೇನೆ" ಎಂದು ಹೇಳಿದರು. ಚಪ್ಪಾಳೆಗಳು ಮೊಳಗಿದವು. ಉತ್ತರ ವಾಗಿ ನಾಲ್ಕು ಮಾತನ್ನಾಡಲು ನನ್ನ ಸರದಿ.

"ಪ್ರಿಯ ವಾರ್ಡನ್‌ರವರೇ ಮತ್ತು ಸ್ನೇಹಿತರೆ, ನಾನಾ ಪ್ರಾಂತ್ಯಗಳಿಂದ ಬಂದವರು ನಾವು. ನಾನಾ ಭಾಷೆ, ನಾನಾ ರೀತಿನೀತಿ ಉಳ್ಳವರು. ಆದರೂ ನಾವೆಲ್ಲಾ ಒಂದೇ ನೆರಳಲ್ಲಿ, ಒಂದು ಆಶ್ರಯದಲ್ಲಿ ಸ್ನೇಹಪೂರ್ವಕವಾಗಿ ಕಳೆದ ದಿನಗಳು ಮರೆಯಲಾಗದ ಜ್ಞಾನಾರ್ಜನೆ. ಇದಕ್ಕಿಂತ ಬೇರೆ ಜ್ಞಾನಾರ್ಜನೆ ಇಲ್ಲ. ಇದಕ್ಕೆಲ್ಲಾ ಕಾರಣಕರ್ತರು ನಮ್ಮ ವಾರ್ಡನ್ ಶ್ರೀ ಸೇನ್‌ರವರು. ನನಗೆ ಗಾದೆಯೊಂದು ಜ್ಞಾಪಕಕ್ಕೆ ಬರುತ್ತದೆ. ದೋಣಿ, ಏಣಿ, ಉಪಾ ಧ್ಯಾಯ ಇವರ ಸೇವೆ ಅಮೋಘವಾದದ್ದು. ದೋಣಿ ಒಂದು ದಡದಿಂದ ಮತ್ತೊಂದು ದಡಕ್ಕೆ ಮಾನವರನ್ನು ಸಾಗಿಸುತ್ತದೆ. ಏಣಿ ಕೆಳಗಿಂದ ಮೇಲಕ್ಕೆ ಸಾಗಲು ಅನುಕೂಲ. ಉಪಾಧ್ಯಾಯ ವಿದ್ಯಾರ್ಥಿಗಳ ಕೆಳಗಿನ ತರಗತಿಯಿಂದ

ಮೇಲ್ತರಗತಿಗೆ ಅರ್ಹತೆಗೆ ಕಾರಣಕರ್ತರು. ಆದರೆ ದೋಣಿ, ಏಣಿ ಮತ್ತು ಉಪಾಧ್ಯಾಯ ಮಾತ್ರ ಇದ್ದಲ್ಲೇ ಇರುತ್ತಾರೆ. ಈ ಮೂವರು ನಿಸ್ವಾರ್ಥಿಗಳ ಗುಂಪಿಗೆ ಹಾಸ್ಟಲ್ ವಾರ್ಡನ್ ಕೂಡ ಸೇರಿದ್ದಾರೆ. ಹೇಗೆಂದರೆ ಅನೇಕ ವಿದ್ಯಾರ್ಥಿಗಳು ಜ್ಞಾನಾರ್ಜನೆ ಪಡೆದು ದೊಡ್ಡ ದೊಡ್ಡ ಪದವಿಗೇರುತ್ತಾರೆ. ಆದರೆ ವಾರ್ಡನ್ ಹಾಸ್ಟಲ್‌ನಲ್ಲೇ ಉಳಿಯುತ್ತಾರೆ. ಇವರ ಸೇವೆ ನಿಸ್ವಾರ್ಥ ಸೇವೆ. ಅದಕ್ಕಾಗಿ ನಿಮ್ಮೆಲ್ಲರ ಪರವಾಗಿ ಅವರಿಗೆ ನನ್ನ ಕೃತಜ್ಞತೆಗಳು." ಚಪ್ಪಾಳೆ ಸುರಿಮಳೆ! ಹಸ್ತಲಾಘವವಾಯಿತು. ಸುಖ ಪ್ರಯಾಣ ಹಾರೈಕೆಯಾಯಿತು. ಪುಟ್ಟ ನೆನಪಿನ ಕಾಣಿಕೆ ಸ್ವೀಕರಿಸಿದ್ದಾಯಿತು.

ಭಾನುವಾರ ಮಧ್ಯಾಹ್ನ ಔತಣ. ಮುಗಿಸಿಬಂದಾಗ ಆಶ್ಚರ್ಯಕಾದಿತ್ತು. ಶ್ರೀಮತಿ ಕೇಶವ್ ಮತ್ತು ಡಾ|| ಕೇಶವ್ ಬಂದಿದ್ದರು. ಸಂತೋಷವಾಯಿತು. "ಏನಿದು ಇದ್ದಕ್ಕಿದ್ದ ಹಾಗೆ ಬಂದಿರಿ." "ಹೀಗೇ ಲಂಡನ್ನಿಗೆ ಬಂದೆವು. ಆಗಾಗ್ಗೆ ಸರ್ರೆಯಲ್ಲಿ ಬೇಜಾರಾದಾಗ ಇಲ್ಲಿಗೆ ಡ್ರೈವ್ ಮಾಡಿಕೊಂಡು ಬರುತ್ತೇವೆ".

"ಊಟ ಮಾಡಿದಿರಾ"

"ಎಲ್ಲಾ ಆಗಿದೆ. ನಿಮ್ಮದು ನೋಡಿಕೊಳ್ಳಿ ಸಾರ್. ನಮಗೇನಂತೆ. ಊಟ ಪಾಠ ಅಂತ ಯಾರೂ ಯೋಚಿಸಬೇಕಾದ್ದಿಲ್ಲ. ಬನ್ನಿ ಸುತ್ತಾಡಿ ಬರೋಣ" ಎಂದು ಕರೆದೊಯ್ದರು. ಡಾ|| ಕೇಶವ್‌ಗೆ ನಾನು ಊರಿಗೆ ಮರಳುವ ವಿಷಯ ತಿಳಿಸಿದೆ. "ನೀವೇ ಅದೃಷ್ಟವಂತರು. ನಾವಿಲ್ಲಿಗೆ ಬಂದು ೩ ವರ್ಷಗಳಾಯಿತು. ಒಮ್ಮೆಯೂ ಹೋಗಿಬರಲಾಗಲಿಲ್ಲ. ನೀವು ಒಂದು ಕೆಲಸ ಮಾಡಿ, ಹೊರಡುವ ಎರಡು ದಿನಕ್ಕೆ ಮೊದಲೇ ನಮ್ಮಲ್ಲಿಗೆ ಬನ್ನಿ. ಅಲ್ಲಿಂದ ಹೀತ್‌ರೊ ವಿಮಾನ ನಿಲ್ದಾಣಕ್ಕೆ ಕೇವಲ ೧೬ ಕಿ. ಮೀಟರ್ಸ್ (೧೦ ಮೈಲಿ) ನನ್ನ ಕಾರಿನಲ್ಲಿ ಬಿಡುತ್ತೇನೆ".

ನನಗೆ ಎಷ್ಟೋ ಹೊರೆ ಕಡಿಮೆಯಾದಂತಾಯಿತು.

"ನಿಮಗೆ ಅನಾನುಕೂಲವಾಗದಿದ್ದರೆ ಬರುತ್ತೇನೆ" ಎಂದದ್ದಕ್ಕೆ ಶ್ರೀಮತಿ ಕೇಶವ್, "ಇಲ್ಲಪ್ಪ ಅನಾನುಕೂಲ ಎಂಥಾದ್ದು! ನೀವು ನಮ್ಮಲ್ಲಿಂದಲೇ

ತಾಯ್ನಾಡಿಗೆ ಮರಳಬೇಕು" ಎಂದರು. "ಧನ್ಯವಾದಗಳು, ಆಗಲಿ" ಎಂದೆ.

ಹತ್ತಿರದಲ್ಲೇ ಇದ್ದ ಬ್ರಿಟಿಷ್ ಮ್ಯೂಸಿಯಂ ನೋಡಲು ಹೊರಟೆವು. ಅದೊಂದು ಬೃಹದಾಕಾರದ ಅದ್ವಿತೀಯ ಅಧ್ಯಯನ ಸಂಸ್ಥೆ. ಮಾಂಟೆಗು ಹೌಸ್ ಎಂದು ಹೆಸರು ಪಡೆದಿತ್ತು ೧೭೫೩ರಲ್ಲಿ. ಬುದ್ಧಿಜೀವಿಗಳ, ಕುತೂಹಲ ಕಾರಿಗಳ ಮತ್ತು ಸಾಮಾನ್ಯ ಪ್ರಜೆಗಳ, ಎಲ್ಲರ ಉಪಯೋಗಕ್ಕೆ, ಸೇವೆಗೆ, ಜ್ಞಾನಕ್ಕೆ ಅದು ನಾಂದಿ. ಈಜಿಪ್ಟ್ ದೇಶದ ಪುರಾತನ ಪರಂಪರೆಯ ಸಂಸ್ಕೃತಿಯ ಹೊನಲು ಅತಿ ಮುಖ್ಯವಾಗಿ ಗುಲಾಬಿದಳ ಸಮೂಹ ವಿನ್ಯಾಸ ರಚನಾತ್ಮಕ ಕಲ್ಲು ! ಶಿಲಾ ವಿಗ್ರಹಗಳ ಸಂಗ್ರಹ ಸಮೂಹಗಳ ನದಿ ಅಲ್ಲಿ ಧುಮುಕಿ ಸಾಗರ ಸೇರಿದೆ. ಗ್ರೀಕ್ ಮತ್ತು ಪುರಾತನ ರೋಮನ್ನರ ಕಲಾ ಸಂಪತ್ತು ಅಲ್ಲಿ ನೆಲೆ ಕಂಡಿದೆ. ಪ್ರಪಂಚದ ಎಲ್ಲಾ ದೇಶಗಳ ಆದಿಮಾನವನಿಂದ ಆಧುನಿಕ ಮಾನವನ ತನಕ ಕಂಡುಬರುವ ಕಲೆ, ಕೆತ್ತನೆ, ಸಂಸ್ಕೃತಿ, ಉಡುಪು, ಲಿಪಿ, ನಾಣ್ಯ ಪುಸ್ತಕ ಭಂಡಾರ ಸರ್ವವೂ ಅಲ್ಲಿ ಜ್ಞಾನಸಾಗರದಂತೆ ! ಜ್ಞಾನಾರ್ಥಿಗಳಿಗಾಗಿ ಆಧುನಿಕ ವಾಚನಾಲಯವೂ ಅಲ್ಲಿದೆ. ಭಾರತ ದೇಶದ ಚಾರಿತ್ರ್ಯ ಪೂರ್ಣ ಪುರಾತನ ನವ್ಯ ಕಲೆ, ಸಂಸ್ಕೃತಿಯು ಬೆಳೆದು ಬಂದ ರೀತಿ, ಬಗೆಬಗೆಯ ವಸ್ತ್ರ, ಒಡವೆ. ನಾನಾ ರಾಗ ನರ್ತನ ಶೈಲಿ, ಮಾಧುರ್ಯ ವಿನ್ಯಾಸ ತಣಿವಷ್ಟು ! ತಣಿದು ಉಳಿವಷ್ಟು !

ರಿಚ್‌ಮಂಡ್‌ನ 'ಓಲ್ಡ್ ಡೀರ್ ಪಾರ್ಕ್' ಹತ್ತಿರದಲ್ಲಿನ ಕೀವ್‌ನಲ್ಲಿ ರಾಯಲ್ ಬೊಟಾನಿಕಲ್ ಗಾರ್ಡನ್ಸ್ ಇದೆ. ಪ್ರಪಂಚಕ್ಕೇ ಹೆಸರುವಾಸಿ ಯಾದದ್ದು. ವಿಜ್ಞಾನ ಸಂಶೋಧನೆಗೆ ಅದು ಮುಖ್ಯವಾಗಿ ಮೀಸಲು. ಐದು ಲಕ್ಷ ಒಣಗಿದ ಬಗೆಬಗೆಯ ಎಲೆಗಳ ವಿನ್ಯಾಸವಿದೆ ! ಸುಮಾರು ೨೫೦೦೦ ನಾನಾ ಜಾತಿಯ ಗಿಡಗಳು ಅಲ್ಲಿವೆ. ಗಾರ್ಡನ್ನಿನ ಪಶ್ಚಿಮಕ್ಕೆ ೧೬೩ ಅಡಿ ಎತ್ತರದ ಚೀನಾ ದೇಶದ ಪಗೋಡವಿದೆ. ಕಾರ್ಡಿನಲ್ ವೂಲ್ಸಿ ಕಟ್ಟಿದ ಅದ್ಭುತ ಹ್ಯಾಮಿಲ್ಟನ್ ಕೋರ್ಟ್ ಅರಮನೆಯಿದೆ. ಅದು ಹೊರನೋಟಕ್ಕೆ ಬೆಂಗಳೂರಿನ ಅರಮನೆ ಯನ್ನು ಹೋಲುತ್ತದೆ. ಅಲ್ಲಿನ 'ಕಿಂಗ್ಸ್ ಮೆಟ್ಟಲಿನಲ್ಲಿ'ನ ಮೇಲ್ಛಾವಣಿಯಲ್ಲಿ ಶೋಭಾಯಮಾನವಾದ ಚಿತ್ರಕಲೆ ಇದೆ.

ಕಾರು ಮುಂದೆ ಕಾಲೇಜ್ ಆಫ್ ಲಂಡನ್ ಯೂನಿವರ್ಸಿಟಿ ಕಡೆ ತಿರುಗಿತ್ತು. ಅಲ್ಲಿದ್ದ ವಿಶಾಲ ಹಸಿರ ಹಾಸಿಗೆಯ ಮೇಲೆ ವಿಶ್ರಾಂತಿ; ಆ ಮಾತು

ಈ ಮಾತು ; ಸಂಜೆಯಾಯಿತು. ಬೀಳ್ಕೊಂಡೆವು.

ಡಾ|| ಮೊಹಿಂದರ್ ಸಿಂಗ್ ನನಗೆ ಎಡೆಬಿಡದೆ ನೆರವಾಗುತ್ತಿದ್ದರು. ಹೈಕಮಿಷನ್‌ನಿಂದ ಟೆಲಿಫೋನ್ ಬಂದಿತ್ತು. ನಾನು ಅಲ್ಲಿಗೆ ಆ ದಿನ ಹೋಗುವವನಿದ್ದೆ. ಡಾ|| ಸಿಂಗ್ ಕೂಡ ನನ್ನ ಜೊತೆ ಬಂದರು. ಶ್ರೀ ಓಬ ರಾಯ್ ಅವರು ನನಗೆ ಟಿಕೆಟ್ ರೆಡಿ ಮಾಡಿದ್ದರು. ಹಾಗೆ ಡೆಲ್ಲಿಯಲ್ಲಿನ ವಿದ್ಯಾ ಇಲಾಖೆಗೆ ಮತ್ತು ಅಂದಿನ ಮೈಸೂರು ದೇಶದ ಚೀಫ್ ಸೆಕ್ರೆಟರಿಯವರಿಗೆ ಕಾಗದಗಳು ತಯಾರಾಗಿ ನನಗೊಂದೊಂದು ನಕಲು ಕೊಟ್ಟರು.

“ನೀವು ಏಪ್ರಿಲ್‌ನ ಯಾವ ದಿನವಾದರೂ ತಾಯ್ನಾಡಿಗೆ ಪ್ರಯಾಣ ಮಾಡಬಹುದು. ಏನಾದರೂ ಇದ್ದರೆ ನನಗೆ ಫೋನ್ ಮಾಡಿರಿ. ಸುಖ ಪ್ರಯಾಣ ಕೋರುತ್ತೇನೆ” ಎಂದು ಎದ್ದು ಹಸ್ತಲಾಘವವಿತ್ತರು.

* * * *

ಮಾರ್ಚ್ ತಿಂಗಳಿನ ಮಧ್ಯಭಾಗ. ಉಳಿದಿದ್ದು ೨ ವಾರಗಳಷ್ಟು. ಊರಿಗೆ ಕಾಗದ ಬರೆದೆ. ನಾನು ಬರುವುದು ಖಚಿತವಾಗಿದೆ. ಏಪ್ರಿಲ್ ತಿಂಗಳ ಮೊದಲನೇ ವಾರ ಬರುತ್ತೇನೆ ಎಂದು ತಿಳಿಸಿದ್ದೆ. ಲಂಡನ್ ನಗರದಲ್ಲಿ ಹಿಮದ ಸಾರ್ವಭೌಮತ್ವ ಗತಿಸಿ ವಸಂತನ ವಿಜಯೋತ್ಸವ ಆರಂಭ! ಛಳಿ ಗಾಳಿಯ ಅಪ್ಪಳಿಕೆಯಾರ್ಭಟ ಕ್ಷೀಣಿಸಿತ್ತು. ಉತ್ಸವದ ಮೆರವಣಿಗೆಯಲ್ಲಿ ಶಿರದ ಮೇಲ್ಪವಳಿಸಿದ ಸ್ವಚ್ಛ ಹಸಿರು ಸಾಗರ ರಾಶಿಯಂತಿದ್ದ ಎತ್ತರದ ಮರಗಳ ಗುಂಪು. ಅದರ ಮಧ್ಯೆ ಅಲ್ಲಲ್ಲಿ ನಿಂತು, ಹೊತ್ತು ಬಾಗಿ ತೂಗಾಡುತ್ತಿದ್ದ ಪುಷ್ಪಗುಚ್ಛಗಳ ರಮ್ಯತೆ ಮಾರುತನ ವಾದ್ಯಗೋಷ್ಠಿಯ ಸಂಗೀತ ಮಾಧುರ್ಯಕ್ಕೆ ಮರುಳಾಗಿ ನಿಂತು ಚಲಿಸಿ ನಿಂತಂತೆ! ನವಚೇತನ. ನವಜೀವನ ವಿದ್ಯುತ್ ಹರಿದಂತೆ!! ಮುಗಿಲೆತ್ತರದ ಮರದಲ್ಲಿನ ತಿಳಿನೀಲ, ತಿಳಿಹಳದಿ ಹೂ ರಾಶಿ ಚಾಮರವಿಡಿದಂತೆ, ತಿಳಿನೀರಕೊಳದಲ್ಲಿ, ತಿಳಿನೀರ ಸರೋವರದ ಸುತ್ತ ಬಿಂಬಿಸಿದ್ದವು. ಘಂ ಎಂದಿತ್ತು ತಂಗಾಳಿ. ಪರಂಪರೆಯಿಂದ ಬೆಳೆದು ಬಂದ ವೃಕ್ಷ ಸಾಲಿನ ಮಧ್ಯೆ ಕಂಡ ಕಿರಿದಾದ ಹಸಿರು ಸುಪ್ಪತ್ತಿಗೆ! ದೃಷ್ಟಿ ಗೋಚರ ನೇತ್ರೇಂದ್ರಿಯ ದರ್ಶನಕ್ಕೆಟುಕದ ಆಮೋದ ಉಕ್ಕುವ ಹಸಿರು ಕ್ಷೇತ್ರವ್ಯಾಪ್ತಿ ; ಪೈರು ಪಚ್ಚೆ, ಸೊಪ್ಪು, ಸದೆಗಳ ಸೊಂಪು ; ಹಿತಶೀತಲ ತಂಬೆಲರ ತಂಗಾಳಿ.

ಮುಂಪಮುಯ ಹರ್ಷಸ್ಪರ್ಶ, ಸೂರ್ಯನ ಹೊಂಬೆಳಕಿನ ದ್ವಂದ್ವ ಯುದ್ಧಕ್ಕೆ ಸಿಲುಕಿತ್ತು ಮನಸ್ಸು. ಬಿಟ್ಟು ಹೋಗಲಾರದ ಬೆಡಗು ಕಂಡಿತ್ತು. ಮಹೋನ್ನತ ಮಿಲನಕ್ಕೆ ಮನಕ್ಕೆ ಮರುಳು, ಮೋಡಿಮಾಡಿತ್ತು.

ಜ್ಞಾನಾರ್ಜನೆಗೆ ನಾಂದಿ ಹಾಡಿದ್ದ ಲಂಡನ್ ನಗರ ಬಿಡುವುದಕ್ಕೆ ಕಾಲ ಸನ್ನಿಹಿತವಾಗಿತ್ತು. ಆಗಾಗ್ಗೆ ಮನಸ್ಸಿನಲ್ಲಿ ದುಗಡ, ಏನೋ ಒಂದು ನಿರಾಶೆಯಲ್ಲಿ ದೇಶಕ್ಕೆ ಮರಳುವ ಆಸೆ ; ಸ್ಥಿಮಿತವಿಲ್ಲ. ಉಳಿದ ದಿನಗಳಲ್ಲಿನ ಆಸ್ಪತ್ರೆ ಕೆಲಸದಲ್ಲಿ ಮನಸ್ಸಿಲ್ಲ. ಹೋಗುವುದಿದ್ದರೆ ಈ ದಿನವೇ ಏಕಾಗಬಾರದು. ಇನ್ನೂ ೮-೧೦ ದಿನಗಳಿದೆಯಲ್ಲಾ ಕಳೆಯುವುದು ಎಂತು, ಹೀಗೆಂದೆಲ್ಲಾ ತಳಮಳ. ಮರುಕ್ಷಣ ಲಂಡನ್ ನಗರದಲ್ಲಿನ ಸವಿನೆನಪು ಸುಸಂಸ್ಕೃತ ಉಚ್ಚ ಜ್ಞಾನವುಳ್ಳ ವಿಶಾಲ ಮನೋಭಾವನೆಯ ಭೇದಭಾವವಿಲ್ಲದ ಸ್ನೇಹಮಯ ವಾತಾವರಣ ಬಿಟ್ಟುಹೋಗಲು ಹಿಂಜರಿಯುತ್ತಿತ್ತು ಮನಸ್ಸು. ಅಂತೂ ಇಂತೂ ಹೊರಡುವ ದಿನವನ್ನು ಪ್ರಯಾಸಪಟ್ಟು ತಲುಪಿದ್ದೆ. ವಿಮಾನದಲ್ಲಿನ ೭೦ ಕೆ.ಜಿ. ಲಗ್ಗೇಜ್ ಸಾಗಾಣಿಕೆಗೆ ಸರಿಯಾಗಿ ನನ್ನ ಲಗ್ಗೇಜ್ ಇರಬೇಕು. ಹೆಚ್ಚಿದ್ದರೆ ಅದಕ್ಕಾಗಿ ಹಣ ತೆರಲು ನಾನು ತಯಾರಿರಲಿಲ್ಲ. ಆದ್ದರಿಂದ ಪಕ್ಕದ ರಸ್ತೆಯಲ್ಲಿದ್ದ ತೂಕದ ಮೆಷಿನ್ ಒಂದರಲ್ಲಿ ತೂಕಹಾಕಿದೆ. ಅದಕ್ಕೆ ಡಾ|| ಮೊಹಿಂದರ್ ಸಿಂಗ್ ನೆರವಾದರು. ಒಟ್ಟು ಲಗ್ಗೇಜ್ ತೂಕ ೫೦ ಕೆ.ಜಿ.ಗಳಷ್ಟಿತ್ತು. ಆ ದಿನ ತಾ|| ೨೬-೩-೬೯. "ಬಾನ್‌ವಾಯೇಜ್, ಬೈ, ಬೈ. ಎಂಜಾಯ್ ಯುವರ್ ಕಂಪನಿ ಇನ್‌ಡೀಡ್, ಗಾಡ್‌ಬ್ಲೆಸ್‌ಯು, ವಿಶ್ ಟು ಸೀ ಯು ಎಗೇಯ್ನ್" ಗಳ ಆಶೀರ್ವಾದಾಶ್ರಯದ ನೆರಳಲ್ಲಿ ದುಃಖತಪ್ತನಾಗಿ ರೈಲು ನಿಲ್ದಾಣಕ್ಕೆ ಟ್ಯಾಕ್ಸಿಯೊಂದರಲ್ಲಿ ಬಂದೆ. ಅಲ್ಲಿಂದ ಮುಂದೆ ಸರ್ರೆಗೆ ನಾನು ನನ್ನ ದೇಶದ ಗೆಳೆಯರಾದ ಡಾ|| ಕೇಶವ್ ಆತಿಥ್ಯಕ್ಕೆ ಪ್ರಯಾಣ ಮಾಡುತ್ತಿದ್ದಾಗ ನಿಮಿಷ ನಿಮಿಷಕ್ಕೂ ಲಂಡನ್ ಮಹಾನಗರ ಮಾಯಾವಾಗುತ್ತಾ ಕೊನೆಗೆ ಕಣ್ಮರೆಯಾಯಿತು. ಮನಸ್ಸು ಮಹತ್ವದ ವಸ್ತುವನ್ನು ಕಳೆದುಕೊಂಡಿತ್ತು.

ಡಾ|| ಕೇಶವ್ ಆದರದಿಂದ ಬರಮಾಡಿಕೊಂಡರು. ಶ್ರೀಮತಿ ಕೇಶವ್ ಕೂಡ ಅಷ್ಟೇ ಆದರ ತೋರಿದ್ದರು. ಎರಡು ದಿನದ ಆತಿಥ್ಯ ಸ್ವೀಕರಿಸುವ ಲಭ್ಯ ನನಗಿತ್ತು. ತಾ|| ೨೮-೩-೬೯ರ ಸುಪ್ರಭಾತದ ರಮ್ಯ ಸೂರ್ಯನ

ಕಿರಣ ತೆಳುಮಂಜಿನ ಹಾಸಿನಲ್ಲಿ ಹೊಕ್ಕಾಗಿತ್ತು ; ಎಣೆದಿತು ಭಾಂದವ್ಯದ, ಪ್ರೀತಿ ವಾತ್ಸಲ್ಯದ ಪರಮಾವಧಿಯಂತೆ! ಮತ್ತೊಮ್ಮೆ ನನ್ನ ಕಣ್ಣುಗಳಲ್ಲಿ ನೀರು ತುಂಬಿತ್ತು. ಡಾ|| ಕೇಶವ್ ಕಾರಿನಲ್ಲಿ ಕುಳಿತರು. ಶ್ರೀಮತಿ ಕೇಶವ್‌ರಿಗೆ ಕೈಮುಗಿದೆ.

"ಎಲ್ಲದಕ್ಕೂ ನಾನು ಕೃತಜ್ಞ" ಎಂದೆ.

"ಸುಖ ಪ್ರಯಾಣ ಕೋರುತ್ತೇನೆ" ಎಂದರು. ಕಾರು ಚಲಿಸಿ, ಮರೆಯಾದರು. ದಾರಿಯುದ್ದಕ್ಕೂ ಮೌನ, ಹೀತ್‌ರೋ ವಿಮಾನ ನಿಲ್ದಾಣ ತಲುಪಿದಾಗ ಗಂಟೆ ೯-೩೦. ಡಾ|| ಕೇಶವ್ ನನ್ನ ಲಗ್ಗೇಜ್ ಇಳಿಸಿದರು, ಕೈಕುಲುಕಿದರು. ಅವರಿಗೂ ಮಾತು ಹೊರಡಲಿಲ್ಲ. ಮರೆಯಾದರು.

"ನನಗೆ ಎಲ್ಲವೂ ಕತ್ತಲೆಯಂತೆ ಕಂಡಿತು. ಆ ಅತ್ಯಂತ ಜನ ನಿಬಿಡ ವಿಮಾನನಿಲ್ದಾಣದಲ್ಲಿ ಯಾರೂ ನನ್ನನ್ನು ಗುರುತಿಸರು. ಎಲ್ಲರೂ ಅಪರಿಚಿತರು, ಮತ್ತೊಮ್ಮೆ ನಿರ್ಜನವಾಗಿತ್ತು.

ನಾನು ಕುಳಿತಿದ್ದ ವಿಮಾನ ೧೧-೧೫ಕ್ಕೆ. ಹೀತ್‌ರೊ ನಿಲ್ದಾಣದಿಂದ ಭೋರ್ಗರೆದು ಗಗನಕ್ಕೇರಿ ಮಾತೃದೇಶಾಭಿಮುಖವಾಗಿ ಶೀಘ್ರಗತಿಯಲ್ಲಿ ಸೀಳಿ ಚಲಿಸುತ್ತಿತ್ತು. ಸುಮಾರು ೧ ಗಂಟೆಗೆ ಪ್ರಾಗ್ ವಿಮಾನ ನಿಲ್ದಾಣ ತಲುಪಿತು. ಅಂದರೆ ೧೭೦೦ ಮೈಲಿ ಪ್ರಯಾಣ ಮಾಡಿತ್ತು. ಪ್ರಾಗ್‌ನಿಂದ ೧-೫೫ಕ್ಕೆ ಹೊರಟು ರೋಂ ತಲುಪಿದಾಗ ಮಧ್ಯಾಹ್ನ ೩-೪೫ ಆಗಿತ್ತು. ಅದೇ ೧೨೦೦ ಮೈಲಿ ಪ್ರಯಾಣ. ರೋಂ ವಿಮಾನ ನಿಲ್ದಾಣ ಬಿಟ್ಟಾಗ ಸಂಜೆಯ ೪-೪೫ ಗಂಟೆ. ವಿಮಾನ ಸಿರಿಯಾ ದೇಶದ ಮೇಲೆ ಹಾರುತ್ತಿದ್ದಾಗ ಗಡಿಯಾರದಲ್ಲಿ ೨ ಗಂಟೆ ಮುಂದಕ್ಕೆ ಹಾಕಿದ್ದಾಯಿತು. ಕುವೈಟ್‌ಗೆ ಬಂದಿಳಿದಾಗ ರಾತ್ರಿ ೧೦-೩೫. ದೂರ ೨೩೦೦ ಮೈಲಿಗಳು. ಕುವೈಟ್ ಬಿಟ್ಟು ಬೊಂಬಾಯಿ ತಲುಪಿದಾಗ ೫-೩೦. ಪೂರ್ವ ದಿಗಂತದಲ್ಲಿ ಬೆಳಕು ಹರಿದಿತ್ತು. ಹಕ್ಕಿಗಳು ಬೆಳಕಿನ ಚಿಲಿಪಿಲಿ ಗಾನಗುಟ್ಟಿ ಎಲ್ಲೋ ಒಂದರಂತೆ ಹಾರಿ ಮರೆಯಾದವು. ಮನಸ್ಸು ಹಾರಿ ಹಗುರವಾಯಿತು. ನೆಮ್ಮದಿಯ ಉಸಿರು ತಂಗಾಳಿಯಲ್ಲಿ ತೇಲಿತ್ತು. ಸ್ವದೇಶಕ್ಕೆ ಮರಳಿದ್ದೆ. ಆದರೂ ಪೂರ್ಣ ತೃಪ್ತಿ ಇರಲಿಲ್ಲ.

ಕಸ್ಟಂ ಕ್ಲಿಯರೆನ್ಸ್‌ನಲ್ಲಿ ೫-೪೫ ರಿಂದ ೬-೪೫ರ ವರೆಗೆ ತಪಾಸಣೆಯು ಕಿರುಕುಳ ಪ್ರಾರಂಭ. ಅಧಿಕಾರಿಗಳ ಬೇಜವಾಬ್ದಾರಿ, ಸುಸಂಸ್ಕೃತವಲ್ಲದ ಅಸಹ್ಯ ನುಡಿನೋಟ. ಇಂಗ್ಲೆಂಡಿನಿಂದ ಬಂದಿಳಿದವರಿಗೆ 'ಛೀ, ಇದೇನು ಸ್ವಾಗತ' ಎಂಬ ನಿರಾಶೆ. ಯುರೋಪಿನ ಪ್ರಯಾಣಿಕರ ಸುಸಂಸ್ಕೃತ ವರ್ತನೆಯಲ್ಲೂ ಇವರ ಅಸಭ್ಯ ವರ್ತನೆಯಿತ್ತು.

"ಎಸ್, ಚೀಲ ತೆಗೆಯಿರಿ, ಪೆಟ್ಟಿಗೆ ತೆರೆಯಿರಿ."

"ನೊ, ಇದೆಲ್ಲಾ ಬಿಡುವುದಿಲ್ಲ" "ಎಸ್ ನೀವು ಹೋಗಿ" "ನೆಕ್ಸ್ಟ" "ಓಪನ್," ಈ ಸ್ವಾಗತದ ಭಾಷೆ ಸರ್ವೇ ಸಾಮಾನ್ಯ.

"ಎಸ್ ಪ್ಲೀಸ್, ಅಯ್ಯಾಂ ಸಾರಿ. ಓ ಥ್ಯಾಂಕ್ಯು ಸೋಮಚ್," ಇವು ಭಾಷೆಗೆ ಉತ್ತರವಾಗಿ. ಕೆಲವು ಸಾಮಾನ್ಯರಿಗಂತೂ ಹೇಳತೀರದು. ಬಟ್ಟೆ, ಮಕ್ಕಳ ಆಟದ ಸಾಮಾನು, ಪುಸ್ತಕ ಇವೆಲ್ಲಾ ಚೆಲ್ಲಾಪಿಲ್ಲಿಯಾಗಿ ಟ್ರಂಕು, ಪೆಟ್ಟಿಗೆಗಳಿಂದ ಕಲಸುಮೇಲೋಗರ. ಬಿಲ್ಲು ಬರೆಯುವುದು, ನೂರಕ್ಕೆ ನೂರ್ಹತ್ತು ಹದಿನೈದು ಸುಂಕ ವಿಧಿಸುವುದು. ಕೊಡಲಾಗದಿದ್ದರೆ ಸಾಮಾನನ್ನು ಅವರ ಸ್ವಾಧೀನದಲ್ಲಿಟ್ಟುಕೊಳ್ಳುವುದು. ಸ್ವಂತ ಊರಿಗೆ ಮರಳಿ ಹಣ ಪಾವತಿ ಮಾಡಿದ ನಂತರ ಅವುಗಳ ಒಡೆತನ.

ಸೇನಾಧಿಕಾರಿಯೊಬ್ಬರು ಸಮವಸ್ತ್ರದಲ್ಲಿದ್ದರು. ಅವರ ಮಗಳು ಆರು ತಿಂಗಳು ಅಮೇರಿಕಾದಲ್ಲಿ ವಾಸವಿದ್ದು ೬-೭ ಸೀರೆ ತಂದಿದ್ದರು. ಕಸ್ಟಂಸ್ ಅಧಿಕಾರಿ ೪ ಸೀರೆಗೆ ಸುಂಕ ವಿಧಿಸಿದರು. ಆಕೆ "ಹೆಂಗಸಿಗೆ ಮತ್ತೇನು ಬೇಕು ? ೬-೭ ಸೀರೆಗಳಿರಬಾರದೇ ? ಅದೂ ಹೆಚ್ಚೆ, ನನ್ನಲ್ಲಿ ಮತ್ತೇನಿದೆ ?" "ಇಲ್ಲ ೪ ಸೀರೆಗೆ ಸುಂಕ ಕೊಡಬೇಕು"

"ದಯವಿಟ್ಟು ಒಮ್ಮೆ ಯೋಚಿಸಿ, ನನಗೆ ೬-೭ ಸೀರೆಗಳು ಅತಿ ಹೆಚ್ಚೆ." ಕೊನೆಗೆ ಎಲ್ಲವನ್ನೂ ವೀಕ್ಷಿಸುತ್ತಿದ್ದ ತಂದೆ ಮೌನ ಮುರಿದರು.

"ನೋಡಿ ಆಕೆ ಕಾಲೇಜು ಓದುವ ಮಗಳು. ೬-೭ ಸೀರೆಗಳು ಹೆಚ್ಚೆ ?"

"ಸುಂಕ ಕೊಡುತ್ತೀರೋ ಇಲ್ಲವೋ ?"

ಕೊನೆಗೆ ಹುಡುಗಿಯ ತಂದೆ ಸಿಡಿದು ನುಡಿದರು.

"ಆ ನಾಲ್ಕು ಸೀರೆ ಅವರಿಗೇ ಬಿಟ್ಟು ಬಾ, ಹೇಳಿದಂತೆ ಮಾಡು."

"ಎಸ್ ಡ್ಯಾಡಿ. ನೀವು ಹೇಳಿದಂತೆ."

ನನ್ನ ಸರದಿ. ಲಗ್ಗೇಜೆಲ್ಲಾ ಬಿಚ್ಚಿದೆ. ನನ್ನ ಪತ್ನಿಗೆ ಎರಡು ಸೀರೆ ಕೊಂಡಿದ್ದೆ. ಮಕ್ಕಳಿಗೆ ಕೆಲವು ಫ್ರಾಕ್ಸ್. ಒಂದು ಕ್ಯಾಮರ, ಪ್ರೊಜೆಕ್ಟರ್ ಮತ್ತು ಟೈಪ್‌ರೈಟರ್. ವಾಡಗಿಯವರು ಕಳುಹಿಸಿದ್ದ ಟೇಪ್‌ರೆಕಾರ್ಡರ್. ನನಗೆ ಗಾಬರಿ. 'ಏನೇನು ಉಳಿಸಿಕೊಳ್ಳುತ್ತಾರೆ, ಯಾವುದಕ್ಕೆ ಸುಂಕ ವಿಧಿಸುತ್ತಾರೆ' ಎಂದೆಲ್ಲಾ ಯೋಚಿಸಿತು ಮನಸ್ಸು. ಸಧ್ಯ "ನೀವು ಹೋಗಿ" ಎಂದಾಗ ಪರೀಕ್ಷೆಯೊಂದರ 'ವೈವ ಓಸಿ'ನಲ್ಲಿ ಪಾಸಾದಂತಿತ್ತು.

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು-ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'.